ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ನವೆಂಬರ್ 20, 2013 ಪುಟ 20 ರೂ. 14/-

ಕನ್ನಡ ಮತ್ತು ಚಿತ್ರರಂಗ

ಕಾಡಹಕ್ಕಿಯ ಕೊಂದವರು ಯಾರು?




ಕರ್ನಾಟಕ ರಾಜ್ಯೋತ್ಸವ ವಿಶೇಷಾಂಕ



ಕರ್ನಾಟಕ, ಕನ್ನಡ, ಬದುಕು, ಭಾವ, ಭಾಷೆ- ಕುರಿತು ವೈಚಾರಿಕ ಲೇಖನಗಳು



ಮಂಗಳೂರು
ಮದುವೆಗೆ ಪೀಡಿಸಿದ ಪ್ರೇಯಸಿಯನ್ನೇ ...ಂಡರಿಸಿ ಕೊಂದ



ಶಿವಮೊಗ್ಗ-ಕೆನರಾ
ಜೆಡಿಎಸ್‌ಗೆ 'ಬಂ' ನಾಮ ಬಲವೇ ಬಂಡವಾಳ



ಮಂಡ್ಯ
ಮುಡಾ
ಮುಂಡಾಯಿಸಿದವರಿಗೆ ಸಿಬಿಐ ಉರುಳು

ನಾನು ಈಗ ದಿನವೂ ಸಂಚಾರ ಮಾಡುತ್ತಿರುವ ಮುಲ್ಕಿ, ಉಡುಪಿ, ಬ್ರಹ್ಮಾವರ, ಸಾಲಿಗ್ರಾಮ, ಕುಂದಾಪುರಗಳ ಮೂಲಕ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿಯ ಅಕ್ಕಪಕ್ಕಗಳಲ್ಲಿ ನರಹಂತಕ ನರೇಂದ್ರ ಮೋದಿಯ ದೊಡ್ಡ ದೊಡ್ಡ ಭಾವಚಿತ್ರಗಳ ಪ್ರದರ್ಶನ ನಡೆಯುತ್ತಿದೆ. ಕೆಲವು ಕಡೆ ಅವನನ್ನು ಕೃಷ್ಣನ ಜತೆ ಹೋಲಿಸಿ "ಯದಾ ಯದಾಹಿ ಧರ್ಮಸ್ಯ......" ಎನ್ನುವ ಭಗವದ್ಗೀತೆಯ ಶ್ಲೋಕ ಹಾಕಲಾಗಿದೆ. ಹಾಗೆಯೇ ಹಲವು ಕಡೆ ಅವನ ಜತೆ ಸ್ವಾಮಿ ವಿವೇಕಾನಂದರ ಭಾವಚಿತ್ರ ಹಾಕಲಾಗಿದೆ. ಅಷ್ಟು ಮಾತ್ರವಲ್ಲ, ಇತ್ತೀಚೆಗೆ ಮಂಗಳೂರಿನಲ್ಲಿ ನಡೆದ 'ನಮೋ ಬ್ರಿಗೇಡ್'ನವರ ಕಾರ್ಯಕ್ರಮದಲ್ಲಿ ಅದರ ವಕ್ತಾರ ಚಕ್ರವರ್ತಿ ಸೂಲಿಬೆಲೆ ಹೇಳಿದ್ದಾರೆ "ವಿವೇಕಾನಂದರ ಮೂಲ ಹೆಸರು ನರೇಂದ್ರ. ಅವರು ಹುಟ್ಟಿ 150 ವರ್ಷಗಳಾಗಿವೆ. ಆದ್ದರಿಂದ ಭಾರತೀಯರನ್ನು ಎಚ್ಚರಿಸಲು ಮತ್ತೆ ಸ್ವಾಮಿ ವಿವೇಕಾನಂದರು ನರೇಂದ್ರ ಮೋದಿಯ ಅವತಾರ ತಾಳಿ ಬಂದಿದ್ದಾರೆ...... (!?!)" ಹೀಗೆ ಬಲಪಂಥೀಯರಾದ ಸಂಘ ಪರಿವಾರದವರು ಭಗತ್ ಸಿಂಗ್, ಅಂಬೇಡ್ಕರ್, ನಾರಾಯಣ ಗುರುಗಳಂತಹ ಪ್ರಗತಿಪರರನ್ನು, ವಲ್ಲಭಭಾಯಿ ಪಟೇಲರಂತಹ ಸೆಕ್ಯುಲರ್ ಕಾಂಗ್ರೆಸಿಗರನ್ನು ಹೈಜಾಕ್ ಮಾಡಿರುವುದಲ್ಲದೆ ಈಗ ಎಲ್ಲೆಲ್ಲೂ ಸ್ವಾಮಿ ವಿವೇಕಾನಂದರನ್ನು ಸಂಪೂರ್ಣ



ವಿವೇಕಾನಂದರು ಬಲಪಂಥೀಯರಾಗಿರಲಿಲ್ಲ...

ಹೈಜಾಕ್ ಮಾಡಿದ್ದಾರೆ. ನರಹಂತಕ ಮೋದಿಯ ಜತೆಗೆ ನನ್ನ ಪ್ರೀತಿಯ ವಿವೇಕಾನಂದರನ್ನು ಸಮೀಕರಿಸಿದಾಗಲಂತೂ ನನಗೆ ತಡೆಯಲಾಗಲಿಲ್ಲ. ಎಲ್ಲಿಯ ಅಲ್ಪಸಂಖ್ಯಾತರ ವೈರಿ, ಕಾರ್ಪೊರೇಟ್ ವರ್ಗದವರ ಕಣ್ಮಣಿ ಬಲಪಂಥೀಯ ನರೇಂದ್ರ ಮೋದಿ! ಎಲ್ಲಿಯ ಮಹಾ ಮಾನವತಾವಾದಿ ವಿವೇಕಾನಂದರು...!

ಆ ಕಾರಣಕ್ಕಾಗಿ ಅವರ **Vivekananda The Complete works V.I. Mayarati 1950** ಪುಸ್ತಕದಿಂದ ಅವರದೇ ಹೇಳಿಕೆಗಳನ್ನು ಉದ್ಧರಿಸುವ ಮೂಲಕ ಅವರು ಹೇಗೆ ಬಲಪಂಥೀಯರಾಗಿರಲಿಲ್ಲ ಎಂದು ಸಾಬೀತುಪಡಿಸಬಯಸುತ್ತೇನೆ. ಆದರ ಅರ್ಥ ಅವರು ಎಡಪಂಥೀಯರ ತಾತ್ವಿಕ ನೆಲೆಗಟ್ಟಾದ "ಐತಿಹಾಸಿಕ ವೈಜ್ಞಾನಿಕ ದ್ವಂದ್ವಮಾನ ಭೌತಿಕವಾದ (**Historical, Scientific Dialectical Materialism**) ವನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದರೆಂದು ಅಲ್ಲ, ಅವರು ತತ್ವಜ್ಞಾನದ ವಿದ್ಯಾರ್ಥಿಯಾಗಿದ್ದರೂ ಅವರು ಮಾರ್ಕ್ಸ್‌ವಾದವನ್ನು ತಲಸ್ಪರ್ಶಿ ಅಧ್ಯಯನ ಮಾಡಿದ ಹಾಗೆ ಕಾಣುವುದಿಲ್ಲ.

ಆದರೆ ತನ್ನ ಅನುಭವ, ಪ್ರಚಂಡ ಬುದ್ಧಿಶಕ್ತಿ ಮತ್ತು ಸೂಕ್ಷ್ಮ ಸಂವೇದನೆಗಳ ಮೂಲಕವೇ ಅವರು ಸಾಮ್ರಾಜ್ಯಶಾಹಿಯ ಶೋಷಣೆ, ಬಂಡವಾಳಶಾಹಿಯ ಶೋಷಣೆ, ಊಳಿಗಮಾನ್ಯ ವ್ಯವಸ್ಥೆಯ ಶೋಷಣೆಗಳನ್ನು ಅರ್ಥಮಾಡಿಕೊಂಡಿದ್ದರು. ಒಂದು ಕಡೆ ಅವರು ಹೇಳಿದ್ದಾರೆ- "ನಾನೊಬ್ಬ ಸಮಾಜವಾದಿ. ಅದೊಂದು ಸಮರ್ಪಕ ವ್ಯವಸ್ಥೆ ಎಂದಲ್ಲ, ಆದರೆ ಪೂರ್ತಿ ರೊಟ್ಟಿ ಇಲ್ಲದಾಗ, ಒಂದು ಚೂರಾದರೂ ಇದ್ದರೇ ಲೇಸು. ಮಿಕ್ಕ ಸಮಾಜ ವ್ಯವಸ್ಥೆಗಳನ್ನು ಈಗಾಗಲೇ ಪ್ರಯತ್ನಿಸಿದ್ದೇವಲ್ಲ! ಅವ್ಯಾ ಸಮರ್ಪಕವಾಗೇನೂ ಇಲ್ಲ." ನಮ್ಮ ವಿವಿಧ ಸಮಾಜ ವ್ಯವಸ್ಥೆಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ, ಬದಲಿಸಬಹುದು ಎನ್ನುವ ಅವರ ಎಡಪಂಥೀಯ ನಿಲುವು ಈ ಮಾತುಗಳಿಂದ ವ್ಯಕ್ತವಾಗುತ್ತದೆ.

ಪಾಳೇಗಾರಿಕೆ ಪದ್ಧತಿಯ ಬಗ್ಗೆ ವಿವೇಕಾನಂದರು ಈ ರೀತಿ ವಿಮರ್ಶೆ ಮಾಡಿದ್ದಾರೆ: "ಶ್ರೀಮಂತರೇ, ನೀವು ದೇಶಕ್ಕೆ ಬರೀ ಆಭರಣಗಳು, ದೇಶಕ್ಕೆ ಅಲಂಕರಣಗಳು. ಅದಕ್ಕೆ ಜೀವಂತಿಕೆ ನೀಡುವವರು ಬಡ, ದೀನ, ಕೆಳವರ್ಗದ ಜನತೆ" (ಪುಟ 44). ಭಾರತಕ್ಕೆ ನಿಜವಾದ ಆಶಾಕಿರಣವೆಂದರೆ ಅದರ ಜನತೆ. ಉಚ್ಚವರ್ಗದವರು ಭೌತಿಕವಾಗಿ ಮತ್ತು ನೈತಿಕವಾಗಿ ಸತ್ತು ಹೋಗಿದ್ದಾರೆ" (45).

"ದೇಶವು ರೈತರ ಹಳ್ಳಿಗಳಿಂದ ಮೇಲೇಳಲಿ, ಪಿಂಗಾಣಿ ಕುಲುಮೆಯಿಂದ ಎದ್ದು ಬರಲಿ. ಅದು ಕಿರಾಣಿ ಅಂಗಡಿಯಿಂದ ಹೊರಬರಲಿ. ಮಾರುಕಟ್ಟೆಗಳಿಂದ, ಫ್ಯಾಕ್ಟರಿಗಳಿಂದ ಹೊರಬರಲಿ. ಅದು ತೋಟಗಳಿಂದಲೂ, ಕಾಡುಮೇಡುಗಳಿಂದಲೂ ಹೊರಬರಲಿ. ಅದು ಗುಡ್ಡಗಿರಿಗಳಿಂದಲೂ ಎದ್ದು ಬರಲಿ. ಈ ಸಾಮಾನ್ಯ ಜನರು ಸಾವಿರಾರು ವರ್ಷಗಳಿಂದ ದಮನಿತರಾಗಿದ್ದಾರೆ. ಮೂಕರಾಗಿ ಸಹಿಸಿದ್ದಾರೆ. ಹೀಗಾಗಿ ಅವರಲ್ಲಿ ಅದ್ಭುತವಾದ ಕಸುವಿದೆ. ಅವರು ನಿರಂತರ ಕಷ್ಟಗಳನ್ನು ಅನುಭವಿಸಿದ್ದಾರೆ. ಇದು ಅವರಿಗೆ ಅಪೂರ್ವ ಜೀವಂತಿಕೆಯನ್ನು ನೀಡಿದೆ. ಮುಷ್ಟಿ ಅನ್ನ ಹೊಟ್ಟೆಗಿದ್ದರೆ ಸಾಕು, ಭೂಮಿಯನ್ನು ಅಲುಗಾಡಿಸಬಲ್ಲರು. ಅವರಿಗೆ ಬ್ರೆಡ್ಡಿನ ಅರ್ಧ ತುಂಡೊಂದನ್ನು ಕೊಡಿ, ಅವರು ಇಡೀ ಜಗತ್ತನ್ನು ಚೈತನ್ಯದಿಂದ ತುಂಬಬಲ್ಲರು. ರಕ್ತಬೀಜಾಸುರನಂತೆ ನಿರಂತರವಾಗಿ ಹುಟ್ಟಿ ಬರಬಲ್ಲರು.. (ಪುಟ 47)" ಎಂದು ವಿವೇಕಾನಂದರು ಹೇಳಿದ್ದರು. ಕಾರ್ಪೊರೇಟ್ ದೊರೆಗಳಿಗಾಗಿ ಗುಜರಾತ್‌ನ್ನು "ಅಭಿವೃದ್ಧಿ"ಗೊಳಿಸುತ್ತಿರುವ ನರೇಂದ್ರ ಮೋದಿಗೆ ಈ ಬಡಜನತೆಯ ಬಗೆಗಿನ ಪ್ರೀತಿ ಗೌರವ ಎಲ್ಲಿ ಬರಬೇಕು?

50ನೇ ಪುಟದಲ್ಲಿ ದೇಶದ ದುಡಿಯುವ ವರ್ಗವನ್ನು ಉದ್ದೇಶಿಸಿ ವಿವೇಕಾನಂದರು ಹೀಗೆನ್ನುತ್ತಾರೆ: "ಎಲೈ ದುಡಿಯುವ ವರ್ಗಗಳೇ, ನಿಮ್ಮ ಸದ್ದಿಲ್ಲದ ದುಡಿಮೆಯಿಂದ ಬ್ಯಾಬಿಲೋನ್, ಪರ್ಶಿಯಾ, ಅಲೆಕ್ಸಾಂಡ್ರಿಯಾ, ಗ್ರೀಸ್, ರೋಮ್, ವೆನೀಸ್, ಜಿನೀವಾ, ಬಾಗ್ದಾದ್, ಸಮರ್‌ಖಂಡ್, ಸ್ಪೇನ್, ಪೋರ್ಚುಗಲ್, ಫ್ರಾನ್ಸ್, ಡೆನ್ಮಾರ್ಕ್, ಹಾಲೆಂಡ್ ಮತ್ತು ಇಂಗ್ಲೆಂಡ್‌ಗಳು ಪ್ರವರ್ಧಮಾನಕ್ಕೆ ಬಂದಿವೆ. ಆದರೆ ನಿಮ್ಮ ಸ್ಥಿತಿ ಹಾಗೇ ಇದೆ. ಆದರೆ ಭಾರತದಲ್ಲಿ ನಿಮ್ಮನ್ನು ಕೇಳುವವರಾರು? ಪ್ರಿಯ ಮೇಲ್ವರ್ಗದವರೇ, ನಿಮ್ಮ ಪೂರ್ವಜರು ಒಂದೆರಡು ತತ್ವಜ್ಞಾನದ ಗ್ರಂಥಗಳನ್ನು ಬರೆದಿರಬಹುದು. ಒಂದು ಡಜನ್ ಕಾವ್ಯಗಳನ್ನು ಬರೆದಿರಬಹುದು ಅಥವಾ ಅನೇಕ ದೇವಾಲಯಗಳನ್ನು ಕಟ್ಟಿರಬಹುದು. ಇಷ್ಟಕ್ಕೆ ಮುಗಿಲೆತ್ತರಕ್ಕೆ ಕೂಗಿ ಜಯಕಾರ ಹಾಕುವಿರಲ್ಲಾ! ಯಾರ ಹೃದಯದ ರಕ್ತವು ಈ ಎಲ್ಲಾ ಮನ್ನಣೆಗೆ ಕಾರಣವೋ, ಅವರನ್ನು ನೆನೆಯುವವರಾರು?"

ನರೇಂದ್ರ ಮೋದಿಯನ್ನು ಉದ್ದೇಶಿಸಿಯೇ ವಿವೇಕಾನಂದರು ಈ ಟೀಕೆ ಮಾಡಿರುವಂತಿದೆಯಲ್ಲಾ?

ನರೇಂದ್ರ ಮೋದಿ ಯಾರ ಒಳಿತಿಗಾಗಿ ರಾಜಕಾರಣ ಮಾಡುತ್ತಿದ್ದಾರೆ? ಮೇಲುವರ್ಗದವರ ಒಳಿತಿಗಾಗಿ ತಾನೇ? ಗುಜರಾತ್‌ನಲ್ಲಿ ಸರ್ದಾರ್ ಸರೋವರದ ಅಣೆಕಟ್ಟಿನ ಎತ್ತರ ಹೆಚ್ಚಿಸಿ, ಗುಡ್ಡಗಾಡು ಜನಾಂಗದವರ ಹಳ್ಳಿಗಳನ್ನು ನೀರಲ್ಲಿ ಮುಳುಗಿಸಿದಾಗ ನರೇಂದ್ರ ಮೋದಿ ಯಾರನ್ನು ಪ್ರತಿನಿಧಿಸುತ್ತಿದ್ದರು. ಪರಿಸರ ಹೋರಾಟಗಾರತಿ, ಸಮಾಜಸೇವಕಿ ಮೇಧಾಪಾಟ್ಕರ್ ನರೇಂದ್ರ ಮೋದಿಯನ್ನು ಯಾಕೆ ವಿರೋಧಿಸುತ್ತಿದ್ದಾರೆ? ವಿವೇಕಾನಂದರು ಖಂಡಿತವಾಗಿ ಮೇಧಾ ಪಾಟ್ಕರ್ ಅವರ ಹೋರಾಟವನ್ನು ಬೆಂಬಲಿಸುತ್ತಿದ್ದರು.

ನರೇಂದ್ರ ಮೋದಿಯು 2002ರಲ್ಲಿ 2000ಕ್ಕೂ ಹೆಚ್ಚು ಮುಸ್ಲಿಮರ ಮಾರಣ ಹೋಮಕ್ಕೆ ಕಾರಣವಾದವನು. ಅವನೇ ತನ್ನ ಅಡಿಯಾಳಾಗಿದ್ದ ಪೊಲೀಸ್ ಆಫೀಸರ್‌ಗಳಿಗೆ ಅಲಿಖಿತ ಆಜ್ಞೆ ನೀಡಿ ಫಾಲ್ಸ್ ಎನ್‌ಕೌಂಟರ್ ಮಾಡಿಸಿ ಇಶ್ರತ್‌ರಂತಹ ಹಲವು ಅಮಾಯಕ ಮುಸ್ಲಿಮರ ಸಾವಿಗೆ ಕಾರಣನಾದವನು. ಈ ಕಟುಸತ್ಯವನ್ನು ಅವನದೇ ಸರಕಾರದ ಅಡಿ ಕೆಲಸ



ಮಾಡುತ್ತಿದ್ದ ಸಂಜೀವ ಭಟ್, ವಂಜಾರಾರಂತಹ ಪೊಲೀಸ್ ಅಧಿಕಾರಿಗಳು ಬಹಿರಂಗಗೊಳಿಸಿದ್ದಾರೆ. ಅಂತಹ ಕಟ್ಟಾ ಕೋಮುವಾದಿಯ ಜತೆಗೆ ನಮ್ಮ ಪ್ರೀತಿಯ ವಿವೇಕಾನಂದರನ್ನು ಹೇಗೆ ಹೋಲಿಸುವುದು?

"ವೇದಾಂತ ಮತ್ತು ಸೂಫಿಗಳ ಇಸ್ಲಾಂಗಳೆರಡನ್ನು ಸೇರಿಸಿ, ಒಂದೇ ಧರ್ಮವನ್ನು ರೂಪಿಸಿದ್ದಾದರೆ, ಈ ಧರ್ಮವು ಒಂದು ಮಾತ್ರ ಧರ್ಮದಂತೆ ಬೆಳೆದಿದೆ. ಇದರಡಿಯಲ್ಲಿ ಎಲ್ಲಾ ಮತಧರ್ಮಗಳು ಮುಕ್ತವಾಗಿ ಅಸ್ತಿತ್ವ ಕಂಡುಕೊಳ್ಳಬಲ್ಲವರಾಗಿದ್ದರೆ, ಆಗ ನಾವು ಭಾರತದ ಐಕ್ಯತೆಗೆ ಗಟ್ಟಿಯಾದ ತಳಪಾಯ ಹಾಕಬಹುದು" ಎಂದು ವಿವೇಕಾನಂದರು ಭಾವಿಸಿದ್ದರು. (316-18)

ಎಲ್ಲ ಮತಧರ್ಮಗಳೂ ಸ್ವೀಕಾರ್ಹ ಎನ್ನುವ ತನ್ನ ರಾಮಕೃಷ್ಣ ಪರಮಹಂಸ ಪ್ರೇರಿತ ಕೋಮು ಸೌಹಾರ್ದದ ತಾತ್ವಿಕ ನೆಲೆಯನ್ನು ವಿವೇಕಾನಂದರು ಹೀಗೆ ವ್ಯಕ್ತಪಡಿಸಿದ್ದಾರೆ:

"ನೀವು ಖಂಡಿತವಾದಿಗಳಾಗಿ ಅತಿ ಸರಳ ಜ್ಞಾನವನ್ನೇ ಹೊಂದಿರಬಹುದು. ವಿಚಾರವಾದಿಗಳಾಗಿರಬಹುದು. ಹಬ್ಬಗಳಿಗೂ ಮತಾಚರಣೆಗಳಿಗೂ ಸೆಡ್ಡು ಹೊಡೆದಿರಬಹುದು. ನಿಮಗೆ ಬೌದ್ಧಿಕವಾದ, ಸದೃಢ ವಾಸ್ತವಾಂಶಗಳೇ ತೃಪ್ತಿ ತರಬಹುದು. ಆದರೆ ಸನಾತನಿಗಳು, ಮಹಮ್ಮದೀಯರೂ ಇದ್ದಾರೆ. ಇವರು ಪೂಜಾ ಸ್ಥಳಗಳಲ್ಲಿ ಒಂದು ಚಿತ್ರವನ್ನೋ ಅಥವಾ ಒಂದು ಮೂರ್ತಿಯನ್ನೋ ಇಡಲಾರರು. ಇರಲಿ ಬಿಡಿ. ಇಲ್ಲಿ ಮತ್ತೊಬ್ಬನಿದ್ದಾನೆ. ಅವನಿಗೆ ಬಣ್ಣಗಳು, ಹೂಗಳು, ವಿವಿಧ ಆಕೃತಿಗಳು ಇಷ್ಟವಾಗುತ್ತವೆ. ಅವನಿಗೆ ಬೊಂಬತ್ತಿಗಳು ಬೇಕು. ದೀಪಗಳು ಮತ್ತು ಪೂಜೆಯ ಎಲ್ಲಾ ವಸ್ತುಗಳು ಇರಬೇಕು. ಇವೆಲ್ಲ ದೇವರನ್ನು ಕಂಡುಕೊಳ್ಳಲು ಇನ್ನೊಬ್ಬ ಭಕ್ತನು ಇದ್ದಾನೆ. ಅವನ ಆತ್ಮವು ದೇವರಿಗಾಗಿ ತಹತಹಿಸುತ್ತದೆ. ದೇವರನ್ನು ಪೂಜಿಸುವುದು ಮತ್ತು ಹೂಗಳನ್ನು ಇಡುವುದು ಬಿಟ್ಟರೆ, ಬೇರೆ ಇನ್ನಾವುದೂ ಅವನಿಗೆ ತಿಳಿದಿಲ್ಲ. ಇನ್ನು ತತ್ವಜ್ಞಾನಿ ಒಬ್ಬನಿದ್ದಾನೆ. ಇವನ್ನೆಲ್ಲ ನೋಡಿ ಅವನು ನಗುತ್ತಾನೆ. ಇವರಲ್ಲಿ ಒಬ್ಬರು ಮತ್ತೊಬ್ಬರನ್ನು ನೋಡಿ ನಗಬಹುದು. ಆದರೆ ಪ್ರತಿಯೊಬ್ಬರಿಗೂ ಈ ಜಗತ್ತಿನಲ್ಲಿ ಸ್ಥಾನವಿದೆ. ಮುಂದೆಂದಾದರೂ ಆದರ್ಶವಾದ ಧರ್ಮವೊಂದು ತಲೆ ಎತ್ತಿದರೆ, ಅದು ಇವರೆಲ್ಲರನ್ನೂ ಒಳಗೊಳ್ಳಬೇಕು."

"ಹಾಗಾಗಿ ನಾವು ಗಮನಿಸಬೇಕಾದ ಪದವು "ಸ್ವೀಕಾರ". ಹೊರಗೆ ಇಡುವುದಲ್ಲ; ಬಹಿಷ್ಕಾರ ಹಾಕುವುದಲ್ಲ, ನಾನು ಎಲ್ಲ ಮತಧರ್ಮಗಳನ್ನು ಸ್ವೀಕರಿಸುತ್ತೇನೆ. ಕ್ರೈಸ್ತರ ಚರ್ಚಿನ ಒಳಹೊಕ್ಕು, ಮೊಣಕಾಲೂರಿ ಪ್ರಾರ್ಥಿಸುತ್ತೇನೆ. ಬೌದ್ಧರ ದೇವಾಲಯ ಹೊಕ್ಕು ಶರಣಂ ಗಚ್ಛಾಮಿ ಅನ್ನುತ್ತೇನೆ. ಹಿಂದೂಗಳಂತೆ ಕಾಡೊಂದನ್ನು ಹೊಕ್ಕು ದೇವರ ಸಾಕ್ಷಾತ್ಕಾರಕ್ಕಾಗಿ ಮರದಡಿ ಧ್ಯಾನಾಸಕ್ತನಾಗುತ್ತೇನೆ. ಬೈಬಲ್, ಕುರಾನ್, ವೇದಗಳು ಮತ್ತು ಇತರೆ ಪವಿತ್ರ ಗ್ರಂಥಗಳೆಲ್ಲಾ ಅನಂತ ಪುಟಗಳ ಪವಿತ್ರ ಗ್ರಂಥವೊಂದರ ಪುಟಗಳಷ್ಟೆ. ಹಿಂದಿನ ಎಲ್ಲಾ ಪ್ರವಾದಿಗಳಿಗೂ ನಮಸ್ಕಾರ. ಈಗಿರುವ ಎಲ್ಲಾ ಮಹಾತ್ಮರಿಗೂ ನಮಸ್ಕಾರ; ಮುಂಬರುವ ಸಾಧುಸಂತರಿಗೂ ನಮಸ್ಕಾರ."

ವಿವೇಕಾನಂದರ ಕೃತಿ ಶ್ರೇಣಿಯ 9 ಸಂಪುಟಗಳ ತುಂಬಾ ಇಂತಹ ಎಲ್ಲಾ ಮತಧರ್ಮಗಳ ಬಗೆಗಿನ ಸೆಕ್ಯುಲರ್ ನಿಲುವು ಸ್ಪಷ್ಟವಾಗಿ ವ್ಯಕ್ತವಾಗಿದೆ. ತಮ್ಮ ಹಿಂದೂ ಧರ್ಮ ಮಾತ್ರ ಶ್ರೇಷ್ಠ ಎಂದು ಹೇಳಿಕೊಂಡು ಹಿಂದೂ ರಾಷ್ಟ್ರೀಯವಾದಿ ರಾಜಕಾರಣ ಮಾಡುತ್ತಿರುವ ನರೇಂದ್ರ ಮೋದಿಯನ್ನು ಈ ನಮ್ಮ ವಿವೇಕಾನಂದರ ಜತೆಗೆ ಹೇಗೆ ಹೋಲಿಸಲು ಸಾಧ್ಯ?

ಮೂಢನಂಬಿಕೆಗಳನ್ನು ಹರಡುತ್ತಿರುವ ಪುರೋಹಿತಶಾಹಿಯ ಬಗ್ಗೆ ವಿವೇಕಾನಂದರು ಏನು ಹೇಳಿದ್ದಾರೆ ನೋಡಿ-

"ಹಾಳುಗಟ್ಟಿದ ಮೂಢನಂಬಿಕೆಗಳನ್ನು ನೂರಾರು ವರ್ಷಗಳಿಂದ ನಿಮ್ಮ ತಲೆಯ ಮೇಲೆ ಹೊತ್ತಿದ್ದೀರಿ. ಯಾವುದು ತಿಂದರೆ ಶುದ್ಧ ಅಶುದ್ಧ ಎಂದು ಚರ್ಚಿಸಿದ್ದೀರಿ. ಸಾಮಾಜಿಕ ದಬ್ಬಾಳಿಕೆ ನಡೆಸಿ ಜನರನ್ನು ಶೋಷಿಸಿದ್ದೀರಿ. ಈಗ ನಿಮ್ಮ ಸ್ಥಿತಿ ಏನು?... ಬನ್ನಿ, ನಿಜವಾದ ಮನುಷ್ಯರಾಗಿ ಮುನ್ನಡೆಗೆ ಅಡ್ಡಿಯಾಗಿರು[ವ] ಪುರೋಹಿತಶಾಹಿಯನ್ನು ಕಿತ್ತೊಗೆಯಿರಿ..."

ಪುರೋಹಿತಶಾಹಿಯ ವಿರುದ್ಧ ಇಷ್ಟು ಪ್ರಬಲವಾದ ಗದಾಪ್ರಹಾ[ರ] ಮಾಡಿರುವ ವಿವೇಕಾನಂದರು - ಪುರೋಹಿತಶಾಹಿಯ ಪರವಾದ ಬಲಪಂಥೀಯ ಸಂಘ ಪರಿವಾರದವರಿಗೆ ಹೇಗೆ ಕಣ್ಮಣಿ ಆಗ್ತಾರೆ?

ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಭಾಷಣ ಮಾಡುತ್ತಾ ವಿವೇಕಾನಂದರು ಹೀಗೆ ಹೇಳಿದರು:

"ಸ್ವರ್ಗವೋ ನರಕವೋ ಯಾರಿಗೆ ಬೇಕಿದೆ? ಜೀವಿಗೊಂದು ಆತ್ಮವಿದೆಯೋ ಇಲ್ಲವೋ ಬಲ್ಲವರಾರು? ನಿರಂತರ ಸತ್ಯವೊಂದು ಇದೆಯೋ ಇಲ್ಲವೋ ತಿಳಿದವರಾರು? ಇಲ್ಲಿ ಕಣ್ಮುಂದೆ ಜಗತ್ತಿದೆ. ಇದರಲ್ಲಿ ದುಃಖ ತುಂಬಿ[ದೆ]. ಬುದ್ಧ ಹೇಳಿದಂತೆ ಅದರೊಳಕ್ಕೆ ನುಗ್ಗಿರಿ. ಅದರ ದುಃಖವನ್ನು ಕಡಿ[ಮೆ] ಮಾಡಲು ಪ್ರಯತ್ನಿಸಿ ಅಥವಾ ಪ್ರಯತ್ನದಲ್ಲಿ ಜೀವ ಕೊಡಿ. ನಿಮ್ಮನ್ನು ನೀ[ವು] ಮರೆತು ಬಿಡಿ. ಇದೇ ಕಲಿಯಬೇಕಾದ ಮೊದಲ ಪಾಠ. ನೀವು ಆಸ್ತಿಕರೋ, ನಾಸ್ತಿಕರೋ, ಸಂದೇಹವಾದಿಗಳೋ, ವೇದಾಂತಿಗಳೋ, ಕ್ರೈಸ್ತರೋ ಅಥ[ವಾ] ಮಹಮ್ಮದೀಯರೋ.. ಇವೆಲ್ಲಕ್ಕೂ ನಿಮ್ಮ ಸಣ್ಣತನ ಮರೆತು ನಿಮ್ಮ ನೈ[ಜ] ವ್ಯಕ್ತಿತ್ವ ಹೊರಬರುವಂತೆ ಮಾಡಿ. ಇದೇ ಮೊದಲ ಪಾಠ" (ಸ್ವಾಮಿ ವಿವೇಕಾನಂ[ದ] **Practical Vedanta)**

ಇಂತಹ ಸಮಾಜವಾದಿ ವೈಚಾರಿಕತೆಯನ್ನು ಹೊಂದಿದ್ದ ಸ್ವಾ[ಮಿ] ವಿವೇಕಾನಂದರನ್ನು, ನರೇಂದ್ರ ಮೋದಿಯ ಜತೆಗೆ ಹೇಗೆ ಹೋಲಿಸ[ಲು] ಸಾಧ್ಯ?

ಖಂಡಿತಾ ಸ್ವಾಮಿ ವಿವೇಕಾನಂದರು ಬಲಪಂಥೀಯರಾಗಿರಲಿಲ್ಲ; ತ[ಮ್ಮ] ಅನುಭವದಿಂದ ಕಲಿತ ಪಾಠದಿಂದಾಗಿಯೋ ಸಮಾಜವಾದಿ ಆಗಿದ್ದ[ರು] ಎಡಪಂಥೀಯರಾಗಿದ್ದರು.

ಆದ್ದರಿಂದಲೇ ದಿಟ್ಟವಾಗಿ ಮತ್ತು ಸ್ಪಷ್ಟವಾಗಿ ಕೆಲವೊಮ್ಮೆ ನಾಸ್ತಿಕರಂತೆಯ[ೇ] ಅವರು ಹೀಗೆ ಹೇಳುತ್ತಿದ್ದರು: "ಅನ್ನ ನೀಡದ ದೇವರಲ್ಲಿ ನನಗೆ ನಂಬಿಕೆಯಿ[ಲ್ಲ]. ಸ್ವರ್ಗದಲ್ಲಿ ಆನಂದ ನೀಡಿ ಇಲ್ಲಿ ಅನ್ನ ನೀಡದ ದೇವರು ಬೇಡ. ಬಡವ[ರಿಗೆ] ಊಟ ಬೇಕು. ಭಾರತವು ಮೇಲೇಳಬೇಕು. ಶಿಕ್ಷಣವು ಹರಡಬೇ[ಕು]. ಪುರೋಹಿತಶಾಹಿಯ ದರ್ಪ ನಿರ್ನಾಮವಾಗಬೇಕು.. ಹೆಚ್ಚು ಅನ್ನ, ಹೆ[ಚ್ಚು] ಅವಕಾಶ ಎಲ್ಲರಿಗೂ ದೊರಕಬೇಕು". (ಪುಟ 367-99 **Vivekanan[da] The Complete Works V.I. Mayavati 1950)**

-ಡಾ.ಹಯವದನ ಮೂಡುಸಗ್ರಿ, ಕುಂದಾ[ಪುರ]

ಗ್ರಂಥಋಣ: 1. ಕಮ್ಯುನಿಸ್ಟರ ದೃಷ್ಟಿಯಲ್ಲಿ ವಿವೇಕಾನಂದರು

2. The Complete Works of Vivekananda V.I. Mayavati 1950, 9 Volumes

ನಮೋ ಗಾದೆಗಳು

* ಮಾಡೋದು ಹಿಂಸೆ ಅನಾಚಾರ; ಆಡೋದು ಐಕ್ಯತೆ ಶಿಷ್ಟಾಚಾರ
* ಊರಿಗೊಬ್ಬಳೇ ನಮೋವತಿ
* ಎಲೆಕ್ಷನ್ ಮುಂಚಿನೇ ಶೌಚಾಲಯ ಕಳ್ಳರು
* ರಾತ್ರಿ ಎಲ್ಲ ನರೋದ ಪಟಿಯಾ ಸ್ಕೆಚ್ ಕೇಳಿ, ಬೆಳಗ್ಗೆ ಮಾಯಾ ಕಂಡ್ನಾನಿ ಯಾರು ಅಂದ್ನಂತೆ
* ನಮೋಗೊಂದು ಕಾಲ ಫೊಟಾಕೋ ಜನ್ರಿಗೊಂದು ಕಾಲ
* ನಮೋ ಬೆಕ್ಕು ಕಣ್ಮುಚ್ಚಿಕೊಂಡು ಗುಲ್ಬರ್ಗ್ ಸೊಸೈಟಿ ಸುಟ್ಟಿತಂತೆ




ಂದೆ ಕೈಕೊಟ್ಟಿದ್ದ ಕನ್ನಡ ಆ ನಂತರ ಕೈ ಹಿಡಿಯಿತು

"ಇತ್ತೀಚೆಗೆ ನಮ್ಮ ತಂಡ ಚಿತ್ರದುರ್ಗದಲ್ಲಿ ...ಷ್ಣ' ಕುರಿತು ಚರ್ಚೆ ಏರ್ಪಡಿಸಿದ್ದಾಗ ಮಿತ್ರ ...ಪತಿಯವರ ಅಕ್ಕನ ಮಗಳಾದ ಮೇಘನಾ ...ವು ಕನ್ನಡ ಚೆನ್ನಾಗಿ ಮಾತನಾಡುತ್ತೀರಿ" ಎಂದಳು. ...ಜೋರಾಗಿ ನಕ್ಕು "ನಿನಗೆ ಗೊತ್ತಾ, ನಾನು ...ದಲ್ಲಿ ಎರಡು ಬಾರಿ ಫೇಲ್ ಆಗಿದ್ದೆ" ಎಂದೆ. ...ಗಿ ಮೇಡಂ, ನೀವು ಸುಳ್ಳು ಹೇಳುತ್ತಿದ್ದೀರಾ" ...ಮೇಘನಾ ಸಂಶಯ ವ್ಯಕ್ತಪಡಿಸಿದ್ದಳು.

ಆದರೆ ಅದು ನಿಜ.

ಅದು ಆದದ್ದು ಹೀಗೆ...

ನಾನು ಚಿಕ್ಕವಳಿದ್ದಾಗ ಅಪ್ಪ ಮತ್ತು ಅಮ್ಮ ನನ್ನನ್ನು ...ವನಗುಡಿಯಲ್ಲಿದ್ದ 'ದ ಹೋಮ್ ಸ್ಕೂಲ್' ಎಂಬ ...ಗ್ಲಿಷ್ ಮಾಧ್ಯಮದ ಶಾಲೆಗೆ ಸೇರಿಸಿದ್ದರು. ಆ ...ಡಿಯಲ್ಲಿ ಎಲ್ಲರೂ ಇಂಗ್ಲಿಷ್‌ನಲ್ಲೇ ಮಾತಾಡಬೇಕಿತ್ತು. ...ಡದಲ್ಲಿ ಮಾತನಾಡಿದರೆ ಟೀಚರ್‌ಗಳು



...ಯುತ್ತಿದ್ದರು. ಅವರ ಉದ್ದೇಶ ನಾವು ಇಂಗ್ಲಿಷ್‌ನಲ್ಲಿ ...ಷ್ಟು ಮಾತನಾಡಿದಷ್ಟೂ ಆ ಭಾಷೆ ನಮಗೆ ...ಲಲಿತವಾಗುತ್ತದೆ ಎಂಬುದಾಗಿತ್ತು.

...ಜೊತೆಗೆ ಇನ್ನೊಂದು ಕಾರಣವೂ ಇತ್ತು. ನನ್ನ ...ಪಾಠಿಗಳೆಲ್ಲ ನಮಗಿಂತ ಶ್ರೀಮಂತ ಮನೆಯ ...ಕ್ಕಳು. ಅವರೆಲ್ಲ ಕಾರ್‌ನಲ್ಲಿ ಬರುತ್ತಿದ್ದರೆ ನನ್ನನ್ನು ...ಬಾಡಿಗೆ ಸೈಕಲ್‌ನಲ್ಲಿ ಕರೆದುಕೊಂಡು ...ೀಗುತ್ತಿದ್ದರು. ಆಮೇಲೆ ನಾನು ಜಟಕಾ ಗಾಡಿಯಲ್ಲಿ ...ೀಗುತ್ತಿದ್ದೆ. ಅದು ನನ್ನಲ್ಲಿ ಒಂದು ರೀತಿಯ ...ರಿಮೆ ಮೂಡಿಸುತ್ತಿತ್ತು. ನಾನು ಇತರರಿಗಿಂತ ...ಮಟ್ಟದವಳಲ್ಲ ಎಂಬುದನ್ನು ಸಾಬೀತುಪಡಿಸಲು ...ಾ ನನ್ನ ಸಹಪಾಠಿಗಳೊಂದಿಗೆ ಅವರಷ್ಟೇ ...ಸಾಗಿ ಇಂಗ್ಲಿಷ್‌ನಲ್ಲಿ ಮಾತನಾಡಬೇಕಿತ್ತು.

...ಹೋಮ್ ಸ್ಕೂಲ್‌ನಲ್ಲಿ ನಮಗೆ ಕನ್ನಡ ...ಳಿಕೊಡುತ್ತಿದ್ದವರು ಓರ್ವ ಓಬೀರಾಯನ ಕಾಲದ ...ದುಕ. ಬಿಳಿ ಪಂಚೆ, ಅದರ ಮೇಲೊಂದು ಕಪ್ಪು ...ೋಟು, ತಲೆಯ ಮೇಲೆ ಕಪ್ಪು ಟೋಪಿ, ಹಣೆಯ ...ಲೆ ಉದ್ದದ ನಾಮ ಧರಿಸಿಕೊಂಡು ಬರುತ್ತಿದ್ದ ...ರು ಹೆಸರಿಗಷ್ಟೇ ಕನ್ನಡ ಮಾಸ್ಟರ್ ಆಗಿದ್ದರು. ...ಕೆಂದರೆ ಅವರು ಕನ್ನಡ ಪಾಠ ಮಾಡಿದ್ದಕ್ಕಿಂತ ...ಮಾಯಣ ಮತ್ತು ಮಹಾಭಾರತದ ಕತೆಗಳನ್ನು ...ದ್ದೇ ಹೆಚ್ಚು. ಪರಿಣಾಮವಾಗಿ ಕನ್ನಡ ನನ್ನ ...ಂದ ಕರಗುತ್ತಾ ಹೋಯಿತು.

...ನಾನು ವಿಜಯ ಹೈಸ್ಕೂಲ್ ಸೇರಿದಾಗ ...ಗೊಂದು ಶಾಕ್ ಕಾದಿತ್ತು. ಯಾಕೆಂದರೆ ಆ ...ಯ ಇಂಗ್ಲಿಷ್ ಮಾಸ್ಟರ್ ನನ್ನ ಟುಸ್‌ಪುಸ್ ...ಷನ್ನು ಮೆಚ್ಚಿದರೆ ಕನ್ನಡ ಮಾಸ್ಟರ್ ನನ್ನನ್ನು ...ತ್ರ ಪ್ರಾಣಿ ತರಹ ನೋಡಿದ್ದರು. ಯಾಕೆಂದರೆ ...ರು ಆ ಸಂಧಿ, ಈ ಸಂಧಿ ಎಂದೆಲ್ಲ ಪ್ರಶ್ನೆಗಳನ್ನು ...ದಾಗ ನಾನು ಬ್ಬೆಬ್ಬೆಬ್ಬೆ ಎಂದಿದ್ದೆ. ಯಾಕೆಂದರೆ ...ವುದೂ ನನಗೆ ಗೊತ್ತೇ ಇರಲಿಲ್ಲ. ಪಾಪ ಆ ...ರ್ ನನ್ನ ಬಗ್ಗೆ ಒಂದಿಷ್ಟು ಮುತುವರ್ಜಿ ...ದ್ದರಿಂದ ಅದು ಹೇಗೋ ಹೈಸ್ಕೂಲ್‌ನಲ್ಲಿ,

ಕನ್ನಡದಲ್ಲಿ ಪಾಸ್ ಆದೆ.

ಪಿಯುಸಿಗೆ ಬಂದಾಗ ಬಯಾಲಜಿ, ಫಿಸಿಕ್ಸ್, ಮ್ಯಾಥಮಾಟಿಕ್ಸ್ ಮತ್ತು ಕೆಮಿಸ್ಟ್ರಿಗೆ ಒತ್ತು ಕೊಟ್ಟಿದ್ದರಿಂದ ಕನ್ನಡ ನನ್ನಿಂದ ಇನ್ನಷ್ಟು ದೂರ ಸರಿಯಿತು. ಅಷ್ಟು ಹೊತ್ತಿಗೆ ಕನ್ನಡವನ್ನು ಸುಲಭವಾಗಿ ಓದುವುದನ್ನೂ ಮರೆತಿದ್ದೆ. ಆದರೂ ಪರೀಕ್ಷೆಯಲ್ಲಿ ಪಾಸ್ ಆಗಬೇಕಲ್ಲ, ಅದಕ್ಕೆ ಒಂದು ಪರಿಹಾರ ಕಂಡುಕೊಂಡೆ. ಕನ್ನಡ ಪಠ್ಯವನ್ನು ಅಮ್ಮನಿಂದ ಓದಿಸಿ, ಅದನ್ನು ಕೇಳಿಸಿಕೊಂಡು, ಪರೀಕ್ಷೆಯಲ್ಲಿ ಉತ್ತರಗಳನ್ನು ಬರೆದು ಪಾಸ್ ಆದೆ.

ಬಿಎ ಸೇರಿದ ನಂತರ ಪರಿಸ್ಥಿತಿ ನಿಜವಾಗಲೂ ಹದಗೆಟ್ಟಿತು. ಮೊದಲನೆ ವರ್ಷ ಮತ್ತದೇ ಅಮ್ಮ ಓದೋದು, ನಾನು ಕೇಳೋದು, ಪರೀಕ್ಷೆ ಬರೆಯೋದು ನಡೆಯಿತು. ಮೊದಲನೆ ವರ್ಷ ನೂರಕ್ಕೆ 35 ಮಾರ್ಕ್ಸ್ ಗಳಿಸಿ ಜಸ್ಟ್ ಪಾಸ್ ಆದೆ. ಆದರೆ ನನ್ನ

ಸೋಂಭೇರಿತನ ಎರಡನೆ ವರ್ಷ ಸರಿಯಾಗಿ ಕೈಕೊಟ್ಟಿತು. ಅಮ್ಮ ಓದಿದ್ದನ್ನು ಕೇಳಿಸಿಕೊಳ್ಳುತ್ತಿದ್ದೆ ನಿಜ, ಆದರೆ ಬರೆಯುವಾಗ ಪದಗಳು ಕೈಗಳಿಗೆ ಸಿಗುತ್ತಿರಲಿಲ್ಲ, ಸಿಕ್ಕರೂ ಕಾಗುಣಿತ ಎಕ್ಕುಟ್ಟಿ ಹೋಗುತ್ತಿತ್ತು. ಹಸ್ತಾಕ್ಷರವನ್ನಂತೂ ಕೇಳಬೇಡಿ...

ಎರಡನೆ ವರ್ಷ ಪಾಸ್ ಆಗುವಷ್ಟು ಮಾರ್ಕ್ಸ್ ಗಳಿಸದೆ ಫೇಲ್ ಆದೆ.

ಅಷ್ಟು ಹೊತ್ತಿಗೆ ಅಪ್ಪ ದೊಡ್ಡ ಸಾಹಿತಿ ಆಗಿದ್ದರಲ್ಲದೆ ಪತ್ರಿಕೆಯನ್ನು ಪ್ರಾರಂಭಿಸಿ ರಾಜ್ಯಾದ್ಯಂತ ಸಂಚಲನ ಮೂಡಿಸಿದ್ದರು. ಅದೇ ಹೊತ್ತಿಗೆ ಅವರ ಹಿರಿಯ ಮಗಳಾದ ನಾನು ಕನ್ನಡದಲ್ಲಿ ಫೇಲ್ ಆಗಿದ್ದೆ. ಈ ವಿಷಯವನ್ನು ಅಪ್ಪನಿಂದ ಬಚ್ಚಿಟ್ಟೆ. ಹೇಗಿದ್ದರೂ ಸಪ್ಲಿಮೆಂಟರಿ ಪರೀಕ್ಷೆ ಇದೆಯಲ್ಲ, ಅದರಲ್ಲಿ ಪಾಸಾದರೆ ಆಯ್ತು ಅಂದುಕೊಂಡು ಸುಮ್ಮನಾದೆ.

ಆದರೂ ನನಗೆ ಬುದ್ಧಿ ಬಂದಿರಲಿಲ್ಲ. ಕನ್ನಡ ಪಠ್ಯಪುಸ್ತಕವನ್ನು ಓದಲಿಲ್ಲ. ಅದೇ ಹುಂಬತನದಲ್ಲಿ ಸಪ್ಲಿಮೆಂಟರಿ ಪರೀಕ್ಷೆ ಬರೆದೆ. ಮತ್ತೆ ಫೇಲ್ ಆದೆ. ಅದಕ್ಕೆ ಮುಖ್ಯ ಕಾರಣ ನನಗೆ ಅಷ್ಟು ಹೊತ್ತಿಗಾಗಲೇ ಕನ್ನಡ ಬರೆಯುವುದಿರಲಿ, ಕನ್ನಡ ಓದುವುದೂ ಕಷ್ಟವಾಗಿತ್ತು, ಇನ್ನು ಪರೀಕ್ಷೆಯಲ್ಲಿ ಪಾಸಾಗುವ ಮಾತು ಎಲ್ಲಿಂದ ಬಂತು?

ಮೂರನೆ ವರ್ಷ ನನಗೆ ಕನ್ನಡ ಒಂದು ಪರೀಕ್ಷಾ ವಿಷಯವಾಗಿ ಇರಲಿಲ್ಲ. ಆದರೆ ಎರಡನೆ ವರ್ಷ ಫೇಲ್ ಆಗಿದ್ದ ಸಂಗತಿ ಇತ್ತಲ್ಲ, ಆ ವರ್ಷವೂ ಇತರೆ ವಿಷಯಗಳಲ್ಲಿ ಪಾಸ್ ಆಗಿ ಕನ್ನಡದಲ್ಲಿ ಫೇಲ್ ಆದರೆ ಡಿಗ್ರಿ ಇಲ್ಲದಂತಾಗುತ್ತದೆ; ಪರಿಣಾಮವಾಗಿ ಅತ್ತ ಮುಂದಿನ ಓದೂ ಇಲ್ಲ, ಇತ್ತ ಕೈಯಲ್ಲಿ ಕೆಲಸವೂ ಇಲ್ಲ ಎಂದಾಗುತ್ತದೆ; ಎಲ್ಲರ ಮುಂದೆ ಮುಖಭಂಗವಾಗುತ್ತದೆ ಎಂದು ಅರ್ಥವಾಯಿತು. ಅದು ಹೇಗೋ ಕಷ್ಟಪಟ್ಟು ಓದಿ ಪರೀಕ್ಷೆ ತೆಗೆದುಕೊಂಡೆ. ಆದರೆ ನಿಜವಾಗಲೂ ಮೂರನೆ ಯತ್ನದಲ್ಲಿ ಪಾಸ್ ಆದೆನೋ ಅಥವಾ ಉತ್ತರ ಪತ್ರಿಕೆಯನ್ನು ನೋಡಿದ ಯಾರೋ ಪುಣ್ಯಾತ್ಮ "ಸಾಯ್ಲೊಂದು ಹೋಗು" ಅಂತ ನನ್ನನ್ನು ಪಾಸ್

ಮಾಡಿಸಿದರೋ ಗೊತ್ತಿಲ್ಲ, ಯಾಕೆಂದರೆ ಆ ಬಾರಿಯೂ ನೂರಕ್ಕೆ 35 ಮಾರ್ಕ್ಸ್ ಪಡೆದು ಬಚಾವಾದೆ.

ಪಾಸ್ ಆಗಿದ್ದೇ ತಡ ಉಸ್ಸಪ್ಪಾ ಅಂತ ನಿಟ್ಟುಸಿರು ಬಿಟ್ಟೆನಲ್ಲದೆ ಕನ್ನಡದ ತಂಟೆಗೆ ಹೋಗುವುದನ್ನೇ ನಿಲ್ಲಿಸಿದೆ!

ಹೇಗಿದ್ದರೂ ಜೀವನೋಪಾಯಕ್ಕೆ ಇಂಗ್ಲಿಷ್ ಮಾಧ್ಯಮದಲ್ಲಿ ಕೆಲಸ ಎಂಬುದೊಂದು ಸಿಕ್ಕಿತ್ತು. ವಿಚಿತ್ರವೆಂದರೆ ನಾನು ಲಂಕೇಶ್ ಮಗಳಾದ್ದರಿಂದ ನನಗೆ ಕನ್ನಡ ಚೆನ್ನಾಗಿ ಬರುತ್ತೆ, ನನ್ನನ್ನು ಕನ್ನಡದ ಪತ್ರಿಕಾಗೋಷ್ಠಿಗಳಿಗೆ ಕಳುಹಿಸಬಹುದು, ಕನ್ನಡ ಪತ್ರಿಕಾ ಪ್ರಕಟಣೆಗಳ ಜವಾಬ್ದಾರಿಯನ್ನು ವಹಿಸಬಹುದು ಎಂಬ ನಂಬಿಕೆಯ ಮೇಲೆ ನನ್ನನ್ನು ಕೆಲಸಕ್ಕೆ ತೆಗೆದುಕೊಂಡಿದ್ದರು. ಆದರೆ ಆಗ ನನಗೆ ಸರಿಯಾಗಿ ಓದಲೂ ಬರುತ್ತಿರಲಿಲ್ಲ ಅಂತ ಅವರಿಗೆ ಗೊತ್ತಿರಲಿಲ್ಲ. ಆಗ ಅದೇ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ನನ್ನ ಗೆಳತಿ ಭಾರತಿ ಗೌಡಳ ನೆರವು ಪಡೆದು, ಕನ್ನಡದ ಪತ್ರಿಕಾ ಪ್ರಕಟಣೆಗಳನ್ನು ಆಕೆಯಿಂದ ಓದಿಸಿಕೊಂಡು ಕೇಳಿ, ನನಗೆ ವಹಿಸಿದ್ದ ಕೆಲಸವನ್ನು ಮಾಡಿ ಮುಗಿಸುತ್ತಿದ್ದೆ. ಇಂತಹ ಪರಿಸ್ಥಿತಿಯಲ್ಲಿ ಎಡವಟ್ಟು ಆಗದೇ ಇರುತ್ತದೆಯೇ? ಒಂದು ಎಡವಟ್ಟು ಆಗೇ ಹೋಯಿತು.

ಒಂದು ದಿನ ಆಫೀಸಿನಲ್ಲಿದ್ದಾಗ ಕನ್ನಡದಲ್ಲಿ ಬರೆದಿದ್ದ ಒಂದು ಪತ್ರಿಕಾ ಹೇಳಿಕೆ ಬಂತು. ಆ ಪತ್ರಕ್ಕೆ ಯಾರೋ ಕೋಟಾ ಶಿವರಾಮ ಕಾರಂತ ಎಂಬುವವರು ಸಹಿ ಹಾಕಿದ್ದರು. ನಾನು ಶಿವರಾಮ ಕಾರಂತರ ಬಗ್ಗೆ ಕೇಳಿದ್ದೆ (ಅವರ ಯಾವ ಕೃತಿಯನ್ನೂ ಓದಿರಲಿಲ್ಲ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ ಅಲ್ಲವೇ?!) ಆದರೆ ಈ ಕೋಟಾ ಶಿವರಾಮ ಕಾರಂತರ ಬಗ್ಗೆ ಕೇಳಿರಲಿಲ್ಲ. ಇವರು ಯಾರೆಂದು ವಿಚಾರಿಸಲು ಅವತ್ತು ಗೆಳತಿ ಭಾರತಿಯೂ ಆಫೀಸಿನಲ್ಲಿರಲಿಲ್ಲ. ಆಗ ಈತ ಯಾರೋ 'ಕೋಟಾ' ಇರಬೇಕೆಂದು ಭಾವಿಸಿ ಆ ಪತ್ರಿಕಾಹೇಳಿಕೆಯನ್ನು ಕಸದ ಬುಟ್ಟಿಗೆ ಎಸೆದಿದ್ದೆ. ಮಾರನೆ ದಿನ ಬೆವರು ಸುರಿಸುವಂತಾ ಪರಿಸ್ಥಿತಿ ನನ್ನದು. ಯಾಕೆಂದರೆ ಬೇರೆ ಪತ್ರಿಕೆಗಳು ಶಿವರಾಮ ಕಾರಂತರ ಹೇಳಿಕೆಯನ್ನು ದೊಡ್ಡದಾಗಿ ಮುದ್ರಿಸಿದ್ದರೆ ಅದರ ಬಗ್ಗೆ ನನ್ನಿಂದಾಗಿ ನಾನು ಕೆಲಸ ಮಾಡುತ್ತಿದ್ದ ಪತ್ರಿಕೆಯಲ್ಲಿ ಪ್ರಸ್ತಾಪವೂ ಇರಲಿಲ್ಲ.

ಸದ್ಯ ಆಗಿನ್ನೂ ಅದು ಹೊಸ ಪತ್ರಿಕೆ ಆಗಿದ್ದರಿಂದ ನನ್ನ ಚೀಫ್ ರಿಪೋರ್ಟರ್ ನಮ್ಮ ಪತ್ರಿಕೆಗೆ ಕಾರಂತರು ತಮ್ಮ ಹೇಳಿಕೆಯನ್ನು ಕಳುಹಿಸಿರಲಿಕ್ಕಿಲ್ಲ ಎಂದು ಭಾವಿಸಿದ್ದರಿಂದ ನಾನು ಬಚಾವ್ ಆದೆ!

ಇಂತಹ ಕನ್ನಡ ಅಜ್ಞಾನಿಯಾದ ನನ್ನನ್ನು ಅದೇ ಆಫೀಸಿನವರು ಮೈಸೂರಿನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನವನ್ನು ವರದಿ ಮಾಡಲು ಕಳುಹಿಸಿದ್ದರು. ಅಲ್ಲೋ, ಸಾಹಿತಿಗಳ, ಚಿಂತಕರ, ಇತರರ ಬಾಯಿಗಳಿಂದ ಹೊರಬೀಳುತ್ತಿದ್ದ ಪದಗಳು ನನ್ನ ತಲೆಯ ಒಳಗೆ ಹೋಗುವ ಬದಲು ತಲೆಯ ಮೇಲೆ ತೇಲಿ ಹೋಗುತ್ತಿದ್ದವು.

ಆಮೇಲೆ ದೆಹಲಿ, ಅಮೆರಿಕ, ಯೂರೋಪ್ ಎಂದೆಲ್ಲ ಸುತ್ತಾಡಿದ್ದರಿಂದ ಕನ್ನಡದಿಂದ ದೂರವೇ ಇದ್ದೆ. ಮನೆಯಲ್ಲಿ ಮಾತನಾಡುತ್ತಿದ್ದ ಕನ್ನಡ, ಅಪ್ಪನ ಟೀಕೆಟಿಪ್ಪಣಿ ಮತ್ತು ಆಗೀಗ ಓದುತ್ತಿದ್ದ ಕನ್ನಡ ಪುಸ್ತಕಗಳನ್ನು ಹೊರತುಪಡಿಸಿದರೆ ನನ್ನ ಜೀವನದಲ್ಲಿ ಕನ್ನಡಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇರಲಿಲ್ಲ. ಕನ್ನಡದಲ್ಲಿ ಬರೆಯುವ ಮಾತಂತೂ ಇರಲೇ ಇಲ್ಲ. ಅಪ್ಪಅಮ್ಮನಿಗೆ ನಾನು ಪತ್ರಗಳನ್ನು ಬರೆಯುತ್ತಿದ್ದದ್ದೂ ಇಂಗ್ಲಿಷ್‌ನಲ್ಲೇ.

ಒಮ್ಮೆ ಅಮೆರಿಕಕ್ಕೆ ಹೋದಾಗ ತೇಜಸ್ವಿಯವರ 'ಜುಗಾರಿ ಕ್ರಾಸ್' ಓದುತ್ತಿದ್ದೆ. ಅಮೆರಿಕದಲ್ಲಿ ಹೆಚ್ಚಿನ ಕೆಲಸ ಇರಲಿಲ್ಲವಾದ್ದರಿಂದ ಆ ಕಾದಂಬರಿಯನ್ನು ಯಾಕೆ ಇಂಗ್ಲಿಷ್‌ಗೆ ಅನುವಾದ ಮಾಡಲು ಯತ್ನಿಸಬಾರದು ಅನ್ನಿಸಿತು. ಆಗ ಆ ಪುಸ್ತಕವನ್ನಲ್ಲದೆ ಅದರ ಜೊತೆಗೆ ಒಂದು ಪುಟ್ಟ 'ಕನ್ನಡ-ಇಂಗ್ಲಿಷ್'



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಡಿಕ್ಷನರಿಯನ್ನೂ ತೆಗೆದುಕೊಂಡು ಹೋಗಿದ್ದೆ! ಅರ್ಥವಾಗದ ಕನ್ನಡ ಪದಗಳ ಇಂಗ್ಲಿಷ್ ಪದಗಳನ್ನು ಹುಡುಕಲು!! ಆಗ ನನ್ನ ಕನ್ನಡ ಯಾವ ಮಟ್ಟದ್ದಾಗಿತ್ತು ಎಂಬುದು ಇದರಿಂದಲೇ ಅರ್ಥವಾಗುತ್ತದೆ.

ಹಾಗಿದ್ದ ನಾನು ಅಪ್ಪನ ಪತ್ರಿಕೆಯ ಸಂಪಾದಕಿ ಆಗುವಂತಾಯಿತು. ಇಂಗ್ಲಿಷ್‌ನಲ್ಲೇ ಚಿಂತಿಸುತ್ತಿದ್ದ, ಇಂಗ್ಲಿಷ್‌ನಲ್ಲೇ ಬರೆಯುತ್ತಿದ್ದ ನಾನು ಕನ್ನಡ ಪತ್ರಿಕಾರಂಗಕ್ಕೆ ಹೊಸ ಮಾರ್ಗವನ್ನು ತೋರಿಸಿದ್ದ ಲಂಕೇಶರ ಪತ್ರಿಕೆಯ ಸಂಪಾದಕಿ ಆಗುವುದೆಂದರೆ ಏನು ಎಂದು ಹಲವರು ಆಡಿಕೊಂಡಿದ್ದರು.

ಆದರೆ ನಾನು ಹಠಮಾರಿ. ಜಗಳಗಂಟಿ. ಕನ್ನಡದಲ್ಲೇ ಬರೆಯುತ್ತೇನೆಂದು ಹಠ ತೊಟ್ಟ ನಾನು ನನ್ನೊಳಗಿದ್ದ ಇಂಗ್ಲಿಷ್ ಭಾಷಿಕಳೊಂದಿಗೆ ತೀವ್ರವಾದ ಜಗಳಕ್ಕೆ ಬಿದ್ದು ಕನ್ನಡವನ್ನು ನನ್ನದಾಗಿಸಿಕೊಂಡೆ.

ಈಗಲೂ ನನ್ನ ಕನ್ನಡದಲ್ಲಿ ಹಲವಾರು ಸಮಸ್ಯೆಗಳಿವೆ. ಮಾತನಾಡುವಾಗ ಮತ್ತು ಬರೆಯುವಾಗ 'ಲ' ಮತ್ತು 'ಳ', 'ನ'ಮತ್ತು 'ಣ' ಪರಸ್ಪರ ಜಾಗಗಳನ್ನು ವಶಪಡಿಸಿಕೊಳ್ಳುತ್ತವೆ. ನನ್ನ ಇಂತಹ ಎಡವಟ್ಟುಗಳನ್ನು ನಮ್ಮ ಹುಡುಗರು ಸರಿಪಡಿಸುತ್ತಾರೆ. ಹಾಗೆಯೇ ನನ್ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ ಪದಗಳಿಲ್ಲದಿರುವುದೂ ಒಂದು ದೊಡ್ಡ ಕೊರತೆಯೇ. ಈಗಲೂ ಅದೆಷ್ಟೋ ಪದಗಳಿಗೆ ಅರ್ಥವನ್ನು ಕೇಳುತ್ತಿರುತ್ತೇನೆ. ಅದನ್ನು ನಾನು ಮುಂದುವರೆಸುತ್ತಿರುವ ಕಲಿಕೆಯ ಪಾಠ ಎಂದೇ ಭಾವಿಸಿದ್ದೇನೆ. ಕಂಪ್ಯೂಟರ್‌ನಲ್ಲೇ ಬರೆಯುವುದರಿಂದ ಕೈಬರಹದ ಸಮಸ್ಯೆ ಬಗೆಹರಿದಿದೆ. ಆದರೆ ಕಾಗುಣಿತದ ಸಮಸ್ಯೆ ಸ್ವಲ್ಪ ಮಟ್ಟಿಗೆ ಇದ್ದೇ ಇದೆ. ಯಾರಾದರೂ ಪುಣ್ಯಾತ್ಮ ಇಂಗ್ಲಿಷ್‌ನಲ್ಲಿರುವಂತೆ ಕನ್ನಡಕ್ಕೂ ಒಂದು 'ಸ್ಪೆಲ್ ಚೆಕ್' ಸಾಫ್ಟ್‌ವೇರ್‌ಅನ್ನು ಕಂಡು ಹಿಡಿಯಬಾರದಾ ಎಂದು ಆಶಿಸುತ್ತಿರುತ್ತೇನೆ!

ಇದೆಲ್ಲದರ ನಡುವೆಯೂ ಕನ್ನಡ ಈಗ ನನ್ನ ಬದುಕಿನಲ್ಲಿ ಎಷ್ಟು ಹಾಸುಹೊಕ್ಕಾಗಿದೆ ಎಂದರೆ ಈಗ ಹಿಂದೊಮ್ಮೆ ಸುಲಲಿತವಾಗಿ ಬರುತ್ತಿದ್ದ ಇಂಗ್ಲಿಷ್ ಪದಗಳಿಗೆ ತಡಕಾಡುತ್ತೇನೆ... ಈಗ ಕನ್ನಡದಲ್ಲಿ ಒಂದಿಷ್ಟು ಮಾತನಾಡುವುದನ್ನು, ಬರೆಯುವುದನ್ನು ಕಲಿತಿದ್ದೇನೆ. ಅದೆಲ್ಲಕ್ಕಿಂತ ಮುಖ್ಯವಾಗಿ ಈಗ ಕನ್ನಡದಲ್ಲೇ ಚಿಂತಿಸುತ್ತೇನೆ, ಸಂವೇದಿಸುತ್ತೇನೆ.

ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ನಮ್ಮ ಓದುಗರಿಗೆ ಕೊಟ್ಟ ವಿಷಯವನ್ನೇ ನಾನೂ ಆರಿಸಿಕೊಂಡು ಹಿಂದೊಮ್ಮೆ ನನಗೆ ಕೈಕೊಟ್ಟಿದ್ದ ಕನ್ನಡ ಹೇಗೆ ಈಗ ನನ್ನ ಕೈಹಿಡಿದಿದೆ ಎಂದು ಇಲ್ಲಿ ಹೇಳಿಕೊಂಡಿದ್ದೇನೆ...

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

“ಕನ್ನಡ ಭುವನೇಶ್ವರಿ”- ಕರ್ನಾಟಕತ್ವದ ಮತೀಯ ಹಾಗು ನಿರ್ಮತೀಯ ನೆಲೆಗಳು

ಪ್ರತಿಮೀಕರಣ ಹಾಗೂ ಪ್ರತಿನಿಧೀಕರಣ

ಭಾರತದೊಳಗೊಂದು ಮಿನಿ ವಿಶ್ವವನ್ನು ಕರ್ನಾಟಕದೊಳಗೊಂದು ಮಿನಿಭಾರತವನ್ನು ಅಷ್ಟೇ ಏಕೆ ಒಂದೊಂದು ಊರುಗಳಲ್ಲೂ ಮಿನಿ ಕರ್ನಾಟಕ-ಭಾರತ-ವಿಶ್ವಗಳನ್ನೇ ಕಾಣಬಹುದಾದ ಸಾಂಸ್ಕೃತಿಕ ಶಕ್ತಿವಂತಿಕೆ ಈ ನೆಲಕ್ಕಿದೆ. ಸಾವಿರಾರು ವರುಷಗಳ ಜನಾಂಗಿಕ, ಧಾರ್ಮಿಕ, ದಾರ್ಶನಿಕ, ಭಾಷಿಕ ಸಮಾಜೋ- ಆರ್ಥಿಕ, ರಾಜಕೀಯ 'ಸಂಕರಶೀಲತೆ'ಯ ಮೂಲಕ ಈ ಫಲವಂತಿಕೆ ಸಾಧ್ಯವಾಗಿದೆ. ಇದು ಏಕಭಾಷೆ, ಏಕಧರ್ಮ, ಏಕಜನಾಂಗ ಅಥವಾ ಏಕಬುಡಕಟ್ಟುಗಳು ಬಹುಸಂಖ್ಯಾತವಾಗಿರುವ ಪಶ್ಚಿಮದ ಕೆಲರಾಷ್ಟ್ರಗಳ ಸಾಂಸ್ಕೃತಿಕ ವಾಸ್ತವಗಳಿಗಿಂತ ತೀರ ಭಿನ್ನವಾದದ್ದು. ಭಗವತ್ ಶರಣ ಉಪಾಧ್ಯಾಯ ಅವರು ವಿವರಿಸುವಂತೆ "ಸಂಸ್ಕೃತಿಯು ಎಲ್ಲರಿಂದ ದೊರೆತ ಕೊಡುಗೆ. ಅದು ಸಂಯುಕ್ತವಾದುದು. ಅದರ ಒಂದೊಂದು ಘಟಕವು ನೀರಿನ ಕಣಗಳಂತೆ ಒಂದಕ್ಕೊಂದು ಅಂಟಿಕೊಂಡು ಸ್ರಾವ ಕರೂಪ ತಳೆಯುತ್ತವೆ. ಆವರೆಗೂ ಪರಕೀಯವೆಂದು ಪರಿಗಣಿತವಾಗಿದ್ದ ಪ್ರವಾಹಗಳು ಅದರೊಳಕ್ಕೆ ಹರಿದು ಅದರ ನೀರಿನಲ್ಲಿ ಗುರುತು ಸಿಗದಂತೆ ಮರೆಯಾಗುತ್ತವೆ. ಹಾಗೆಯೇ ಸಂಸ್ಕೃತಿ ಸ್ಥಳೀಯವೂ ಹೌದು ಆಕ್ರಮಣಕಾರಿ ಪರಕೀಯ ಸಂಸ್ಕೃತಿಗೆ ಚುರುಕಿನಿಂದ ಸ್ಪಂದಿಸಿ ಅದು ಬೇಗನೇ ಕರಗುವ ಸ್ಥಿತಿ ತಲುಪಿ ಸ್ವಂತ ಪ್ರತಿಭೆಯ ಜೊತೆಗೆ ಸ್ವೀಕರಿಸುವ ಗುಣಗಳನ್ನು ಸೇರಿಸಿಕೊಂಡು ವಿಶಿಷ್ಟತೆಯ ಜತೆಗೆ ಸೇರ್ಪಡೆಯಾದ ಸಾಂದ್ರೀಕೃತ ಘಟಕದ ಗುಣಗಳನ್ನೊಳಗೊಂಡು ಸಂಯುಕ್ತ ಆಕಾರ ಪಡೆಯುತ್ತದೆ." ಇಂಥಲ್ಲಿ ರಾಷ್ಟ್ರವನ್ನೋ ರಾಜ್ಯವನ್ನೋ ಪ್ರತಿನಿಧಿಸುವ ಪ್ರತಿಮೆ ರೂಪಕಗಳನ್ನು ರೂಪಿಸುವುದು ಅತ್ಯಂತ-ಬಿಕ್ಕಟ್ಟಿನ ಸಾಂಸ್ಕೃತಿಕ ಜವಾಬ್ದಾರಿಯಾಗಿದೆ. ದೇಶ ಭಾಷೆ ಸಂಸ್ಕೃತಿ ಸಮುದಾಯಗಳು ತಂತಮ್ಮ ಚಾರಿತ್ರಿಕ ಅಗತ್ಯಗಳಿಗನುಗುಣವಾಗಿ ಸ್ವಂತಿಕೆ ಅನನ್ಯತೆಗಳ ಅಭಿವ್ಯಕ್ತಿಗಾಗಿ ಪ್ರತಿಮೆಗಳನ್ನು ಕಟ್ಟಿಕೊಳ್ಳುವುದು ತಪ್ಪೇನಲ್ಲ, ಅನಿವಾರ್ಯ ಕೂಡ. ಆದರೆ ಆ ಪ್ರತಿಮೀಕರಣ ಸಂಕರಶೀಲ ನಾಡು ಒಳಗೊಂಡ ಧಾರ್ಮಿಕ, ಭಾಷಿಕ, ಜನಾಂಗಿಕ ದಾರ್ಶನಿಕ ಇತ್ಯಾದಿ ಬಹುತ್ವಗಳನ್ನೂ, ಶ್ರೇಣೀಕರಣಗಳನ್ನೂ ಪ್ರತಿನಿಧೀಕರಿಸದೇ ಹೋದರೆ ಹಲವಾರು ಅಪಾಯಗಳು ತಲೆದೋರುತ್ತವೆ. ಬಹುತ್ವಗಳ ನಾಡಿನಲ್ಲಿ ಯಾವುದೋ ಒಂದು ಗುಂಪಿನ ಸಾಂಸ್ಕೃತಿಕ ಆಕರ ಪರಿಕರ ಚಹರೆಗಳನ್ನು ಪ್ರತಿಮೆಯಾಗಿಸಿದರೆ ಅದರ ಹಿಂದೆ ಆ ಸಮುದಾಯದ ಹಿತವನ್ನು ಮಾತ್ರ ಕಾಪಾಡುವ ಇತರರ ಹಿತವನ್ನು ಕಡೆಗಣಿಸುವ ಗುಪ್ತಕಾರ್ಯ ಸೂಚಿ ಕೆಲಸ ಮಾಡುತ್ತಿರುತ್ತದೆ. ಚರಿತ್ರೆಯುದ್ದಕ್ಕೂ ಉತ್ತರದ ಪ್ರತಿಮೆಗಳು ದಕ್ಷಿಣವನ್ನೂ ಪ್ರಭುತ್ವದ ಪ್ರತಿಮೆಗಳು ತಳಸಮುದಾಯಯುಗಳನ್ನೂ ಪುರುಷ ಪ್ರತಿಮೆಗಳು ಹೆಣ್ಣನ್ನೂ ಬಹುಸಂಖ್ಯಾತರ ಧಾರ್ಮಿಕ ಹಾಗೂ ಭಾಷಿಕ ಪ್ರತಿಮೆಗಳು ಅಲ್ಪಸಂಖ್ಯಾತರನ್ನೂ ನಿಯಂತ್ರಿಸುವ ನಿರ್ದೇಶಿಸುವ ತಮ್ಮ ಹಿತಾಸಕ್ತಿಗೆ ಬಳಸಿಕೊಳ್ಳುವ ಉದ್ದೇಶವನ್ನು ಈಡೇರಿಸಿಕೊಳ್ಳುತ್ತಲೇ ಬಂದಿವೆ. “ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ” ಎಂದ ಬಸವಣ್ಣ, ಅದು ಎಲ್ಲ ಹೋರಾಟಗಾರರ ಸದಾಶಯ. ಸ್ಥಾವರ ಪ್ರತಿಮಾ ರಾಜಕಾರಣವನ್ನು ಭಗ್ನಗೊಳಿಸಲು ಇಷ್ಟಲಿಂಗದಂಥ ಚಲನಶೀಲ ಪ್ರತಿಮೆಯನ್ನು ಬಳಸಿಕೊಂಡ. ಆದರೆ ಚರಿತ್ರೆಯಲ್ಲಿ ಸ್ಥಾವರ ಪ್ರತಿಮೆಗಳು ಅಳಿಯುವುದಿಲ್ಲ, ಮತ್ತೆ ಮತ್ತೆ ಎದ್ದು ನಿಂತು ಅಧಿಕಾರ ಕೇಂದ್ರಗಳನ್ನು ಒಂದು ನಿಶ್ಚಿತ ವರ್ಗಕ್ಕೆ ಹಸ್ತಾಂತರಿಸುವ ರಾಜಕಾರಣವನ್ನು ಮಾಡುತ್ತಲೇ ಬಂದಿವೆ. ಬುದ್ಧ, ಬಸವರ ಮೇಲೆ ಹಲ್ಲೆ ನಡೆಸಿವೆ. ಈ ಹಿನ್ನೆಲೆಯಲ್ಲಿ ಕರ್ನಾಟಕತ್ವವನ್ನು ಪ್ರತಿನಿಧಿಸಲು ಇಂದು ಚಾಲ್ತಿಯಲ್ಲಿರುವ 'ಕನ್ನಡ ಭುವನೇಶ್ವರಿ' ರೂಪಕವನ್ನು ಕುರಿತು ಚರ್ಚಿಸಲಾಗಿದೆ.

“ಕರ್ನಾಟಕ ಭುವನೇಶ್ವರಿ” - ತಾತ್ವಿಕ ಪ್ರಶ್ನೆಗಳು

ಮೈಸೂರು ದಸರಾ ಹಾಗೂ ಕರ್ನಾಟಕ ರಾಜ್ಯೋತ್ಸವಗಳನ್ನು ಈಗತಾನೇ ವೈಭವದಿಂದ ಆಚರಿಸಲಾಯಿತು. ನಾಡಹಬ್ಬ ಎಂದು ಬಣ್ಣಿಸಲ್ಪಡುವ ಮೈಸೂರು ದಸರಾ ಕರ್ನಾಟಕ ಸರಕಾರದ ನೇತೃತ್ವದಲ್ಲಿಯೇ ವಿಜೃಂಭಣೆಯಿಂದ ಜರುಗಿತು. ಜಂಬೂಸವಾರಿಯಲ್ಲಿ ಆನೆಯಂಥ ಬಲಿಷ್ಠ ಆದರೆ ಮೂಕಪ್ರಾಣಿಯ ದುಬ್ಬದ ಮೇಲೆ ಅದರ ಶಕ್ತಿಗಿಂತಲೂ ಬಲಿಷ್ಠವಾದ ಚಾಮುಂಡೇಶ್ವರಿಯ ವಿಗ್ರಹವನ್ನು ಹೇರಿ ಮೆರೆಸಲಾಯಿತು. ರಾಜರಾಜೇಶ್ವರಿ ಅಥವಾ ಚಾಮುಂಡೇಶ್ವರಿ ಮೈಸೂರು ಅರಸರ ಮನೆದೇವತೆಯೂ ಹೌದು. ಹಾಗೆಯೇ ನವೆಂಬರ್ 1 ರಂದು ಕನ್ನಡ ಭುವನೇಶ್ವರಿಯ ಪ್ರತಿಮೆಯ ಮೆರವಣಿಗೆ ಹಾಗೂ ಪೂಜೆಗಳು ವಿಧಾನಸೌಧದಿಂದ ಆರಂಭವಾಗಿ ಗ್ರಾಮಮಟ್ಟದ ಸರಕಾರಿ ಕಚೇರಿಗಳವರೆಗೂ ವ್ಯಾಪಿಸಿದ್ದವು. ಕನ್ನಡ ಪರ ಸಂಘಟನೆಗಳು ಕನ್ನಡ ಭುವನೇಶ್ವರಿಯ ರಂಗುರಂಗಿನ ಬೃಹತ್ ಟ್ಯಾಬ್ಲೈಡ್ ನಾಡಿನ ಹಾದಿಬೀದಿಯ ತುಂಬ ರಾರಾಜಿಸುವಂತೆ ಮಾಡಿದವು. 'ಸರ್ವಜನಾಂಗದ ಶಾಂತಿಯ ತೋಟ' 'ಹಿಂದೂ ಕ್ರೈಸ್ತ ಮುಸಲ್ಮಾನ ಪಾರಸಿಕ ಜೈನರುದ್ಯಾನ' ಎಂಬ ಜಾತ್ಯತೀತ ನಾಡಗೀತೆಯನ್ನು ಅದೇ ಸಂದರ್ಭದಲ್ಲಿ ಹಾಡಿಸಲಾಯಿತು. ಕರ್ನಾಟಕದಲ್ಲಿ ಕನ್ನಡ ಭಾಷೆ ಹಾಗೂ ನಾಡ ಹಬ್ಬದ ಹೆಸರಿನಲ್ಲಿ ನಡೆಯುತ್ತಿರುವ ಈ ಸಂಭ್ರಮದ ಚಟುವಟಿಕೆ ಗಳು ಭಾರತದ ಸಂವಿಧಾನದ “ಜಾತ್ಯತೀತ ಸಮಾಜವಾದಿ ಪ್ರಜಾಸತ್ತಾತ್ಮಕ ಗಣರಾಜ್ಯ”ವೆಂಬ ಅಡಿಪಾಯವನ್ನೇ ಅಲುಗಾಡಿಸುತ್ತಿವೆ.



ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಕನ್ನಡ ಭುವನೇಶ್ವರಿಯ ಹಲವಾರು ಚಿತ್ರಗಳು ಸೃಷ್ಟಿಯಾದವು. ಪರಾಶಕ್ತಿ, ಮಹಾಲಕ್ಷ್ಮಿ, ಮಹಾಸರಸ್ವತಿ, ಮಹೇಶ್ವರಿ, ಮಹಾಕಾಳಿ, ಮೂಕಾಂಬಿಕಾ, ರತ್ನಗರ್ಭಾ, ಶ್ರೀದುರ್ಗೆ, ಇಂದ್ರಾಣಿ, ವಾರಾಹಿ, ಅದಿತಿ, ಕೌಮಾರಿ, ಕುಂಡಲಿನೀ,



ತ್ರಿಪುರಸುಂದರಿ, ಸಾವಿತ್ರಿ ಮೊದಲಾದ ಹೆಸರುಗಳಿಂದ ಕರ್ನಾಟಕ ಭುವನೇಶ್ವರಿಯ ಚಿತ್ರಗಳನ್ನು ದೊಡ್ಡಮೇಟಿ ಅಂದಾನಪ್ಪನವರು ಕಲಾವಿದರಿಂದ ಬಿಡಿಸಿ ಹೋರಾಟಕ್ಕೆ ಚಾಲನೆ ನೀಡಿದ್ದರು. ಅವುಗಳಲ್ಲಿ ಮೂರ್ನಾಲ್ಕು ಚಿತ್ರಗಳು ಮಾತ್ರ ಹೆಚ್ಚು ಪ್ರಚಲಿತವಾಗಿವೆ. ಕನ್ನಡ ಭುವನೇಶ್ವರಿ, ಚಾಮುಂಡೇಶ್ವರಿ ಇತ್ಯಾದಿ ರೂಪಕಗಳನ್ನೂ ವಿರೋಧಿಸಲು ಹಲವಾರು ತಾತ್ವಿಕ ಕಾರಣಗಳಿವೆ. ಕನ್ನಡ, ಕನ್ನಡಿಗ, ಕರ್ನಾಟಕ ಎಂಬ ಪರಿಕಲ್ಪನೆಗಳು, ಪ್ರದೇಶ, ಭಾಷೆ, ಲಿಂಗ, ಜಾತಿ, ಧರ್ಮಗಳಾಚೆ ವಿಕಾಸಗೊಂಡ ಪ್ರಜಾಸತ್ತಾತ್ಮಕ ಪರಿಕಲ್ಪನೆಗಳಾಗಿದ್ದು ಅವುಗಳ ಅಸ್ತಿತ್ವಕ್ಕೆ ಧಕ್ಕೆ ಬರುತ್ತದೆ. ಭಾರತದಂಥ ಜಾತ್ಯತೀತ ಗಣರಾಜ್ಯದ ಒಂದು ಅಂಗವಾದ ಕರ್ನಾಟಕ ಹಲವು ಮತ ಧರ್ಮಗಳ ಪಂಥಗಳ ಅನುಯಾಯಿಗಳು ಬಾಳಿಬದುಕುತ್ತಿರುವ ನಾಡು. ಈ ನಾಡನ್ನು ಒಂದು ಧರ್ಮದ ಚಹರೆಗಳ ಮೂಲಕ ಗುರುತಿಸುವುದು ಪ್ರಜಾತಾಂತ್ರಿಕವಾಗಿ ಆರಿಸಿಬಂದ ಸರಕಾರಗಳು ಆ ಚಹರೆಗಳ ಸಾಮೂಹಿಕ ಆರಾಧನೆಯ ನೇತೃತ್ವ ವಹಿಸುವುದು ಇತರ ಧರ್ಮಗಳ ಸಮುದಾಯಗಳಿಗೆ ನೋವನ್ನೂ ಅನಾಥತೆಯನ್ನೂ ಉಂಟುಮಾಡುವಂಥದ್ದು. ಸಂವಿಧಾನ ವಿರೋಧಿಯಾದದ್ದು. ಭುವನೇಶ್ವರಿಯ ಪ್ರತಿಮೆ ರಾಣಿಯರೂಪದಲ್ಲಿದೆ. ಆಳುವರ್ಗದ ಅದೂ ಅರಸೊತ್ತಿಗೆಯ ನಿಲುವುಗಳನ್ನು ಪ್ರತಿನಿಧಿಸುತ್ತದೆ. ಶೂದ್ರ ಹಾಗು ದಲಿತ ಸಮುದಾಯಗಳು ಹಾಗೂ ದುಡಿಯುವ ವರ್ಗಗಳ ಆಶೋತ್ತರಗಳಿಗೆ ಇಲ್ಲಿ ಸ್ಥಾನವೇ ಇಲ್ಲ, ನಾಡನ್ನು ಸ್ತ್ರೀ ರೂಪಕವಾಗಿಸುವುದು ಏಕಲಿಂಗೀಕರಿಸುವ ಅಪಾಯವನ್ನು ಒಳಗೊಂಡಿದೆ. ಜತೆಗೆ ಹೆಣ್ಣನ್ನು ದೇವಿ ಇಲ್ಲವೇ ದಾಸಿ, ಸೌಮ್ಯ ಇಲ್ಲವೇ ರೌದ್ರರೂಪಿ ಎಂದು ಪರಿಭಾವಿಸುವ ಪುರುಷ ಸಂಕಥನವನ್ನು ಒಳಗೊಂಡಿದೆ. ಚಾಮುಂಡಿಯ ಕತೆ ಜನಜನಿತವಾದುದು. ತಾನು ಕೂಡಿದವ ದಲಿತ ಎಂದು ಗೊತ್ತಾದಾಗ ಅವನನ್ನು ಸಂಹಾರ ಮಾಡಲು ರೌದ್ರಾವತಾರ ತಾಳಿದ ಚಾಮುಂಡಿಯ ಕಥನ ದಲಿತ ವಿರೋಧಿ, ವರ್ಣಸಂಕರ ವಿರೋಧಿ, ಬ್ರಾಹ್ಮಣ್ಯದ ಪರವಾಗಿರುವಂಥದ್ದು.

ಈ ಅವೈಚಾರಿಕತೆಯನ್ನು ಪ್ರತಿಭಟಿಸಿ ಜೆ.ಎಚ್.ನಾಯಕ್ ಅವರು ದಸರಾ ಹಬ್ಬದಲ್ಲಿ ಪಂಪ ಪ್ರಶಸ್ತಿಯನ್ನು ಸ್ವೀಕರಿಸುವುದನ್ನು ನಿರಾಕರಿಸಿ ಚರ್ಚೆಗೆ ಅವಕಾಶ ಕಲ್ಪಿಸಿದ್ದರು. ಆದರೆ ಕರ್ನಾಟಕದಲ್ಲಿ ತಮ್ಮ ಅಸ್ಮಿತೆಯನ್ನು ಪ್ರತಿನಿಧಿಸದ ಅಥವಾ ಮರೆಮಾಚುವ ಸಾಂಸ್ಕೃತಿಕ ರಾಜಕಾರಣದ ಅಪಾಯಕಾರಿ ನಡೆಯನ್ನು ಕುರಿತಂತೆ ದಲಿತ, ಅಲ್ಪಸಂಖ್ಯಾತ, ಹಿಂದುಳಿದವರ್ಗ, ರೈತ, ಕೂಲಿಕಾರ ವರ್ಗಗಳಿಂದ ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆ ವ್ಯಕ್ತವಾಗುತ್ತಿಲ್ಲ, ದೇಶದಲ್ಲಿ ಮತೀಯ, ದಲಿತ ವಿರೋಧಿ,
ಮಹಿಳಾ ವಿರೋಧಿ ಚಟುವಟಿಕೆಗಳು ಕಂಡುಬಂದಾಗ ದನಿಯೆತ್ತುವ ಪ್ರಬುದ್ಧತೆಯನ್ನು ಸದಾ ಕಾಪಾಡಿಕೊಂಡು ಬಂದಿರುವ ಕರ್ನಾಟಕದ ಪ್ರಗತಿಪರ ಮನಸ್ಸುಗಳು ಕರ್ನಾಟಕತ್ವವನ್ನು ಜಾತ್ಯತೀತಗೊಳಿಸುವ ಸರ್ವ ಪ್ರತಿನಿಧೀಕರಿಸುವ ಹೋರಾಟ ದಲ್ಲಿ ಯಾಕೆ ಕ್ರಿಯಾಶೀಲವಾಗುತ್ತಿಲ್ಲ? ಧಾರ್ಮಿಕ ಹಾಗೂ ಭಾಷಿಕ ಮೂಲಭೂತವಾದಿತನ ಪರಾಕಾಷ್ಠೆ ಮುಟ್ಟಿ ಸರ್ವಾಧಿಕಾರಿ ಸಾಮಾಜಿಕ ಪರಿಸರ ನಿರ್ಮಾಣವಾಗಿದೆಯೇ? ಕರ್ನಾಟಕತ್ವದಿಂದ ಭುವನೇಶ್ವರಿಯನ್ನು ಕೆಳಗಿಳಿಸುವ ಪ್ರಸ್ತಾಪ ಕನ್ನಡಪರ ಸಂಘಟನೆಗಳ ಭಾವುಕ ಆಕ್ರೋಶಕ್ಕೆ ತುತ್ತಾಗುವ ಭಯವೇ? ಚಾರಿತ್ರಿಕವಾಗಿ ಮತೀಯ ರಾಷ್ಟ್ರೀಯತೆ ಮತ್ತು ಮತೀಯ ಉಪರಾಷ್ಟ್ರೀಯತೆಯೊಂದಿಗೆ ತಳಕು ಹಾಕಿಕೊಂಡಿರುವ ಭುವನೇಶ್ವರಿಯ ಪ್ರತಿಮೀಕರಣದ ವಿರೋಧ ಕೋಮುವಾದಿಗಳ ಕೆಂಗಣ್ಣಿಗೆ ಗುರಿಯಾಗಬಹುದೆಂಬ ಆತಂಕವೇ? ದಸರಾ ಹಬ್ಬದಲ್ಲಿ ಚಾಮುಂಡೇಶ್ವರಿ ಮೆರವಣಿಗೆಯನ್ನೋ ಮಹಾರಾಜರ ತುಣುಕು ಖಾಸಗಿ ದರಬಾರನ್ನೋ ನೋಡಲು ಜನಬರುವುದಿಲ್ಲ, ಕರ್ನಾಟಕದ ಕಲಾಪ್ರಕಾರಗಳನ್ನು ಆಸ್ವಾದಿಸಲು ಎಲ್ಲ ಜಾತಿ ಧರ್ಮ ಪಂಥಗಳ ಜನಸಮುದಾಯ ಒಂದಾಗಿ ಸೇರುತ್ತಾರೆಂಬ ಮತ್ತೊಂದು ಆಯಾಮದಲ್ಲಿ ಅರ್ಥೈಸಿಕೊಳ್ಳಬೇಕೆ? ಪ್ರಜಾಪ್ರಭುತ್ವ ಕಾಲದಲ್ಲಿ ಅರಸೊತ್ತಿಗೆಯನ್ನು ಪ್ರತಿಪಾದಿಸುವ ಹಾಗೂ ಜಾತ್ಯತೀತ ಗಣರಾಜ್ಯದಲ್ಲಿ ಒಂದು ಧರ್ಮದ ಚಹರೆ ಅಧಿಕಾರದ ಶಕ್ತಿ ಕೇಂದ್ರದಲ್ಲಿ ರಾರಾಜಿಸುವುದನ್ನು ಕಡೆಗಣಿಸಬಹುದೇ? ಇಂಥ ಬಿಕ್ಕಟ್ಟಿನ ಕಾಲದಲ್ಲಿ ಮೌನವು ಒಪ್ಪಿಗೆಯನ್ನೇ ಉತ್ಪಾದಿಸುತ್ತವೆ. ನಾವೆಲ್ಲ ಮೌನವಾಗಿದ್ದೇವೆ. ಬೇಂದ್ರೆಯವರ 'ಒಂದೇ ಕರ್ನಾಟಕ' ಎಂಬ ಕವಿತೆ ನೆನಪಾಗುತ್ತಿದೆ. ಇದು ಪ್ರಕಟವಾದದ್ದು 1951ರಲ್ಲಿ, ಕರ್ನಾಟಕ ಏಕೀಕರಣ ಚಳವಳಿಯ ಭಾವೋತ್ಕರ್ಷದ ಕಾಲವದು. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಆರ್ಯನ್ ರೇಸ್ ಬಗ್ಗೆ ಅದು ಅತ್ಯಂತ ಶ್ರೇಷ್ಠವಾದದ್ದು ಉಳಿದೆಲ್ಲ ರೇಸ್‌ಗಳನ್ನು ಅದಕ್ಕಿಂತ ಕೀಳು ಎಂದು ನೋಡಬೇಕು ಎನ್ನುವ ಹಿಟ್ಲರನ ಧೋರಣೆಗೆ ಸಂವಾದಿಯಾದ, ಕನ್ನಡ ಎಲ್ಲಕ್ಕಿಂತ ಶ್ರೇಷ್ಠ ಮಿಕ್ಕವೆಲ್ಲ ಟೀಕೆಗೆ ಗುರಿಯಾಗಬೇಕಾಗಿದ್ದು ಎನ್ನುವ ಧೋರಣೆಯನ್ನು ವಿಡಂಬಿಸಿರುವುದಾಗಿ ಬೇಂದ್ರೆಯವರೇ ಹೇಳಿಕೊಂಡಿದ್ದಾರೆ. ಏಕೀಕರಣ ಚಳವಳಿಯ ಮೂಲಕ ಕರ್ನಾಟಕತ್ವ ಪಡೆಯುತ್ತಿದ್ದ ಮತೀಯ ಆಯಾಮವನ್ನು ನಿರಾಕರಿಸುವ ಪದ್ಯವಿದು.

“ಇಲ್ಲಿಯ ಜನ-ಮನ-ಭಾಷೆಯು ಕನ್ನಡವದು ಒಂದೇ
ಒಂದೇ ಜನವೂ ಒಂದೇ ಮನವೂ ಕನ್ನಡಿಗರು ಎಂದೇ
ಕುಲವೊಂದೇ ಸ್ಥಳವೊಂದೇ ನೀತಿಯನೆಲೆಯೊಂದೇ
ಹೀಗೆನ್ನದ ಹೆರವರು ಅವರಿದ್ದರೂ ಒಂದೇ
ಇರದಿದ್ದರೂ ಒಂದೇ
ಒಂದೇ ಒಂದೇ ಒಂದೇ ಕರ್ನಾಟಕವೊಂದೇ”

ಒಂದೇ ಕುಲ, ಒಂದೇ ನೆಲ, ಒಂದೇ ನೀತಿ ಎನ್ನದವರು ಇದ್ದರೂ ಒಂದೇ ಇರದಿದ್ದರೂ ಒಂದೇ ಎನ್ನುವಲ್ಲಿ ವ್ಯಂಗ್ಯವನ್ನು ಗಮನಿಸಬೇಕು. “ಪ್ರಾಯಶಃ ಈ ಕವಿತೆಯಷ್ಟು ಅಪಾರ್ಥವಾದ ಕವಿತೆ ಕನ್ನಡದಲ್ಲಿ ಬೇರೊಂದಿಲ್ಲ” ಎಂದು ಡಾ.ಎಚ್.ಎಸ್.ರಾಘವೇಂದ್ರರಾವ್ ಅವರು ಅಭಿಪ್ರಾಯಪಡುತ್ತಾರೆ. ನಾಡಿನ ಬಹುಸಾಂಸ್ಕೃತಿಕತೆಯನ್ನು ಧ್ವಂಸಗೊಳಿಸುವ ಭಾಷಿಕ ಮೂಲಭೂತವಾದಿತನ ಹಾಗೂ ಸರ್ವಾಧಿಕಾರಿ ಮನೋಧರ್ಮವನ್ನು ತೀವ್ರವಾಗಿ ವಿಡಂಬಿಸಿದ ಈ ಪದ್ಯವನ್ನು ಕನ್ನಡಿಗರು ವಾಚ್ಯವಾಗಿ ಸ್ವೀಕರಿಸಿ ಕನ್ನಡಭಿಮಾನದ ಉತ್ತೇಜನಕ್ಕೆ ಬಳಸಿಕೊಳ್ಳುತ್ತಿರುವುದು ತಲ್ಲಣದ ವಿಷಯ. ಇದು ಕನ್ನಡ ಎದುರಿಸುತ್ತಿರುವ ಹೊರಗಿನ ಆಕ್ರಮಣದ ಪರಿಣಾಮವೋ ಅಥವಾ ಕನ್ನಡ ಭಾಷಿಕ ಸಮುದಾಯದಲ್ಲಿ ಮೌನವಾಗಿ ಆವರಿಸುತ್ತಿರುವ ಭಾಷಿಕ ಮೂಲಭೂತವಾದದ ಪರಿಣಾಮವೋ? ಕನ್ನಡ ನಿರಂತರ ಬಿಕ್ಕಟ್ಟುಗಳನ್ನು ಎದುರಿಸಿದೆ ಮತ್ತು ಅವುಗಳನ್ನು ಅರಗಿಸಿಕೊಂಡಿದೆ. ಸಂಸ್ಕೃತ, ಪ್ರಾಕೃತ, ಹಿಂದಿ, ಇಂಗ್ಲಿಷ್ ಪರ್ಶಿಯನ್ ಭಾಷೆಗಳ ಶಕ್ತರಾಜಕಾರಣದ ಸರ್ವಾಧಿಕಾರಿ ನಡೆಯನ್ನು ಪ್ರತಿಭಟಿಸಿದೆ. ಹಾಗೂ ಅನ್ಯಭಾಷೆಗಳ ಸಾಹಿತ್ಯ ಸಾಂಸ್ಕೃತಿಕ ದರ್ಶನಗಳನ್ನು ಸ್ವೀಕರಿಸಿದೆ. ಆದರೆ ತನ್ನ ಅಧಿಕಾರ ಕೇಂದ್ರದ ಒಳವಲಯದ ಭಾಷೆಗಳು ಹಾಗೂ ಭಾಷಿಕ ಸಮುದಾಯಗಳ ವಿಷಯದಲ್ಲಿ ಸರ್ವಾಧಿಕಾರಿಯಾಗಿ ವರ್ತಿಸುತ್ತಿದೆಯೇ ಎಂಬ ಸಂಶಯಕ್ಕೆ ಭುವನೇಶ್ವರಿಯ ಪ್ರತಿಮೆ ಪುಷ್ಟಿ ನೀಡುತ್ತದೆ. ದಿಲ್ಲಿ ದೂರದರ್ಶನ ಆಕಾಶವಾಣಿಗಳಲ್ಲಿ ಕನ್ನಡ ಚಾನಲ್ ಹಾಗೂ ಕನ್ನಡ ವಾರ್ತೆಗಳನ್ನು ನಿರೀಕ್ಷಿಸುವ ನಾವು ಕರ್ನಾಟಕದಲ್ಲಿ ಉರ್ದು ಕೊಂಕಣಿ ತುಳು ಕೊಡವ ಇತ್ಯಾದಿ ಭಾಷಿಕರಿಗಾ[...] ವಾರ್ತೆಗಳನ್ನು ಪ್ರಸಾರ ಮಾಡುವ ವ್ಯವಸ್ಥೆಯ ಬ[...] ಚಿಂತಿಸಿದ್ದವೆಯೇ? ಇದು ಕೇವಲ ಒಂದು ವಾರ್ತೆಯ ಪ್ರಶ್ನೆಯಲ್ಲ, ಒಟ್ಟಾರೆ ಅಲ್ಪಸಂಖ್ಯಾತ ಭಾಷಿಕ, ಧಾರ್ಮಿ[...] ಜನಾಂಗಿಕ ಸಮುದಾಯಗಳ ಹಿತಾಸಕ್ತಿಗಳನ್ನು ಕಾಪಾಡು[...] ನೈತಿಕ ಜವಾಬ್ದಾರಿಯ ಪ್ರಶ್ನೆಯಾಗಿದೆ.

'ಕನ್ನಡ ಭುವನೇಶ್ವರಿ'ಯ ಹುಟ್ಟು ಮತ್ತು ಬೆಳವಣಿಗೆ

ಭಾರತದ ಚರಿತ್ರೆಯಲ್ಲಿ ಪುರೋಹಿತಶಾಹಿ ಪಂಚಕ[...] ಉರಿವ ಮನೆಗಳಲ್ಲಿಯ ಗಳವನ್ನು ಹಿರಿಯುವ ರೀತಿಯದ[...] ಭಾರತದ ಸ್ವಾತಂತ್ರ್ಯ ಸಂಗ್ರಾಮ ಹಾಗೂ ಕರ್ನಾಟ[...] ಏಕೀಕರಣ ಚಳವಳಿಗಳು ಇದಕ್ಕೆ ಉತ್ತಮ ಉದಾಹರಣ[...] ದೇಶವನ್ನು ವಸಾಹತುಶಾಹಿಯಿಂದ ಬಿಡುಗಡೆಗೊಳಿಸು[...] ಹಾಗೂ ಹರಿದು ಹಂಚಿಹೋಗಿದ್ದ ನಾಡನ್[...] ಒಂದುಗೂಡಿಸುವ ಸಾಮೂಹಿಕ ಸಂಕಟಗಳ ಹೋರಾಟ[...] ಒಡಲಲ್ಲೇ ಅತ್ಯಂತ ನಿಖರವಾಗಿ ತಮ್ಮ ಭವಿಷ್ಯ[...] ಹಿತಾಸಕ್ತಿಯ ಕಾರ್ಯಸೂಚಿಗಳನ್ನು ಬಿತ್ತಲಾಯಿತ[...] ವಸಾಹತುಶಾಹಿಯು ಗತಕಾಲದ ವೈಭವೀಕರಣ ಹಾಗ[...] ಮಧ್ಯಕಾಲೀನ ಚರಿತ್ರೆಯ ವಿಕೃತೀಕರಣಗಳೆಂಬ ಒಡೆದಾಳು[...] ನೀತಿಯ ಸಂಕಥನಗಳನ್ನು ವ್ಯವಸ್ಥಿತವಾಗಿ ಕಟ್ಟಿಕೊಟ್ಟಿತ[...] ರೋಮಿಲಾ ಥಾಪರ ಹೇಳುವಂತೆ “ಪುರಾತನ ಕಾಲದ[...] ಹಿಂದೂ ಸಮಾಜ ಆದರ್ಶಪ್ರಾಯವಾಗಿತ್ತು, ಮುಸ್ಲಿಮ[...] ಭಾರತಕ್ಕೆ ಬಂದುದೇ ಎಲ್ಲ ಕೆಡುಕಿನ ಮೂಲ” ಎನ್ನುವು[...] ಅದರ ಪ್ರತಿಪಾದನೆಯಾಗಿತ್ತು. ಹಿಂದೂ ಕೋಮುವಾದಿಗ[...] ಈ ಪ್ರತಿಪಾದನೆಯನ್ನು ಪ್ರತಿಮೀಕರಿಸತೊಡಗಿದರ[...] ಕಾಂಗ್ರೆಸ್ ನೇತೃತ್ವದ ರಾಷ್ಟ್ರೀಯ ಹೋರಾಟದಲ್ಲಿ ಹಿಂದ[...]


ರ್ಗದ ಬಳಕೆ ಸಹಜವಾಗಿದ್ದರೂ ಅದು ತೀವ್ರಗಾಮಿಗಳಲ್ಲಿ ೀಮುವಾದಿ ಸ್ವರೂಪವನ್ನು ಪಡೆದಿತ್ತು; ವಿದೇಶೀ ಬಂಡವಾಳಶಾಹಿಯ ವಿರುದ್ಧ ದೇಶೀ ಬಂಡವಾಳಶಾಹಿ ಗೊಂಡು ನಡೆಸಿದ್ದ ಹೋರಾಟದ ಪ್ರತಿನಿಧಿಗಳಾಗಿದ್ದ ತೀವ್ರಗಾಮಿಗಳು ಸ್ವರಾಜ್ಯವನ್ನು ಹಿಂದೂ ಮೇಲ್ಜಾತಿ ೀಲ್ವರ್ಗ ಹಾಗೂ ಬಂಡವಾಳಶಾಹಿಗಳ ಕೈಗೊಪ್ಪಿಸುವ ಯವನ್ನು ಹೊಂದಿದ್ದರು. ಹೀಗಾಗಿ ಭಗವದ್ಗೀತೆ ಅವರಿಗೆ ರ್ತಿ ನೀಡಿತು. ಬ್ರಿಟಿಷ್ ಆಧಿಪತ್ಯದಲ್ಲಿ ಪ್ರಾತಿನಿಧ್ಯಕ್ಕಾಗಿ ಸ್ಲಿಂ ಮೇಲ್ವರ್ಗ ನಡೆಸಿದ ಹೋರಾಟ ಹಾಗೂ ಅದರಿಂದ ರಿತವಾಗದ ಹಿಂದೂ ಶೂದ್ರ, ದಲಿತ, ಕೆಳಜಾತಿ ಮುದಾಯಗಳ ಪ್ರಾತಿನಿಧ್ಯದ ಜಾಗೃತಿಯನ್ನು ನಿಯಂತ್ರಿಸಲು ವದ್ಗೀತೆಯ ವರ್ಣಾಶ್ರಮ ಚಿಂತನೆಯಲ್ಲಿ ಹೋರಾಟವನ್ನು ಂದುವರೆಸುವುದು ಅವರಿಗೆ ಅನಿವಾರ್ಯವಾಗಿತ್ತು. ಜನತೆಯ ೋಧವನ್ನು ಪ್ರತಿಫಲಾಪೇಕ್ಷೆ ಇಲ್ಲದೇ ಹೋರಾಟಕ್ಕೆ ಸಿಕೊಂಡು ಸ್ವರಾಜ್ಯವನ್ನು ಪಡೆಯುವ ಹಾಗೂ ಅದರ ರಸುದಾರಿಕೆಯನ್ನು ವರ್ಣಾಶ್ರಮ ವ್ಯವಸ್ಥೆಗೊಪ್ಪಿಸುವ ಯ ಹಿಂದೂ ಆಕರಗಳ ಬಳಕೆಯ ಹಿಂದಿನ ಯವಾಗಿತ್ತು. ಬಂಕಿಮಚಂದ್ರರ 'ವಂದೇ ಮಾತರಂ' ತೆಯನ್ನೊಳಗೊಂಡ 'ಆನಂದಮಠ' ಸಾಂಸ್ಕೃತಿಕ ಷ್ಟ್ರೀಯತೆಯನ್ನು ಪ್ರತಿಪಾದಿಸಿತು. ನಾಡನ್ನು ತಾಯಿ ತೆಗೆ ಸಮೀಕರಿಸಿ ತಿಳಕರು ಗಣೇಶ ಚತುರ್ಥಿ, ಶಿವಾಜಿ ಯಂತಿ ಆರಂಭಿಸಿದ್ದು ಕೂಡ ಈ ಉದ್ದೇಶದಿಂದಲೇ. ೀ ವೇಳೆಯಲ್ಲಿ ಮುಸ್ಲಿಂ ಮೇಲುವರ್ಗ ಕೂಡ ತಮ್ಮ ರ್ಮಿಕ ಪರಿಕರಗಳಲ್ಲಿ ಹೋರಾಟಕ್ಕೆ ಸಂಕೇತಗಳನ್ನು ಡುಕೊಳ್ಳತೊಡಗಿತು. ರಾಷ್ಟ್ರೀಯ ಹೋರಾಟದಲ್ಲಿ ಪತಾಳಿದ ಧಾರ್ಮಿಕ ಚಹರೆಗಳು ಗಾಂಧೀ ಸಾವಿನ ರ್ಧ ಶತಮಾನದ ನಂತರ ಬಲಪಂಥೀಯ ಕೋಮುವಾದಿ ಕಾರ ಸ್ಥಾಪನೆಗೊಳ್ಳುವಲ್ಲಿ ಬಳಕೆಯಾದವು. ಉತ್ತರ ರತದ ಚರಿತ್ರೆಯನ್ನು ವಸಹತುಶಾಹಿ ಹಾಗೂ ಮತೀಯ ಷ್ಟ್ರೀಯವಾದಿ ಚರಿತ್ರೆ ತಿರುಚಿದಂತೆಯೇ ದಕ್ಷಿಣದ ಜಯನಗರದ ಇತಿಹಾಸವನ್ನು ತಿರುಚಲಾಯಿತು. ಜಯನಗರದ ಹುಟ್ಟು ಮತ್ತು ಪತನಗಳನ್ನು ಹಿಂದೂ ರ್ಮದ ರಕ್ಷಣೆ ಮತ್ತು ಪತನಗಳಿಗೆ ಸಮೀಕರಿಸಲಾಯಿತು.

ಪ್ರಕ್ರಿಯೆಯಲ್ಲಿ ರಾಷ್ಟ್ರೀಯ ಹೋರಾಟದೊಂದಿಗೆ ರ್ಣಾಟಕ ಏಕೀಕರಣ ಚಳವಳಿಯೂ ಸೇರಿಕೊಂಡಿತು. ಂದೂ ಸಾಮ್ರಾಜ್ಯದ ಗತವೈಭವದ ಕೂಸಾಗಿ ಕರ್ನಾಟಕ ವೈಭವದ ಪರಿಕಲ್ಪನೆ ಉದಯಿಸಿ ಹಿಂದೂತ್ವದೊಳಗೆ ಡತ್ವದ ಕರಳುಬಳ್ಳಿಯ ಸಂಬಂಧವನ್ನು ಾಸೆಯಲಾಯಿತು. ಫಾದರ್ ಹೆರಾಸ್ ಎಂಬ ಾಹತುಶಾಹಿ ಚರಿತ್ರೆಕಾರ ಹೊಯ್ಸಳ ಮತ್ತು ಸಂಗಮರ ಧ್ಯೆ ಧಾರ್ಮಿಕ ವಂಶಸಂಬಂಧವನ್ನು ಕಲ್ಪಿಸಿ ಹೊಯ್ಸಳರು ುಸ್ಲಿಂ ಆಕ್ರಮಣಕಾರರ ವಿರುದ್ಧ ಹಿಂದೂ ಸಾಮ್ರಾಜ್ಯ ಿಸಲು ಸಂಗಮ ವಂಶಕ್ಕೆ ಪ್ರೇರಣೆ ನೀಡಿದರೆಂದು ಿಯುವ ಮೂಲಕ ವಿಜಯನಗರ ಸಾಮ್ರಾಜ್ಯದ ದಯದ ಕಥನವನ್ನು ಮತೀಕರಿಸಿದರು. ರಾಬರ್ಟ್ ವೆಲ್ 'ದಿ ಫಾರ್ಗಾಟನ್ ಎಂಪೈರ್' ಕೃತಿಯಲ್ಲಿ ುಸ್ಲಿಮರ ದುರಾಕ್ರಮಣದಿಂದ ವಿಜಯನಗರ ಶವಾಯಿತೆಂಬ ಮತೀಯ ಸಂಕಥನವನ್ನು ರೂಪಿಸಿದ. . ಬಿ.ಎ.ಸಾಲೆತೊರೆ, ಡಾ.ಪಿ.ಬಿ.ದೇಸಾಯಿಯವರಂಥ ಿಹಾಸಕಾರರು ಇವುಗಳನ್ನಾಧರಿಸಿ ಕರ್ನಾಟಕದ ರಿತ್ರೆಯನ್ನು ರೂಪಿಸಿದರು. ಆಲೂರ ವೆಂಕಟರಾಯರು ರ್ಣಾಟಕದ ಗತವೈಭವ' ಹಾಗೂ 'ಶ್ರೀ ವಿದ್ಯಾರಣ್ಯ ರಿತೆ' ಕೃತಿಗಳನ್ನು ಬರೆದರು. ಎಂ.ಚಿದಾನಂದಮೂರ್ತಿಯವರು ಇಂದಿಗೂ ಈ ತೀಯ ಚಿಂತನೆಯ ಪ್ರತಿಪಾದಕರಾಗಿದ್ದಾರೆ. ತಮಿಳು ಷಾ ಚಳವಳಿ ಹಾಗೂ ಉಪರಾಷ್ಟ್ರೀಯತೆಗೆ ಪೆರಿಯಾರ್ ವರ ಚಿಂತನೆಯ ಪ್ರಭಾವವಿತ್ತು, ಅದು ಸ್ಪಷ್ಟವಾಗಿ ಬ್ರಾಹ್ಮಣ ರೋಧಿ, ಆರ್ಯನ್ ವಿರೋಧಿ ಹಾಗೂ ಉತ್ತರ ಭಾರತ ರೋಧಿ ನಿಲುವುಗಳನ್ನು ಹೊಂದಿತ್ತು, ಕೇರಳ ಭಾಷಾ ಳವಳಿಗೆ ಎಡ ಸಿದ್ಧಾಂತದ ಪ್ರೇರಣೆ ಸಿಕ್ಕಿತು. ಆದರೆ ನ್ನಡ ಭಾಷಾ ಚಳವಳಿಗೆ ಮತೀಯ ಚರಿತ್ರೆ ಧಾರವಾಯಿತು. ದಕ್ಷಿಣ ಭಾರತದಲ್ಲಿ ಬಲಪಂಥೀಯ ೋಮುವಾದಿ ಪಕ್ಷ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿದ್ದು ರ್ಣಾಟಕದಲ್ಲಿ. ಆಗ 'ಕೃಷ್ಣದೇವರಾಯನ 500ನೇ ಟ್ಟಾಭಿಷೇಕ ಮಹೋತ್ಸವ'ದ ಮೂಲಕ ಈ ಮತೀಯ ಂಕಥನವನ್ನು ಜನಸಮುದಾಯಕ್ಕೆ ಮತ್ತೊಮ್ಮೆ ಪಿಸಲಾಯಿತು. 'ಕನ್ನಡ ಭುವನೇಶ್ವರಿ' ಪ್ರತಿಮೆ ರ್ಣಾಟಕದಲ್ಲಿ ಬಲಪಂಥೀಯ ಕೋಮುವಾದ ಬೆಳವಣಿಗೆಗೆ ೂರಕವಾದಂತಿದೆ.

ಆಧುನಿಕ ಕನ್ನಡದ ಬಹುತೇಕ ಕವಿಗಳು ವಿಜಯನಗರ ಾಮ್ರಾಜ್ಯದ ಮತೀಯ ಚರಿತ್ರೆಯ ಪ್ರಭಾವಕ್ಕೆ ಒಳಗಾಗಿದ್ದಾರೆ. ಾಂತಕವಿಗಳು ಮೊದಲ ಬಾರಿಗೆ 'ವಿದ್ಯಾರಣ್ಯ ಜಯ'ವೆಂಬ ಕೀರ್ತನೆಯಲ್ಲಿ ಈ ಮತೀಯ ಸಂಕಥನವನ್ನು ಬಳಸಿದರು. ಕನ್ನಡತ್ವವನ್ನು ಬಡಿದೆಬ್ಬಿಸಲು ಮುಸ್ಲಿಂ ರೋಧಿ ತಿರುಚಿದ ಚರಿತ್ರೆ ಆಧಾರವಾಯಿತು.



ಶಾಂತಕವಿಗಳು ತಮ್ಮ ಕೀರ್ತನೆಯಲ್ಲಿ ಮಹಮ್ಮದೀಯರ ದಾಳಿಯಿಂದ ಸರ್ವನಾಶವಾದ ವಿಜಯನಗರ ಸಾಮ್ರಾಜ್ಯದ ದುರಂತವನ್ನು ಭಾವುಕವಾಗಿ ಚಿತ್ರಿಸಿದರು. ಹರಿಹರ ಸಾಯಣರಿಗೆ ಹೊಸ ರಾಜ್ಯವನ್ನು ಕಟ್ಟಲು ವಿದ್ಯಾರಣ್ಯರು ಧರ್ಮದೀಕ್ಷೆ ನೀಡಿ ಪ್ರೇರೇಪಿಸಿದ ಹಾಗೂ ಕನ್ನಡ ಭುವನೇಶ್ವರಿ ಆಶೀರ್ವದಿಸಿದ ಕಥನವನ್ನು ನಿರೂಪಿಸಿದರು. ಹೀಗೆ ಕನ್ನಡತ್ವದ ಪರಿಕಲ್ಪನೆ ಭುವನೇಶ್ವರಿಯ ರೂಪದಲ್ಲಿ ಮತೀಯ ರೂಪ ತಾಳಿತು. ಚಾರಿತ್ರಿಕವಾಗಿ ಪರಧರ್ಮ ಪರ ವಿಚಾರಗಳ ಸ್ವೈರಣಾವಾದವನ್ನು ಕನ್ನಡತ್ವವೆಂದು ಪ್ರತಿಪಾದಿಸಿದ ಕವಿರಾಜಮಾರ್ಗಕಾರನ ವಿವೇಕಕ್ಕೆ ಧಕ್ಕೆಯಾಯಿತು. ಬಿ.ಎಂ.ಶ್ರೀಯವರು 'ಕನ್ನಡ ತಾಯ ನೋಟ'ದಲ್ಲಿ ಹಿಂದೊಮ್ಮೆ ಹಿರಿದಾಗಿ ಬಾಳಿ ಸದ್ಯ ಹಾಳು ಹಂಪೆ ಬಡವಾಗಿ ಕಣ್ಣೀರಿಡುತ್ತಿರುವ 'ಭುವನೇಶ್ವರಿ'ಯನ್ನು ಚಿತ್ರಿಸಿದ್ದಾರೆ. ಶಾಂತಕವಿಗಳಿಂದ ಮೊದಲುಗೊಂಡು 2009 ರಲ್ಲಿ ಪ್ರಕಟವಾದ ಎಚ್.ಎಸ್. ವೆಂಕಟೇಶಮೂರ್ತಿಯವರ 'ಹಂಪೆಯಲ್ಲಿ' ಕವಿತೆಯವರೆಗೆ ಕನ್ನಡ ನಾಡಗೀತೆಗಳ ಪರಂಪರೆಯಲ್ಲಿ ಕನ್ನಡತ್ವದ ಮತೀಯ ನೆಲೆಗಳು ಅನಾವರಣ ಗೊಂಡಿವೆ.



ಕನ್ನಡ ನಾಡು ನುಡಿ ಸಂಸ್ಕೃತಿಗಳನ್ನು ಚಿತ್ರಿಸುವ ಪರಂಪರೆಯನ್ನು ಕಟ್ಟಿಕೊಳ್ಳುವ ಭುವನೇಶ್ವರಿಯನ್ನು ಕೇಂದ್ರದಲ್ಲಿಟ್ಟುಕೊಂಡ ನಾಡಗೀತೆಗಳಲ್ಲಿ ಕಂಡುಬರುವ ಹಲವು ಆಶಯಗಳನ್ನು ಸಂಗ್ರಹಿಸಬಹುದಾಗಿದೆ.

ಮೊದಲನೆಯದಾಗಿ ಅವು ಮುಸ್ಲಿಂ ರಾಜಮನೆತನ, ಶಿಲ್ಪಕಲೆ, ಸಂಸ್ಕೃತಿ, ಚರಿತ್ರೆಗೆ ಸಂಬಂಧಿಸಿದ ಸಂಗತಿಗಳನ್ನು ಕನ್ನಡ ಪರಂಪರೆಯಿಂದ ಹೊರಗಿಡುತ್ತವೆ. ಶಾಂತಕವಿಗಳ 'ರಕ್ಷಿಸು ಕರ್ನಾಟಕ ದೇವಿ', ಗೋವಿಂದಪೈಗಳ 'ಕನ್ನಡಿಗರ ತಾಯಿ', ಬಿ.ಎಂ.ಶ್ರೀಯವರ 'ಕನ್ನಡ ಬಾವುಟ', ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು', ಬೇಂದ್ರೆಯವರ 'ನನ್ನದು ಈ ಕನ್ನಡನಾಡು', ಕುವೆಂಪು ಅವರ 'ಮೆಟ್ಟುವ ನೆಲ ಕರ್ನಾಟಕ' ರಸಿಕರಂಗರ 'ಎಂಥ ನಾಡಿದು', ಗೋಕಾಕರ 'ನಾಡಿನ ಹಾಡು', ಸಿದ್ಧಯ್ಯ ಪುರಾಣಿಕರ 'ತಾಯಬರವು', ಅಡಿಗರ 'ಕನ್ನಡವೆಂದರೆ', ಕಣವಿಯವರ 'ವಿಶ್ವಭಾರತಿಗೆ ಕನ್ನಡದಾರತಿ' ಹಾಗೂ 'ಕನ್ನಡ ಜ್ಯೋತಿಯ ದೀಪಗಳು', ಲಕ್ಷ್ಮೀನಾರಾಯಣಭಟ್ಟರ 'ಜಯ ಜಯ ಜಯ ಕನ್ನಡ ರಾಜೇಶ್ವರಿ' ಇತ್ಯಾದಿ. ಮೌರ್ಯ ಕದಂಬರಿಂದ ಮೈಸೂರು ಅರಸರವರೆಗೆ ರಾಜ ಪರಂಪರೆಯನ್ನು, ಪಂಪ ರನ್ನರಿಂದ ಲಕ್ಷ್ಮೀಶ ಮುದ್ದಣರವರೆಗೆ ಕಾವ್ಯ ಪರಂಪರೆಯನ್ನು, ಬದಾಮಿ ಪಟ್ಟದಕಲ್ಲು ಶ್ರವಣಬೆಳಗೊಳ ಇತ್ಯಾದಿ ಶಿಲ್ಪಕಲಾ ಪರಂಪರೆಯನ್ನು ಕಟ್ಟಿಕೊಳ್ಳುವ ಈ ನಾಡಗೀತೆಗಳು ಆದಿಲ್‌ಷಾಹಿ, ಹೈದರ್, ಟಿಪ್ಪು ಸುಲ್ತಾನ, ಬಿಜಾಪುರ, ಗೋಳಗುಮ್ಮಟ, ಶಿಶುನಾಳ ಶರೀಫ್ ಇತ್ಯಾದಿ ಕನ್ನಡ ಪರಂಪರೆಯ ಧಾರೆಯನ್ನು ಗಡಿಪಾರು ಮಾಡಿವೆ. ಇದಕ್ಕೆ ಕಾರಣ ವಿಜಯನಗರ ಚರಿತ್ರೆಯ ಮತೀಯ ಕಥನದ ಸ್ವೀಕಾರ. ಕುವೆಂಪು ಮೊದಲ ನಾಡಗೀತೆಯಲ್ಲಿ ಟಿಪ್ಪು, ಹೈದರ್‌ರನ್ನು ಸೇರಿಸಿದ್ದು ನಂತರದಲ್ಲಿ ಬಿಟ್ಟುಕೊಟ್ಟರು. ಇದಕ್ಕೆ ಪ್ರತಿಕ್ರಿಯೆ ಎಂಬಂತೆ ನಿಸಾರ್ ಅಹಮದ್ ಮತ್ತು ಎಂ.ಅಕಬರ್ ಅಲಿಯವರು ತಮ್ಮ ನಾಡಗೀತೆಗಳಲ್ಲಿ ಮುಸ್ಲಿಂ ಕುರುಹುಗಳನ್ನು ಸೇರಿಸಲು ಯತ್ನಿಸಿದ್ದಾರೆ. ಆದರೆ ನಿಸಾರ್ ಅಹಮದ್ ಹಾಗೂ ಬಿ.ಎ.ಸನದಿ ಅವರ ನಾಡಗೀತೆಗಳಲ್ಲಿ ಅವರ ಧರ್ಮಕ್ಕೆ ಸಲ್ಲದ ಮೂರ್ತಿಪೂಜೆ ಹಾಗೂ ಪೂಜಾವಿಧಾನಗಳು ವ್ಯಕ್ತಗೊಂಡಿವೆ. ಇದನ್ನು ಸಂಕರಶೀಲತೆ ಅನ್ನಬೇಕೋ, ಬಲಪಂಥೀಯರು ಅಪೇಕ್ಷಿಸುವ 'ಅಲ್ಪಸಂಖ್ಯಾತರು ಮುಖ್ಯವಾಹಿನಿಗೆ ಬರಬೇಕೆಂಬ' ನಿರೀಕ್ಷೆಯನ್ನು ಪೂರೈಸಿದ ಅಸಹಾಯಕತೆಯೆನ್ನಬೇಕೋ ತಿಳಿಯದು.

ಈ ನಾಡಗೀತೆಗಳ ಭಾಷೆ ಸಂಸ್ಕೃತಭೂಯಿಷ್ಠವಾಗಿದೆ. ಸ್ವತಃ 'ಭುವನೇಶ್ವರಿ'ಯೇ ಸಂಸ್ಕೃತ ಪದ. ಪ್ರಾಚೀನ ಸಾಹಿತ್ಯದಲ್ಲಿ ಉತ್ತರದ ಚೌಕಟ್ಟು ಇರುವ ಕೃತಿಗಳಲ್ಲಿಯೂ ದಕ್ಷಿಣದ ಕುರುಹುಗಳನ್ನು ಸ್ಥಾಪಿಸುವ ಪ್ರಯತ್ನ ನಡೆದಿತ್ತು, ಪಂಪ, ಹರಿಹರ ಇತ್ಯಾದಿ. ಆದರೆ ಇಲ್ಲಿ ಕರ್ನಾಟಕತ್ವ, ಸಂಸ್ಕೃತ ಭಾಷೆ ಹಾಗೂ ಆರ್ಯ ಸಂಸ್ಕೃತಿಗಳ ನಡುವೆ ಸುಸಂಬಂಧವನ್ನು ಕಲ್ಪಿಸುವ ಕ್ರಮ ಕಂಡುಬರುತ್ತದೆ. ಈ ಎಲ್ಲ ನಾಡಗೀತೆಗಳಲ್ಲಿ ಎದ್ದುಕಾಣುವ ಬಹುಮುಖ್ಯ ಸಂಗತಿಯೆಂದರೆ ದಲಿತ, ಜಾನಪದ ಮತ್ತು ಮಹಿಳಾ ಜಗತ್ತಿನ ಕಣ್ಮರೆ. ಕೋಮುವಾದ ಬಹಿರಂಗದಲ್ಲಿ ಹಿಂದೂ ಮುಸ್ಲಿಂ ವಿರೋಧದಂತೆ ಕಂಡರೂ ಆಳದಲ್ಲಿ ಶೂದ್ರ ದಲಿತರ ಮಹಿಳೆಯರ ಹಕ್ಕುಬಾಧ್ಯತೆಗಳನ್ನು ನಿರಾಕರಿಸುತ್ತದೆ. ಕನ್ನಡದ ನಾಡಗೀತೆಗಳಲ್ಲಿ ಈ ಚಹರೆಗಳು ಕಂಡುಬರುತ್ತದೆ. ಬಹುತೇಕ ನಾಡಗೀತೆಗಳು ಕರ್ನಾಟಕವನ್ನು ಕಟ್ಟುವುದು ಆಳುವ ವರ್ಗದ ವೈಭವೀಕರಣ ಹಾಗೂ ಶಿಷ್ಟ ಧರ್ಮಗಳ ಪ್ರತಿಷ್ಠಾಪನೆಯ ಮೂಲಕ. ಕರ್ನಾಟಕದ ಸಂಕರಶೀಲ ಅನುಭಾವ ಪರಂಪರೆಗಳನ್ನು ನಿರ್ಲಕ್ಷಿಸುತ್ತವೆ. ಕುವೆಂಪು ಅವರ ನಾಡಗೀತೆ ಕೂಡ ಧರ್ಮಸಮನ್ವಯದ ನುಡಿಗಳನ್ನು ಹೊರತುಪಡಿಸಿದರೆ ಉತ್ತರದ ವೈದಿಕ ಸಂಸ್ಕೃತಿಯ ವೈಭವೀಕರಣದಿಂದ ಆರಂಭವಾಗುತ್ತದೆ. ರಾಜಮನೆತನಗಳನ್ನು ಸಾಲಾಗಿ ಹಿಡಿಯುತ್ತದೆ. ಪ್ರಜಾಪ್ರಭುತ್ವ ಕಾಲದಲ್ಲೂ ರಾಜಪ್ರಭುತ್ವವನ್ನು ಪ್ರತಿಪಾದಿಸುವ ನಾಡಗೀತೆ ಬೇಕೇ? ಎಂಬ ಪ್ರಶ್ನೆಯನ್ನು ಹುಟ್ಟು ಹಾಕುತ್ತದೆ.

ಎಂ.ಗೋಪಾಲಕೃಷ್ಣ ಅಡಿಗರ ನಾಡಗೀತೆಗಳು ಕರ್ನಾಟಕದ ಬಹುಪ್ರಾದೇಶಿಕತೆ, ಶೂದ್ರ ದಲಿತ ದುಡಿಯುವ ವರ್ಗದ ಪ್ರಾತಿನಿಧ್ಯವನ್ನು ಒಳಗೊಂಡಿವೆ. ಕರ್ನಾಟಕತ್ವಕ್ಕೆ ವಿಸ್ತೃತ ನೆಲೆಯನ್ನು ಒದಗಿಸುತ್ತವೆ. ಆದರೆ ಅವರ ಮತೀಯವಾದಿ ನಿಲುವಿಗೆ ತಕ್ಕಂತೆ ಮುಸ್ಲಿಮರನ್ನು ಹೊರಗಿಡುತ್ತವೆ. 'ಈರ ಭೋರ ಭಟ್ಟ ಶೆಟ್ಟಿ ಕೂಲಿಕಾರ ರೈತ ಎಲ್ಲರದ್ದೂ ಕನ್ನಡ' ಎನ್ನುವಾಗ ಸಾಬಿಗಳ ಒಂದೂ ಹೆಸರು ಸೇರ್ಪಡೆಯಾಗುವುದಿಲ್ಲ. ಶೂದ್ರ ದಲಿತರನ್ನೊಳಗೊಂಡು ಮುಸ್ಲಿಮರನ್ನು ವಿರೋಧಿಸುವ ಬಲಪಂಥೀಯ ರಾಜಕಾರಣದ ಸುಳಿವನ್ನು ಒಳಗೊಂಡಿವೆ.

ಮತೀಯ ರಾಷ್ಟ್ರೀಯವಾದವನ್ನು ಮತೀಯ ಉಪರಾಷ್ಟ್ರೀಯವಾದವನ್ನು ತಿರಸ್ಕರಿಸುವ ಧ್ವನಿಯನ್ನು ಬೇಂದ್ರೆಯವರಲ್ಲಿ ಕಾಣಬಹುದು. 'ಒಂದೇ ಕರ್ನಾಟಕ' ಭಾಷೆಯ ಹೆಸರಿನ ಹಿಟ್ಲರ್ ಶಾಹಿಯನ್ನು ಕನ್ನಡ ಮಾತೆಯ ಪರಿಕಲ್ಪನೆಯನ್ನೂ ವಿಡಂಬಿಸುತ್ತದೆ. 'ಕನಸಿನೊಳಗೊಂದು ಕಣಸು' ಕವಿತೆಯ ಒಡಲಾಳದಲ್ಲೂ ಇಂಥ ಸೂಕ್ಷ್ಮ ವಿಡಂಬನೆ ಇದೆ.

ರಾಷ್ಟ್ರೀಯವಾದ ಮತ್ತು ಉಪರಾಷ್ಟ್ರೀಯವಾದಗಳ ಮತೀಯ ಆಯಾಮವನ್ನು ದಲಿತ ಕಾವ್ಯ ದಲಿತನೆಲೆಯಿಂದ ತಿರಸ್ಕರಿಸಿದೆ. ಡಿ.ಗೋವಿಂದದಾಸ್ ಅವರ 'ಭಾರತಾಂಬೆಯ ರಥೋತ್ಸವ', ಅರವಿಂದ ಮಾಲಗತ್ತಿಯವರ 'ಭಾರತಾಂಬೆಗೆ' ಕವಿತೆಗಳನ್ನು ಗಮನಿಸಬಹುದು. ಆದರೆ ಸಿದ್ಧಲಿಂಗಯ್ಯನವರ 'ಕನ್ನಡವ್ವನಿಗೆ' ಕವಿತೆ ದಲಿತ ನೆಲೆಯಿಂದ 'ಭುವನೇಶ್ವರಿ' 'ಕನ್ನಡಮ್ಮನ' ರೂಪಕವನ್ನು ಛಿದ್ರೀಕರಿಸುತ್ತದೆ. ಪ್ರಭುಗಳು, ವ್ಯಾಪಾರಿಗಳು ಹಾಗೂ ಪುರೋಹಿತಶಾಹಿಗಳ ಸಂಗಾತಿಯಾಗಿ ಅವರು ಕನ್ನಡವ್ವನನ್ನು ಕಲ್ಪಿಸಿದ್ದಾರೆ.


ರೈತರ ಬೆವರ ನೆಕ್ಕಿ ನೆಕ್ಕೂದಿದ
ಜಮೀನುದಾರರ ಜೊತೆಗಾತಿ
ಕಾರ್ಮಿಕರ ರಕ್ತದ ರವೆ ಉಂಡೆಯ ಉಂಡು ಕಾರಿನ
ಹಾರನ್ನಿನಂತೆ ತೇಗುವ ಮಾಲೀಕರ ಮಿಂಡಗಾತಿ'

ಕನ್ನಡ ಭುವನೇಶ್ವರಿಯ ಪ್ರತಿಮೆ ಹಾಳಾದ ಹಂಪೆಯ ಕಳವಳದ ಮತೀಯ ಚರಿತ್ರೆಯ ನಡುವೆ ಅವತರಿಸಿದೆ. ಬೇರೆ ಬೇರೆ ಸ್ತರಗಳಲ್ಲಿ ವಿಸ್ತರಿಸಿದೆ. ಅದನ್ನು ತಡುವುವುದು ಕೆಡುವುವುದು ಆಚರಣೆಯ ಸ್ತರದಲ್ಲಿ ಅಸಾಧ್ಯ ಎಂಬಂಥ ವಾತಾವರಣ ನಿರ್ಮಾಣವಾಗಿದೆ. ಆದರೆ ನಿಜವಾದ ಹಾಗೂ ಸತ್ವಶಾಲಿಯಾದ ಕರ್ನಾಟಕತ್ವದ ಉಳಿವಿಗಾಗಿ ಅದು ಬದಲಾಗಲೇ ಬೇಕಿದೆ.

ಪರ್ಯಾಯಗಳ ಹುಡುಕಾಟ

ಕರ್ನಾಟಕತ್ವ ಎನ್ನುವುದು ಬಹುತ್ವ, ಶ್ರೇಣೀಕರಣ, ಸಂಘರ್ಷ ಹಾಗೂ ಸಂಕರಶೀಲತೆಗಳ ಸಾಂಸ್ಕೃತಿಕ ವಾಸ್ತವ. ಎರಡು ಎರಡೂವರೆ ಸಾವಿರ ವರುಷಗಳ ಆಗುವಿಕೆ. ಹಲವಾರು ಜನಾಂಗ ಧರ್ಮ ಪ್ರಭುತ್ವ ಭಾಷೆ ಸಮಾಜೋ ಆರ್ಥಿಕ ಸ್ಥಿತ್ಯಂತರಗಳಿಗೆ ಮುಖಾಮುಖಿಯಾಗುತ್ತ ಸಂಘರ್ಷ ನಿರಾಕರಣೆ ಹಾಗೂ ಸ್ವೀಕರಣ ಮಿಲನಗಳನ್ನೊಳಗೊಂಡಂತೆ ರೂಪತಾಳಿದ ಲೋಕಗ್ರಹಿಕೆಯ ವಿಧಾನ. ಇಂದಿಗೂ ಕರ್ನಾಟಕದಲ್ಲಿ ನೂರಕ್ಕೂ ಹೆಚ್ಚು ಜಾತಿ ಸಮುದಾಯಗಳಿವೆ. ಐವತ್ತಕ್ಕೂ ಹೆಚ್ಚು ಬುಡಕಟ್ಟುಗಳಿವೆ. ಏಳೆಂಟು ಧರ್ಮ ಹಾಗೂ ಹತ್ತಾರು ಪಂಥಗಳ ಅನುಯಾಯಿಗಳಿದ್ದಾರೆ. ಇವುಗಳ ನಡುವೆ ತಾರತಮ್ಯ ಸಮಾನತೆಯ ಹೋರಾಟ ಜೀವಂತವಾಗಿದೆ. ವರ್ಗ ವರ್ಣ ಲಿಂಗಾಧಾರಿತ ಅಸಮಾನ ನೆಲೆಗಳಂತೂ ಭಿನ್ನ ಆಯಾಮಗಳಲ್ಲಿ ರೂಪಾಂತರಗೊಂಡಿವೆ. ಇಂಥ ಕರ್ನಾಟಕವನ್ನು ಪ್ರತಿನಿಧಿಸುವ ಸಮರ್ಥ ಪ್ರತಿಮೆ ಎಂದರೆ "ಕನ್ನಡ" ಒಂದೇ. ಅಥವಾ ಪ್ರತಿಮೀಕರಣದ ಅಗತ್ಯವಿಲ್ಲ, ಇಷ್ಟಾಗಿಯೂ ಬೇಕೇ ಎಂದರೆ ಈ ಎಲ್ಲ ವೈವಿಧ್ಯ ವೈರುಧ್ಯ ಅಸ್ಮಿತೆಗಳನ್ನು ಒಳಗೊಳ್ಳುವ ಪ್ರತಿಮೆಗಾಗಿ ಚಿಂತಿಸಬೇಕಾಗುತ್ತದೆ. ಲಿಂಗಾಯತ ಧರ್ಮ ಇಷ್ಟಲಿಂಗದ ರೂಪಕವನ್ನು ಗುಡಿಗೆ ಪರ್ಯಾಯವಾಗಿ ನೀಡಿತು. ದಲಿತ ಸಂಘರ್ಷ ಸಮಿತಿಗೆ ಕಸಬರಿಗೆ ಸಂಕೇತವಾಗಿತ್ತು, ಬಂಡಾಯ ಸಂಘಟನೆಗೆ ಪೆನ್ನು ಸಂಕೇತವಾಗಿತ್ತು, ಎಡಪಕ್ಷಗಳು ಶ್ರಮಿಕ ವರ್ಗದ ಆಯುಧಗಳನ್ನೇ ಸಂಕೇತವಾಗಿ ಬಳಸಿಕೊಂಡಿವೆ. ಭುವನೇಶ್ವರಿಯ ಜಾಗದಲ್ಲಿ ಹೊಸ ರೂಪಕ ರೂಪತಾಳಬೇಕಾದದ್ದು ಇಂದಿನ ಅನಿವಾರ್ಯತೆ. ಆ ನೆಲೆಯಲ್ಲಿ ಚರ್ಚೆ ಮುಂದುವರಿಯಲಿ ಎಂದು ಕರ್ನಾಟಕತ್ವವನ್ನು ಪ್ರತಿನಿಧಿಸುವ ಪ್ರತಿಮೆಯೊಂದನ್ನು ಹೀಗೆ ಕಲ್ಪಿಸಿಕೊಳ್ಳುತ್ತೇನೆ- "ಗಂಡು ಹೆಣ್ಣು ಹಾಗೂ ಲೈಂಗಿಕ ಅಲ್ಪಸಂಖ್ಯಾತರ ಮೂರು ಮುಖಗಳನ್ನುಳ್ಳ ಜೀವವೊಂದಕ್ಕೆ ನೂರಾರು ಕೈಗಳಿರಬೇಕು. ಪ್ರತಿ ಕೈಯಲ್ಲೂ ನಾಡಿನ ಜಾತಿ, ಧರ್ಮ, ಅನುಭಾವಪಂಥ, ಬುಡಕಟ್ಟು, ಭಾಷೆಗಳು, ಉಪಭಾಷೆಗಳು, ನಿಸರ್ಗ ಇತ್ಯಾದಿಗಳ ಜೀವಚೈತನ್ಯವನ್ನು ಪ್ರತಿನಿಧಿಸುವ ಸಂಕೇತಗಳಿರಬೇಕು. ವೈವಿಧ್ಯ ವೈರುಧ್ಯ ಸಂಘರ್ಷ ಹಾಗೂ ಸಹಬಾಳ್ವೆಗಳೆಲ್ಲವನ್ನೂ ಧ್ವನಿಸುವಂತಿರಬೇಕು."

ಕರ್ನಾಟಕತ್ವವನ್ನು ಭುವನೇಶ್ವರಿ ಪ್ರತಿಮೆಯಿಂದ ಬೇರ್ಪಡಿಸುವ, ಮೈಸೂರು ದಸರಾ ಆಚರಣೆಯನ್ನು ಚಾಮುಂಡೇಶ್ವರಿ ಪೂಜೆ ಹಾಗೂ ಮೆರವಣಿಗೆಗಳಿಂದ ಬಿಡುಗಡೆಗೊಳಿಸುವ ಮೂಲಕ ನಿರ್ಮತೀಯ ಕರ್ನಾಟಕತ್ವದ ಉಳಿವಿಗಾಗಿ ಕರ್ನಾಟಕದಲ್ಲಿ ಒಂದು ಚಳವಳಿಯೇ ನಡೆಯಬೇಕಾಗಿದೆ. ಅದು ಈ ಸಂಕಥನಗಳ ಹಿಂದಿನ ತಾತ್ವಿಕ ಸಮಸ್ಯೆಗಳನ್ನು ಜನಸಮುದಾಯಕ್ಕೆ ಮುಟ್ಟಿಸುವಂತಿರಬೇಕು. ಸರಕಾರದ ಮಟ್ಟದಲ್ಲಿ ಬದಲಾವಣೆಗೆ ಒತ್ತಾಯ ತರುವ ಸ್ವರೂಪದಲ್ಲಿರಬೇಕು. ಈ ಕುರಿತಂತೆ ಕರ್ನಾಟಕದ ಪ್ರಗತಿಪರರಲ್ಲಿ ಅಸಮಾಧಾನವಿದೆ. ಕೆಲವರು ಸಾಂದರ್ಭಿಕವಾಗಿ ದನಿ ಎತ್ತುತ್ತಲೇ ಇದ್ದಾರೆ. ಆದರೆ ಅದು ಸಾಮೂಹಿಕ ಪ್ರತಿಭಟನೆಯ ರೂಪ ತಾಳುತ್ತಿಲ್ಲ. ಬೆಕ್ಕಿಗೆ ಗಂಟೆ ಕಟ್ಟುವವರು ಯಾರು? ಎಂಬ ಪರಿಸ್ಥಿತಿ ಇದೆ. ಪಿ.ಲಂಕೇಶ್ ಭಾಷಾ ಮೂಲಭೂತವಾದದ ವಿರುದ್ಧ ದನಿ ಎತ್ತುತ್ತಲೇ ಬಂದಿದ್ದರು. ಕೆಲವೊಮ್ಮೆ ಹಲ್ಲೆಗೂ ಒಳಗಾಗಿದ್ದರು. ಈಗ ಈ ಲಂಕೇಶ್ ಪತ್ರಿಕೆ ಈ ನಿಟ್ಟಿನಲ್ಲಿ ದೊಡ್ಡಮಟ್ಟದ ಚರ್ಚೆಯನ್ನಾದರೂ ಹುಟ್ಟು ಹಾಕಲಿ ಎಂದು ಆಶಿಸುತ್ತೇನೆ.



- ಡಾ.ಎಂ.ಡಿ.ಒಕ್ಕುಂದ

ಕರುನಾಡಲ್ಲೂ ಕಂಪು ಚೆಲ್ಲಿದ್ದ ಸಾಮ್ರಾಟ್ ಅಶೋಕ

ಕರುನಾಡಿನ ಇತಿಹಾಸ ಅಥವಾ ಕರ್ನಾಟಕದ ಇತಿಹಾಸ ಎಂದರೆ ಕದಂಬರು, ಗಂಗರು, ರಾಷ್ಟ್ರಕೂಟರು, ಚಾಲುಕ್ಯರು, ಹೊಯ್ಸಳರು, ಟಿಪ್ಪು, ಹೈದರಾಲಿ ಮತ್ತು ಮೈಸೂರಿನ ಒಡೆಯರು - ಇದಿಷ್ಟರ ಬಗ್ಗೆಯಷ್ಟೇ ಇತಿಹಾಸಕಾರರು ಬೆಳಕು ಚೆಲ್ಲುವುದು ಮತ್ತು ಅಂತಹ ಬೆಳಕು ಚೆಲ್ಲುವಿಕೆಯಲ್ಲಿಯೂ ತಾರತಮ್ಯ ಮಾಡುವುದು. ಉದಾಹರಣೆಗೆ ಕದಂಬರ ಮಯೂರ ಶರ್ಮನನ್ನು ಹೊಗಳುವುದು, ಟಿಪ್ಪು-ಹೈದರಾಲಿಯನ್ನು ತೆಗಳುವುದು ಅಥವಾ ಅಂತಹ ಮಹತ್ವ ನೀಡದಿರುವುದು. ಇಂತಹ ತಾರತಮ್ಯದ ನಡುವೆ ಕರುನಾಡಿನ ಇತಿಹಾಸದಲ್ಲಿ ಸಾಮ್ರಾಟ್ ಅಶೋಕನ ಹೆಸರನ್ನು ತಪ್ಪಿಯೂ ಹೇಳುವುದಿಲ್ಲ! ಅಶೋಕ ಈ ನಾಡಿನಲ್ಲಿ ತನ್ನ ರಾಜ್ಯ ವಿಸ್ತರಿಸಿದ್ದರ ಬಗ್ಗೆ, ತನ್ನ ಧರ್ಮ ಮತ್ತು ರಾಜಕೀಯ ಪ್ರಭಾವಳಿಯನ್ನು ಇಲ್ಲಿ ಬೀರಿದ್ದರ ಬಗ್ಗೆ ಇತಿಹಾಸಕಾರರು ಬೆಳಕು ಚೆಲ್ಲುವುದಿಲ್ಲ ಅಥವಾ ಕರ್ನಾಟಕದ ಇತಿಹಾಸ ಕುರಿತ ಪಠ್ಯಗಳಲ್ಲೂ ಇರುವುದಿಲ್ಲ! ಯಾಕೆ? ಉತ್ತರ ಸರಳ. ಅಶೋಕ ಪಸರಿಸಿದ್ದು ವೈದಿಕರಿಗೆ ಒಗ್ಗದ ಬೌದ್ಧ ಧರ್ಮವನ್ನು, ಹಾಗೆಯೇ ವೈದಿಕರಿಗೆ ಒಲ್ಲದ ಶಾಂತಿ, ಸಾಮರಸ್ಯವನ್ನು!

ಕರುನಾಡಿನ ಇತಿಹಾಸದಲ್ಲಿ ಅಶೋಕನಿಗೆ ಸ್ಥಾನವಿರಬೇಕಲ್ಲವೆ? ಯಾವ ಸಾಮ್ರಾಟ ಉತ್ತರದ ಈಗಿನ ಅಫ್ಘನಿಸ್ತಾನದ ಹಿಂದೂಖುಷ್ ಪರ್ವತಶ್ರೇಣಿಯಿಂದ ದಕ್ಷಿಣದ ತುಂಗಭದ್ರಾ ನದಿಯವರೆಗೆ ತನ್ನ ಸಾಮ್ರಾಜ್ಯ ವಿಸ್ತರಿಸಿದ್ದನೋ ಅಂತಹ ಸಾಮ್ರಾಟನ ಪರಿಚಯ ಅಥವಾ ಕರುನಾಡಿನಲ್ಲಿನ ಆತನ ಕಂಪಿನ ಬಗ್ಗೆ ಅರಿವಿರಬೇಕಲ್ಲವೆ? ಅರಿವಿರಬೇಕು ಹಾಗೇ ಆಭಾರಿಯೂ ಆಗಿರಬೇಕು. ಯಾಕೆಂದರೆ 'ಬ್ರಾಹ್ಮಿ' ಲಿಪಿಯ ಮೂಲಕ, ಪ್ರಾಕೃತ ಭಾಷೆಯ ಮೂಲಕ ಇಡೀ ಭಾರತಕ್ಕೆ ತನ್ನ ಶಾಸನಗಳ ಮೂಲಕ ಅಕ್ಷರ ಪರಿಚಯಿಸಿದ ಪ್ರಥಮ ಸಾಮ್ರಾಟನೆಂದರೆ ಅದು ಅಶೋಕ ಮಾತ್ರ. ಒಂದರ್ಥದಲ್ಲಿ ಅಶೋಕ ಇಡೀ ಭರತ ಖಂಡಕ್ಕೆ, ಜನಸಾಮಾನ್ಯರೂ ಸೇರಿದಂತೆ ಅಕ್ಷರ ಕಲಿಸಿದ ಸಾಕ್ಷರತೆಯ ಸಾಮ್ರಾಟ. ಇದನ್ನು ಅತಿಶಯೋಕ್ತಿಗೆ ಹೇಳುತ್ತಿಲ್ಲ, ಸ್ವತಃ ಖ್ಯಾತ ಇತಿಹಾಸಕಾರ ವಿನ್ಸೆಂಟ್ ಸ್ಮಿತ್ ಅವರೇ **"I think it likely that the percentage of literacy among the Buddhist population in Ashoka's time was higher than it is now in many provinces of British India"** ಎನ್ನುತ್ತಾರೆ. (ಆಧಾರ: **ASOKA by Radhakumud Mookerji, Pp.102**). ಇದರರ್ಥ ಬ್ರಿಟಿಷ್ ಕಾಲದ ಭಾರತಕ್ಕಿಂತಲೂ ಅಶೋಕನ ಕಾಲದ ಭಾರತದಲ್ಲಿ ಸಾಕ್ಷರತೆ ಪ್ರಮಾಣ ಹೆಚ್ಚಿತ್ತು ಎಂದು!


ಅಂದಹಾಗೆ ಕರುನಾಡಲ್ಲಿ ಅಥವಾ ಇಂದಿನ




ಕರ್ನಾಟಕದಲ್ಲಿ ಅಶೋಕನ ಪ್ರಭಾವಳಿ ಹೇಗಿತ್ತು? ಉತ್ತರ ಹುಡುಕುವುದಾದರೆ ಅಥವಾ ಅಶೋಕನ ಕುರಿತ ಅತ್ಯಂತ ಮಹತ್ವದ ಅಂಶ ವಿವರಿಸುವುದಾದರೆ ಈ ದೇಶದಲ್ಲಿ "ದೇವನಾಂಪ್ರಿಯ ಅಶೋಕ" ಎಂಬ ಅಶೋಕನ ನಿಜ ನಾಮಧೇಯ ಇರುವ ಏಕೈಕ ಶಾಸನ ದೊರಕಿದ್ದು ನಮ್ಮ ರಾಜ್ಯದ ರಾಯಚೂರು ಜಿಲ್ಲೆಯ ಮಸ್ಕಿಯಲ್ಲಿ! ಖಂಡಿತ, ಇದು ಆಶ್ಚರ್ಯವೆನಿಸಿದರೂ ಸತ್ಯ. ಯಾಕೆಂದರೆ ಇಡೀ ಭರತ ಉಪಖಂಡದಲ್ಲಿ ದೊರೆತ ಎಲ್ಲಾ ಶಾಸನಗಳಲ್ಲೂ ಬರೇ 'ದೇವನಾಂಪ್ರಿಯ' ಎಂತಲೋ ಅಥವಾ ಬರೇ 'ಪ್ರಿಯದರ್ಶಿ ರಾಜಾ' ಎಂತಲೋ ಉಲ್ಲೇಖವಿರುತ್ತಿತ್ತು, ಆದರೆ ರಾಯಚೂರು ಜಿಲ್ಲೆಯ ಮಸ್ಕಿ ಶಾಸನದಲ್ಲಿ ಪ್ರಾಕೃತ ಭಾಷೆಯಲ್ಲಿ 'ದೇವನಾಂಪ್ರಿಯಸ ಅಸೋಕಸ' **(of his gracious majesty, asoka) (ibid. Pp.12)** ಎಂದಿತ್ತು!

ಬರೀ ಮಸ್ಕಿಯಲ್ಲಷ್ಟೇ ಅಲ್ಲ ಚಿತ್ರದುರ್ಗ ಜಿಲ್ಲೆಯ ಸಿದ್ದಾಪುರ (ಅಶೋಕನ ಕಾಲದಲ್ಲಿ ಅದನ್ನು 'ಇಸಿಲ' ಎಂದು ಕರೆಯಲಾಗುತ್ತಿತ್ತು) ಹಾಗೂ ಬ್ರಹ್ಮಗಿರಿ, ಹಾಗೆಯೇ ಗುಲ್ಬರ್ಗಾ ಜಿಲ್ಲೆಯ ಸನ್ನತಿಯಲ್ಲಿ ಅಶೋಕನ ಶಾಸನಗಳು ದೊರೆತಿವೆ. ಮಾತ್ರವಲ್ಲ, ದೇಶದಾದ್ಯಂತ ದೊರೆತಿರುವ **18** ಕಿಬ್ಬಂಡೆ ಶಾಸನಗಳಲ್ಲಿ ಶೇ.**50** ಅಂದರೆ **9** ಶಾಸನಗಳು ರಾಜ್ಯದಲ್ಲೇ ದೊರೆತಿವೆ! ಅಂದರೆ ಅಶೋಕನು ಕರ್ನಾಟಕ ರಾಜ್ಯವಾಳಿರುವ ಪರಿಯನ್ನು ಎಂಥವರಾದರೂ ಊಹಿಸಬಹುದು. ಅದರಲ್ಲೂ ಸನ್ನತಿ "ಅಶೋಕನ ವೈಯಕ್ತಿಕ ಆಸಕ್ತಿಯಿಂದಾಗಿ ಮೌರ್ಯ ಸಾಮ್ರಾಜ್ಯದ ಒಂದು ಪ್ರಧಾನ ಆಡಳಿತ ಮತ್ತು ಧಾರ್ಮಿಕ ಕೇಂದ್ರವಾಗಿ ಬೆಳೆಯಿತು" (ಆಧಾರ: ಷಸೆಟ್ಟರ್ ಅವರ 'ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ', ಪು.77). ಅಲ್ಲದೆ ಅಲ್ಲಿ (ಸನ್ನತಿ) ದೊರಕಿರುವ ಮಹಾಸ್ತೂಪ ಮತ್ತು ಹಲವು ವಿಹಾರಗಳ ಅವಶೇಷಗಳ ಆಧಾರದ ಮೇಲೆ ಹೇಳುವುದಾದರೆ ಅಶೋಕನ ಕಾಲದಲ್ಲಿ ಅಲ್ಲಿ ಪ್ರಾರಂಭವಾದ ಅಂತಹ ಧಾರ್ಮಿಕ ಚಟುವಟಿಕೆಗಳು ಮತ್ತೂ ಮುಂದುವರಿದು ಅದು ಬೃಹತ್ ಬೌದ್ಧ ಕೇಂದ್ರವಾಗಿತ್ತು.

ಇನ್ನು ಅಶೋಕನ ಕರ್ನಾಟಕದ ಸಾಮ್ರಾಜ್ಯದ ಬಗ್ಗೆ ಹೇಳುವುದಾದರೆ ಸುವರ್ಣಗಿರಿಯನ್ನು ಆತ ತನ್ನ ದಖ್ಖಣದ (ಕರ್ನಾಟಕ-ಆಂಧ್ರ) ರಾಜಧಾನಿಯಾಗಿ ಮಾಡಿಕೊಂಡ. ಅಲ್ಲದೆ ಅದಕ್ಕೆ ಆಯಪುತ(ಆರ್ಯಪುತ್ರ)ನನ್ನು ನೇಮಕ ಮಾಡಿ ಆತನ ಸಹಾಯಕ್ಕೆ 'ಮಹಾಮಾತ್ರ'ರನ್ನು ಕೂಡ ನೇಮಿಸಿದ. ಅಂದಹಾಗೆ 'ಆರ್ಯಪುತ್ರ'ನೆಂಬುವವನು ಅಶೋಕನ ಸಮೀಪದ ಸಂಬಂಧಿ ಎನ್ನುವುದು ಇಲ್ಲಿ ಗಮನಿಸಬೇಕಾದ ಅಂಶ. ಈ ನಿಟ್ಟಿನಲ್ಲಿ ಹೇಳುವುದಾದರೆ ಅಶೋಕನ ಸಾಮ್ರಾಜ್ಯ ರಾಜ್ಯದ ತುಂಗಭದ್ರಾ ನದಿಯವರೆಗೆ ಇತ್ತು. ಹಾಗಿದ್ದರೆ ಅಲ್ಲಿಂದ ಕೆಳಗೆ ದಕ್ಷಿಣಕ್ಕೆ ಆ ಸಮಯದಲ್ಲಿ ಯಾರು ಆಳುತ್ತಿದ್ದರು? ಯಾವ ರಾಜ್ಯವಿತ್ತು? ಉತ್ತರ: 'ಮಹಿಷ ಮಂಡಲ' ಅಥವಾ 'ಮಹಿಷೂರು' ಅಥವಾ ಇಂದಿನ 'ಮೈಸೂರು'! ಅಂದರೆ 'ಮಹಿಷಾಸುರ' ಅಂದಿನ






ಮಹಿಷಮಂಡಲದ ಅರಸು ಎಂದಾಯಿತು. ಹಾಗೆಯೇ 'ಮಹಿಷಮಂಡಲ'ಕ್ಕೆ ('ಮಹಿಷ' ಎಂದರೆ 'ಎಮ್ಮೆ' ಎಂದರ್ಥ) ಅಂದಿನ ಸಾಮಂತರಾಗಿ ದಕ್ಷಿಣದಲ್ಲಿ 'ಎರುಮೈನಾಡು' (ಎರುಮೈ= ಎಮ್ಮೆ=ಮಹಿಷ) ಇಂದಿನ ತಮಿಳುನಾಡು ಇತ್ತು. ಇದರರ್ಥ 'ಮಹಿಷಾಸುರ' ಅಶೋಕನ ಬೌದ್ಧ ಸಾಮಂತ ಅರಸ!.(ಖಂಡಿತ, ಇದರತ್ತ ಇತಿಹಾಸ ಬೆಳಕು ಚೆಲ್ಲಬೇಕು. ಸುಮ್ಮನೇ ಆತನನ್ನು ರಾಕ್ಷಸ, ಚಾಮುಂಡಿ ಆತನನ್ನು ಕೊಂದಳು ಎಂದು ಕಥೆ ಕಟ್ಟುವುದಲ್ಲ!)

ಮೂರನೇ ಬೌದ್ಧ ಪರಿಷತ್ ನಂತರ ಅಶೋಕ ತನ್ನ ಧರ್ಮ ಪ್ರಚಾರಕರನ್ನು ಅನೇಕ ಕಡೆ ಕಳುಹಿಸಿದ್ದ, ಅವುಗಳಲ್ಲಿ ವನವಾಸ (ಬನವಾಸಿ) ಮತ್ತು ಮಹಿಷಮಂಡಲಗಳೂ ಒಳಗೊಂಡಿದ್ದವು. ಬನವಾಸಿಗೆ ಥೇರ ರಖ್ಖಿತ ಮತ್ತು ಮಹಿಷಮಂಡಲಕ್ಕೆ ಮಹದೇವ ಎಂಬುವವರನ್ನು ಅಶೋಕ ಕಳುಹಿಸಿದ್ದ **(Asoka, the Buddhist emperor of India by Vincent A Smith. Pp .44).** ಮಹಿಷಮಂಡಲಕ್ಕೆ ಅಂದು ಅಶೋಕ ಕಳುಹಿಸಿದ ಧರ್ಮಪ್ರಚಾರಕ ಮಹದೇವ ಇಂದಿನ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ಭಾಗದಲ್ಲಿ ಕಂಡುಬರುವ ಮಲೈ ಮಹದೇಶ್ವರ ಇರಬಹುದೇ ಎಂಬ ಪ್ರಶ್ನೆ ಈ ಸಂದರ್ಭದಲ್ಲಿ ಖಂಡಿತ ಉದ್ಭವಿಸುತ್ತದೆ. ಯಾಕೆಂದರೆ ಜನಪದೀಯ ಸಾಹಿತ್ಯದಲ್ಲಿ ಮಹದೇಶ್ವರರನ್ನು ಈಗಲೂ "ಉತ್ತರದೇಶದಯ್ಯ" ಎನ್ನಲಾಗುತ್ತದೆ. ಅಂದರೆ ಮಹದೇಶ್ವರರು ಉತ್ತರ ಭಾರತದಿಂದ ಬಂದವರು ಎಂದರ್ಥ! ಅಲ್ಲದೆ ಮಹದೇಶ್ವರನ ಭಕ್ತರ 'ಬುರುಡೆ ಬೋಳಿಸುವ ಪದ್ಧತಿ', 'ಗುಡ್ಡನ ಬಿಡುವ ಪದ್ಧತಿ', 'ಭಿಕ್ಷೆ ಬೇಡುವ ಪದ್ಧತಿ' ಇವೆಲ್ಲವೂ ಬೌದ್ಧ ಭಿಕ್ಕುಗಳ ರೀತಿಯೇ ಇದೆ. ಒಟ್ಟಾರೆ ಈ ಆಧಾರದ ಮೇಲೆ ಅಶೋಕ ಅಂದು ಕಳುಹಿಸಿದ ಥೇರ (ಬೌದ್ಧ ಭಿಕು) ಮಹದೇವನೆ ಇಂದಿನ ಮಲೈ ಮಹದೇಶ್ವರ ಎಂದು ನಿಸ್ಸಂಶಯವಾಗಿ ಹೇಳಬಹುದು.

ಒಂದಂತೂ ನಿಜ, ಸಾಮ್ರಾಟ್ ಅಶೋಕ ಕರ್ನಾಟಕದ ಉದ್ದಗಲಕ್ಕೂ ತನ್ನ ಪ್ರಭಾವ ಬೀರಿದ್ದ. ಈ ಹಿನ್ನೆಲೆಯಲ್ಲಿ ಪರ್ಷಿಯನ್ ಯಾತ್ರಿಕ ಫಾಹಿಯಾನ್ ಇಲ್ಲಿ ಕಂಡ ಮಹಿಶಾಸಕ (ಮೈಸೂರು), ಚೀನಿ ಯಾತ್ರಿಕ ಹೂಯೆನ್

ಭಾಷೆಯ ಅಳಿವು-ಉಳಿವು: ಜೀವನ ವಿಧಾನದ ಅಳಿವು-ಉಳಿವು


ಯಾವುದೇ ಒಂದು ಭಾಷೆಯ ಬೆಳವಣಿಗೆಯಲ್ಲಿ ತೊಡಕುಗಳಾಗಲಿ, ಸಡಿಲಿಕೆಗಳಾಗಲೀ ಕೇವಲ ನೆಪ ಮಾತ್ರ. ಒಂದು ಭಾಷೆ ತನ್ನ ರಿಜಿಸ್ಟನ್ಸ್ ಮೂಲಕವೇ ಬದುಕಿ ಉಳಿಯುವ ಎಲ್ಲ ಸಾಮರ್ಥ್ಯಗಳನ್ನು ಅಂತರಂಗೀಕರಣಗೊಳಿಸಿಕೊಂಡಿರುತ್ತದೆ. ಆಯಾ ಕಾಲಮಾನದ ಅಗತ್ಯಗಳಿಗೆ ತಕ್ಕ ಹಾಗೆ ಮಾರ್ಪಾಡುಗಳನ್ನು ಹೊಂದುವ ಮೂಲಕ ತನ್ನ ಅಸ್ತಿತ್ವವನ್ನು ಅದು ಉಳಿಸಿಕೊಳ್ಳುತ್ತದೆ. ಈ ಬಗೆಯ ನಿರಂತರ ಪ್ರಕ್ರಿಯೆಯಲ್ಲಿ ಸಲ್ಲದ ಭಾಷೆಗಳು ಅಪಾಯದ ಅಂಚಿಗೆ ನೂಕಲ್ಪಡುತ್ತವೆ. ಒಂದು ಭಾಷೆ ಕಳೆದು ಹೋಗುತ್ತಿದೆ ಎನ್ನುವಾಗಲೇ ತನ್ನ ಸಹಕುಟುಂಬದ ಸಹವಾಸದಲ್ಲಿ ಅಮೂರ್ತವಾಗಿ ನೆಲೆಯನ್ನು ಕಂಡು ಕೊಂಡಿರುತ್ತದೆ. ಅನೇಕ ಪ್ರಾದೇಶಿಕ ಭಾಷೆಗಳು ತನ್ನ ಅಸ್ತಿತ್ವವನ್ನು ಇಲ್ಲವಾಗಿಸಿಕೊಳ್ಳುತ್ತಿವೆ ಎಂದು ಹೇಳುವ ಬದಲಾಗಿ ತನ್ನ ಕುಟುಂಬದ ಭಾಷೆಗಳೊಂದಿಗೆ ಸ್ವಾಂಗೀಕರಣಗೊಳ್ಳುತ್ತಿದೆ ಎನ್ನಬಹುದೇನೋ?



ಜಾಗತೀಕರಣದ ಸಂದರ್ಭದಲ್ಲಿಯೂ ಕನ್ನಡ ಭಾಷೆ ಅದು ಹೇಗೆ ತನ್ನ ಧ್ವನಿ ಮತ್ತು ರಚನೆಯಲ್ಲಿ ಕಂಗ್ಲೀಷಿಕರಣಗೊಳ್ಳುವ ಮೂಲಕ ಈ ಕಾಲಕ್ಕೆ ತಕ್ಕಂತೆ ಗಟ್ಟಿಗೊಳ್ಳುತ್ತ ನಡೆದಿದೆ ಎನ್ನುವುದನ್ನು ಗಮನಿಸಬಹುದಾಗಿದೆ.

ವಿಶ್ವದ ಅನೇಕ ಭಾಷೆಗಳ ನಡುವೆ ಸಂಸ್ಕೃತ ಭಾಷೆಯ ಅನನ್ಯತೆ ಮತ್ತು ಗಟ್ಟಿತನವನ್ನು ಅಲ್ಲಗಳೆಯಲಾದೀತೆ? ಹಿಂದೆ **1786** ರ ಸಂದರ್ಭದಲ್ಲಿ ವಿಲಿಯಂ ಜೋನ್ಸ್ ಎನ್ನುವ ನ್ಯಾಯಾಧೀಶರು ಸಂಸ್ಕೃತ ಭಾಷೆಯನ್ನು ಕುರಿತು ಹೀಗೆ ಹೇಳಿದ್ದಿತು; 'ಸಂಸ್ಕೃತ ಭಾಷೆಯ ಪ್ರಾಚೀನತೆ ಏನೇ ಇರಲಿ ಅದರ ರಚನೆ ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳಿಗಿಂತಲೂ ಉತ್ತಮವಾದುದು.' ಒಂದು ಭಾಷೆ ಜೀವ ವಿಕಾಸವಾದದ ಭಾಗವಾಗಿ ಬೆಳೆದುಬರುವ ಕ್ರಮವನ್ನು ಅನೇಕ ಭಾಷಾಶಾಸ್ತ್ರಜ್ಞರು ಚರ್ಚಿಸಿದ್ದಾರೆ. ಯಾವುದೇ ಒಂದು ಭಾಷೆ ಬರೀ ಭಾಷೆಯಾಗಿರದೇ ಅಲ್ಲಿಯ ಜನರ ಜೀವನದ ವಿಧಾನದ ಭಾಗವಾಗಿರುತ್ತದೆ. 'ಜಾಗತಿಕ ಭಾಷೆಗಳ ಮಾರ್ಗದರ್ಶಿ' ಎನ್ನುವ ಕೃತಿಯಲ್ಲಿ ಎಮ್.ರುಲೆನ್ ಎನ್ನುವ ಚಿಂತಕರು ಒಟ್ಟು **17** ಭಾಷೆಗಳ ಕುಟುಂಬವನ್ನು ಗುರುತಿಸಿದ್ದಾರೆ. ಇಂದು ಜಗತ್ತಿನಲ್ಲಿ ಸುಮಾರು **6000** ಭಾಷೆಯನ್ನಾಡುವ ಜನಸಮೂಹಗಳಿವೆ ಎಂದಿರುವರು. ಇವುಗಳಲ್ಲಿ ಯುರೋಪಿನ **4** ಪ್ರತಿಶತ ಜನ, ಅಮೆರಿಕೆಯ **15** ಪ್ರತಿಶತ ಜನ, ಆಫ್ರಿಕಾದ **3** ಪ್ರತಿಶತ ಜನ, ನ್ಯು ಗಿನಿಯಾ ಮತ್ತು ಇಂಡೋನೇಷಿಯಾದ **25** ಪ್ರತಿಶತ ಜನ ಈ ಭಾಷೆಯನ್ನು ಮಾತನಾಡುವವರಿದ್ದಾರೆ. ಜಾಗತೀಕರಣದ ಭರಾಟೆಯಿಂದ ಕೆಲ ತೀರಾ ಸಣ್ಣಪುಟ್ಟ ಭಾಷೆಗಳು ಅಪಾಯದ ಅಂಚಿನಲ್ಲಿರುವುದಂತೂ ಹೌದು. ಭಾಷಾಶಾಸ್ತ್ರಜ್ಞರ ಪ್ರಕಾರ ಈ ಶತಮಾನದ ಅಂತ್ಯದ ವೇಳೆಗೆ ಸುಮಾರು **50** ಪ್ರತಿಶತ ಸಣ್ಣ ಪುಟ್ಟ ಭಾಷೆಗಳು ಗತಿಸಿಹೋಗಲಿವೆ ಎಂದಿದ್ದಾರೆ. (ಮೇಧಾ ರಾಜಾಧ್ಯಕ್ಷ **Exploring speech and language** -ಪು-**102**).

ಯಾವುದೇ ಒಂದು ಭಾಷೆಯ ಉಳಿಯುವಿಕೆ ಮತ್ತು ಗತಿಸುವಿಕೆ ಅದರ ಜನ ಬಳಕೆಯ ಪ್ರಮಾಣವನ್ನು ಅವಲಂಬಿಸಿದೆ. ಕನ್ನಡ ಭಾಷೆಯನ್ನೇ ತೆಗೆದುಕೊಳ್ಳಿ, ಬೆಂಗಳೂರಿನಂಥಾ ಮಹಾನಗರಗಳಲ್ಲಿ ಇಂದು ಕನ್ನಡ ಹಿಂದೆಂದಿಗಿಂತಲೂ ಹೆಚ್ಚು ಫ್ಯಾನ್ಸಿಯಾಗಿ ಬಳಕೆಯಲ್ಲಿದೆ.



ಅದಕ್ಕೆ ಜಾಗತೀಕರಣದ ಪ್ರಭಾವದ ಹಿನ್ನೆಲೆಯಲ್ಲಿ ದಿನೇದಿನೇ ಬೆಳೆಯುತ್ತಿರುವ ಮಾಲ್ ಸಂಸ್ಕೃತಿಯೂ ಒಂದು ಪ್ರಮುಖ ಕಾರಣ. ಇಂದು ಸಮೂಹ ಮಾಧ್ಯಮಗಳಲ್ಲಿ ದಿನನಿತ್ಯ ಬಳಕೆಯಾಗುವ ಹೈಬ್ರಿಡ್ ಕನ್ನಡ ಯುವಜನತೆಯನ್ನು ಹೆಚ್ಚೆಚ್ಚು ಆಕರ್ಷಿಸುತ್ತಿದೆ. ಬಹುಶಃ ಆ ಕಾರಣದಿಂದಾಗಿಯೇ ಭಾರತದ ಜನಭಾಷೆ ಸಮೀಕ್ಷೆಯ 'ಪಿ.ಎಲ್.ಎಸ್.ಆಯ್' ಚೇರಮನ್ ಆಗಿರುವ ಗಣೇಶ ಎನ್. ದೇವಿ ಅವರು 'ಮುಂಬರುವ ಹತ್ತು ವರ್ಷಗಳಲ್ಲಿ ರಷ್ಯಾ, ಫ್ರೆಂಚ್ ಮತ್ತು ಜರ್ಮನ್ ಭಾಷೆಯನ್ನು ಮಾತನಾಡುವವರಿಗಿಂತಲೂ ಹೆಚ್ಚಾಗಿ ಕನ್ನಡ ಮಾತನಾಡುವವರಿರುತ್ತಾರೆ' ಎಂದು ಹೇಳಿರುವುದಿದೆ. ಭಾರತದಲ್ಲಿ ಒಟ್ಟು **22** ಅನುಸೂಚಿತ ಭಾಷೆಗಳಿದ್ದು, ಕಳೆದ **50** ವರ್ಷಗಳಲ್ಲಿ ಸುಮಾರು **250** ಭಾಷೆಗಳು ಕಣ್ಮರೆಯಾಗಿವೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಹಿಂದೊಮ್ಮೆ ಲಖನೌ ವಿಶ್ವವಿದ್ಯಾಲಯದಲ್ಲಿ ಜರುಗಿದ ಭಾಷಾ ಸಮ್ಮೇಳನದಲ್ಲಿ ಭಾಷಾಶಾಸ್ತ್ರಜ್ಞರು 'ಸಣ್ಣ ಪುಟ್ಟ **96** ಪ್ರತಿಶತ ಭಾಷೆಗಳು ಅಳಿವಿನಂಚಿನಲ್ಲಿವೆ. ಈ **96** ಪ್ರತಿಶತ ಭಾಷೆಗಳನ್ನು ಕೇವಲ **4** ಪ್ರತಿಶತ ಜನ ಮಾತ್ರ ಮಾತನಾಡುವುದಿದೆ. ಇವು ಅಪಾಯದ ಅಂಚಿನಲ್ಲಿರಲು ಇದೂ ಒಂದು ಮುಖ್ಯ ಕಾರಣ' ಎಂದಿರುವರು. ಈ ಸಣ್ಣ ಪುಟ್ಟ ಭಾಷೆಗಳು ಆಯಾ ಜನಸಮುದಾಯದ ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ. ಅವುಗಳ ಅಳಿವು-ಉಳಿವು ಕೂಡಾ ಸದ್ಯದ ಅಗತ್ಯತೆಯನ್ನೇ ಅವಲಂಬಿಸಿದೆ. ಜನಭಾಷಾ ಸಮೀಕ್ಷೆಯ ಪ್ರಕಾರ 'ದ ಹಿಂದೂ ಆಗಸ್ಟ್ **2-2013**' ಕರ್ನಾಟಕದ **50** ಭಾಷೆಗಳ ಪೈಕಿ **10** ಭಾಷೆಗಳು ಅಪಾಯದ ಅಂಚಿನಲ್ಲಿವೆ. ಕೊರಗ, ಬಡಗ, ಯರವ, ಇರುಳ, ಸೋಲಿಗ, ಗೌಳಿ, ಜೇನುಕುರುಬ, ಬೆಟ್ಟಕುರುಬ, ಹಕ್ಕಿ ಪಿಕ್ಕಿ ಮತ್ತು ಸಿರಿ... ಜನಸಮುದಾಯಗಳ ಭಾಷೆಗಳು ಅಳಿವಿನ ಅಂಚಿನಲ್ಲಿವೆ ಎಂದು ವರದಿಯಾಗಿದೆ. ಒಂದು ಸಣ್ಣ ಭಾಷೆಯ ಸಾಯುವಿಕೆ ಆ ಸಮುದಾಯದ ಜಾಗತಿಕ ನೋಟ ಮತ್ತು ಗ್ರಹಿಕೆ ಸತ್ತ ಹಾಗೆ, ಜೊತೆಗೆ ಸ್ಥಳೀಯ ಸಾಂಸ್ಕೃತಿಕ ಅನನ್ಯತೆ ಅನಾಮಧೇಯವಾಗಿ ಉಳಿದ ಹಾಗೆ. ಭಾಷಾ ಶಾಸ್ತ್ರಜ್ಞರು ಒಂದು ಭಾಷೆಯ ರಚನೆಯ ಬಗ್ಗೆ ಯೋಚಿಸುವ ಜೊತೆ ಅದನ್ನು ಆಯಾ ಕಾಲಘಟ್ಟಕ್ಕೆ ತಕ್ಕಂತೆ ಉಳಿಸಿಕೊಳ್ಳುವ ಬಗ್ಗೆಯೂ ಯೋಚಿಸಬೇಕಿದೆ. ಯಾಕೆಂದರೆ ಅಳಿಯುವುದು ಕೇವಲ ಒಂದು ಭಾಷೆಯಲ್ಲ, ಆಯಾ ಸಮುದಾಯಗಳ ಜೀವನ ವಿಧಾನ.

-


ಡಾ.ಎಸ್.ಬಿ.ಜೋಗುರ,
ಧಾರವಾಡ



ತ್ಸಾಂಗ್ ಹೇಳುವ 'ಕೊಂಕಣ ಪುರ' ಮತ್ತು ಆತ ಅಲ್ಲಿ ಕಂಡ ಅಶೋಕ ಸ್ತೂಪ, ಬುದ್ಧ ಕರಂಡಕ, ಮೈತ್ರೇಯ ವಿಗ್ರಹ ಮತ್ತು ಹಲವಾರು ಸಂಘಾರಾಮಗಳು (ಭಿಕ್ಷುಗಳು ವಾಸಿಸುತ್ತಿದ್ದ ಪ್ರದೇಶ). ಅಂತೆಯೇ ಆ ಕಾಲದಲ್ಲಿ ಬನವಾಸಿ ಪ್ರಸಿದ್ಧ ಬೌದ್ಧ ಕೇಂದ್ರವಾಗಿದ್ದದ್ದು, ಇವೆಲ್ಲವನ್ನು ನಾವು ಗಮನಿಸಬಹುದು. ದುರಂತವೆಂದರೆ ಬನವಾಸಿ ಎಂದಾಕ್ಷಣ ಅದನ್ನು ಕದಂಬರ ರಾಜಧಾನಿ ಎಂದಷ್ಟೆ ಹೇಳುತ್ತೇವೆ! ಹಾಗಿದ್ದರೆ ಅಶೋಕನಿಗೂ ಅದೇ ಬನವಾಸಿಗೂ (ಕರ್ನಾಟಕ) ಇದ್ದ ಸಂಬಂಧ? ಖಂಡಿತ, ಇತಿಹಾಸದಲ್ಲಿ ಇಂತಹದ್ದನ್ನೆಲ್ಲ ಉದ್ದೇಶಪೂರ್ವಕವಾಗಿಯೇ ಮುಚ್ಚಿಡಲಾಗಿದೆ!

ಕರ್ನಾಟಕಕ್ಕೆ ಸಂಬಂಧಿಸಿದಂತೆ ಅಶೋಕನ ಉತ್ತರ ಗಡಿ ಗುಲ್ಬರ್ಗ ಜಿಲ್ಲೆಯ ಸನ್ನತಿಯಾಗಿದ್ದರೆ, ದಕ್ಷಿಣದ ಗಡಿ ಚಿತ್ರದುರ್ಗ ಜಿಲ್ಲೆಯ ಸಿದ್ದಾಪುರ- ಬ್ರಹ್ಮಗಿರಿಯಾಗಿತ್ತು, ಪಶ್ಚಿಮದ ಗಡಿ ಕೊಪ್ಪಳವಾಗಿದ್ದರೆ, ಪೂರ್ವ ಗಡಿ ಆಂಧ್ರಪ್ರದೇಶ ಕರ್ನೂಲು ಜಿಲ್ಲೆಯ ಯೆರ್ರಗುಡಿಯಾಗಿತ್ತು. 125 ಕಿ.ಮೀ ವಿಸ್ತೀರ್ಣದ ಈ ಕ್ಷೇತ್ರದಲ್ಲಿ ಅಶೋಕ 11 ಕಿಬ್ಬಂಡೆ ಶಾಸನಗಳಲ್ಲದೆ, ಹೆಬ್ಬಂಡೆ ಶಾಸನಗಳ ಒಂದು ಗುಚ್ಛವನ್ನು ಸಹ ಕೊರೆಯಿಸಿದ್ದನು (ಷ.ಶೆಟ್ಟರ್, ಪು.76). ಹಾಗೆಯೇ ತನ್ನ ಕಾಲದಲ್ಲಿ ಪ್ರಚಲಿತವಾಗಿದ್ದ ಬೌದ್ಧ ಪರಂಪರೆಯನ್ನನುಸರಿಸಿ ಅಶೋಕನು ಕರ್ನಾಟಕ-ಆಂಧ್ರದ ಎಲ್ಲಾ ಜನಾಂಗಗಳನ್ನು 'ಅಂಧಕ' ಎಂಬ ಹೆಸರಿನಿಂದ ಗುರುತಿಸಿದ. ಈ ಎಲ್ಲಾ ಆಧಾರಗಳ ಮೇಲೆ ಹೇಳುವುದಾದರೆ ಮೌರ್ಯ ಸಾಮ್ರಾಜ್ಯದ ಶ್ರೇಷ್ಠ ದೊರೆ ಸಾಮ್ರಾಟ ಅಶೋಕ ಕರುನಾಡಲ್ಲೂ ತನ್ನ ಪ್ರಬಲ ಕಂಪು ಬೀರಿದ್ದ. ಆತ ಪ್ರಚುರ ಪಡಿಸಿದ 'ಬ್ರಾಹ್ಮಿ' ಲಿಪಿ ಮತ್ತು ಪ್ರಾಕೃತ ಭಾಷೆಯಿಂದ (ಷ.ಶೆಟ್ಟರ್, ಪು.75) ಕನ್ನಡವೂ ಒಳಗೊಂಡಂತೆ ಈ ದೇಶದ ಹಲವು ಭಾಷೆಗಳು ಅಭಿವೃದ್ಧಿ ಹೊಂದಿದವು.

ಈ ನಿಟ್ಟಿನಲ್ಲಿ ಇನ್ನು ಮುಂದಾದರೂ "ಕರ್ನಾಟಕದ ಇತಿಹಾಸದಲ್ಲಿ ... ಬಂಗಾರ ಯುಗದ ಕಥೆಯನ್ನು" ಹೇಳುವಾಗ ರಾಜ್ಯದ ಸುವರ್ಣಗಿರಿಯನ್ನು ತನ್ನ ದಕ್ಷಿಣದ ರಾಜಧಾನಿಯಾಗಿ ಮಾಡಿಕೊಂಡಿದ್ದ ಸಾಮ್ರಾಟ್ ಅಶೋಕನ ಹೆಸರು ಮೊದಲು ಪ್ರಸ್ತಾಪವಾಗಬೇಕು. "ಹಕ್ಕಬುಕ್ಕರು ಹರುಷದ ಮಳೆಯನ್ನು ಇಲ್ಲಿ ಚೆಲ್ಲಿ"ವುದಕ್ಕೂ ಮೊದಲೇ ಬೌದ್ಧ ಧರ್ಮದ ಕಂಪನ್ನು ಇಲ್ಲಿ ಹರಡಿದ್ದ 'ದೇವನಾಂಪ್ರಿಯ'ನ ಹೆಸರಿಗೆ ಅಗ್ರಮಾನ್ಯತೆ ಸಿಗಬೇಕು.



ರಘೋತ್ತಮ ಹೊ.ಬ,
ಚಾಮರಾಜನಗರ



'ಕಸವರವೆಂಬುದು ನೆರೆ ಸೈರಿಸಲಾರ್ಪೊಡೆ ಪರವಿಚಾರಮಂ ಪರಧರ್ಮಮುಮಂ'

ಮೋದಿ ಓದಬೇಕಾದ ಕನ್ನಡದ ಕವಿರಾಜಮಾರ್ಗ

ಕೆ.ವಿ.ಸುಬ್ಬಣ್ಣ ಅವರು ಬರೆದಿರುವ 'ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು' ಕೃತಿಯನ್ನು ಈಗ ಓದಿದಾಗ ಮೊದಲಿಗೆ ನನಗನಿಸಿದ್ದು ಇದನ್ನು ಯಾರಾದರೂ ನರೇಂದ್ರ ಮೋದಿಗೆ ಪಾಠ ಮಾಡಬಾರದೇ ಎಂದು. ಈ ಕೃತಿ ಬರೆದಿರುವ ಸುಬ್ಬಣ್ಣ ಅವರೇ ಅವರ ಆರ್ದ್ರ ದನಿಯಲ್ಲಿ ಪಾಠ ಮಾಡಿದ್ದರೆ ಮೋದಿಯ ಮನುಷ್ಯದ್ವೇಷದ ಮನಸ್ಸೂ ಒಂದಿನಿತಾದರೂ ಬದಲಾಗುತ್ತಿತ್ತೇನೋ.

ಕ್ರಿ.ಶ. 814-877ರ ಅವಧಿಯಲ್ಲಿ ರಚನೆಗೊಂಡ 'ಕವಿರಾಜಮಾರ್ಗ' ಕನ್ನಡದ ಮೊಟ್ಟಮೊದಲ ಲಭ್ಯ ಲಾಕ್ಷಣಿಕ ಅಥವಾ ಅಲಂಕಾರ ಗ್ರಂಥ (ಕಾವ್ಯದ ಗುಣ ದೋಷಗಳನ್ನು ಚರ್ಚಿಸುವ, ನಿರ್ಣಯಿಸುವ ಗ್ರಂಥ). ಆದರೆ ಇದು ಅಷ್ಟೇ ಅಲ್ಲ, ಕನ್ನಡದ ಶ್ರೇಷ್ಠ ಚಿಂತಕರಲ್ಲೊಬ್ಬರಾದ ಡಿ.ಆರ್.ನಾಗರಾಜ್ ಅವರ ಮಾತಿನಲ್ಲಿ ಹೇಳುವುದಾದರೆ 'ಕವಿರಾಜಮಾರ್ಗ' ಒಂದು ರಾಜಕೀಯ ಕೃತಿ. ಕಳೆದ ಸಾವಿರ ವರ್ಷಗಳಲ್ಲಿ ಬಂದ ಪ್ರಪಂಚದ ಹತ್ತು ಹನ್ನೆರಡು ಅತ್ಯಂತ ಮಹತ್ವದ ರಾಜಕೀಯ ಕೃತಿಗಳ ಪಟ್ಟಿಯನ್ನು ಮಾಡುವುದಾದಲ್ಲಿ 'ಕವಿರಾಜಮಾರ್ಗ' ನಿಸ್ಸಂದೇಹವಾಗಿ ಅದರಲ್ಲಿ ಸೇರುವಂತಹದು.

'ಕವಿರಾಜಮಾರ್ಗ' ಕೃತಿಯನ್ನು ದೇಶಿಯ ಮತ್ತು ಅನ್ಯದೇಶಿಯ ಕೃತಿಗಳೊಂದಿಗೆ ಹೋಲಿಸಿ ನೋಡುವ ಮೂಲಕ ಈ ಕೃತಿಯ ವಿಶೇಷತೆಯನ್ನು ಸುಬ್ಬಣ್ಣ ಗುರುತಿಸುತ್ತಾರೆ. ಒಂದನೆಯದು ಸುಮಾರು ಕ್ರಿ.ಶ. 4 ಅಥವಾ 5ನೇ ಶತಮಾನದಲ್ಲಿ ಅಂದರೆ 'ಕವಿರಾಜಮಾರ್ಗ' ಕೃತಿಗಿಂತ ಸುಮಾರು ನಾಲ್ಕುನೂರು ವರ್ಷಗಳಷ್ಟು ಹಿಂದೆಯೇ ರಚನೆಗೊಂಡಿರಬಹುದಾದ ತಮಿಳಿನ 'ತೊಲ್ಕಾಪ್ಪಿಯಂ' ಕೃತಿ.


'ತೊಲ್ಕಾಪ್ಪಿಯಂ' ತನ್ನ ಮತ್ತು ಇತರ ನಾಡುಗಳ ಬಗ್ಗೆ ಹೇಗೆ ಮೌನವಾಗಿದೆಯೋ ಹಾಗೆಯೇ ಬೇರೆ ಭಾಷೆಗಳ ಬಗ್ಗೆಯೂ ಬಹುಮಟ್ಟಿಗೆ ಮೌನವಾಗಿದೆ. ಬೇರೆ ಭಾಷೆಯಿಂದ ಶಬ್ದಗಳನ್ನು ಪಡೆದುಕೊಳ್ಳಬಹುದಾದರೂ ತಮಿಳು ಉಚ್ಚಾರಣೆಗೆ ಹೊಂದುವಂಥವನ್ನು ಮಾತ್ರವೇ ಪಡೆದುಕೊಳ್ಳತಕ್ಕದ್ದು ಎಂದು ವಿಧಿಸಲಾಗಿದೆ; ತಮಿಳಿಗೆ ತಂದುಕೊಳ್ಳುವ ಆ ಶಬ್ದಗಳ ಮೂಲರೂಪಗಳು ವಿರೂಪಗೊಂಡರೂ ಆಕ್ಷೇಪವಿಲ್ಲ ಎಂದಿದೆ. ಇದಕ್ಕೆ ವಿರುದ್ಧವಾಗಿ 'ಕವಿರಾಜಮಾರ್ಗವು' ಇನ್ನೊಂದು ಭಾಷೆಯನ್ನು 'ಸಹವಸ್ತು'ವಾಗಿ ನೋಡಬಹುದು ಎಂಬ ಉದಾರವಾದಿ ಮನೋಧರ್ಮವನ್ನು ಹೊಂದಿದೆ ಮತ್ತು ಕನ್ನಡದ ಬಗ್ಗೆ ಮತ್ತು 'ಭಾಷಾನೀತಿ'ಯ ಬಗ್ಗೆ ಒಟ್ಟೊಟ್ಟಿಗೆ, ಮುಜುಗರವಿಲ್ಲದೆ ಮಾತಾಡುತ್ತದೆ. ಸಂಸ್ಕೃತ ಪ್ರಾಕೃತಗಳ ಜೊತೆಗೆ ಕನ್ನಡವನ್ನಿಟ್ಟು ಮಾತನಾಡುವಾಗ ಈ ಗ್ರಂಥವು ಕೀಳರಿಮೆಯಿಂದಾಗಲೀ ಅಥವಾ ಅದಕ್ಕೆ ವಿರುದ್ಧವಾದ ಮಡಿ-ಗರ್ವದಿಂದಾಗಲೀ ಕಿಂಚಿತ್ತೂ ಕ್ಲೇಶಗೊಳ್ಳುವುದಿಲ್ಲ.

ಎರಡನೆಯದು ನೆಬ್ರಿಜಾನ ಸ್ಪಾನಿಶ್ ವ್ಯಾಕರಣ ಗ್ರಂಥವಾದ 'ಗ್ರಮಾಟಿಕಾ ಕಾಸ್ಟೆಲ್ಲಾನ' ಜತೆಗಿನ ಹೋಲಿಕೆ. ಒಳ್ಳೆಯ ಲ್ಯಾಟಿನ್ ವ್ಯಾಕರಣ ಗ್ರಂಥಗಳನ್ನು ಬರೆದಿದ್ದ ಆಂಟೋನಿಯಾ ನೆಬ್ರಿಜಾ (ಕ್ರಿ.ಶ. 1444-1522) ಸ್ಪೈನಿನ ರಾಣಿ ಇಸಬೆಲ್ಲಾ ಮುಂದೆ ತನ್ನದೊಂದು ಯೋಜನೆಯನ್ನು ಇಟ್ಟು ಅದಕ್ಕೆ ರಾಣಿಯ ಸಹಾಯವನ್ನು ಬೇಡುತ್ತಾನೆ. "ಸ್ಪೈನಿನ ಪ್ರಜೆಗಳು ಬಳಸುತ್ತಿರುವ ಕಾಸ್ಟಲಿನ್ ಭಾಷೆಯು ಈಗ ಯಾವುದೇ ನಿಯಂತ್ರಣವಿಲ್ಲದೆ, ಸ್ಥಳಸ್ಥಳಕ್ಕೂ ಭಿನ್ನವಾಗಿಹೋಗಿದೆ; ನೂರಾರು 'ಗ್ರಾಮ್ಯ'ಗಳಲ್ಲಿ ಛಿದ್ರವಾಗಿಹೋಗಿದೆ ಮತ್ತು ಹಿಡಿತವಿಲ್ಲದೆ ಇದು ದಿನದಿನವೂ ಬದಲಾಗುತ್ತ ಹೋಗುತ್ತಿದೆ. ಇದರಿಂದ ಇವತ್ತಿನ ಭಾಷೆಯಲ್ಲಿ ಬರೆದಿಟ್ಟ ರಾಣಿಯ ವೈಭವದ ಇತಿಹಾಸವು ಮುಂದಿನ ಜನಕ್ಕೆ ತಲುಪದೆ ಹೋಗಬಹುದು. ಒಂದು ಸಾಮ್ರಾಜ್ಯವನ್ನು ಮತ್ತು ಇತಿಹಾಸವನ್ನು ನಿರ್ಮಿಸಬೇಕೆಂದರೆ, ಅದಕ್ಕೆ ತಕ್ಕುದಾದ ಒಂದು ಪ್ರಮಾಣಬದ್ಧ ಭಾಷೆಯನ್ನು ನಿರ್ಮಿಸಿಕೊಳ್ಳಬೇಕು. ರಾಣಿಯ ಅಧಿಕೃತ ಮುದ್ರೆಯುಳ್ಳ ಪ್ರಮಾಣ - ರಾಜಭಾಷೆಯೊಂದು ಈಗ ಅತ್ಯಗತ್ಯವಾಗಿದೆ. ನಾನೀಗ ಈ ಛಿದ್ರಭಾಷೆಯನ್ನು ಶುದ್ಧಗೊಳಿಸಿ ಸಂಕಲಿಸಿ ಅದಕ್ಕೊಂದು ವ್ಯಾಕರಣವನ್ನು ರಚಿಸುತ್ತೇನೆ ಮತ್ತು ಆ ಮೂಲಕ ಪ್ರಮಾಣ ರಾಜಭಾಷೆಯನ್ನು ನಿರ್ಮಿಸುತ್ತೇನೆ. ಅದಕ್ಕೆ ರಾಣಿಯ ಸಹಾಯ ಬೇಕು" ಎನ್ನುವುದು ನೆಬ್ರಿಜಾನ ಮನವಿಯ ಸಾರಾಂಶ.

> ಪದನಱಿದು ನುಡಿಯಲುಂ ನುಡಿದುದ
> ನಱಿಯಲುಮಾರ್ಪರಾ ನಾಡವರ್ಗಳ್
> ಚದುರರ್ ನಿಜದಿಂ ಕುರಿತೋದದೆಯುಂ
> ಕಾವ್ಯಪ್ರಯೋಗ ಪರಿಣತಮತಿಗಳ್

ಇದಕ್ಕೆ ತದ್ವಿರುದ್ಧವಾಗಿ ಜನಕೇಂದ್ರಿತ ಭಾಷಾಸೂತ್ರವನ್ನು 'ಕವಿರಾಜಮಾರ್ಗ' ನೆಬ್ರಿಜಾನಿಗಿಂತ ಆರುನೂರು ವರ್ಷಗಳಷ್ಟು ಹಿಂದೆಯೇ ಪ್ರತಿಪಾದಿಸಿತ್ತು. ನೆಬ್ರಿಜಾನಂತೆ 'ಕವಿರಾಜಮಾರ್ಗ'ಕ್ಕೂ ಬಹುಶಃ ಭಾಷೆಯು ಅರಾಜಕವಾಗಬಾರದು, ಛಿದ್ರವಾಗಬಾರದು ಎಂಬ ಅಪೇಕ್ಷೆಯಿದೆ. ಆದರೆ ಭಾಷೆಯನ್ನು ಏಕರೂಪಿಯಾಗಿ ನಿರ್ಮಿಸಿ ಕಾಪಾಡಿಕೊಳ್ಳಬೇಕು ಎಂಬ ಹಠ ಅದಕ್ಕಿಲ್ಲ. 'ಕವಿರಾಜಮಾರ್ಗ' ಭಾಷೆಯ ವೈವಿಧ್ಯವನ್ನು ನಿಶ್ಚಿತವಾಗಿಯೂ ಪುರಸ್ಕರಿಸುತ್ತದೆ. ಹಾಗೆ ವೈವಿಧ್ಯಕ್ಕೆ ಮುಕ್ತ ಅವಕಾಶವನ್ನು ತಾನೇ ಕಲ್ಪಿಸಿಟ್ಟಿದೆ. 'ಕವಿರಾಜಮಾರ್ಗ' ಮಂಡಿಸಿದ ಭಾಷಾರಾಜ್ಯವೆಂಬ ಸಂಯಮ ರಾಜಕಾರಣದ ಸೂತ್ರದಲ್ಲಿ ಒಂದು ಭಾಷಾ ಚಹರೆಯುಳ್ಳ ಜನರು, ಜನಪದವೇ ಮುಖ್ಯ. ಇಲ್ಲಿ ಸಾರ್ವಭೌಮ ಅಧಿಕಾರವೆಂಬುದು ಜನರದ್ದು ಹಾಗೂ ಅದನ್ನು ರಕ್ಷಿಸುವ ಅಧಿಕಾರವಷ್ಟೇ ರಾಜನದ್ದು. ಇಂತಹ ಹೊಸ ರಾಜಕಾರಣವನ್ನು ಪ್ರತಿಪಾದಿಸಿ ಕಾರ್ಯಗತಗೊಳಿಸಿದ್ದು ಕನ್ನಡದ ಪುಣ್ಯ ಎಂದು ಸುಬ್ಬಣ್ಣ ಸಂತೋಷಪಡುತ್ತಾರೆ.

ಭಾಷೆಯು ಕಾಲಾಂತರದಲ್ಲಿ ಪರಿವರ್ತನೆಗೊಳ್ಳುತ್ತ ಹೋಗುತ್ತಿರುವುದರ ಬಗ್ಗೆ ನೆಬ್ರಿಜಾನಿಗೆ ದೊಡ್ಡ ಆತಂಕವಿದ್ದರೆ 'ಕವಿರಾಜಮಾರ್ಗ'ವು ಭಾಷೆಯು ಬದಲಾಗುತ್ತ ಹೋಗಬೇಕಾದ್ದನ್ನು ಬಲವಾಗಿ ಸಮರ್ಥಿಸುತ್ತದೆ. ನಿದರ್ಶನವೆಂದರೆ ಇದು ತನ್ನ ಕಾಲದಷ್ಟು ಪೂರ್ವದ 'ಹಳಗನ್ನಡ'ವನ್ನು ಬಳಸುತ್ತಿರುವ ಕುರಿತು ಲೇವಡಿ ಮಾಡುತ್ತದೆ. ಸಾಹಿತ್ಯ ಓದಿ ಜನ ಕೆಟ್ಟುಹೋಗುತ್ತಾರೆ ಎಂಬ ಪ್ಲೇಟೋನ ಆತಂಕದಂತೆ ಜನರು ಸೃಜನಶೀಲ ಸಾಹಿತ್ಯ ಓದುತ್ತ ಸಹಮತವನ್ನು ರೂಪಿಸಿಕೊಳ್ಳುತ್ತಿದ್ದಾರೆ. ಇದನ್ನು ಪ್ರಭುತ್ವವು ನಿಯಂತ್ರಿಸತಕ್ಕದ್ದು



ಎಂಬ ನೆಬ್ರಿಜಾನ ಆತಂಕ 'ಕವಿರಾಜಮಾರ್ಗ'ಕ್ಕಿಲ್ಲ. ಇದಕ್ಕೆ ಪ್ರತಿಯಾಗಿ ಈ ಕೃತಿ ಸಂಪೂರ್ಣ ಗದ್ಯ-ಪದ್ಯ-ಕಥಾ-ಕಾವ್ಯ ಪಕ್ಷಪಾತಿ. ಇನ್ನೊಂದು ಪ್ರಮುಖ ಸಂಗತಿಯೆಂದರೆ 'ಕವಿರಾಜಮಾರ್ಗ'ವು ರಾಜಧಾನಿ ಮಳಖೇಡದ ವಲಯದಿಂದ ಹೊರಗಿರುವ ಪ್ರಾಂತವೊಂದನ್ನು 'ರಾಜ್ಯದ ತಿರುಳು' (ತಿರುಳ್ಗನ್ನಡ) ಎಂದು ಘೋಷಿಸಿದೆ. ಇದುವೇ ಈ ಗ್ರಂಥದ ರಾಜಕಾರಣವು, ಪ್ರಭುತ್ವಕೇಂದ್ರಿತ ಸಮಸ್ತಾಧಿಕಾರ - ರಾಜಕಾರಣಕ್ಕಿಂತ ಭಿನ್ನವಾಗಿದೆ ಎನ್ನುವುದಕ್ಕೆ ದೊಡ್ಡ ಸಾಕ್ಷಿ ಎಂದು ಸುಬ್ಬಣ್ಣ ಅವರು ಪ್ರತಿಪಾದಿಸುತ್ತಾರೆ.

ಕವಿರಾಜಮಾರ್ಗ ಎಂದೊಡನೆ ಕೆಳಗಿನ ಅದರ ಒಂದು ಪದ್ಯವನ್ನು ಸದಾ ಉದ್ಧರಿಸಲಾಗುತ್ತದೆ.

ಪದನರಿದು ನುಡಿಯಲ್ಲುಂ ನುಡಿ
ದುದನರಿದಾರಯಲುಮಾರ್ಪರಾ ನಾಡಾವರ್ಗಳ್
ಚದುರರ್ ನಿಜದಿಂ ಕುರಿತೋ
ದದೆಯಂ ಕಾವ್ಯ ಪ್ರಯೋಗ ಪರಿಣತಮತಿಗಳ್ ॥ (1:38)

ಒಂದು ನಿರ್ದಿಷ್ಟ ಕೃತಿಯನ್ನು ಓದದೆಯೂ ಅದನ್ನು ಗ್ರಹಿಸಿ ಅರ್ಥಮಾಡಿಕೊಳ್ಳುವ ಕನ್ನಡಿಗರ ಬುದ್ಧಿವಂತಿಕೆಯನ್ನು ಪ್ರಶಂಸಿಸುವ 'ಕವಿರಾಜಮಾರ್ಗ' ಕೃತಿಯ ಪದ್ಯವಿದು.


ಅಷ್ಟು ಪ್ರಸಿದ್ಧವಲ್ಲದ 'ಕವಿರಾಜಮಾರ್ಗ'ದ ಒಂದು ಪದ್ಯ ಹೀಗಿದೆ:

*'ಕಸವರವೆಂಬುದು ನೆರೆ ಸೈ
ರಿಸಲಾರ್ಪೊಡೆ ಪರವಿಚಾರಮಂ
ಪರಧರ್ಮಮುಮಂ
ಕಸವರ - ಮೇಣ್ ಕಸಮೇನು
ಬ್ಬಸಮಂ - ಬಸಮಲ್ಲದಿರ್ದ - ಮಾಡುವದೆಲ್ಲಂ (3:176)*

ಅನ್ಯವಾದ ವಿಚಾರವನ್ನು ಮತ್ತು ಅನ್ಯಧರ್ಮವನ್ನು ಸೈರಿಸಲಿಕ್ಕಾದರೆ ಅದೇ ಬಂಗಾರ; ತನ್ನ ಮನಸ್ಸಿನ ಸೈರಣೆಯು ತನ್ನ ಹಿಡಿತದಲ್ಲಿಲ್ಲದಿದ್ದರೆ ಅಂಥವರ ವಿಷಯದಲ್ಲಿ ಕಸವಾದರೇನು ಬಂಗಾರವಾದರೇನು? ಎಲ್ಲ ವಸ್ತುಗಳೂ ಕಷ್ಟವನ್ನೇ ಉಂಟು ಮಾಡುತ್ತವೆ.

ದೊಡ್ಡ ಮೌಲ್ಯವೊಂದನ್ನು ಹೇಳುವ 'ಕವಿರಾಜಮಾರ್ಗ'ದ ಈ ಪದ್ಯಭಾಗವನ್ನು ತಮ್ಮ ಕೃತಿಯ ಉದ್ದಕ್ಕೂ ಸುಬ್ಬಣ್ಣ ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಾರೆ. ಇನ್ನೊಂದು ಭಾಷೆ-ಧರ್ಮ-ಸಂಸ್ಕೃತಿಗಳನ್ನು ಸೈರಿಸುವ ಗುಣ ಕನ್ನಡಿಗರದ್ದು ಎನ್ನುವ 'ಕವಿರಾಜಮಾರ್ಗ'ಕಾರರ ಗ್ರಹಿಕೆಯನ್ನು ಅದರಲ್ಲೂ 'ಸೈರಣೆ' ಎನ್ನುವ ನುಡಿಗಟ್ಟು ಹತ್ತು ಹಲವು ಬಾರಿ ಈ ಕೃತಿಯಲ್ಲಿ ಪುನರಾವರ್ತನೆಯಾಗುತ್ತದೆ. ಬಾಬರಿ ಮಸೀದಿ ಕೆಡವಿದ ನಂತರದ ಪ್ರಕ್ಷುಬ್ಧ ಭಾರತವನ್ನು ಕಂಡ ಸುಬ್ಬಣ್ಣನವರ ಮನಸ್ಸು ಈ ಮೂಲಕ "ಕೋಮುವಾದಿ ರಾಜಕಾರಣಕ್ಕೆ ಕನ್ನಡಿಗರು ಈಡಾಗಬಾರದು, ಅದು ನಮ್ಮ ಗುಣವಲ್ಲ" ಎಂದು ಎಚ್ಚರಿಸುತ್ತಿರುವಂತೆ ತೋರುತ್ತದೆ.

ಮೇಲಿನ ಪದ್ಯಭಾಗವನ್ನು ವಿಶ್ಲೇಷಿಸುತ್ತ 'ಅನ್ಯದಲ್ಲಿ ತನ್ನ ವಿಲೀನ ಮತ್ತು ತನ್ನಲ್ಲಿ ಅನ್ಯದ ವಿಲೀನ ಎಂಬ ಕಲ್ಪನೆಯುಂಟಾಗುವುದು 'ಸ್ವ' ಮತ್ತು 'ಅನ್ಯ'ಗಳನ್ನು 'ಪ್ರತಿ' ಎಂದು ತಿಳಿಯದೇ 'ಸಹ' ಎಂದು ತಿಳಿದಾಗ ಮಾತ್ರವೇ. 'ಅನ್ಯ'ವನ್ನು 'ಸಹ' ಎಂದು ಭಾವಿಸಿದಾಗ 'ಸಹನೆ'ಯು ತಾನಾಗಿಯೇ ಹುಟ್ಟುತ್ತದೆ. ಮುಂದೆ, ಸಹನೆಯು ಸಾಹಚರ್ಯಕ್ಕೂ ಸಮ್ಮಿಲನಕ್ಕೂ ದಾರಿ ಮಾಡಿಕೊಡುತ್ತದೆ ಎಂದು ಸುಬ್ಬಣ್ಣ ಹೇಳುವುದು ಈ ಹಿನ್ನೆಲೆಯಲ್ಲಿ ಹೊಸ ಅರ್ಥವನ್ನು ಸ್ಫುರಿಸುತ್ತದೆ.




- ಸರ್ಜಾಶಂಕರ
ಹರಳಿಮಠ

ಇಸ್ರೋ ಅಧ್ಯಕ್ಷನನ್ನು ವಜಾ ಮಾಡಿ: ನರೇಂದ್ರ ನಾಯಕ್

ತಿರುಪತಿ ದೇವಸ್ಥಾನದಲ್ಲಿರುವ ಮೂರ್ತಿಯ ಮುಂದೆ ಮಂಗಳ ನೌಕೆಯ ಪ್ರತಿಕೃತಿಯನ್ನು ಇಟ್ಟು ಪೂಜೆ ಸಲ್ಲಿಸಿದ ಇಸ್ರೋ ಅಧ್ಯಕ್ಷ ಕೆ. ರಾಧಾಕೃಷ್ಣನ್ ಅವರು ನಮ್ಮ ಸಂವಿಧಾನಕ್ಕೆ ಅವಮಾನ ಮಾಡಿದ್ದಾರೆ. ಇದು ಖಂಡನೀಯ. ಅವರು ಅಂತರಿಕ್ಷಕ್ಕೆ ಸಂಬಂಧಿಸಿದ ಸಂಸ್ಥೆಯ ಮುಖ್ಯಸ್ಥರಾಗಲು ಅನರ್ಹರಾಗಿದ್ದು ಅವರನ್ನು ಈ ಕೂಡಲೇ ಆ ಸ್ಥಾನದಿಂದ ವಜಾ ಮಾಡಬೇಕೆಂದು ರಾಷ್ಟ್ರಪತಿಗೆ ಮನವಿ ಸಲ್ಲಿಸಿದ್ದೇವೆ.

ನಮ್ಮದು ಜಾತ್ಯತೀತ ಗಣರಾಜ್ಯ ಎಂಬುದನ್ನು ಅವರು ಮರೆತಿರುವಂತಿದೆ. ಹೀಗೆ ಒಂದು ಧರ್ಮಕ್ಕೆ ಸೇರಿದ ದೇಗುಲದಲ್ಲಿ ಸರ್ಕಾರಿ ಸ್ವಾಮ್ಯದ ಸಂಸ್ಥೆಯ ಮುಖ್ಯಸ್ಥರೊಬ್ಬರು ಪೂಜೆ ಸಲ್ಲಿಸುವುದು ಅಕ್ಷಮ್ಯ ಅಪರಾಧವಾಗಿದೆ. ನಮ್ಮ ಸಂವಿಧಾನದ 51ಎ ಎಚ್ ಕಲಂ ವೈಜ್ಞಾನಿಕ ಮನೋಭಾವವನ್ನು, ವಿಚಾರವಾದವನ್ನು ಮತ್ತು ಮಾನವತಾವಾದವನ್ನು ಹೆಚ್ಚಿಸುವುದು ಎಲ್ಲಾ ಪ್ರಜೆಗಳ ಕರ್ತವ್ಯ ಎಂದು ಹೇಳಿರುವುದನ್ನೂ ಅವರು ಮರೆತಿರುವಂತಿದೆ. ವಿಜ್ಞಾನದ ಯಾವ ಚಿಂತನೆ ಹೀಗೆ ಉಪಗ್ರಹದ ಪ್ರತಿಕೃತಿಯನ್ನು ಇಟ್ಟು ಪೂಜಿಸಬೇಕೆಂದು ಹೇಳಿದೆಯೇ ನಾನರಿಯೇ.



ಅವರೇ ಹೇಳಿರುವಂತೆ ನಾವು ಸೌರಮಂಡಲದ ಬಗ್ಗೆ ಅರಿತುಕೊಳ್ಳುವುದು ಇನ್ನೂ ಇದೆ. ಆದರೆ ಸರ್ಕಾರದ ಭಾಗವಾದ ಒಂದು ಮಹತ್ತರ ಸಂಸ್ಥೆಯ ಮುಖ್ಯಸ್ಥರಾಗಿರುವ ಈ ವ್ಯಕ್ತಿ ಉಪಗ್ರಹದ ಯಶಸ್ವಿ ಉಡಾವಣೆಗೆ ಒಂದು ನಿರ್ದಿಷ್ಟ ದೇವರಿಗೆ ಪೂಜೆ ಸಲ್ಲಿಸಿರುವುದರಿಂದ ಆತ ಎಂತಹ ಮೂರ್ಖ ಎಂದು ಎಲ್ಲರಿಗೂ ಅರ್ಥವಾಗುತ್ತದೆ. ಅಕಸ್ಮಾತ್ ಈ ಉಡಾವಣೆ ವಿಫಲಗೊಂಡಿದ್ದರೆ ಯಾರನ್ನು ದೂಷಿಸಬೇಕಿತ್ತು? ವಿಜ್ಞಾನಿಗಳನ್ನೋ ಅಥವಾ ದೇವರನ್ನೋ?

ಆತ ನಮ್ಮ ಸಂವಿಧಾನಕ್ಕೆ ಅವಮಾನ ಮಾಡಿರುವುದರಿಂದ ಅವರನ್ನು ಕೂಡಲೇ ವಜಾ ಮಾಡಬೇಕಿದೆ. ಆತ ಹಾಗೊಮ್ಮೆ ವೈಯಕ್ತಿಕ ನಂಬಿಕೆಯಿಂದ ದೇವಸ್ಥಾನಕ್ಕೆ ಹೋಗಿದ್ದರೆ ಅದು ಖಾಸಗಿ ವಿಷಯವಾಗಿರುತ್ತಿತ್ತು ಮತ್ತು ಯಾರೂ ಆಕ್ಷೇಪಿಸುತ್ತಿರಲಿಲ್ಲ, ಆದರೆ ಆತ ಸರ್ಕಾರಕ್ಕೆ ಮತ್ತು ವಿಜ್ಞಾನಕ್ಕೆ ಸಂಬಂಧಿಸಿದ ವಿಷಯದಲ್ಲಿ ಹೋಗುವ ಮೂಲಕ ನಮ್ಮ ಸಂವಿಧಾನದ ಆಶಯಗಳನ್ನು ಉಲ್ಲಂಘಿಸಿದ್ದಾರೆ.

- ನರೇಂದ್ರ ನಾಯಕ್,
ಅಧ್ಯಕ್ಷ, ರಾಷ್ಟ್ರೀಯ ವಿಚಾರವಾದಿ
ಒಕ್ಕೂಟ, ಮಂಗಳೂರು

ಮುಡಾ ಮುಂಡಾಯಿಸಿದವರಿಗೆ ಸಿಬಿಐ 'ಉರುಳು'

ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿರುವ ಆರ್ಥಿಕ ಅವ್ಯವಹಾರ ಹಾಗೂ ನಿವೇಶನ ಹಂಚಿಕೆಯಲ್ಲಿ ಅಕ್ರಮ ನಡೆಸಿರುವ ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ವಿರುದ್ಧ ಸಿಬಿಐ ತನಿಖೆ ನಡೆಸಲು ಸರ್ಕಾರ ಉದ್ದೇಶಿಸಿರುವ ಹಿನ್ನೆಲೆಯಲ್ಲಿ ಮಂಡ್ಯದ ಪಶ್ಚಿಮ ಠಾಣೆಯಲ್ಲಿ ಮುಡಾ ಆಯುಕ್ತ ಮಥಾಯ್ ದೂರು ನೀಡಿದ್ದಾರೆ. ಆಗಿನ ಮುಡಾ ಆಯುಕ್ತ ಡಿ. ಉಪೇಂದ್ರ ನಾಯಕ್ ಸೇರಿದಂತೆ ಘಟಾನುಘಟಿಗಳ ಮೇಲೂ ಕಂಪ್ಲೇಂಟ್ ದಾಖಲಾಗಿದ್ದು ಸೈಟು ನುಂಗಿದವರು ಅಕ್ಷರಶಃ ಕಕ್ಕಾಬಿಕ್ಕಿಯಾಗಿದ್ದಾರೆ.



ವಿದ್ಯಾನಾಗೇಂದ್ರ

ಮಂಡ್ಯ ಹಾಗೂ ರಾಮನಗರ-ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಕ್ರಮವಾಗಿ ನಡೆದ ಐದು ಕೋಟಿ ಮತ್ತು 16 ಕೋಟಿ ರೂ. ಅವ್ಯವಹಾರ ವಿಧಾನಸಭೆಯಲ್ಲೂ ಪ್ರತಿಧ್ವನಿಸಿದ ಬಳಿಕ ಸರ್ಕಾರ ತನಿಖೆಯನ್ನು ಸಿಬಿಐಗೆ ವಹಿಸುವುದಾಗಿ ಘೋಷಿಸುವುದರ ಜೊತೆಗೆ ಮುಡಾದಲ್ಲಿ ನಡೆದಿದ್ದ 107 ಸೈಟುಗಳ ಅಕ್ರಮ ಹಂಚಿಕೆಯನ್ನೂ ಸಿಬಿಐಗೆ ವರ್ಗಾಯಿಸುವುದಾಗಿ ಹೇಳಿದೆ. ಪಕ್ಷಾತೀತವಾಗಿ ನಡೆದ ಈ ಸೈಟು ದರೋಡೆಯಲ್ಲಿ ಯಾವೆಲ್ಲಾ ಅಧಿಕಾರಿಗಳದ್ದು ಎಷ್ಟೆಷ್ಟು ಪಾಲಿದೆ ಎಂಬುದು ಬಯಲಾಗಬೇಕೆಂದರೆ ಅಕ್ರಮದಲ್ಲಿ ಭಾಗಿಯಾದ ಅಧಿಕಾರಿ ಹಾಗೂ ಸಿಬ್ಬಂದಿಗಳ ವಿರುದ್ಧ ದೂರು ನೀಡುವಂತೆ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಟಿ.ಎಂ.ವಾಸುದೇವರಾವ್ ಈಗಿನ ಮುಡಾ ಆಯುಕ್ತರಿಗೆ ಪತ್ರ ಬರೆದಿದ್ದರು. ಅದರಂತೆ ಆಗಿನ ಮುಡಾ ಆಯುಕ್ತ ಡಿ.ಉಪೇಂದ್ರನಾಯಕ್ ಹಾಗೂ ಇತರರ ವಿರುದ್ಧ ತನಿಖೆ ನಡೆಸಿ ಕಾನೂನುರೀತಿ ಕ್ರಮ ಕೈಗೊಳ್ಳುವಂತೆ ಕೋರಿ ಮೊಕದ್ದಮೆ ಸಂಖ್ಯೆ 370/13ರಡಿಯಲ್ಲಿ ಕಲಂ 406,409, 420, ಖ/ತಿ 34 ಐಪಿಸಿ ಕಲಂನಡಿ ಕೇಸು ದಾಖಲಾಗಿದೆ. ಎಫ್‌ಐಆರ್ ದಾಖಲಾಗುತ್ತಿದ್ದಂತೆ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ರಾಮನಗರ-ಚನ್ನಪಟ್ಟಣ ಪ್ರಾಧಿಕಾರದಲ್ಲಿ ಹಣದ ಅವ್ಯವಹಾರ ಹಾಗೂ ನಿವೇಶನ ಹಂಚಿಕೆ ಅಕ್ರಮದಲ್ಲಿ ಭಾಗಿಯಾದ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಜನಪ್ರತಿನಿಧಿಗಳಲ್ಲಿ ಭೀತಿ ಶುರುವಾಗಿದೆ.

ಸಿಕ್ಕವರಿಗೆ ಸೀರುಂಡೆ

ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷೆಯಾಗಿದ್ದ ವಿದ್ಯಾನಾಗೇಂದ್ರರ ಅವಧಿಯಲ್ಲಿ ನಿವೇಶನವನ್ನು ಸಿಕ್ಕವರಿಗೆ ಸೀರುಂಡೆ ಎಂಬಂತೆ ಬೇಕಾಬಿಟ್ಟಿ ಹಂಚಲಾಗಿತ್ತು. ಪ್ರಾಧಿಕಾರದ ಕಾನೂನು ಹಾಗೂ ಸರ್ಕಾರದ ಆದೇಶವನ್ನು ಗಾಳಿಗೆ ತೂರಿ, ಪರತ್ತುಗಳನ್ನು ಉಲ್ಲಂಘಿಸಿ ನಿವೇಶನ ಇದ್ದವರಿಗೇ ನಿವೇಶನಗಳನ್ನು ನೀಡಲಾಗಿತ್ತು. ಅಧ್ಯಕ್ಷೆ ವಿದ್ಯಾನಾಗೇಂದ್ರ, ನಿರ್ದೇಶಕ ಎಂ.ಜೆ.ಚಿಕ್ಕಣ್ಣ ಆಗಿನ ಆಯುಕ್ತ ಉಪೇಂದ್ರನಾಯಕ್, ಪ್ರಭಾರ ಆಯುಕ್ತ ನಿಸಾರ್ ಅಹಮದ್, ಎಇಇ ನಾಗರಾಜು ಸೇರಿದಂತೆ ಹಲವರು ತಮ್ಮ ಹೆಸರಿನಲ್ಲಲ್ಲದೆ ನೆಂಟರಿಷ್ಟರು, ಆಪ್ತರ ಹೆಸರಿಗೂ ನಿವೇಶನ ಹಂಚಿಕೊಂಡಿದ್ದರು. ಮುಡಾ ನಿವೇಶನವನ್ನು ತಿನ್ನದವರೇ ಪಾಪಿ ಎಂಬಂತೆ ಪತ್ರಕರ್ತರು, ಐಪಿಎಸ್ ಅಧಿಕಾರಿಗಳು, ರಾಜಕಾರಣಿಗಳು, ಸಂಘಟನೆಗಳ ಮುಖಂಡರು ಸೇರಿದಂತೆ ಹಲವರು ಸೈಟುಗಳನ್ನು ಅಕ್ರಮವಾಗಿ ಗಿಟ್ಟಿಸಿಕೊಂಡಿದ್ದರು. ಅಸಲಿಗೆ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ ಇರುವುದು ಮಂಡ್ಯ ಜನರಿಗೆ ಕಡಿಮೆ ದರದಲ್ಲಿ ಸೈಟು ಕೊಡಲೆಂದು.. ಆದರೆ ಬೆಂಗಳೂರು-ಮೈಸೂರಿನಲ್ಲಿ ವಾಸವಿದ್ದವರಿಗೂ ಸೈಟು ನೀಡಲಾಗಿತ್ತು.

ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಅಕ್ರಮವಾಗಿ ಸೈಟು ಪಡೆದಿರುವವರಲ್ಲಿ ಆಗ ಶಾಸಕರಾಗಿದ್ದ ಎಂ.ಶ್ರೀನಿವಾಸ್, ಸಿ.ಎಸ್.ಪುಟ್ಟರಾಜು, ಹಾಲಿ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಕೂಡ ಪ್ರಮುಖರಾಗಿದ್ದಾರೆ. ಮುಡಾ ಅಧ್ಯಕ್ಷೆ, ನಿರ್ದೇಶಕರಲ್ಲದೆ ಇವರ ವಿರುದ್ಧವೂ ಸ್ಥಳೀಯ ನ್ಯಾಯಾಲಯದಲ್ಲೂ ಮೊಕದ್ದಮೆ ದಾಖಲಾಗಿದ್ದು ಸದ್ಯಕ್ಕೆ ಜಾಮೀನು ಪಡೆದಿಟ್ಟುಕೊಂಡಿದ್ದಾರೆ. ಆರಿಸಿ ಕಳುಹಿಸಿದ ಜನರಿಗೆ ಸೈಟಿಲ್ಲದಿದ್ದರೂ ಪರವಾಗಿಲ್ಲ ತಮಗೆ ಸೈಟು ಬೇಕೆನ್ನುವ ಇಂತಹ ಜಾಯಮಾನದ ಜನಪ್ರತಿನಿಧಿಗಳಿಗೆ ಈಗಾಗಲೆ ಬೆಂಗಳೂರು, ಮೈಸೂರು, ಮಂಡ್ಯದಲ್ಲಿ ಭಾರೀ ಬಂಗಲೆಗಳೇ ಇದ್ದರೂ ಮೂಡಾ ಸೈಟಿಗೆ ಮುಗಿಬಿದ್ದು ಮುಕ್ಕಿದ್ದರು. ಅವರ ಸೈಟು ದರೋಡೆಯ ಪ್ರಖರತೆ ಎಂತದ್ದಿತ್ತೆಂದರೆ ಬಂಧುಗಳಿಗೆ ಮಾತ್ರವಲ್ಲದೆ ತಮ್ಮ ಗನ್‌ಮ್ಯಾನ್, ಡ್ರೈವರ್‌ಗಳಿಗೂ ಸೈಟು ಕೊಡಿಸಿದ್ದರು.


ಎಂ.ಜೆ.ಚಿಕ್ಕಣ್ಣ

ಮುಡಾ ಸೈಟು ನುಂಗುವವರ ದಾಹದ ಎದುರು ನಿಯಮ, ಕಾನೂನುಗಳೆಲ್ಲ ಕಾಲಕಸ ಎನಿಸಿದ್ದವು. ಸಹಕಾರಿ ನಿಯಮಗಳ ಪ್ರಕಾರ ನಿವೇಶನ ಪಡೆಯಬಯಸುವ ಅರ್ಜಿದಾರರು ನೀಡಿದ ದಾಖಲೆಗಳನ್ನು ಪರಿಶೀಲಿಸಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಬೇಕು. ಆದರೆ ಅಂತಹ ಯಾವ ಕಾರ್ಯಕ್ರಮವೂ ನಡೆದಿಲ್ಲ, ಪ್ರಾಧಿಕಾರದ ಸದಸ್ಯರಿಗೂ ದಾಖಲೆ ಪಡೆಯದೆ ನಿವೇಶನ ಹಂಚಿಕೆ ಮಾಡಲಾಗಿದೆ. ನಿಯಮದ ಪ್ರಕಾರ ಸದರಿ ಸದಸ್ಯರನ್ನು ಸಾಮಾನ್ಯ ಸದಸ್ಯರೆಂದು ಪರಿಗಣಿಸಬೇಕು. ವಿಶೇಷ ಪ್ರಕರಣವೆಂದು ಪರಿಗಣಿಸಿದ್ದಲ್ಲಿ ಸರ್ಕಾರದ ಅನುಮತಿ ಪಡೆಯಬೇಕು. ಆದರೆ ಅದನ್ನೂ ಮಾಡಿಲ್ಲ.

ನಿವೇಶನ ಹಂಚಿಕೆ ಮಾಡುವ ಸಂಬಂಧ ದಿನಾಂಕ 17-09-2009ರಂದು ಸಾರ್ವಜನಿಕ ಪ್ರಕಟಣೆ ಹೊರಡಿಸಿ ದಿನಾಂಕ 30-11-2009ರೊಳಗೆ ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಬೇಕೆಂದು ಮಿತಿ ನಿಗದಿಮಾಡಲಾಗಿತ್ತು. ಆದರೆ ಅರ್ಜಿ ಸ್ವೀಕರಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೂ ಮೊದಲೇ, ಅಂದರೆ ದಿನಾಂಕ 26-11-2009ರ ಮುಂಚೆಯೇ 107 ನಿವೇಶನಗಳನ್ನು ತರಾತುರಿಯಲ್ಲಿ ವಿಲೇವಾರಿ ಮಾಡಿದ್ದರು. 1991ರ ಹಂಚಿಕೆ ನಿಯಮ-2ರಡಿ ನಗರದಲ್ಲಿ ವ್ಯಾಪಕ ಪ್ರಸಾರದಲ್ಲಿರುವ ದೈನಂದಿನ ಪತ್ರಿಕೆಗಳಲ್ಲಿ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಪ್ರಕಟಣೆ ಹೊರಡಿಸಬೇಕು. ಆದರೆ ವ್ಯಾಪಕ ಪ್ರಚಾರದಲ್ಲಿರುವ ಪತ್ರಿಕೆಗಳಲ್ಲಿ ಹೊರಡಿಸದೆ 'ಸುದ್ದಿಸಂಘರ್ಷ' ಮತ್ತು 'ಸ್ಟಾರ್ ಆಫ್ ಮಂಡ್ಯ' ದಿನಪತ್ರಿಕೆಗಳಲ್ಲಿ ಹೊರಡಿಸುವ ಮೂಲಕವೂ ನಿಯಮವನ್ನು ಗಾಳಿಗೆ ತೂರಿದ್ದರು.

ಮಂಡ್ಯದ ಕೆರೆ ಅಂಗಳ ಸರ್ವೆ ನಂ.507ರ ವಿವೇಕಾನಂದ ನಗರ ಬಡಾವಣೆಯಲ್ಲಿ ರಚಿಸಲಾಗಿದ್ದ ವಸತಿ ನಿವೇಶನಗಳ ಪೈಕಿ ಲಭ್ಯವಿದ್ದ 107 ಬಿಡಿ ನಿವೇಶನಗಳಿಗೂ ಹಂಚಿಕೆ ಮಾಡುವಾಗ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಾಲಂ 15(ಬ)ರಂತೆ ಸರ್ಕಾರದ ಪೂರ್ವಾನುಮತಿ ಪಡೆಯಬೇಕಿತ್ತು, ಆದರೆ ಅನುಮತಿಯನ್ನು ಪಡೆಯದೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ (ನಿವೇಶನ ಹಂಚಿಕೆ) ನಿಯಮಗಳು 1991ರ ನಿಯಮ 6ನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿ ಸಾಬೀತಾಗಿದೆ.


ಮುಡಾ ಕಚೇರಿ

ಕೆಲದಿನಗಳ ಹಿಂದೆಯಷ್ಟೆ ಐದು ಕೋಟಿ ಸಾರ್ವಜನಿಕ ಹಣವನ್ನು ಕೆಬ್ಬಳ್ಳಿ ಆನಂದ್, ನಾಗಲಿಂಗಸ್ವಾಮಿ, ಮುಡಾ ಕಮಿಷನರ್ ಶಿವರಾಂ ಜೊತೆ ಸೇರಿ ವಂಚಿಸಿದ ಪ್ರಕರಣ ಬಯಲಾಗಿತ್ತು, ಈ ಪ್ರಕರಣದಲ್ಲಿ ಅಷ್ಟೂ ಜನ ಜೈಲಿನಲ್ಲಿ ಮುದ್ದೆ ಮುರಿದಿದ್ದರು.

ಇತ್ತೀಚೆಗಷ್ಟೇ ನ್ಯಾಯಾಲಯ ಮೂವರಿಗೂ ಜಾಮೀನು ನೀಡಿದೆ. ಆದರೆ ರಾಮನಗರ- ಚನ್ನಪಟ್ಟಣ ಪ್ರಾಧಿಕಾರದ ವಂಚನೆ ಪ್ರಕರಣದಲ್ಲಿ ಕೆಬ್ಬಳ್ಳಿ ಆನಂದ್ ಹಾಗೂ ನಾಗಲಿಂಗಸ್ವಾಮಿಗೆ ಜಾಮೀನು ಸಿಕ್ಕಿಲ್ಲ. ಹಾಗಾಗಿ ಶಿವರಾಂ ಮಾತ್ರವೇ ಜೈಲಿನಿಂದ ಬಿಡುಗಡೆ ಆಗಿದ್ದ. ಅದರ ಬೆನ್ನಿಗೇ ಮುಡಾ ನಿವೇಶನ ಹಂಚಿಕೆಯ ಹಗರಣವನ್ನೂ ತನಿಖೆಗೆ ಒಳಪಡಿಸಲು ಸರ್ಕಾರ ಮುಂದಾಗಿರುವುದರಿಂದ ಕಳ್ಳತನದಲ್ಲಿ ಸೈಟು ತಿಂದವರೆಲ್ಲಾ ಅವುಗಳನ್ನು ವಾಪಾಸ್ಸು ಮಾಡುವುದರ ಜೊತೆಗೆ ಶಿಕ್ಷೆ ಅನುಭವಿಸುವ ಭಯದಲ್ಲಿದ್ದಾರೆ. ಈಗಲಾದರೂ ಸಿಬಿಐ ತನಿಖೆ ನಡೆದು ಅರ್ಹರಿಗೆ ಸೈಟು ಸಿಗುವಂತಾಗುತ್ತದೆಯೇ ಎಂಬುದು ಮಂಡ್ಯ ಜನರ ನಿರೀಕ್ಷೆ.

■ ನಾಗೇಶ್

ಬಚಾಯೆಂಗೇ ಭಾರತ್, ಹಟಾಯೆಂಗೇ ಮೋದಿ

ಕಳೆದ ಸಂಚಿಕೆಯಲ್ಲಿ ಮೋದಿಯ ಬೆಂಗಳೂರು ಆಗಮನಕ್ಕೆ ವಿರೋಧಿಸಿ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯಿಂದ ಪ್ರತಿಭಟನೆ ಹಾಗೂ ಇತರೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಈ ದೇಶದ ಜನರಿಗೆ ಕೊಡುವ ನೈತಿಕ ಬೆಂಬಲವೆಂದು ನಾನು ಭಾವಿಸಿದ್ದೇನೆ. ಜೊತೆಗೆ ಸಾಂಸ್ಕೃತಿಕ ತಂಡಗಳ ಅಗತ್ಯತೆಯನ್ನು ಅಲ್ಲಗಳೆಯಲಾಗದು. ಈ ಹಿನ್ನೆಲೆಯಲ್ಲಿ 'ಭಾರತ್ ಬಚಾವೋ-ಮೋದಿ ಹಟಾವೋ' ಎಂಬ ಹಾಡನ್ನು ಕಾರ್ಯಕ್ರಮಕ್ಕೆ ಮೋಬಲೈಜ್‌ಗೆ ಬಳಸಿಕೊಳ್ಳಬಹುದೆಂದು ಭಾವಿಸಿ ಇದನ್ನು ರಚಿಸಿದ್ದೇನೆ.

ವಿಸೂ: ದೇಶದಲ್ಲಿ ಅಲ್ಲೋಲಕಲ್ಲೋಲ ಎಬ್ಬಿಸಿದ್ದ "ಬನಾಯೇಂಗೆ ಮಂದಿರ್" ಎಂಬ ಹಾಡಿನ ರಾಗದಲ್ಲಿ ಈ ಹಾಡು ಇರುತ್ತದೆ. ಈ ಹಾಡಿನ ರಾಗ ಮೋದಿಯ ಪ್ರಧಾನಮಂತ್ರಿಯ ಕನಸನ್ನು ತಿರುಕನ ಕನಸಾಗಿಸುವಲ್ಲಿ ಯಶಸ್ವಿಯಾಗಬಹುದೆಂಬ ನಂಬಿಕೆ ಇದೆ.



ದೇಶದ ಪ್ರಧಾನಿ ಅಭ್ಯರ್ಥಿಯಂತೆ ನರಹಂತಕ ಮೋದಿ,
ಯೋಚಿಸಿ ನೋಡಿ ನಾಚಲೇ ಬೇಡಿ ಮೋದಿಯ ಆ ಮೋಡಿ,
ಮಾತಿನ ಮೋಡಿ ಮಾಡಿದ ಮೋದಿ ವಿಷಕಂಠಕ ನೋಡಿ

ಗುಜರಾತ ಮಾದರಿ ದೇಶಕ್ಕೆ ಮಾದರಿ ಗೋಧ್ರಾದ ಸಮಾಧಿ

ಮೋದಿಯ ಮೋಡಿ ಬಿಜೆಪಿ ಹಾದಿ ಬಣ್ಣ ಬಣ್ಣದ ಜೋಡಿ
ಹಿಂದೂ ಮುಸಲ್ಮಾನ್ ದಲಿತ ಕ್ರೈಸ್ತರ ಗೋರಿಗೆ ಬುನಾದಿ

ಖಾಸಗೀದಾರರ ಕಾರ್ಪೊರೇಟರ ಕಾಣಿಕೆ ಋಣ ಮೋದಿ,
ಬಂಡವಾಳಿಗರ ಬಡಾಯಿಕೋರರ ಬಲಭುಜ ಈ ಮೋದಿ,
ಪ್ರಧಾನಿ ಮಂತ್ರಿ ಪಟ್ಟ ಸಿಕ್ಕರೇ ಪುಢಾರಿ ನರಮೋದಿ

ಮಲಹೊರ್‍ವ ಪದ್ಧತಿ ಮಲೀನವಲ್ಲಾ ಮಂತ್ರ ಎಂದ ಕೋದಿ,
ಗುಜರಾತ್‌ನಲ್ಲಿ ಮಲಹೊರೋ ಪದ್ಧತಿ ಚಾಲ್ತಿ ಹೈತೆ ನೋದಿ,
ಗರ್ಭಗುಡಿಯ ಪೂಜಾರಿಗೋಲಿಸಿ ಕರ್ಮತೊಳೆದ ರಾಡಿ

ನರಹಂತ ಮೋದಿ ನರಮೇಧ ಕಾರಿಗೆ ಸಿಕ್ಕ ಕುನ್ನಿ ನಾವು,
ರೋಡಿನ ಅಪಘಾತ ಮೋದಿ ಚೆಲ್ಲಾಟ ಜನಪಾಲಿಗೆ ಪರದಾಟ,
ನಾಡಿನ ಜನರೇ ಜಾಡು ತಪ್ಪಿದರೆ ನಾಡಿಗೇ ನರಳಾಟ

ನರ್ಮದ ತೀರದ ರೈತರ ಭೂಮಿಗೆ ಕಣ್ಣಾಕಿದ ಮೋದಿ,
ದುಡಿಯುವ ಕೈಗೆ ಕೋಳ ತೊಡಿಸಿ ತುತ್ತು ಕೂಳು ಕಸಿದ ಕೋದಿ,
ಉಕ್ಕಿನ ಮೂರ್ತಿ ಹೆಸರಲ್ಲಿ ಒಕ್ಕಲೆಬ್ಬಿಸಿದ ಮೋದಿ

ಮೋದಿಯ ಮೋಡಿಯ ಮಾತಿನ ರೇಟು ಹತ್ತು ರೂಪಾಯಿ ನೋಟು,
ನೂರಾರು ಕೋಟಿ ಭಾರತೀಯರಿಗೆ ಓಟೊಂದೇ ಸೀಟು,
ಮಾತಿನ ರೇಟು ಓಟಿಗೆ ನೋಟು ಹಕ್ಕಿಗೆ ಎದುರೇಟು

ಕೇಳಿದ ಮೇಲೆ ಸಾರಿ ಹೇಳತ್ತೀವಿ ಮುತ್ತಿನ ಮಾತೊಂದಾ,
ಮೋದಿ ಪ್ರಧಾನಿಯಾದರೆ ದೇಶ ನಿತ್ಯ ನರಕವೆಂದಾ,
ನಾಡಿನ ಜನರಿಗೆ ಸಾರಿ ಹೇಳಿರಿ ಸತ್ಯದ ಸುಳಿವೊಂದಾ

■ ದಾನಪ್ಪ.ಸಿ.ನಿಲೋಗಲ್, ಮಸ್ಕಿ, ರಾಯಚೂರು

ಮೋದಿ ಸೋಲಿಸಿ ಭಾರತ ಉಳಿಸಿ

ನವೆಂಬರ್ 17 ರಂದು ನರೇಂದ್ರ ಮೋದಿ ಬೆಂಗಳೂರಿಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯು ಹಲವು ನಿರ್ಣಯಗಳನ್ನು ತೆಗೆದುಕೊಂಡಿದೆ. ಅವುಗಳು ಹೀಗಿವೆ:

* 'ನರಹಂತಕ ನರೇಂದ್ರ ಮೋದಿ - ಹಿಂತಿರುಗು', 'ಕರ್ನಾಟಕ ಗುಜರಾತ್ ಅಲ್ಲ', 'ಮೋದಿ ಸೋಲಿಸಿ ಭಾರತ ಉಳಿಸಿ' ಎಂಬ ಘೋಷಣೆಯೊಂದಿಗೆ ನವೆಂಬರ್ 16ರಂದು ರಾಜ್ಯಾದ್ಯಂತ ವಿವಿಧ ನಗರಗಳಲ್ಲಿ, ಜಿಲ್ಲಾ ಕೇಂದ್ರಗಳಲ್ಲಿ ಎಲ್ಲ ಜನಪರ ಸಂಘಟನೆಗಳು ಮತ್ತು ಸಮುದಾಯಗಳನ್ನು ಒಟ್ಟು ಸೇರಿಸಿಕೊಂಡು ಬೃಹತ್ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಬೇಕು.
* ನವೆಂಬರ್ 17 ರಂದು ಬೆಂಗಳೂರಿನ ಬನ್ನಪ್ಪ ಪಾರ್ಕ್‌ನಿಂದ ಟೌನ್ ಹಾಲ್‌ತನಕ ಮೆರವಣಿಗೆ ನಡೆಸಿ ಟೌನ್‌ಹಾಲ್ ಮುಂದೆ ಸಮಾವೇಶಗೊಳ್ಳಬೇಕು.
* ಪ್ರತಿಭಟನೆ ಕಾರ್ಯಕ್ರಮಗಳಿಗೆ ಪೊಲೀಸರು ಅನುಮತಿ ನೀಡದಿದ್ದರೂ ಸಹ ಬಂಧನಕ್ಕೊಳಗಾಗಿ ಪ್ರತಿಭಟಿಸಬೇಕು.
* ಮೋದಿಯ ಅಭಿವೃದ್ಧಿ ಮಾದರಿಯನ್ನು ಎಕ್ಸ್‌ಪೋಸ್ ಮಾಡುವ ಕರಪತ್ರ, ಪೋಸ್ಟರ್‌ಗಳು, ಇನ್ನಿತರ ಪರಿಣಾಮಕಾರಿ ವಿಧಾನಗಳನ್ನು ಅಳವಡಿಸಬೇಕು.

ರಾಜ್ಯದ ವಿವಿಧ ಕಡೆಗಳಲ್ಲಿ ನಡೆಯಲಿರುವ ಈ ಪ್ರತಿಭಟನಾ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಇಚ್ಛಿಸುವವರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:


ಕೆ.ಎಲ್.ಅಶೋಕ್: 9448256216
ರಾಬಿನ್: 8123034361


ನವೆಂಬರ್ 16 ರಾಜ್ಯಾದ್ಯಂತ
ನವೆಂಬರ್ 17 ಬೆಂಗಳೂರಿನಲ್ಲಿ


ಬೃಹತ್ ರ್‍ಯಾಲಿ


ಪ್ರತಿಭಟನೆ ಇಲ್ಲವೆ ಬಂಧನ
ಬನ್ನಿ... ಭಾಗವಹಿಸಿ

ಶಿವಮೊಗ್ಗ-ಕೆನರಾ: ಜೆಡಿಎಸ್‌ಗೆ 'ಬಂ' ನಾಮವೇ ಬಲ!


ರಾಮಕೃಷ್ಣ ಹೆಗ್ಡೆ


ಎಸ್.ಬಂಗಾರಪ್ಪ



ಮಧುಬಂಗಾರಪ್ಪ


ಶಕುಂತಲಾ ಬಂಗಾರಪ್ಪ


ಕುಮಾರ್‌ಬಂಗಾರಪ್ಪ


ಗೀತಾ ಶಿವರಾಜ್‌ಕುಮಾರ್


ಕುಮಾರಸ್ವಾಮಿ


ದೇವೇಗೌಡ

ಶಿವಮೊಗ್ಗ ಮತ್ತು ಉತ್ತರ ಕನ್ನಡ ಲೋಕಸಭಾ ಕ್ಷೇತ್ರಗಳೆರಡು ಜೆಡಿಎಸ್‌ನ ದೊರೆ ಮತ್ತು ಮರಿ ದೊರೆಯನ್ನು ಬಿಟ್ಟೂಬಿಡದೆ ಕಾಡುತ್ತಿವೆ. ಈ ಎರಡೂ ಕ್ಷೇತ್ರದಲ್ಲಿ ಇನ್ನೂ ಇರುವ ದಿವಂಗತ ಬಂಗಾರಪ್ಪರ ಜಾದೂ ಪ್ರಭಾವ ದೇವೇಗೌಡ ಮತ್ತು ಕುಮಾರಸ್ವಾಮಿಗೆ ಏನೇನೋ ಲೆಕ್ಕಾಚಾರ-ಸಮೀಕರಣ-ಸೂತ್ರ ಹಾಕಿಸುತ್ತಿದೆ. ಉತ್ತರ ಕನ್ನಡದಲ್ಲಂತೂ 'ಬಂ' ಪ್ರೇತದ ಜತೆಗೇ ಹೆಗಡೆಜೀ ಪ್ರೇತವೂ ಜೆಡಿಎಸ್‌ಗೆ 'ಮೋಕ್ಷ' ನೀಡಬಹುದೆಂದು ಭಾವಿಸಿದ್ದಾರೆ ಅಪ್ಪ-ಮಗ. ಹಾಗಾಗಿ ಈ ಎರಡೂ ಪಾರ್ಲಿಮೆಂಟ್ ಕ್ಷೇತ್ರಗಳನ್ನು ಗಂಭೀರವಾಗಿ ಪರಿಗಣಿಸಿರುವ ಜೆಡಿಎಸ್ ಯಜಮಾನರು 'ಬಂ' ಮಗ ಮಧು ಮತ್ತು ಹೆಗಡೆಜೀ ದಾಯಾದಿ ಮೊಮ್ಮಗ ಶಶಿಭೂಷಣ ಹೆಗಡೆಗಳನ್ನು ಅಶ್ವಮೇಧದ ಕುದುರೆಗಳಾಗಿ ಬಿಡುವ ಸ್ಕೆಚ್ ಹಾಕಿದ್ದಾರೆ.

ಕೆನರಾ ಮತ್ತು ಶಿವಮೊಗ್ಗದಲ್ಲಿ ಜೆಡಿಎಸ್ ಕಟ್ಟಿ ಬೆಳೆಸಲು ಮಧು 'ಬಂ' ಬೆವರಿಳಿಸುತ್ತಿದ್ದಾರೆ. ಉತ್ತರ ಕನ್ನಡ 'ಬಂ'ರಿಗೆ ಹೆಣ್ಣು ಕೊಟ್ಟ ಮಾವನ ಮನೆ. ಅಂದರೆ ಮಧುಗೆ ಅಜ್ಜನ ಊರು. 'ಬಂ' ಬೆಂಬಲಿಗರು ಈ ಮಧುನಲ್ಲಿ 'ಗುರು' ಕಾಣಲು ಪ್ರಯತ್ನಿಸುತ್ತಿದ್ದಾರೆ. ಕೆನರಾದಲ್ಲಿ 'ಬಂ'ರ ಜಾತಿ (ದೀವರು) ಬಂಧುಗಳು ನಿರ್ಣಾಯಕ ಸ್ಥಾನದಲ್ಲಿದ್ದಾರೆ. ಈ ದೀವರ ಜತೆ ಮುಸ್ಲಿಮ್ ಅಥವಾ ಹಾಲಕ್ಕಿ ಒಕ್ಕಲಿಗರನ್ನು ಸೆಳೆದರೆ ಜೆಡಿಎಸ್ ಗೆಲುವು ಸುಲಭ ಎಂಬ ಲೆಕ್ಕಾಚಾರ ಕುಮ್ಮಿಯದು. ಹಾಗೆಯೇ ಹೆಗಡೆಜೀಯ ರಾಜಕೀಯ ವಾರುಸುದಾರ ಎಂದೇ ಹೆಗಡೆ ಅಭಿಮಾನಿಗಳಾದ ಬ್ರಾಹ್ಮಣರು ಭಾವಿಸಿರುವ ಸಿದ್ದಾಪುರದ ಚಾಕಲೇಟ್ ಮಾಣೀ ಶಶಿಭೂಷಣ ಹೆಗಡೆ ಮುಂದಿಟ್ಟುಕೊಂಡರೆ ಒಂದಿಷ್ಟು ಮತಬರಬಹುದೆಂಬ ದೂರಾಲೋಚನೆ. ಶಿವಮೊಗ್ಗೆಯ ಲ್ಲಂತೂ ಮಧು 'ಬಂ'ರೇ ಜೆಡಿಎಸ್‌ಗೆ ನಾಯಕಾಗ್ರೇಸ. ಅಪ್ಪನ ನಾಮವೇ ಆತನ ಸರ್ವಸ್ವ.

ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಶಿವಮೊಗ್ಗದಲ್ಲಿ ಮೂರು ಸ್ಥಾನ 'ಆಚಾನಕ್' ಗೆದ್ದಿರುವ ಜೆಡಿಎಸ್ ತೀರ್ಥಹಳ್ಳಿ ಮತ್ತು ಸಾಗರದಲ್ಲಿ ಸಾಕಷ್ಟು ಮತ ಬಾಚಿದೆ. ಇದಕ್ಕೆಲ್ಲ ಶಾಸಕ ಕ್ಯಾಂಡಿಡೇಟ್‌ಗಳ ಸ್ಥಳೀಯ ವರ್ಚಸ್ಸು ಕಾರಣವೇ ಹೊರತು ದೇವೇಗೌಡ-ಕುಮಾರಸ್ವಾಮಿ ಇಮೇಜು ಅಲ್ಲ. ಈ ಶಾಸಕರ ಬಲ ಮತ್ತು 'ಬಂ' ನಾಮ ಮಹಿಮೆ ಸೇರಿಕೊಂಡರೆ ಶಿವಮೊಗ್ಗದಲ್ಲಿ ಗೆಲುವು ಸಿಗುತ್ತದೆಂದು ಕುಮ್ಮಿ ಹೇಳುತ್ತಿದ್ದಾರೆ. ಹಾಗಿದ್ದರೆ ಕ್ಯಾಂಡಿಡೇಟ್ ಯಾರು? 'ಬಂ' ವಂಶಸ್ಥರಲ್ಲೇ ಒಬ್ಬರು ಅಭ್ಯರ್ಥಿಯಾದರಷ್ಟೆ ಚಾನ್ಸ್ ಎಂಬ ರಾಜಕಾರಣ ಸಮೀಕರಣ ಗೌಡ-ಮರಿಗೌಡ ಇಬ್ಬರಿಗೂ ಖಾತ್ರಿಯಾಗಿದೆ.

ಮೊದಲು 'ಬಂ' ಮಡದಿ ಶಕುಂತಲಾರನ್ನೇ ಅಖಾಡಕ್ಕೆ ಇಳಿಸಲು ದೇವೇಗೌಡರ ಗ್ಯಾಂಗ್ ನಿರ್ಧರಿಸಿತ್ತು. ಆದರೆ ಆಕೆ ತಾನೊಲ್ಲೆ ಎಂದರು. "ಅಮ್ಮನಿಗೆ ವಯಸ್ಸಾಗಿದೆ... ಅವರು ಅದ್ಕೆ ಒಪ್ಪುತ್ತಿಲ್ಲ..." ಎಂದು ಮಧು ದೊರೆಗಳಿಗೆ ಅರುಹಿದರು. ಆಗ ದೊಡ್ಡಗೌಡರು ರಾಗ ಬದಲಿಸಿದರು. "ಇಲ್ಲಿಲ್ಲ... ನಾವು ಶಕುಂತಲಾರ ಬಗ್ಗೆ ಯೋಚಿಸಿಯೇ ಇಲ್ಲ... ಅವರಲ್ಲ ಕ್ಯಾಂಡಿಡೇಟ್" ಎಂದು ಟವಲು ಕುಡುಗಿದರು. ಆಗ ಸಿನೆಮಾ ನಂಟಿರುವ ಕುಮ್ಮಿಗೆ ನಟ ಶಿವರಾಜ್‌ಕುಮಾರ್ ಮಡದಿ ಗೀತಾ ಯೋಗ್ಯ ಅಭ್ಯರ್ಥಿಯಾಗಿ ಕಂಡರು. ವರನಟ ರಾಜ್‌ಕುಮಾರ್ ಸೊಸೆ ಮತ್ತು ಪ್ರಚಂಡ ರಾಜಕಾರಣಿಯಾಗಿದ್ದ 'ಬಂ'ರ ದೊಡ್ಡ ಮಗಳು ಗೀತಾ. ಹೀಗಾಗಿ ಆಕೆ ಪ್ರಬಲ ಪೈಪೋಟಿ ನೀಡುತ್ತಾರೆ. ಜತೆಗೆ ಗಂಡನ ಸಿನೆಮಾ ಹೊಳಪು ಸೇರಿಕೊಂಡು ಗೀತಾ ಗೆಲ್ತಾರೆಂದು ಜೆಡಿಎಸ್ ಬಿಡಾರದಲ್ಲಿ ಹಗಲಿರುಳೂ ಚರ್ಚೆಗಳಾದವು. ಆದರೆ ಅದ್ಯಾಕೋ ಶಿವರಾಜ್‌ಕುಮಾರ್ ಅಷ್ಟು ಸಕಾರಾತ್ಮಕವಾಗಿ ಕುಮ್ಮಿಗೆ ಸ್ಪಂದಿಸಲಿಲ್ಲ.

ಆಗ ಇದಕ್ಕೆ ಸಮಾನಾಂತರವಾಗೇ ಶಾಸಕ ಮಧುವನ್ನೇ ಯಾಕೆ ಕಣಕ್ಕಿಳಿಸಬಾರದೆಂಬ ಯೋಚನೆಯೂ ದೇವೇಗೌಡರ ತಲೆಯಲ್ಲಿ ಬಂತು. ಆತನ ತುಂಬ ಶಕ್ತಿಶಾಲಿ ಎಲೆಕ್ಷನ್ ಹಾರ್ಸ್ ಅಂಶಗಳು ಹೊಳೆದವು ದೇವೇಗೌಡರಿಗೆ. ಆದರೆ ಪಕ್ಕದ ಉತ್ತರ ಕನ್ನಡದಲ್ಲಿ ಮಧುವನ್ನು ಅಭ್ಯರ್ಥಿಯಾಗಿಸುವ ಪ್ಲಾನು ಕುಮ್ಮಿಯದಾಗಿತ್ತು. ದೇವೇಗೌಡ ಸೂಚಿಸುವ ಶಶಿಭೂಷಣ ಹೆಗಡೆಗಿಂತಲೂ ಮಧುವೇ ಗಟ್ಟಿ ಕುರಿಯಾಳು. ಅಲ್ಪ ಸಂಖ್ಯಾತರು ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಶಶಿಯನ್ನು ನಂಬಲಿಲ್ಲ. ಈ ಸಾಬರು ಮಧುಗಾದರೆ ಓಟು ಮಾಡಬಹುದೆಂಬ ನಿರೀಕ್ಷೆ ದೊಡ್ಡಗೌಡರಿಗೆ.

ಏನೇ ಆಗಲಿ. ಮಧು, ಗೀತಾ, ಶಕುಂತಲಾ ಈ ಮೂವರೊಳಗೆ ಇಬ್ಬರನ್ನು ಆಚೀಚೆ ಜೆಡಿಎಸ್ ಕ್ಯಾಂಡಿಡೇಟ್ ಮಾಡಿದರೆ ಲಾಭವಾಗುತ್ತದೆಂಬ ಮಾತುಕತೆ ಜೆಡಿಎಸ್‌ನಲ್ಲಿ ಈಗ ಜೋರಾಗಿ ನಡೆಯುತ್ತಿದೆ. ಇದಕ್ಕೆ ಪೂರಕವಾಗಿ ಮಧು ಶಿವಮೊಗ್ಗ ಮತ್ತು ಉತ್ತರ ಕನ್ನಡ ಎರಡೂ ಕಡೆ ಭರ್ಜರಿಯಾಗೇ ಓಡಾಡುತ್ತಿದ್ದಾರೆ. ಅಪ್ಪನ ಹೆಸರೇ ಬಂಡವಾಳ ಮಾಡಿಕೊಂಡು ಜೆಡಿಎಸ್ ಕಟ್ಟಲು ಬೆವರಿಳಿಸುತ್ತಿದ್ದಾರೆ. "ಶಿವಮೊಗ್ಗದಲ್ಲಿ ಯಾರೂ ಇಲ್ಲದಿದ್ರೆ ನಾನಿದ್ದೇನೆ" ಎಂದು ದೊಡ್ಡಗೌಡರಿಗೆ ಮಾಜಿ ಶಾಸಕ ಬೇಳೂರು ಗೋಪಾಲ ಕೃಷ್ಣ ಹೇಳಿ ಬಂದಿದ್ದಾರಂತೆ. ಮತ್ತೊಂದೆಡೆ ಕಾಂಗ್ರೆಸ್ ಕಿಂಗ್‌ಗಳಿಗೂ "ನಿಮ್ಮಲ್ಲಿ 'ಹಣವಂತ' ಕ್ಯಾಂಡಿಡೇಟಲ್ಲದಿದ್ರೆ ನಾನಿದ್ದೇನೆ" ಎಂದು ಹೇಳಿದ್ದಾರೆ.


ಆದರೆ ಈ ಬೇಳೂರು ಗೋ-ಪಾಲ ಕಂಡರೆ ಆತನ ಸೋದರ ಮಾವ-ಜಿಲ್ಲಾ ಕಾಂಗ್ರೆಸ್ ಯಜಮಾನ ಕಂ ಸ್ಪೀಕರ್ ಕಾಗೋಡು ತಿಮ್ಮಪ್ಪರಿಗೆ ಆಗದು. ಅವರ ಆಯ್ಕೆ ಏನಿದ್ದರೂ 'ಬಂ'ರ ಹಿರಿಯ ಮಗ ಕುಮಾರ್ ಬಂ. ಕುಬಂ ತನ್ನಲ್ಲಿ ಕಾಸಿಲ್ಲ ಎಂದು ಅಳುತ್ತಿದ್ದಾರೆ. ತಾಯಿ ಶಕುಂತಲಾರೇ ಜೆಡಿಎಸ್‌ನಿಂದ ಕ್ಯಾಂಡಿಡೇಟಾದರೆ ಆಕೆ ಎದುರು ನಿಲ್ಲುವ ಧೈರ್ಯ ಕುಬಂಗೆ ಇಲ್ಲ. ಇದೆಲ್ಲ ಕರಾರುವಾಕ್ಕಾಗಿ ನೋಡುತ್ತಿರುವ ಗ್ಯಾಸ್ ಭಂಡಾರಿ ಯಾನೆ ಮಂಜುನಾಥ ಭಂಡಾರಿ ಎಂಬ ಕಳ್ಳ ಹಣ ಕುಬೇರ ತನ್ನ ದೇವ ಪಿತ್ರ ಆಸ್ಕರ್ ಫರ್ನಾಂಡಿಸ್ ಮೊರೆ ಹೋಗಿದ್ದಾರೆ.

ದೇಗೌ-ಕುಮ್ಮಿ ಆಯ್ಕೆಗಳು ಮುಕ್ತವಾಗಿದೆ. ಮಧು-ಗೀತಾ-ಶಕುಂತಲಾ ಅಥವಾ 'ಬಂ' ಭಾಮೈದ ಭೀಮಣ್ಣ ನಾಯ್ಕರಲ್ಲಿ ಇಬ್ಬರನ್ನು ಶಿವಮೊಗ್ಗ ಮತ್ತು ಉತ್ತರ ಕನ್ನಡದಲ್ಲಿ ಕಣಕ್ಕೆ ಇಳಿಸಬೇಕು. ಆದಾಗದಿದ್ದರೆ ಮಧು ಹೇಳುವವರಿಗೆ ಚಾನ್ಸ್ ಕೊಡಬೇಕೆಂಬ ನಿರ್ಧಾರ ಜೆಡಿಎಸ್‌ನಲ್ಲಿ ಆಗಿದೆ. ಹೀಗಾಗಿ ಉತ್ತರ ಕನ್ನಡದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಭೀಮಣ್ಣ ನಾಯ್ಕ್ ಹೆಸರು ಜೆಡಿಎಸ್‌ನ ಸಂಭವನೀಯರ ಪಟ್ಟಿಯಲ್ಲಿ ಸೇರಿಕೊಂಡಿದೆ. ಈ ಭೀಮಣ್ಣ ನಾಯ್ಕ್ ದೇಶ ಪಾಂಡೆಯ ನಯವಂಚನೆಗೆ ಬಲಿಯಾಗಿ ಈಗ 'ಅಯ್ಯೋ' ಎಂದು ಅರಚುತ್ತಿರುವ ಪೆದ್ದು ಪುಢಾರಿ. ವರಸೆಯಲ್ಲಿ ಮಧು'ಬಂ'ಗೆ ಸೋದರ ಮಾವ. 'ಬಂ' ಗರಡಿಯಲ್ಲಿ ಬೆಳೆದ ಭೀಮಣ್ಣ ದೇಶಪಾಂಡೆ ತನಗೆ ಶಿರಸಿ ಅಸೆಂಬ್ಲಿ ಟಿಕೆಟ್ ಕೊಡಿಸುತ್ತಾರೆಂಬ ನಂಬಿಕೆಯಲ್ಲಿ ತನ್ನನ್ನು ಪೋಷಿಸಿ ಪುಢಾರಿ ಮಾಡಿದ ಭಾವ 'ಬಂ'ಗೆ ದೋಖಾ ಮಾಡಿದ್ದರು. ಅಸೆಂಬ್ಲಿ ಟಿಕೆಟ್ ಕೊಡಿಸ್ದದ ದೇಶಪಾಂಡೆ ತನಗೊಂದು ಕಾರ್ಪೊರೇಷನ್ ಕಾದೂ ಸಿಗದಂತೆ ಮಾಡುತ್ತಿದ್ದಾನೆಂಬ ಸಿಟ್ಟು ಭೀಮಣ್ಣನಲ್ಲಿದೆ.

ಹಾಗಾಗಿ ಆತನೇ ಜೆಡಿಎಸ್ ಕ್ಯಾಂಡಿಡೇಟಾದರೂ ಆಶ್ಚರ್ಯವಿಲ್ಲ ಎಂಬ ಗುಲ್ಲೀಗ ಎದ್ದಿದೆ. ಒಟ್ಟಿನಲ್ಲಿ 'ಬಂ'ರ ನಾಮದ ಮಹಿಮೆ ನಂಬಿ ಕೂತಿದ್ದಾರೆ ಜೆಡಿಎಸ್ ಬಾಸ್‌ಗಳು! ಮಲೆನಾಡು ಮತ್ತು ಕರಾವಳಿಯ ಕಣದಲ್ಲಿ ಈಗಲೇ ಕದನ ಕುತೂಹಲ ಕೆರಳಿದೆ!! ಒಂದೆಡೆ 'ಬಂ' ಕುಟುಂಬದ ರಾಜಕಾರಣಕ್ಕೆ ರಂಗೇರಿದರೆ; ಮತ್ತೊಂದೆಡೆ ಮ್ಯಾಗಿ-ದೇಶಪಾಂಡೆಗಳ ವಂಶೋದ್ಧಾರದ 'ಪಾಲಿಟ್ರಿಕ್ಸ್' ಪರಾಕ್ರಮ ದಿನಕ್ಕೊಂದು ಆಯಾಮ ಪಡೆಯುತ್ತಿದೆ.

■ನಹುಷ

ಕೊಂಕಣಿ ಅಕಾಡಮಿಗಾಗಿ 'ಮಾಯ್' ಮತ್ತು 'ಭಾವಜಿ' ಬಡಿದಾಟ!


ಮಾರ್ಗರೆಟ್

ಕ್ರಿಶ್ಚಿಯನ್ ಕೊಂಕಣಿ ಭಾಷೆಯಲ್ಲಿ 'ಮಾಯ್'- ಎಂದರೆ ತಾಯಿ; ಗೌಡ ಸಾರಸ್ವತ ಬ್ರಾಹ್ಮಣರ ಕೊಂಕಣಿಯಲ್ಲಿ 'ಭಾವಜಿ'- ಎಂದರೆ ಭಾವ. ಹಿರಿಯ ಹೆಂಗಸರ ಕಂಡರೆ ಕ್ರಿಶ್ಚಿಯನ್ನರು 'ಮಾಯ್' ಎಂದು ಗೌರವಿಸುತ್ತಾರೆ; ವ್ಯಾಪಾರಿ ಜಾಯಮಾನದ ಜಿಎಸ್‌ಬಿಗಳೋ ಯಾರೇ ಗಂಡಸು ಪ್ರಾಣಿ ಎದುರಾದರೂ ಸಾಕು "ಭಾವಜೀ... ಭಾವಜೀ..." ಎಂದು ಪೂಸಿ ಹೊಡೆಯುತ್ತಾರೆ. ಈ ವರದಿಯಲ್ಲಿ 'ಮಾಯ್'- ಅಂದರೆ ದಕ್ಷಿಣ ಕನ್ನಡ ಮೂಲದ ಹಾಲಿ ರಾಜಸ್ಥಾನದ ರಾಜ್ಯಪಾಲೆಯೂ- ಕೆನರಾದ ಮಾಜಿ ಎಂಪಿಣಿಯೂ ಆಗಿರುವ ಮಾರ್ಗರೆಟ್ ಆಳ್ವ; 'ಭಾವಜಿ'- ಅಂದರೆ, ಶುದ್ಧ ಜಾತಿವಾದಿ ಮಂತ್ರಿ ಆರ್. ದೇಶಪಾಂಡೆ.

ಈ ಮ್ಯಾಗಿ ಮತ್ತು ದೇಶಪಾಂಡೆಯ ದ್ವೇಷಾಸೂಯೆಯ ರಾಜಕಾರಣದ ಮೇಲಾಟ ಈಗ ಗಬ್ಬೆದ್ದು ನಾರುತ್ತಿದೆ. ಇಬ್ಬರಿಗೂ ದಿಲ್ಲಿ ಕಾಂಗ್ರೆಸ್ ಅಂತಃಪುರದಲ್ಲಿ ಆಶ್ರಯದಾತರಿದ್ದಾರೆ. ಹೀಗಾಗಿ ಇಬ್ಬರದೂ ಸೊಕ್ಕಿನ ಗುದ್ದಾಟ; ಪರಸ್ಪರ ಮುಖಭಂಗ ಮಾಡುವ ಹಠ. ಲೋಕಲ್ ಬಾಡಿಯಿಂದ ಪಾರ್ಲಿಮೆಂಟ್ ಮೆಂಬರಿಕೆ ಟಿಕೆಟ್ ಹಂಚಿಕೆಯಿಂದ ಹಿಡಿದು ನಿಗಮ-ಮಂಡಳಿ-ಅಕಾಡಮಿ ಅಧ್ಯಕ್ಷ-ಸದಸ್ಯರ ಆಯ್ಕೆ ತನಕದ ಸಕಲ ಪ್ರಕ್ರಿಯೆಯಲ್ಲಿ ಈ ಹಾವು-ಮುಂಗುಸಿ ಕಚ್ಚಾಟ ಇದ್ದದ್ದೇ. ದೇಶಪಾಂಡೆ ಯಾರದಾದರೂ ಪರವಾಗಿ ಲಾಬಿ ಮಾಡಿದರೆ ಅದಕ್ಕೆ ಪ್ರತಿಯಾಗಿ ಮ್ಯಾಗಿ ವಶೀಲಿಬಾಜಿ ಮಾಡುತ್ತಾರೆ. ಮ್ಯಾಗಿ ತನ್ನವರಿಗೆ ಯಾವುದಾದರೂ ಪೀಠ ಕೊಡಿಸಲು ಕಸರತ್ತು ಮಾಡಿದರೆ ದೇಶಪಾಂಡೆ ಕಲ್ಲು ಹಾಕುತ್ತಾರೆ. ಇವರು ಎಲ್ಲೆಲ್ಲಿ ಮುಸುಡಿ ತೂರಿಸುತ್ತಾರೋ ಅಲ್ಲೆಲ್ಲ ಕಾಂಗ್ರೆಸ್‌ಗೆ ಖತರಾ ಖಂಡಿತ.


ಈಗ ದೇಶಪಾಂಡೆ-ಮ್ಯಾಗಿ ಕೊಂಕಣಿ ಅಕಾಡಮಿ ಗದ್ದುಗೆಯಲ್ಲಿ ತಂತಮ್ಮ ಜಾತಿ ಬಂಧುಗಳನ್ನು ಪ್ರತಿಷ್ಠಾಪಿಸಲು ಹೊಂಚು ಹಾಕಿ ಸಂಚು ಮಾಡುತ್ತಿದ್ದಾರೆ. ಅಂತಿಮವಾಗಿ ತನ್ನವರಿಗೆ ಪೀಠ ಸಿಗದಿದ್ದರೂ ಚಿಂತೆಯಿಲ್ಲ, ವೈರಿಯ ಹಿಂಬಾಲಕರಿಗೆ ಚಾನ್ಸ್ ಸಿಗಲೇಬಾರದೆಂಬ ಹೊಟ್ಟೆಕಿಚ್ಚಿನ ಕಾಳಗ. ತೀರಾ ಈಚೆಗೆ ಉತ್ತರ ಕನ್ನಡದ ಕುಮಟಾ ನಗರದಲ್ಲಿ ಕರಾವಳಿ ಕ್ರಿಶ್ಚಿಯನ್ನರ ಸಮಾವೇಶವೊಂದು ನಡೆದಿತ್ತು. ಅಲ್ಲಿಗೆ ಮ್ಯಾಗಿ, ಗೃಹಮಂತ್ರಿ ಜಾರ್ಜ್, ಮಂಗಳೂರು ಶಾಸಕ ಜೆರಾಲ್ಡ್ ಲೋಬೋ... ಮತ್ತಿತರ ಅಧಿಕಾರಸ್ಥ ಕ್ರೈಸ್ತರನ್ನು ಕರೆಯಲಾಗಿತ್ತು. ಅಂದು ಶಾಸಕ ಲೋಬೋ ಕೊಂಕಣಿ ಅಕಾಡೆಮಿಗೆ ಮಂಗಳೂರಿನ ಸುಪ್ರಸಿದ್ಧ 'ಮಾಂಡ್ ಸೊಭಾಣ್' ಕೊಂಕಣಿ ಸಾಂಸ್ಕೃತಿಕ ಕಾರ್ಯಕ್ರಮ ಖ್ಯಾತಿಯ ರಾಯ್ ಕ್ಯಾಸ್ತಲಿನೋ ಎಂಬುವರಿಗೆ ಅಧ್ಯಕ್ಷರಾಗಿಸಲು ಪ್ರಯತ್ನ ನಡೆಸುವಂತೆ ಕೇಳಿಕೊಂಡರಂತೆ. ಜಿಎಸ್‌ಬಿಗಳು ಈ ಸ್ಥಾನ-ಮಾನಕ್ಕೆ ಹವಣಿಸುತ್ತಿದ್ದು ದೇಶಪಾಂಡೆ ಅಖಾಡಕ್ಕೆ ಇಳಿದಿದ್ದಾರೆಂತಲೂ ಮ್ಯಾಗಿ ಕಿವಿ ಊದಲಾಯ್ತು.

ಅಕಟಕಟಾ... ದೇಶಪಾಂಡೆ ಹೆಸರು ಕೇಳುತ್ತಿದ್ದಂತೆಯೇ ಮ್ಯಾಗಿ ಉರಿದು ಬಿದ್ದರು. "ಅದ್ಯಾಗೆ ಆತ ಮೇಲುವರ್ಗದ ಕೊಂಕಣಿಗರ ಅಕಾಡೆಮಿ ಅಧ್ಯಕ್ಷ ಮಾಡ್ತಾನೋ ನಾನೂ ನೋಡ್ತೇನೆ..." ಎಂದು ವೀರಾವೇಶದಿಂದ ಅಬ್ಬರಿಸಿ ಬಿಟ್ಟರು. ಕೊಂಕಣಿ ಅಕಾಡಮಿ ಸದಸ್ಯರಾಗಿದ್ದ ಕ್ಯಾಸ್ತಲಿನೋ ಆ ಅಕಾಡಮಿಯ ಅಧ್ಯಕ್ಷರಾಗುವ ಅರ್ಹತೆ ಇರುವಾತನೆಂಬುದು ಆತನ ಪರ 'ಹೋರಾಟ' ಮಾಡುತ್ತಿರುವವರ ವಾದ. ಆದರೆ ಇದನ್ನು ದೇಶಪಾಂಡೆ ಕೃಪಾಶೀರ್ವಾದದ ಕೊಂಕಣಿಗರ ಪಡೆ ಒಪ್ಪುತ್ತಿಲ್ಲ. ಸದ್ರಿ ಅಕಾಡಮಿಗೆ 'ಬ್ರಾಹ್ಮಣಿಕೆ' ಗತ್ತಿನ ಕೊಂಕಣಿಗರೇ ಯೋಗ್ಯರೆಂಬ ಪಾಳೆಗಾರಿ ಪ್ರಯತ್ನ ಆ ಗ್ಯಾಂಗಿನದು. ಯಾವಾಗ ಮ್ಯಾಗಿ ಅಕಾಡಮಿ ಅಖಾಡಕ್ಕೆ ಎಂಟ್ರಿ ಹೊಡೆದರೋ ಆಗ ದೇಶಪಾಂಡೆಯ ರೊಚ್ಚು ಇಮ್ಮಡಿ ಆಯಿತು.

"ಹಾಂಗ್ಯೋ ಐಸ್‌ಕ್ರೀಮ್" ದೊರೆ ಪ್ರದೀಪ್ ಪೈ ಎಂಬ ದೇಶಪಾಂಡೆಯ ಅಚ್ಚುಮೆಚ್ಚಿನ ಚೇಲಾ. ಹಿಂದೊಮ್ಮೆ ಕೊಂಕಣಿ ಅಕಾಡೆಮಿಯ 'ಸುಖ' ಅನುಭವಿಸಿ ಬಂದಿರುವ ಬಸ್ತಿವಾಮನ ಶೆಣೈ ಬಳಗ ವೆಂಕಟೇಶ ಬಾಳಿಗಾ ಎಂಬಾತನಿಗೆ ಕಿರೀಟ ಕಟ್ಟಲು ತಿಪ್ಪರಲಾಗ ಹಾಕುತ್ತಿದೆ. ದೇಶಪಾಂಡೆ ಸರ್ಕಾರದ ಮಟ್ಟದಲ್ಲಿ ಬಾಳಿಗಾರರ ಪ್ರೊಫೈಲ್ ಹಿಡಿದು ಓಡಾಡುತ್ತಿದ್ದಾರೆ. ಅಕಾಡಮಿ ಅಧ್ಯಕ್ಷರ ಆಯ್ಕೆಯಲ್ಲಿ ನಿರ್ಣಾಯಕ ಪಾತ್ರವಾಡುವ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಕರೆಸಿ ದೇಶಪಾಂಡೆ ರಹಸ್ಯ ಗೈಡ್‌ಲೈನ್ ಕೊಟ್ಟು ಕಳಿಸಿದ್ದಾರಂತೆ. "ಕೊಂಕಣಿ ಅಕಾಡೆಮಿಗೆ ಅಧ್ಯಕ್ಷರ ನೇಮಿಸುವಾಗ ತನ್ನ ಕೇಳದೇ ನಿರ್ಧಾರಕ್ಕೆ ಬರಬೇಡಿ" ಎಂದು ಎಚ್ಚರಿಸಿ ಕಳಿಸಿದ್ದಾರೆ ದೇಶಪಾಂಡೆ!

ದುರಂತ ಎಂದರೆ, ಈ ದಗಲುಬಾಜಿ ದೇಶಪಾಂಡೆ-ಮಾರ್ಗರೆಟ್ ಆಳ್ವರಂಥ ಯಾವ ಸಾಹಿತ್ಯ-ಸಂಸ್ಕೃತಿಯ

ದೇಶಪಾಂಡೆ



ಗಂಧಗಾಳಿಯೂ ಇಲ್ಲದ ದಿನದ ಇಪ್ಪತ್ತನಾಲ್ಕೂ ತಾಸು ಬುನಾಸ್ ರಾಜಕೀಯವನ್ನೇ ಉಂಡುಟ್ಟು ತೇಗುವ ಜಾತಿವಾದಿ "ಜನನಾಯಕ"ರಿಂದಾಗಿ ಕೊಂಕಣಿ ಅಕಾಡೆಮಿ ಕ್ರಿಶ್ಚಿಯನ್ ಮತ್ತು ಜಿಎಸ್‌ಬಿಗಳ ಆಡಂಬೋಲವದಂತಾಗಿ ಹೋಗಿದೆ. ಕೊಂಕಣಿ ಸಾಹಿತ್ಯ-ಸಂಸ್ಕೃತಿ-ಜನ ಜೀವನದ ಬಗ್ಗೆ ಆಳವಾದ ಜ್ಞಾನ- ಕಳಕಳಿ ಇರುವ 'ಶೂದ್ರ ಕೊಂಕಣಿ' ಭಾಷಿಕರು ದಕ್ಷಿಣೋತ್ತರ ಕನ್ನಡದಲ್ಲಿ ಬೇಕಷ್ಟು ಜನರಿದ್ದಾರೆ. ಆದರೆ ಇವರಿಗೆ 'ಲಾಬಿ' ಮಾಡುವ ಮನಸ್ಸಿಲ್ಲ. ಇಂಥವರ ಹುಡುಕಿ ತೆಗೆದು ಕೊಂಕಣಿ ಉದ್ಧಾರ ಮಾಡಬೇಕೆಂಬ ಕಳಕಳಿ ಕೊಂಕಣಿ ಭಾಷೆಯ ಅಧಿಕಾರಸ್ಥ ಪುಢಾರಿಗಳಿಗಂತೂ ಇಲ್ಲ. ಹೀಗಾಗಿ ಅರ್ಹರು ಅವಜ್ಞೇಗೀಡಾಗುತ್ತಿದ್ದಾರೆ. ಜಾತಿವಾದಿ ಅಯೋಗ್ಯರು ಮೆರೆಯುತ್ತಿದ್ದಾರೆ. ಹೇಗೆ ನೋಡಿದರೂ ಈ ಅಕಾಡಮಿ ವ್ಯರ್ಥ- ಬೊಕ್ಕಸಕ್ಕೆ ಭಾರ!

■ನಹುಷ

ಕಾಡಹಕ್ಕಿಯ ಕೊಂದವರು ಯಾರು?



ಕಾಡಿನ ಸ್ವಚ್ಛಂದ ಪ್ರಾಣಿಪಕ್ಷಿಗಳನ್ನು ಮೃಗಾಲಯದಲ್ಲಿ ಕೂಡಿಟ್ಟು ನೋಡಿ ರಂಜಿಸುವ ನಾಗರಿಕ ಸಮಾಜದ ವಿಕೃತಿಗೂ ಹಳ್ಳಿಗಾಡಿನ ಹುಡುಗನೊಬ್ಬನನ್ನು 'ಕಾಡು ಮನುಷ್ಯ'ನನ್ನಾಗಿಸಿ ಆತನ ವರ್ತನೆಗಳನ್ನೇ ಮೋಜಿನ ಸರಕಾಗಿಸಿಕೊಳ್ಳುವ ಟೀವಿ ಚಾನಲ್‌ಗಳಿಗೂ ವ್ಯತ್ಯಾಸ ದೊಡ್ಡದೇನಲ್ಲ. ಹಾಗೇ ನಗರವಾಸಿಗಳ ತೀಟೆ, ತೆವಲುಗಳಿಗೆಲ್ಲ ಕಾಡು ಮನುಷ್ಯನನ್ನು ಒಳಪಡಿಸಿ ಆತನ ಪೇಚಾಟವನ್ನು ಕಂಡು ಕೇಕೆ ಹಾಕುವ ಟೀವಿ ಪ್ರೇಕ್ಷಕರಿಗೂ ಪಂಜರದಲ್ಲಿ ಬಂಧಿಸಿಟ್ಟ ಪ್ರಾಣಿಗೆ ಚೇಷ್ಟೆ ಮಾಡಿ ಚಪ್ಪಾಳೆ ತಟ್ಟುವ ಸೋಕಾಲ್ಡ್ ನಾಗರಿಕರಿಗೂ ಹೆಚ್ಚು ಫರಕೇನಿಲ್ಲ.

'ಹಳ್ಳಿ ಹೈದ ಪ್ಯಾಟಿಗ್ ಬಂದ' ರಿಯಾಲಿಟಿ ಶೋನ ವಿನ್ನರ್ ರಾಜೇಶನ ದುರಂತವನ್ನು ಆತ್ಮಹತ್ಯೆಯೆನ್ನಿ, ಅಪಘಾತವೆನ್ನಿ- ವಾಸ್ತವದಲ್ಲದು ಸೋಕಾಲ್ಡ್ ನಾಗರಿಕ ಸಮಾಜ, ಚಪ್ಪಾಳೆ ತಟ್ಟಿದ ಟೀವಿ ಪ್ರೇಕ್ಷಕರು ಮತ್ತು ಅದನ್ನು ನಡೆಸಿದ ಟೀವಿ ಚಾನಲ್‌ಗಳನ್ನು ಸೇರಿ ಮಾಡಿದ ಕೊಲೆಯಲ್ಲವೆ?

ಐಷಾರಾಮಿ ನಗರವಾಸಿಗಳ ಮನೋವಿಕಾರಕ್ಕೆ ಕನ್ನಡಿಯೆಂಬಂತೆ 1998ರಲ್ಲಿ ತೆರೆಕಂಡ ಹಾಲಿವುಡ್ ಚಿತ್ರದ ಹೆಸರು 'ದಿ ಟ್ರೂಮ್ಯಾನ್ ಷೋ.' ಪೀಟರ್ ವೈರ್ ನಿರ್ದೇಶನದ ಈ ಚಿತ್ರದ ಕಥಾವಸ್ತುವೇ ಟೀವಿ ಚಾನಲ್ಲೊಂದರ ರಿಯಾಲಿಟಿ ಷೋ. ಅದರಲ್ಲಿ ನಾಯಕನ ಪಾತ್ರ ವಹಿಸಿದ ಖ್ಯಾತ ಹಾಲಿವುಡ್ ನಟ ಜಿಮ್ ಕ್ಯಾರಿಯದ್ದು ಜಂಗಲ್ ಜಾಕಿ ರಾಜೇಶ್‌ನಂತೆಯೇ ಟೀವಿ ರಿಯಾಲಿಟಿ ಷೋ ಒಂದರ ಲಾಭಬಡುಕ ನಿರ್ಮಾಪಕನ ಷಡ್ಯಂತ್ರಕ್ಕೆ ಸಿಲುಕಿದ ಮುಗ್ಧನ ಪಾತ್ರ. ಆತ ಹುಟ್ಟಿದಾಗಿನಿಂದ ಯುವಕನಾಗುವತನಕ ಆತನಿಗೆ ಗೊತ್ತಿಲ್ಲದ ಹಾಗೆಯೇ ಆತನ ಬದುಕಿನ ಪ್ರತಿ ಕ್ಷಣವನ್ನೂ ಟೀವಿ ಕ್ಯಾಮೆರಾಗಳು ಸೆರೆ ಹಿಡಿಯುತ್ತಿರುತ್ತವೆ. ತನಗರಿವಿಲ್ಲದೆಯೇ ತನ್ನ ತಂದೆ, ತಾಯಿ, ಉದ್ಯೋಗ, ಪ್ರೇಯಸಿ, ಗೆಳೆಯರು, ಹಿತೈಷಿಗಳು, ಎದುರಾಗುವ ಪ್ರಸಂಗಗಳೆಲ್ಲ ಎಲ್ಲೋ ಕುಳಿತು ಇದನ್ನೆಲ್ಲ ನಿಯಂತ್ರಿಸುವ ಸೂತ್ರಧಾರನೊಬ್ಬನ ಕೈವಾಡವೆಂದೂ, ತನ್ನ ಬದುಕಿನ ಪ್ರತಿ 'ಸಂಬಂಧಿ'ಯೂ ಚಾನಲ್ ಮಾಲಿಕನಿಂದ ಸಂಬಳದ ಆಧಾರದ ಮೇಲೆ ನೇಮಿಸಲ್ಪಟ್ಟ ಪಾತ್ರಧಾರಿಗಳೆಂದೂ ಇಂಥ 'ಪಾತ್ರ'ಗಳ ಜೊತೆಗಿನ ತನ್ನ ಪ್ರತಿಕ್ಷಣದ ವರ್ತನೆ, ಪ್ರತಿಕ್ರಿಯೆ, ಪೇಚಾಟಗಳೆಲ್ಲ ಎಲ್ಲೋ ಕುಳಿತು ಟೀವಿ ನೋಡುವ ಲಕ್ಷಾಂತರ ಪ್ರೇಕ್ಷಕರ ಪಾಲಿಗೆ ಕುತೂಹಲಕರ ಮನರಂಜನೆಯೆಂದೂ ಆತನಿಗೇ ಗೊತ್ತೇ ಆಗದ ಹಾಗೆ ನಿರ್ದೇಶಿಸಲ್ಪಡುತ್ತಿರುತ್ತವೆ.

ಇದ್ದಕ್ಕಿದ್ದಂತೆ ಉಲ್ಟಾ ಹೊಡೆಯುವ ಆತನ ಪತ್ನಿ, ನಾಟಕೀಯ ಪ್ರಸಂಗಗಳಿಗೆ ಕಾರಣರಾಗುವ ಆತನ ತಂದೆ-ತಾಯಿ, ಚಿತ್ರವಿಚಿತ್ರ ಸನ್ನಿವೇಶಗಳನ್ನು ಹುಟ್ಟು ಹಾಕುವ ಆತನ ಗೆಳೆಯರೆಲ್ಲ ರಿಯಾಲಿಟಿ ಷೋ ಒಂದರ paid ಪಾತ್ರಧಾರಿಗಳೆಂದು ಗೊತ್ತಾಗುವ ಹೊತ್ತಿಗೆ ಕಾಲ ಮಿಂಚಿರುತ್ತದೆ. ಇಂಥ ಭ್ರಮಾತ್ಮಕ ಯಾರದೋ ಮನರಂಜನೆಗೆ ಯಾರೋ ಆಡಿಸುವ ಸೂತ್ರದ ಗೊಂಬೆಯಂತೆ, ಬದುಕುವ ಬದಲು ಭಿಕ್ಷೆ ಬೇಡಿಯಾದರೂ ತನ್ನದೇ ಸ್ವಂತ ಬದುಕನ್ನು ಬದುಕಲು ನಿರ್ಧರಿಸಿ ಆ ರಿಯಾಲಿಟಿ ಷೋನ ಸೆಟ್‌ನಿಂದ ಪರಾರಿಯಾಗುತ್ತಾನೆ.

ಇದು 'The Truman show' ಚಿತ್ರದ ಕಥೆಯ ಸಾರಾಂಶ. ಲಾಭಬಡುಕ ಟೀವಿ ಚಾನಲ್ಲುಗಳು ಹುಟ್ಟು ಹಾಕುವ 'ರಿಯಾಲಿಟಿ ಷೋ'ಗಳ ಕಪಟ, ವಂಚನೆ ಮತ್ತು ಮನೋವಿಕೃತಿಗಳಿಗೆ ಕನ್ನಡಿ ಹಿಡಿದಂತೆ ಸೃಷ್ಟಿಸಲ್ಪಟ್ಟ ಈ ಚಿತ್ರ ಕಾಲಕ್ರಮೇಣ ಪಾಶ್ಚಾತ್ಯ ದೇಶಗಳಲ್ಲಿ ಎಂಥಾ 'ಮೇನಿಯಾ' ಒಂದನ್ನು ಹುಟ್ಟುಹಾಕಿತೆಂದರೆ ಈ ಚಿತ್ರ ನೋಡಿ ಅದರಿಂದ ಪ್ರಭಾವಿತರಾದ ಅನೇಕರು ತಮ್ಮ ಬದುಕು ಕೂಡ ಯಾವುದೋ ರಿಯಾಲಿಟಿ ಷೋನ ಪಾತ್ರವೆಂದೂ, ತಮ್ಮೊಂದಿಗೆ ವ್ಯವಹರಿಸುವ ಪ್ರತಿಯೊಬ್ಬರೂ ಅದರ ಪಾತ್ರಧಾರಿಗಳೆಂದೂ, ತಮ್ಮ ಜೀವನದ ಪ್ರತಿ ಘಟನೆಯನ್ನು ಯಾರೋ ಟೀವಿ ನಿರ್ದೇಶಕನೊಬ್ಬ ಎಲ್ಲೋ ಮರೆಯಲ್ಲಿ ಕೂತು ನಿಯಂತ್ರಿಸುತ್ತಿದ್ದಾನೆಂಗೂ, ಇದನ್ನೆಲ್ಲ ಕೋಟ್ಯಾಂತರ ಮಂದಿ ಟೀವಿ ಪ್ರೇಕ್ಷಕರು ವೀಕ್ಷಿಸುತ್ತಿದ್ದಾರೆಂದು ಭ್ರಮೆಗೆ ಬಿದ್ದರು.

ನ್ಯೂಯಾರ್ಕ್‌ನ 'ಲಿಬರ್ಟಿ' ಪ್ರತಿಮೆಯ ತುದಿಯನ್ನೇರಿದ ಯುವಕನೊಬ್ಬನನ್ನು ಪೊಲೀಸರು ಬಂಧಿಸಿದಾಗ ತಾನು ರಿಯಾಲಿಟಿ ಷೋನಿಂದ exit ಆಗಬೇಕೆಂದರೆ ಲಿಬರ್ಟಿ ಪ್ರತಿಮೆಯ ತುದಿಯಲ್ಲಿ ಪ್ರತ್ಯಕ್ಷಳಾಗುವ ತನ್ನ ಪ್ರೇಯಸಿಯನ್ನು ಪತ್ತೆ ಹಚ್ಚಿದಾಗಷ್ಟೇ 'ಷೋ'ನಲ್ಲಿ ತನ್ನ Task ಅಂತ್ಯಗೊಳ್ಳುತ್ತದೆಯೆಂದು ಬಡಬಡಿಸಿದ್ದ. ಇನ್ನಾರೋ ತಲೆಕೆಟ್ಟವನೊಬ್ಬ ಮ್ಯಾನ್‌ಹಟನ್ ಫೆಡರಲ್ ಕಟ್ಟಡವನ್ನೇರಿ ತನ್ನನ್ನು ಈ 'ಷೋ'ನಿಂದ ಬಿಡುಗಡೆ ಮಾಡಬೇಕೆಂದೂ ತನ್ನ ಬದುಕಿನ ಪ್ರತಿಕ್ಷಣವನ್ನೂ ಯಾರೋ ರಹಸ್ಯ ಕ್ಯಾಮೆರಾಗಳ ಮೂಲಕ ಚಿತ್ರೀಕರಿಸಿ ಅದನ್ನು ಟೆಲಿಕಾಸ್ಟ್ ಮಾಡಲಾಗುತ್ತಿದೆ ಎಂದೂ ಇದರಿಂದ ತನಗೆ ಮುಕ್ತಿ ನೀಡಬೇಕೆಂದೂ ಕಿರುಚಾಡುತ್ತಿದ್ದ!

2010ರ ಹೊತ್ತಿಗೆ ಇಡೀ ಅಮೆರಿಕದಲ್ಲಿ ಇಂಥ 40 ಪ್ರಕರಣಗಳು ವರದಿಯಾದವು. ತನ್ನ ಬದುಕೇ ಒಂದು ರಿಯಾಲಿಟಿ ಷೋ, ಅದನ್ನು ಕೋಟ್ಯಾಂತರ ಟೀವಿ ಪ್ರೇಕ್ಷಕರು ನೋಡುತ್ತಿದ್ದಾರೆ, ಯಾರೋ ಅದೃಶ್ಯ ತರಂಗಗಳ ಮೂಲಕ ತನ್ನ ಮೆದುಳಿನ ನರಗಳನ್ನು ನಿಯಂತ್ರಿಸುತ್ತಿದ್ದಾರೆ, ತನ್ನ ಮೆದುಳಿನಲ್ಲಿ ಯಾರೋ ಎಲೆಕ್ಟ್ರಾನಿಕ್ ಚಿಪ್ಪನ್ನು ಅಳವಡಿಸಿ ಸೂತ್ರಧಾರಿಗಳಂತೆ ಆಡಿಸುತ್ತಿದ್ದಾರೆ ಎಂದು ಭ್ರಮೆಗೆ ಬಿದ್ದವರನ್ನೆಲ್ಲ ಮನೋವೈದ್ಯರು ಪರೀಕ್ಷಿಸಲಾಗಿ ಬೆಳಕಿಗೆ ಬಂದ ಸಾಮಾನ್ಯ ಸಂಗತಿಯೆಂದರೆ ಅವರೆಲ್ಲರೂ 'ದಿ ಟ್ರೂಮ್ಯಾನ್ ಷೋ' ಚಿತ್ರದಿಂದ ಪ್ರಭಾವಿತರಾಗಿದ್ದರು ಮತ್ತು ಹತ್ತಾರು ಬಾರಿ ಆ ಚಿತ್ರವನ್ನು ವೀಕ್ಷಿಸಿದ್ದರು!

ಕ್ರಮೇಣ ಈ ಮನೋವ್ಯಾಧಿಯನ್ನೇ ಟ್ರೂಮನ್ ಷೋ ಸಿಂಡ್ರೋಮ್ ಅಥವಾ ಟ್ರೂಮನ್ ಷೋ Delusion ಎಂಬ ಹೆಸರಿನಿಂದ ಕರೆಯಲಾಯಿತು. ಮೊನ್ನೆ ಅಂದರೆ 2013ರ ಸೆಪ್ಟೆಂಬರ್‌ನಲ್ಲೂ ಅಮೆರಿಕದ ಓಡಿಯೋನ ಯುವಕನೊಬ್ಬನಲ್ಲಿ ಇದೇ ಮನೋವ್ಯಾಧಿ ಪತ್ತೆಯಾಗಿತ್ತು. ಟೀವಿಗಳ ರಿಯಾಲಿಟಿ ಷೋಗಳ ಸಾಧ್ಯತೆ ಮತ್ತು ದುಷ್ಪರಿಣಾಮಕ್ಕೆ ಇದಷ್ಟೇ ಅಲ್ಲ ಈಗ 'ಹಳ್ಳಿ ಹೈದ ಪ್ಯಾಟಿಗ್ ಬಂದ'ದ ವಿನ್ನರ್ ರಾಜೇಶ್ ಇನ್ನೂ ಭಯಾನಕವಾಗಿ ಉದಾಹರಣೆಯಾಗಿದ್ದಾನೆ.

ಟೀವಿ ಚಾನಲ್ಲುಗಳ 'ರಿಯಾಲಿಟಿ ಷೋ'ನ ಕಪಟ ಅರಿತು ಅದರಿಂದ ಪರಾರಿಯಾಗುವ ಹಾಲಿವುಡ್ ಚಿತ್ರದ ನಾಯಕನ ಮಾನಸಿಕ ಸ್ಥೈರ್ಯವೇನಾದರೂ ರಾಜೇಶನಿಗಿದ್ದಿದ್ದರೆ



ಆತನಿಗೆ ಈ ಗತಿ ಬರುತ್ತಿರಲಿಲ್ಲ. ಏಕೆಂದರೆ ಆತ ಸುಶಿಕ್ಷಿತನಲ್ಲ, ಪಕ್ಕಾ ಹಳ್ಳಿ ಹೈದ. ಲೋಕದ ಕಪಟ ಅರಿತವನಲ್ಲ, ಮುಗ್ಧ. ಮೃಗಾಲಯದ ಪಂಜರದಲ್ಲಿ ಬಂಧಿಸಿಟ್ಟ ಕಾಡುಪ್ರಾಣಿಗೂ ರಿಯಾಲಿಟಿ ಷೋನ ಟಾಸ್ಕ್, ನಿಯಮಾವಳಿಗಳು ನಿಯಂತ್ರಿಸಲ್ಪಡುವ ತನಗೂ ಹೆಚ್ಚು ವ್ಯತ್ಯಾಸವಿಲ್ಲ ಎಂಬುದು ಆತನ ಗ್ರಹಿಕೆಗೆ ನಿಲುಕಲೇ ಇಲ್ಲ.

ಸತ್ತ ರಾಜೇಶನ ಶವಸಂಸ್ಕಾರಕ್ಕೆಂದು ಬಂದಿದ್ದ 'ಹಳ್ಳಿ ಹೈದ ಪ್ಯಾಟಿಗ್ ಬಂದ' ಷೋನ ಟೀವಿ ಸೂತ್ರಧಾರರು ಕೆಲವರ ಕಣ್ಣಿಗೆ ಸಾಕ್ಷಾತ್ ಯಮದೂತರಂತೆ ಕಾಣಿಸಬಹುದು. ಹಳ್ಳಿ ಹೈದ... ದ ಆ್ಯಂಕರ್ ಅಕುಲ್ ಬಾಲಾಜಿ ತನ್ನ ಟ್ವಿಟ್ಟರ್‌ನಲ್ಲಿ ಮೊಸಳೆ ಕಣ್ಣೀರಿಟ್ಟಿರಬಹುದು. ಜಂಗಲ್ ಜಾಕಿ ಹೀರೋಯಿನ್ ಐಶ್ವರ್ಯ, ಲವ್ ಈಸ್ ಪಾಯ್ಸನ್ ಚಿತ್ರದಲ್ಲಿ ಆತನ ಜತೆ ಬೆತ್ತಲೆ ಕುಣಿದ ಪೂಜಾ ಪಾಂಡೆ, ಅದರ ನಿರ್ದೇಶಕ ನಂದನ್ ಪ್ರಭು, ನಿರ್ಮಾಪಕ ಸೋಮಶೇಖರ್, ಈ ಟೀವಿಯ ಬಿಗ್‌ಬಾಸ್ ನಿರೂಪಕ ರಾಘವೇಂದ್ರ ಹುಣಸೂರು, ಹಳ್ಳಿ ಹೈದ... ದ ಪ್ರೋಗ್ರಾಂ ಎಕ್ಸಿಕ್ಯೂಟಿವ್‌ಗಳಾದ ಶರಣಯ್ಯ ಮತ್ತು ಪದ್ಮನಾಭ- ಹೀಗೆ ರಾಜೇಶನ ಸಾವಿಗೆ ಪ್ರತ್ಯಕ್ಷವೋ ಪರೋಕ್ಷವೋ ಪ್ರತಿಯೊಬ್ಬರೂ ಕಾರಣಕರ್ತರೇ.

ಟೀವಿಗಳ ಟಿಆರ್‌ಪಿ ದಾಹಕ್ಕೆ ಬಲಿಯಾಗುವ ನಟಿಯರು, ಸ್ವಾಮಿಗಳು ಖ್ಯಾತಿವಂತರೆಲ್ಲ ಒಂದು ಹಂತದವರೆಗೆ ಅದೇ ಟೀವಿಗಳ ಮೂಲಕ ಪ್ರಚಾರ ಪಡೆದಿರುತ್ತಾರೆ. ಇನ್ನೇನು ಪ್ರಚಾರ ಹೆಚ್ಚಾಯಿತು ಎನ್ನುವ ಹೊತ್ತಿಗೆ ಅದೇ ಟೀವಿಗಳೇ ಕಾಲೆಳೆದು ಹಳ್ಳಕ್ಕೆ ಕೆಡವಿರುತ್ತವೆ. ತಾವೇ ಕೊಬ್ಬಿದ್ದ ತಾವೇ ಕೊಂದು ತಿನ್ನುವ ಟಿಆರ್‌ಪಿ Monger ಚಾನಲ್ಲುಗಳ ಮಾಯಾಜಾಲದೊಳಕ್ಕೆ ಬುಡಕಟ್ಟು ಹುಡುಗ ರಾಜೇಶ ಸಿಲುಕಿದ್ದು 2010ರಲ್ಲಿ.

'ಆ ಹೊತ್ತಿಗಾಗಲೇ ಸುವರ್ಣ ವಾಹಿನಿಯಲ್ಲಿ 'ಪ್ಯಾಟೆ ಹುಡ್ಗೀರ್ ಹಳ್ಳಿ ಲೈಫು' ಎಂಬ ರಿಯಾಲಿಟಿ ಷೋ ಸಾಕಷ್ಟು ಟಿಆರ್‌ಪಿ ಗಳಿಸಿಕೊಟ್ಟಿತ್ತು. ಇದೇ ಗುಂಗಿಗೆ ಬಿದ್ದ ರಾಘವೇಂದ್ರ ಹುಣಸೂರು ಎಂಬಾತ 'ಹಳ್ಳಿ ಹೈದ ಪ್ಯಾಟಿಗೆ ಬಂದ' ಎಂಬ ವಿಲಕ್ಷಣ ರಿಯಾಲಿಟಿ ಷೋ ಒಂದನ್ನು ರೂಪಿಸಿದ್ದ. ಹೇಗೆ ನಗರದ ಯುವತಿಯರು ಹಳ್ಳಿಗೆ ಬಂದು ನಗರ ಬದುಕಿಗೆ ಅಪರಿಚಿತರಾದ ಹಳ್ಳಿಯ ಮುಗ್ಧರನ್ನು ಗುಗ್ಗು, ಗಮಾರರಂತೆ ಪರಿಗಣಿಸಿ ಪೇಚಾಡಬೇಕೋ ಅದೇ ರೀತಿ ಕಾಡುಪ್ರಾಣಿಗಳಂತಿರುವ ಬುಡಕಟ್ಟು ಹುಡುಗರು ನಗರಕ್ಕೆ ಬಂದು ಪೇಚಾಡಬೇಕಾದ ಸನ್ನಿವೇಶಗಳನ್ನು ಸೃಷ್ಟಿಸಿ ಪ್ರೇಕ್ಷಕರನ್ನು ರಂಜಿಸುವುದೇ ಇದರ ಉದ್ದೇಶವಾಗಿತ್ತು.

ಹೇಳಿಕೇಳಿ ಇಂಗ್ಲಿಷ್ ಚಾನಲ್ಲುಗಳ ರಿಯಾಲಿಟಿ ಷೋಗಳಂತೆ ಕಾಪಿ ಹೊಡೆದು ರೂಪಿಸಿದ್ದ ಕನ್ನಡದ ಇಂಥ ರಿಯಾಲಿಟಿ ಷೋಗಳ ಉದ್ದೇಶವೇ ಹಳ್ಳಿಗಾಡಿನ ರೈತಾಪಿ ಜನಸಾಮಾನ್ಯರನ್ನು ಗೇಲಿ ಮಾಡುವುದು. ಹೆಸರಿಗಿದು ಹಳ್ಳಿ ಹೈದ... ಆದರೂ ಇದಕ್ಕೆಂದು ಬಲಿಪಶುಗಳನ್ನಾಗಿಸಿದ್ದು ಕರ್ನಾಟಕದ ಸೋಲಿಗ, ಸಿದ್ಧಿ, ಜೇನು ಕುರುಬ, ಹಕ್ಕಿಪಿಕ್ಕಿ ಇತ್ಯಾದಿ ಅರಣ್ಯವಾಸಿ ಬುಡಕಟ್ಟುಗಳನ್ನು.

2010ರ ಜುಲೈ ತಿಂಗಳಲ್ಲಿ ಸುವರ್ಣ ಟೀವಿ ಕಾರ್ಯಕ್ರಮ ಸಂಯೋಜಕರಾದ ಶರಣಯ್ಯ ಮತ್ತು ಪದ್ಮನಾಭ ಎಂಬಿಬ್ಬರು ಕರ್ನಾಟಕದ ಬೇರೆ ಬೇರೆ ಬುಡಕಟ್ಟು ಹಾಡಿಗಳಿಗೆ ಭೇಟಿ ಕೊಟ್ಟು ಅಲ್ಲಿನ ಆದಿವಾಸಿ ಯುವಕರ ಬೇಟೆಗಿಳಿದರು. ವಿದ್ಯಾವಂತರಲ್ಲದ, ನಾಗರಿಕ ಪ್ರಪಂಚದ ಯಾವುದೇ ಪರಿಜ್ಞಾನವಿಲ್ಲದ ಮುಗ್ಧ ಮೊಬೈಲ್ ಫೋನ್ ಕೂಡ ನೋಡಿರದ; ಸದೃಢ ಯುವಕರೇ ಬೇಕೆಂದು ಟೀವಿ ಮಂದಿ ಹಠಕ್ಕೆ ಬಿದ್ದಿದ್ದರ ಮರ್ಮ ಮಾತ್ರ ಯಾರಿಗೂ ಅರ್ಥವಾಗಲಿಲ್ಲ. ತಾವು ಆದಿವಾಸಿ ಬುಡಕಟ್ಟುಗಳ ಸಮಸ್ಯೆಯ ಬಗ್ಗೆ ಟೀವಿ ಷೋ ಮಾಡುತ್ತಿದ್ದೇವೆಂದರು. ಇದರಿಂದಾಗಿ ನಿಮ್ಮ ಸಮಸ್ಯೆ ಹೊರಜಗತ್ತಿಗೆ ಗೊತ್ತಾಗಿ ಸರ್ಕಾರದ ಕಣ್ಣು ತೆರೆಸಬಹುದೆಂದರು. ತಾವಿಬ್ಬರೂ ಮಾನವ ಹಕ್ಕು ಕಾರ್ಯಕರ್ತರೆಂದು ನಂಬಿಸಿದ್ದರು.

ಹುನ್ನಾರ ಅರಿಯದ ಆದಿವಾಸಿ ಬುಡಕಟ್ಟು ನಾಯಕ ಸೋಮಣ್ಣ ಮತ್ತು ಪೆಡಿನಾ ಸಂಘಟನೆಯ ಕ್ಷೀರಸಾಗರ ಸೇರಿಕೊಂಡು ಆದಿವಾಸಿ ಯುವಕರನ್ನು ಒಪ್ಪಿಸಿದರು. ಶುರುವಿನಲ್ಲಿ ಟೀವಿ ನಟ ಅಕುಲ್ ಬಾಲಾಜಿಯೇ ಹೆಗ್ಗಡದೇವನಕೋಟೆಗೆ ಬಂದು ಆಡಿಷನ್ ಏರ್ಪಡಿಸಿದ್ದ. ನಾಗರಿಕ ವರಸೆಗಳಿಗೆ ಹುಚ್ಚುಚ್ಚಾಗಿ ಪ್ರತಿಕ್ರಿಯಿಸುತ್ತಿದ್ದ ಶುದ್ಧ ತಲೆತಿರುಕನಂತಿದ್ದ ರಾಜೇಶ ಟೀವಿ ಮಂದಿಯ ದುರಾಸೆಗೆ ಹೇಳಿಮಾಡಿಸಿದಂತಿದ್ದ. ಹೆಗ್ಗಡದೇವನಕೋಟೆ ತಾಲ್ಲೂಕು ಕಾಕನಕೋಟೆ ಕಾಡಿನ ನಡುವಿನ ಬಳ್ಳೇಹಾಡಿಯ ಜೇನುಕುರುಬರ ಕೃಷ್ಣಪ್ಪ ಮತ್ತು ಲಕ್ಷ್ಮಿ ದಂಪತಿಗಳ ಮೂವರು ಮಕ್ಕಳ ಪೈಕಿ ಹಿರಿಯವನಾದ ರಾಜೇಶನಿಗೆ ಇಬ್ಬರು ತಂಗಿಯರಿದ್ದರು.

ಕಾಡಿಗೆ ಹೋಗಿ ಸೌದೆ ಸಂಗ್ರಹಿಸುವುದು, ಅಕ್ಕಪಕ್ಕದ ತೋಟಗಳಿಗೆ ಕೂಲಿ ಹೋಗುವುದು ಮಾಡಿಕೊಂಡಿದ್ದ ರಾಜೇಶ ಉಂಡಾಡಿ, ಉಡಾಳ ಮತ್ತು ಪಕ್ಕಾ ಒರಟ. ಏಕಾಏಕಿ ಸುವರ್ಣ ಟೀವಿಯವರು ಬಂದು ಲಕ್ಷಾಂತರ ರೂಪಾಯಿ ಕೊಡ್ತೀವಿ, ಗೆದ್ದರೆ ಬಹುಮಾನ ಕೊಡ್ತೀವಿ, ತಿಂಗಳಾನುಗಟ್ಟಲೆ ಬೆಂಗಳೂರಿನಲ್ಲಿ ಇಟ್ಕೊಳ್ತೀವಿ ಎಂದು ಜೀಪಿಗೆ ಹತ್ತಿಸಿಕೊಂಡಾಗ ಎದ್ದೂಬಿದ್ದೂ ಓಡಿ ಹೋಗಿದ್ದ.

ಹೇಗೋ ಬುಡಕಟ್ಟು ಮುಖಂಡರು ಮನವೊಲಿಸಿದ್ದರ ಮೇರೆಗೆ ಬೆಂಗಳೂರಿಗೆ ಬಂದ ರಾಜೇಶ ಕ್ರಮೇಣ ಹಳ್ಳಿ ಹೈದ ಪ್ಯಾಟಿಗ್ ಬಂದ ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿಬಿಟ್ಟ. ರಾಜೇಶನಂತೆ ಸಿದ್ಧಿ, ಸೋಲಿಗ, ಹಸಲ, ಹಕ್ಕಿಪಿಕ್ಕಿ ಬುಡಕಟ್ಟುಗಳ ಯುವಕರನ್ನೂ ಷೋಗೆಂದು ಸೇರಿಸಿಕೊಳ್ಳಲಾಗಿತ್ತು. ಪ್ರತಿ ಸ್ಪರ್ಧಿಗೂ ಒಬ್ಬೊಬ್ಬ ಮಾಡೆಲ್ ಬೆಡಗಿಯರನ್ನು ಜೊತೆ ಹಾಕಲಾಯ್ತು. ಮೈ ತುಂಬಾ ಸೆಂಟು, ಮೇಕಪ್, ಮಿನಿ, ಮಿಡ್ಡಿ ತೊಟ್ಟ ಇಂಥ ಮಾಡೆಲ್ ಹುಡುಗಿಯರ ಜೊತೆ ಬಿದ್ದ ರಾಜೇಶನಂಥ ಕಾಡಿನ ಹುಡುಗರೆಲ್ಲ ಹೆಂಡ ಕುಡಿದ ಮಂಗನಂತಾಡುತ್ತಿದ್ದರು. ಜೊತೆಗೆ ಅರೆನಗ್ನ ಯುವತಿ, ಆಕೆಯ ಚೇಷ್ಟೆಗಳು, ಕಾಡಿನ ಹುಡುಗರನ್ನು ಬ್ಯೂಟಿ ಪಾರ್ಲರ್‌ಗೆ ಕರೆದೊಯ್ಯುವುದು, ಅಲ್ಲಿ ಅವರಿಗೆ ಚಿತ್ರವಿಚಿತ್ರ ಹೇರ್ ಕಟಿಂಗ್, ತಲೆಕೂದಲಿಗೆ ಬಣ್ಣ ಹಾಕಿಸುವುದು, ಊಟದಲ್ಲಿ ಜಾಪಾಳ ಮಾತ್ರೆ ಹಾಕಿಕೊಟ್ಟು ಪೇಚಾಡಿಸುವುದು, ಕೋಣೆಯೊಂದರಲ್ಲಿ ಯುವತಿ ಜೊತೆ ಕೂಡಿಟ್ಟು ಕಾಡಿಸುವುದು, ಇಂಥ ದೃಶ್ಯಾವಳಿಗಳನ್ನೇ ಎಡಿಟ್ ಮಾಡಿ ಟೀವಿಗಳಲ್ಲಿ ಬಿತ್ತರಿಸಲಾಯ್ತು.

ಒಂದು ಹಂತದಲ್ಲಿ ಜೊತೆಗಿದ್ದ ಐಶ್ವರ್ಯ ಎಂಬ ಮಾಡೆಲ್‌ಳ ಕಾಟ ತಾಳಲಾರದೆ ರಾಜೇಶ ಆಕೆಯನ್ನೇ ಹಿಡಿದು ಬಡಿದಿದ್ದ. ಕನಿಷ್ಠ ಆಗಲಾದರೂ ಈ ಷೋನಿಂದ ತನಗೆ ಮುಕ್ತಿ ಸಿಗಬಹುದೆಂಬ ಆತನ ನಂಬಿಕೆಯೇ ಹುಸಿಯಾಗಿತ್ತು. ಏಕೆಂದರೆ ಟೀವಿ ಮಂದಿಗೆ ಬೇಕಿದ್ದದ್ದು ಇಂಥ ಹುಚ್ಚಾಟಗಳೇ. ಮೊದಲೇ ಭರವಸೆ ಕೊಟ್ಟಂತೆ ಆದಿವಾಸಿಗಳ ಸಮಸ್ಯೆಯನ್ನು ಹೊರಜಗತ್ತಿಗೆ ತಿಳಿಸುವುದು ಕೇವಲ ಕಾಟಾಚಾರವಷ್ಟೇ ಆಗಿತ್ತು. ವಿಚಿತ್ರವೆಂದರೆ ಕಾಡಿನ ಹುಡುಗನ ಈ ಥರದ ಫಜೀತಿ, ಪೇಚಾಟಗಳೆಲ್ಲ ಪ್ರೇಕ್ಷಕರಿಗೂ ಮೋಜಿನ ಸಂಗತಿಯಾಗಿ ಇಂಥ ಹುಚ್ಚಾಟಗಳಿಗೇ ಹೆಚ್ಚೆಚ್ಚು ಓಟುಗಳು ಬಿದ್ದವು.

ಇದೆಲ್ಲದರ ಅತಿರೇಕವೆಂಬಂತೆ ಅಂತಿಮ ಸುತ್ತಿನಲ್ಲಿ ಷೋನ ವಿನ್ನರ್ ಆಗಿ ಆಯ್ಕೆಯಾದ ರಾಜೇಶ ತನ್ನ ನೆಚ್ಚಿನ ಹೀರೋ ಪುನೀತ್ ರಾಜ್‌ಕುಮಾರ್ ಕೈಯಿಂದಲೇ ಪ್ರಶಸ್ತಿ ಪಡೆದುಬಿಟ್ಟ. ಹೀಗೆ ರಾಜೇಶ ಷೋನ ವಿನ್ನರ್ ಆಗಿದ್ದು ಕ್ರಮೇಣ ಇನ್ನಷ್ಟು ಅತಿರೇಕಗಳಿಗೆ ಕಾರಣವಾಗಿ ರವಿ ಕಡೂರು ಎಂಬಾತನೊಬ್ಬ ನಿನ್ನನ್ನೇ ಹಾಕ್ಕೊಂಡು ಸಿನಿಮಾ ಮಾಡ್ತೀನಿ ಎಂದು ಅಟ್ಟಕ್ಕೇರಿಸಿದ್ದ. ಅಷ್ಟಕ್ಕೂ ಈ ರವಿ ಕಡೂರ್ ಎಂಬಾತ ತಾಜ್‌ಮಹಲ್ ಚಂದ್ರೂನ ಕಾರಿನ ಡ್ರೈವರ್. ಸಿನಿಮಾದ ತಲೆಬುಡ ಗೊತ್ತಿಲ್ಲದ, ರಿಯಾಲಿಟಿ ಷೋಗೂ ಸಿನಿಮಾಗೂ ವ್ಯತ್ಯಾಸ ಅರಿಯದ ರವಿ ಕಡೂರು ರಾಜೇಶನನ್ನು ಹಾಕ್ಕೊಂಡು ಸಿನಿಮಾ ಮಾಡಿಬಿಟ್ಟರೆ ಅದು ಬಾಕ್ಸ್ ಆಫೀಸ್ ಚಿಂದಿಯೆಬ್ಬಿಸುತ್ತದೆಯೆಂದು ಭ್ರಮಿಸಿದ್ದು ಸುಳ್ಳಾಗಿ ಹೋಯಿತು.

ರಿಯಾಲಿಟಿ ಷೋನಲ್ಲಿ ಆತನಿಗೆ ಸಂಗಾತಿಯಾಗಿದ್ದ ಐಶ್ವರ್ಯಳನ್ನೇ ಹೀರೋಯಿನ್ ಮಾಡಿಬಿಟ್ಟರೆ ಟೀವಿಯಲ್ಲಿ ಆತನನ್ನು ಮೆಚ್ಚಿದ್ದ ವೀಕ್ಷಕರೆಲ್ಲ ಹುಚ್ಚೆದ್ದು ಸಿನಿಮಾ ನೋಡುತ್ತಾರೆಂಬ ರವಿ ಕಡೂರನ ಭ್ರಮೆ ಮೂರೇ ದಿನಕ್ಕೆ ಮಣ್ಣು ಪಾಲಾಯಿತು.

ಆದರೆ ಇದೆಲ್ಲಕ್ಕೂ ಮೊದಲೇ ಕೋತಿಗೆ ಹೆಂಡ ಕುಡಿಸಿದಂತೆ ರಾಜೇಶ್‌ನಿಗೆ ಪಿತ್ಥ ನೆತ್ತಿಗೇರಿತ್ತು. ರಿಯಾಲಿಟಿ ಷೋನ ಬಹುಮಾನದ ಮೊತ್ತವಾಗಿ ಆರು ಲಕ್ಷವೇನೋ ಬಂತು. ಆದರೆ ಅದನ್ನು ನಗದಾಗಿಸಬೇಕೆಂದರೆ ಆತ ಬ್ಯಾಂಕ್ ಖಾತೆ ತೆರೆಯಬೇಕಿತ್ತು ಮತ್ತು ಅದಕ್ಕೆಂದೇ ಪ್ಯಾನ್‌ಕಾರ್ಡ್ ಕೂಡ ಮಾಡಿಸಬೇಕಿತ್ತು. ಪ್ಯಾನ್‌ಕಾರ್ಡ್ ಗಿಟ್ಟಿಸುವುದಕ್ಕೇ ಎರಡು ತಿಂಗಳು ಹಿಡಿದಿತ್ತು. ಷೋ ಮಧ್ಯೆಯೇ ಆತನಿಗೆ ಥಳಕು ಬಳುಕಿನ ಲೋಕದ ಗೀಳು ಮೈಗಂಟಿತು. ತಾನು ಕೂಡ ಓರ್ವ ಸೆಲೆಬ್ರಿಟಿ. ಇವತ್ತಲ್ಲ ನಾಳೆ ನಾನು ಪುನೀತ್ ರೀತಿಯ ಸ್ಟಾರ್ ಆಗೋನು. ಈ ಕಾರಣಕ್ಕೇ ನನ್ನನ್ನು ಹಾಕ್ಕೊಂಡು ಜಂಗಲ್ ಜಾಕಿ ಎಂಬ ಸಿನಿಮಾ ಮಾಡುತ್ತಿರೋದು. ಅದಕ್ಕೆ ಐಶ್ವರ್ಯಳನ್ನೇ ಏಕೆ ಹೀರೋಯಿನ್ ಮಾಡಿದ್ದಾರೆಂದರೆ ಆಕೆ ನನ್ನನ್ನು ಪ್ರೀತಿಸುತ್ತಿದ್ದಾಳೆ!

ಇಂಥ ಭ್ರಮೆಗೆ ಬಿದ್ದ ರಾಜೇಶನಿಗೆ ಎಲ್ಲ ಸೇರಿ ತನ್ನನ್ನು ಯಾವ ಹಳ್ಳದಲ್ಲಿ ಬೀಳಿಸುತ್ತಿದ್ದಾರೆಂಬ ಕಲ್ಪನೆಯಿರಲಿಲ್ಲ. ಆಗಿನ್ನೂ ಷೋ ಮುಗಿದು ಜಂಗಲ್ ಜಾಕಿ ಚಿತ್ರದ ಶೂಟಿಂಗ್ ಶುರುವಾಗಿತ್ತು. ಆಗಲೇ ಬಳ್ಳೇಹಾಡಿಗೆ ಬಂದವನು ತನ್ನೂರಿನ ಆದಿವಾಸಿಗಳನ್ನೇ ಹೀಯಾಳಿಸಲಾರಂಭಿಸಿದ್ದ. ಬೆಂಗಳೂರಿನಿಂದ ದುಬಾರಿಯ

...ಟು-ಶರ್ಟ್ ಕೊಂಡೊಯ್ದು ಬಹುಮಾನದ ...ವನ್ನು ಹೆಚ್.ಡಿ.ಕೋಟೆಯ ಬ್ಯಾಂಕ್‌ನಲ್ಲಿ ...ಮಾಗಿಟ್ಟಿದ್ದನಾದರೂ ಬೇರೆ ಆದಾಯವಿಲ್ಲದ್ದರಿಂದ ...ವನ ಮೇಲೆಯೇ ಸಾಲ ಪಡೆದ. ಪಲ್ಸರ್ ಬೈಕ್ ಖರೀದಿಸಿ ಅದಕ್ಕೆ ಟ್ಯಾಂಕಿನ ತುಂಬ ಪೆಟ್ರೋಲ್ ...ಕೊಂಡು ಬೆಂಗಳೂರಿಗೆ ಬರುತ್ತಿದ್ದ. ಹಿಂದೆಲ್ಲ ಭಿಕ್ಷೆ ... ಕುಡಿಯುತ್ತಿದ್ದವನು ಹೆಚ್.ಡಿ. ಕೋಟೆಯ ...ಂತ ಬ್ರಾಂಡೆಡ್ ವಿಸ್ಕಿ ತರಿಸಿಕೊಳ್ಳತೊಡಗಿದ.

...ವತ್ತು ಜಂಗಲ್ ಜಾಕಿ ಚಿತ್ರದ ಶೂಟಿಂಗ್ ...ಯಿತೋ ರಾಜೇಶ ಅಕ್ಷರಶಃ ಹುಚ್ಚನಂತಾಗಿಬಿಟ್ಟ. ...ರೋ. ಈ ಚಿತ್ರ ರಿಲೀಸ್ ಆಗಿದ್ದೇ ತಡ ...ಪುನೀತ್, ದರ್ಶನ್, ಗಣೇಶ್ ಮಟ್ಟಕ್ಕೇರುತ್ತೇನೆ. ...ಟಿಗಟ್ಟಲೇ ದುಡ್ಡು ಬಂದುಬೀಳುತ್ತದೆ. ತನಗೆ ... ಅಭಿಮಾನಿಗಳಿದ್ದಾರೆ. ಅವರೆಲ್ಲ 'ಜಂಗಲ್ ಜಾಕಿ' ...ಗಾಗಿ ಕಾತೊರೆಯುತ್ತಿದ್ದಾರೆ... ಎಂದೇ ಭ್ರಮಿಸಿದ್ದ. ...ತ್ನಂತೆ ಹೀರೋಯಿನ್ ಐಶ್ವರ್ಯಳನ್ನು ತನ್ನ ...ಎಂಬಂತೆ 'ಹೋಗೇ', 'ಬಾರೆ' ಎಂದು ಶೂಟಿಂಗ್ ...ಕ್ಕೆ ಮಾಡುತ್ತಿದ್ದ. ಮತ್ತೊಂದೆಡೆ ಐಶ್ವರ್ಯಳೇ ...ಕನನ್ನು ಬೆಂಗಳೂರಿನ ಮಾಲುಗಳಿಗೆ ...ಯುತ್ತಿದ್ದಳು.

...ಗಲ್ ಜಾಕಿ ಶೂಟಿಂಗ್ ಅರ್ಧಂಬರ್ಧ ...ಯುವ ಹೊತ್ತಿಗಾಗಲೇ ರಾಜೇಶ್, ಐಶ್ವರ್ಯರ ... ಇತ್ಯಾದಿಗಳೆಲ್ಲ ಭರಾಟೆಯಿಂದಲೇ ಸುದ್ದಿಯಾದವು. ...ಸಿನಿಮಾಕ್ಕೆ ಬಂಡವಾಳ ಬೇಕಲ್ಲ- ದುಡ್ಡು ಹುಟ್ಟದೇ ... ಶೂಟಿಂಗ್ ನಿಂತಾಗ ತನ್ನ ಹುಟ್ಟೂರಿಗೆ ವಾಪಸ್ಸಾದ ... ವರ್ತನೆಯೇ ಬದಲಾಗಿತ್ತು. ಹೀರೋಯಿನ್ ...ನ್ನೇ ತಾನು ಮದುವೆಯಾಗೋದು ಎಂದು ...ಸುತ್ತಿದ್ದ. ಎಲ್ಲೆಂದರಲ್ಲಿ ಸಾಲ ಮಾಡಿದ. ಪದೇಪದೇ ...ರಿಗೆ ಬಂದು ಐಶ್ವರ್ಯಳ ಮುಂದೆ ಪೋಜು ...ದ್ದ.



ಪರಿಹಾರ ಕೋರಿ ಟೀವಿ ವಿರುದ್ಧ ಕೋರ್ಟಿಗೆ

ಪ್ರಾರಂಭದಲ್ಲಿ ಟೀವಿ ಸಂಯೋಜಕರಾದ ಅತುಲ್ ಬಾಲಾಜಿ, ಶರಣಯ್ಯ, ಪದ್ಮನಾಭ ಮುಂತಾದವರೆಲ್ಲ ಹೇಳಿದ್ದು ಇದು ಆದಿವಾಸಿ ಗಿರಿಜನರ ಸಮಸ್ಯೆ ಕುರಿತ ಕಾರ್ಯಕ್ರಮ ಎಂದು. ಆದರೆ ನಡೆದದ್ದು ವಿಕೃತ ಚೇಷ್ಟೆಗಳ ಷೋ. ಟಿಆರ್‌ಪಿ ದಾಹಕ್ಕೆ ಬಿದ್ದು ಮುಗ್ಧ ಯುವಕನನ್ನು ಇಲ್ಲಸಲ್ಲದ ಫಜೀತಿಗೆ ದಬ್ಬಿ ಆತನಲ್ಲಿ ಇಲ್ಲದ ಭ್ರಮೆ ಹುಟ್ಟಿಸಿ ಹುಚ್ಚನನ್ನಾಗಿಸಿ ಅಂತಿಮವಾಗಿ ಆತನ ಸಾವಿಗೆ ಕಾರಣರಾದ ಟೀವಿಗಳ ವಿರುದ್ಧ ಪರಿಹಾರ ಕೋರಿ ಮೊಕದ್ದಮೆ ಹೂಡುವ ಪ್ರಯತ್ನವೊಂದು ಸದ್ದಿಲ್ಲದೆ ನಡೆಯುತ್ತಿದೆ.

ಈ ನಿಟ್ಟಿನಲ್ಲಿ ರಾಜೇಶನ ತಂದೆ ಕೃಷ್ಣಪ್ಪ, ತಾಯಿ ಲಕ್ಷ್ಮಮ್ಮ ಮತ್ತು ಆದಿವಾಸಿ ಕೃಷಿಕರ ಸಂಘದ ಅಧ್ಯಕ್ಷ ಸೋಮಣ್ಣ ಸೇರಿಕೊಂಡು ಟೀವಿ ಚಾನಲ್ ವಿರುದ್ಧ ಪರಿಹಾರ ಕೋರಿ ನ್ಯಾಯಾಲಯದ ಮೊರೆ ಹೋಗುತ್ತಾರಂತೆ.

ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸಿದ ಆತನ ತಂದೆತಾಯಿ ಕಾವ್ಯ ಎಂಬ ಜೇನುಕುರುಬರ ಹುಡುಗಿಯನ್ನು ನೋಡಿ ಮದುವೆ ಮಾಡಿದ್ದಾರೆ. ಆದರೆ ರಾಜೇಶ ಕಾವ್ಯಳಲ್ಲಿ ಐಶ್ವರ್ಯಳನ್ನು ಕಾಣುತ್ತಿದ್ದ. ಆತನ ತಲೆತುಂಬ ಪ್ಯಾಟೆಯ ಲೈಫೇ ತುಂಬಿತ್ತು. ಐಶ್ವರ್ಯಳ ಚಮಕು, ಗಿಲೀಟು ತನ್ನ ಪತ್ನಿಯಲ್ಲಿಲ್ಲದ್ದನ್ನು ಕಂಡು ಪದೇಪದೇ ವ್ಯಗ್ರನಾಗುತ್ತಿದ್ದ. ಬ್ಯೂಟಿ ಪಾರ್ಲರ್ ಗೊತ್ತಿಲ್ಲದ್ದಕ್ಕೆ ಹೀಯಾಳಿಸುತ್ತಿದ್ದ. ನಿಂತ ಜಂಗಲ್ ಜಾಕಿ ಶೂಟಿಂಗ್, ಹಿಂಸೆ ತಾಳಲಾರದೆ ತವರು ಸೇರಿಕೊಂಡ ಪತ್ನಿಯ ಫಜೀತಿ, ಇನ್ನೊಂದೆಡೆ ಐಶ್ವರ್ಯಳ ಮೇಲಿನ ವ್ಯಾಮೋಹ, ಮಗದೊಂದೆಡೆ ನಿಯಮಿತ ಆದಾಯವಿಲ್ಲದೆ ಇದ್ದ ದುಡ್ಡೆಲ್ಲ ಖಾಲಿಯಾದ ಹತಾಶೆ; ಹೀಗೆ ಭ್ರಮೆಗೂ ವಾಸ್ತವಕ್ಕೂ ತಾಕಲಾಟಗಳಲ್ಲೇ ತಟ್ಟಾಡಿದ ರಾಜೇಶ ಪದೇ ಪದೇ ಸಿಡಿಮಿಡಿಗೊಳ್ಳುತ್ತಿದ್ದ.

ಅಂತಿಮವಾಗಿ ಹುಚ್ಚ ಎನ್ನಿಸಿಕೊಂಡು ಸರಗೂರಿನ ವಿವೇಕಾನಂದ ಆಸ್ಪತ್ರೆ ಸೇರಿದವನು ಅಲ್ಲಿಂದ ಮೈಸೂರಿನ ಕೆ.ಆರ್. ಆಸ್ಪತ್ರೆ ಪಾಲಾಗಿದ್ದಾನೆ. ಕೆ.ಆರ್. ಆಸ್ಪತ್ರೆಯ ಮನೋರೋಗ ತಜ್ಞ ಡಾ. ರವೀಶ್ ಪ್ರಕಾರ ಅದು **Biopolar mood disorder.** ಅಂದರೆ ಬಾಹ್ಯ ಒತ್ತಡ ಮತ್ತು ಆಂತರಿಕ ತುಮುಲಗಳ ನಡುವಿನ ಸಂಘರ್ಷ!

ವಿಪರ್ಯಾಸವೆಂದರೆ ಆತ ಮನೋರೋಗಿಯಾಗಿ ಕೆ.ಆರ್. ಆಸ್ಪತ್ರೆಯಲ್ಲಿ ಮಲಗಿದ್ದರೆ ಇದು ಕೂಡ ರಿಯಾಲಿಟಿ ಷೋನ ಮತ್ತೊಂದು ಟಿಆರ್‌ಪಿ ಮೂಲವೆಂಬಂತೆ ಬೇಟೆಗಿಳಿದ ಇದೇ ಟೀವಿಗಳು ಆತನ ಬಗ್ಗೆ ಚಿತ್ರವಿಚಿತ್ರ 'ಬ್ರೇಕಿಂಗ್ ನ್ಯೂಸ್' ಬಿತ್ತರಿಸತೊಡಗಿದವು. ಜಂಗಲ್ ಜಾಕಿ ಬಿಡುಗಡೆಯಾಗದೆ ಇರುವುದರ ವಿರುದ್ಧ ರೊಚ್ಚಿಗೆದ್ದ ರಾಜೇಶ ಆತ್ಮಹತ್ಯೆಗೆ ಯತ್ನಿಸಿದ್ದಾನೆಂದು ಕತೆ ಕಟ್ಟಿ ತಮ್ಮ ಪಾಪವನ್ನು ಮುಚ್ಚಿಕೊಂಡ ಟೀವಿಗಳಿಂದಾಗಿ ರಾಜೇಶನ ಪಿತ್ಥ ಮತ್ತಷ್ಟು ಕೆರಳಿತು. ವಿಚಿತ್ರವೆಂದರೆ ಇದೇ ಹೊತ್ತಿಗೆ ಶುರುವಾದ ಈ ಟೀವಿಯ 'ಬಿಗ್‌ಬಾಸ್' ಎಂಬ ಮತ್ತೊಂದು ರಿಯಾಲಿಟಿ ಷೋಗೂ ರಾಜೇಶನನ್ನೇ ಆಯ್ಕೆ ಮಾಡಲಾಯಿತು.

ಆದರೆ ರಾಜೇಶನ ಹುಚ್ಚಾಟ ಕಮ್ಮಿಯಾಗದೆ ಇನ್ನೂ ಅತಿರೇಕಕ್ಕೆ ಹೋಗಿದ್ದರಿಂದಾಗಿ ನಾಮಕಾವಸ್ತೆಗಷ್ಟೇ ಆತನನ್ನು ಬಿಗ್‌ಬಾಸ್ ಮನೆಗೆ ಕರೆಸಿ ಹೊರದಬ್ಬಲಾಯಿತು. ಇದರ ಫಲವಾಗಿ ಸಂಭವಿಸಿದ ಮತ್ತೊಂದು ಅತಿರೇಕವೆಂದರೆ ಮೊದಲೇ ಹುಚ್ಚನಂತಾಗಿದ್ದ ರಾಜೇಶನನ್ನು ನಂದನ್ ಪ್ರಭು ಎಂಬ ಮತ್ತೊಬ್ಬ ಯಡವಟ್ಟು ಚಿತ್ರ ನಿರ್ದೇಶಕ ಹಿಡಿದು ತಂದು 'ಲವ್ ಈಸ್ ಪಾಯ್ಸನ್' ಎಂಬ ಚಿತ್ರಕ್ಕೆ ಹೀರೋ ಮಾಡಿದ್ದು. ಸೋಮಶೇಖರ್ ಎಂಬಾತ ನಿರ್ಮಿಸಿದ್ದ ಈ ಚಿತ್ರದಲ್ಲಿ ರಾಜೇಶನದ್ದು ಸೆಕ್ಸಿ ನಟಿ ಪೂನಂ ಪಾಂಡೆ ಜೊತೆ ಕುಣಿಯುವ ಚಿತ್ರ.

ಸಾಲದ್ದಕ್ಕೆ ಡೆವಿಡ್ ಎಂಬಾತ ಇದೇ ರಾಜೇಶನಿಗೆ 25 ಸಾವಿರ ರೂಪಾಯಿ ಅಡ್ವಾನ್ಸ್ ಕೊಟ್ಟು ತನ್ನ 'ವನರಾಜ' ಎಂಬ ಚಿತ್ರಕ್ಕೆ ನೀನೇ ಹೀರೋ ಎಂದು ಅಟ್ಟಕ್ಕೇರಿಸಿಬಿಟ್ಟ. ಜಂಗಲ್ ಜಾಕಿಗೆ ಬಂದ ಸಂಭಾವನೆ 1 ಲಕ್ಷ ಮಾತ್ರ. ಲವ್ ಈಸ್ ಪಾಯ್ಸನ್‌ಗೆ ಹೆಚ್ಚೆಂದರೆ ಎರಡು ಲಕ್ಷ ಕೊಟ್ಟಿರಬೇಕು. ನಾನೊಬ್ಬ ಸ್ಟಾರ್, ತನಗೆ ಲಕ್ಷಾಂತರ ಅಭಿಮಾನಿಗಳಿದ್ದಾರೆ, ತನ್ನ ಪ್ರತಿ ನಡೆನುಡಿಯನ್ನೂ ಜನ ಕುತೂಹಲದಿಂದ ಕಾಯುತ್ತಿದ್ದಾರೆ. ಹೀಗಿದ್ದೂ ಐಷಾರಾಮಿ ಬದುಕಿಗೆ ದುಡ್ಡಿಲ್ಲ. ನಿಯಮಿತ ಆದಾಯವೂ ಇಲ್ಲ ಜೊತೆಗೆ ಪತ್ನಿ ಬೇರೆ ತವರು ಪಾಲಾಗಿ ತಾನು ಆಸೆಪಟ್ಟ ಐಶ್ವರ್ಯಳೂ ಒಲಿಯಲಿಲ್ಲ ಎಂಬ ಭ್ರಮೆಗೆ ಬಿದ್ದೇ ಹುಚ್ಚನಾದ ಕಾಡಿನ ಹುಡುಗ ರಾಜೇಶ ಈಗ ಹೆಣವಾಗಿದ್ದಾನೆ.

ಅದು ಆತ್ಮಹತ್ಯೆಯಿರಬಹುದು ನಿಜ. ಆದರೆ ಆತನನ್ನು ಇದಕ್ಕೆ ದೂಡಿದವರ್ಯಾರು? ರಿಯಾಲಿಟಿ ಷೋ ಹುಟ್ಟು ಹಾಕಿದ ರಿಯಾಲಿಟಿಯನ್ನು ಅರಿಯದೇ ಬಲಿಯಾದ ರಾಜೇಶನ ದುರಂತಕ್ಕೆ ಟೀವಿಗಳಲ್ಲದೇ ಬೇರೆ ಕಾರಣವುಂಟೆ?

- ರಾ. ಸೋಮನಾಥ್

...ಮದುವೆಗೆ ಪೀಡಿಸಿದ ಪ್ರೇಮಿಯನ್ನೇ ತುಂಡರಿಸಿ ಕೊಂದ

...ಕೆ ನಟಿಯಾಗಬೇಕೆಂದು ಹಂಬಲಿಸಿದ್ದ ಸುಂದರ ...ಿ. ಆತ ಭಾರತೀಯ ನೌಕಾಪಡೆಯಲ್ಲಿ ...ಯಾಗಿದ್ದ ಸ್ವರೂಪ್ರಿ. ಮತ್ತೊಬ್ಬ ಟಿವಿ ಚಾನೆಲ್‌ನಲ್ಲಿ ...ಮಾಡುತ್ತಿದ್ದ ಯುವಕ. ಈ ಮೂವರ ಬದುಕು ...ಕನಸುಗಳು ಒಂದಕ್ಕೊಂದು ಡಿಕ್ಕಿ ಹೊಡೆದು, ಆ ...ಯುವಕನ ಸಾವಿನಲ್ಲಿ ಅಂತ್ಯಗೊಂಡಿತ್ತು.

...ಯಾ ಸುಸೈರಾಜ್ ಪ್ರಕರಣ ನೆನಪಿರಬೇಕಲ್ಲವೇ. ...ರಡು ಕನ್ನಡ ಸಿನಿಮಾಗಳಲ್ಲಿ ನಟಿಸಿದ್ದ ಮೈಸೂರಿನ ... ಮರಿಯಾ ಹೆಚ್ಚಿನ ಅವಕಾಶಗಳನ್ನು ಅರಸಿ ...ಗೆ ಹಾರಿಹೋಗಿದ್ದಳು. ಅಲ್ಲೋ, ಈಕೆಯಂತೆ ... ಲೋಕದ ಕನಸುಗಳನ್ನು ಕಟ್ಟಿಕೊಂಡಿರುವ, ...ಷ್ಟೇ ಪ್ರತಿಭೆ ಹೊಂದಿರುವ, ಈಕೆಗಿಂತಲೂ ...ಮರಾದ ಯುವತಿಯರಿಗೆ ಲೆಕ್ಕವಿಲ್ಲ. ಮುಂಬೈನ ...ಲೋಕಕ್ಕೆ ಪ್ರವೇಶ ಪಡೆಯುವುದು ಅಷ್ಟು ...ಸಲ್ಲ. ಬಾಲಿವುಡ್‌ಗೆ ಪ್ರವೇಶ ...ಬೇಕೆಂದರೆ ಒಂದೋ ...ದರ್‌ಗಳಿರಬೇಕು, ಇಲ್ಲಾ ಯಾರೂ ...ಗದಂತಹ ಪ್ರತಿಭೆ ಹೊಂದಿರಬೇಕು, ... ಇಲ್ಲವೆಂದರೆ ಕಾಮಿಗಳಿಗೆ ಮೈ ...ಕು.



ಕಾಂತ

...ರಿಯಾಳಿಗೆ ಬಾಲಿವುಡ್‌ನಲ್ಲಿ ಯಾರೂ ... ಇರಲಿಲ್ಲ. ಆಕೆಯಲ್ಲಿ ಅಂತಹ ...ಭೆ ಇರಲಿಲ್ಲ. ಆಗ ಆಕೆ ಮಾಡಿಕೊಂಡಿದ್ದು ... ಅಂದ್ರೆ, ಟಿವಿ ಚಾನೆಲ್ ಒಂದರಲ್ಲಿ ಪ್ರೋಗ್ರಾಮ್ ...ನಾಗಿದ್ದ ನೀರಜ್ ಗ್ರೋವರ್ ಜೊತೆಗೆ ಸಂಬಂಧ ...ರು. ಅದಕ್ಕೆ ಕಾರಣ ಆತನಾದರೂ ತನಗೆ ...ಗಳಲ್ಲಿ ಅವಕಾಶಗಳನ್ನು ಕೊಡಿಸುತ್ತಾನೆಂಬ ...

...ಸೂರಿನಲ್ಲಿ ಆಕೆಯೊಂದಿಗೆ ಬೆಳೆದಿದ್ದ ಅವಳನ್ನು ...ಗಿ ಪ್ರೀತಿಸುತ್ತಿದ್ದ, ಮದುವೆಯಾಗಬೇಕೆಂದು ...ದ್ದ, ಆಕೆಯೊಂದಿಗೆ ನಿಶ್ಚಿತಾರ್ಥವನ್ನೂ ...ಂಡಿದ್ದ ಎಮಿಲಿ ಜೆರೋಮ್‌ಗೆ ತನ್ನ ಮತ್ತು ...ನಡುವಿನ ಸಂಬಂಧದ ಬಗ್ಗೆ ಗೊತ್ತಾಗುತ್ತದೆಂದು ... ಊಹಿಸಿರಲಿಲ್ಲ. ಮರಿಯಾಳ ನಡವಳಿಕೆ ಬಗ್ಗೆ ...ಗೊಂಡ, ಎಮಿಲಿ ಒಂದು ರಾತ್ರಿ ಇದ್ದಕ್ಕಿದ್ದಂತೆ ...ನಲ್ಲಿರುವ ನೌಕಾನೆಲೆಯಿಂದ ಮುಂಬೈಗೆ ...ಬಂದಿದ್ದ. ಸೂರ್ಯ ಮೂಡುವ ಮುನ್ನವೇ ...ಳ ಮನೆಯ ಕಾಲಿಂಗ್ ಬೆಲ್ ಒತ್ತಿದ್ದ. ಹೊರಗೆ ... ಎಮಿಲಿ ಇದ್ದಿದ್ದೊಂದು ಗೊತ್ತಿರದ ಮರಿಯಾ ... ತೆರೆದಿದ್ದಳು. ಆಕೆಯನ್ನು ತಳ್ಳಿ, ಸರಿಸಿ ...ಳಗೆ ಧಾವಿಸಿದ ಎಮಿಲಿ ಕಣ್ಣಿಗೆ ಬಿದ್ದದ್ದು ... ನಿದ್ರಿಸುತ್ತಿದ್ದ ನೀರಜ್.

ಎಮಿಲಿಗೆ ಅದೆಷ್ಟು ಕೋಪ ಬಂತೆಂದರೆ ಆತ ನೀರಜ್ ಮೇಲೆ ಎಗರಿ ಬಿದ್ದ. ಹೇಳಿಕೇಳಿ ಎಮಿಲಿ ನೌಕೆಯಲ್ಲಿದ್ದ ಆಸಾಮಿ. ಕಟ್ಟುಮಸ್ತಾದ ಮೈ. ಆತನ ಎದುರು ನೀರಜ್‌ನ ದೈಹಿಕ ಶಕ್ತಿ ಯಾವ ಲೆಕ್ಕಕ್ಕೂ ಇರಲಿಲ್ಲ. ಸ್ವಲ್ಪ ಹೊತ್ತಿನಲ್ಲೇ ನೀರಜ್ ನೆಲಕ್ಕೆ ಉರುಳಿದ. ಅಷ್ಟಕ್ಕೆ ಎಮಿಲಿಯ ಕೋಪ ಶಮನಗೊಳ್ಳಲಿಲ್ಲ. ಅಡುಗೆ ಮನೆಯಿಂದ ಚಾಕು ಒಂದನ್ನು ತಂದು ನೀರಜ್‌ನನ್ನು ಮತ್ತೆ ಮತ್ತೆ ಇರಿದು ಕೊಂದು ಹಾಕಿದ.

ಅದಾದನಂತರ ಎಮಿಲಿ ಮತ್ತು ಮರಿಯಾ ಮಾಡಿದ್ದು ಮೈ ನಡುಗಿಸುವಂತಿತ್ತು. ಮರಿಯಾ ಅಂಗಡಿಯೊಂದಕ್ಕೆ ಹೋಗಿ, ಮಾಂಸ ಕತ್ತರಿಸುವ ದೊಡ್ಡ ಚಾಕುಗಳನ್ನು, ಹಲವಾರು ಬೆಡ್‌ಶೀಟ್ ಮತ್ತು ಕರ್ಟನ್‌ಗಳನ್ನು ಖರೀದಿಸಿ ತಂದಳು. ಎಮಿಲಿ ಆ ಚಾಕುವಿನಿಂದ ನೀರಜ್ ದೇಹವನ್ನು ಚಿಕ್ಕ ಚಿಕ್ಕ ತುಂಡುಗಳಾಗಿ ಕತ್ತರಿಸುತ್ತಿರುವಾಗ ಮರಿಯಾ ಮನೆಯಲ್ಲೆಲ್ಲ ಹರಡಿದ್ದ ರಕ್ತದ ಕಲೆಗಳನ್ನು ಒರೆಸಿದಳು. ರಕ್ತಮಯವಾಗಿದ್ದ ಬೆಡ್‌ಶೀಟ್ ಮತ್ತು ಕರ್ಟನ್‌ಗಳನ್ನು ಬದಲಾಯಿಸಿದಳು. ಕತ್ತಲಾದನಂತರ ಎಮಿಲಿ ಮತ್ತು ಮರಿಯಾ ಸ್ನೇಹಿತರಿಂದ ಕಾರ್ ಒಂದನ್ನು ಪಡೆದು ಮುಂಬೈನ ವಿವಿಧ ಕಡೆ ನೀರಜ್‌ನ ದೇಹದ ತುಂಡುಗಳನ್ನು ಬಿಸಾಡಿದರು.

ನೀರಜ್ ಕೊಲೆಯ ಪ್ರಕರಣವನ್ನು ಪತ್ತೆ ಮಾಡಿದ ಮುಂಬೈ ಪೊಲೀಸರಿಗೆ ಕೊನೆಗೂ ಸಿಕ್ಕಿದ್ದು ಅವನ ಒಂದು ಕಾಲಿನ ಒಂದಡಿಯಷ್ಟು ಭಾಗ ಮಾತ್ರ. ಈ ಕೊಲೆ ಪ್ರಕರಣದಲ್ಲಿ ಮರಿಯಾಳಿಗೆ ಶಿಕ್ಷೆಯಾಗಿ ಆಕೆ ಈಗ ಬಿಡುಗಡೆಗೊಂಡಿದ್ದಾಳೆ. ಆದರೆ ಎಮಿಲಿ ಜೆರೋಮ್‌ಗೆ ನ್ಯಾಯಾಲಯ ಹತ್ತು ವರ್ಷಗಳ ಕಠಿಣ ಸಜೆಯನ್ನು ವಿಧಿಸಿದ್ದು ಆತ ಈಗಲೂ ಜೈಲಿನಲ್ಲಿದ್ದಾನೆ.

ನೀರಜ್ ಕೊಲೆ ನಡೆದು ಐದು ವರ್ಷಗಳೇ ಉರುಳಿಹೋಗಿವೆ. ಆದರೂ ಅದರ ಬಗ್ಗೆ ಯಾಕೆ ನೆನಪಿಸಬೇಕಾಯಿತೆಂದರೆ ಮೊನ್ನೆ ಅದೇ ಮುಂಬೈಯಲ್ಲಿ ಮತ್ತೆ ಅಂತಹದ್ದೇ ಇನ್ನೊಂದು ಭೀಕರ ಕೊಲೆ ನಡೆದಿದೆ. ವಿಚಿತ್ರ ಸಂಗತಿ ಯಾವುದೆಂದರೆ ಈ ಪ್ರಕರಣದಲ್ಲೂ ಕೊಲೆ ಮಾಡಿದವನು ಕರ್ನಾಟಕ ಮೂಲದವನು!

ಅವನ ಹೆಸರು ಪ್ರಭಾಕರ ಶೆಟ್ಟಿ. 36 ಪ್ರಾಯದ ಶೆಟ್ಟಿ ಮೂಲತಃ ಕರಾವಳಿಯವನು. ಆತ ಮುಂಬೈಯಲ್ಲಿನ ಒಂದು ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ. ಮೂರು ವರ್ಷಗಳ ಹಿಂದೆ ಆತ ಮಂಗಳೂರಿಗೆ ರಜೆ ಮೇಲೆ ಬಂದು ಮುಂಬೈಗೆ ವಾಪಸಾಗುತ್ತಿದ್ದಾಗ ರೈಲಿನಲ್ಲಿ ಪರಿಚಯ ಆದವಳು ಕಾಂತಾ.

ಕಾಂತಾ ಕೂಡ ಮಂಗಳೂರಿನವಳೇ. ... ಮಾಡುತ್ತಿದ್ದವಳು, ಮದುವೆಯಾದ ಕಾಂತಾ ಫ್ಯಾಷನ್ ಡಿಸೈನರ್ ಆಗಿದ್ದಳು. ಆಕೆಗೆ ಒಂದು ಗಂಡು ಮಗುವೂ ಇತ್ತು. ಆಕೆಯ ದಾಂಪತ್ಯ ಜೀವನ ಹೇಗಿತ್ತೋ, ಗೊತ್ತಿಲ್ಲ ಆದರೆ ಎರಡು ವರ್ಷಗಳ ಹಿಂದೆ ಆಕೆಯ ಪತಿ ಆತ್ಮಹತ್ಯೆ ಮಾಡಿಕೊಂಡ. ಆನಂತರ ಕಾಂತಾ ಮತ್ತು ಪ್ರಭಾಕರನ ನಡುವೆ ಸಂಬಂಧ ಏರ್ಪಟ್ಟಿತು.

ಪ್ರಭಾಕರನನ್ನು ಪ್ರೀತಿಸುತ್ತಿದ್ದ ಕಾಂತಾ ಮದುವೆ ಆಗೋಣ ಎಂದು ಇತ್ತೀಚೆಗೆ ಒತ್ತಾಯ ಮಾಡಲಾರಂಭಿಸಿದ್ದಳು. ಆದರೆ ಆತನಿಗೆ ಈ ಹಿಂದೆ ಬೇರೆಯವರನ್ನು ಮದುವೆಯಾಗಿದ್ದ, ಒಂದು ಮಗುವಿನ ತಾಯಿಯಾಗಿದ್ದ ಕಾಂತಾಳನ್ನು ಮದುವೆ ಆಗಲು ಒಂದಿಷ್ಟೂ ಇಷ್ಟವಿರಲಿಲ್ಲ. ಅಷ್ಟೇ ಅಲ್ಲ, ಆತನ ಹೆತ್ತವರು ಆತನಿಗೆ ಇತ್ತೀಚೆಗೆ ಮಂಗಳೂರಿನಲ್ಲಿ ಓರ್ವ ಯುವತಿಯನ್ನು ನೋಡಿದ್ದರು. ಇದೇ ನವೆಂಬರ್ 29ರಂದು ಪ್ರಭಾಕರ ಮತ್ತು ಆ ಯುವತಿಯ ನಿಶ್ಚಿತಾರ್ಥ ಕಾರ್ಯಕ್ರಮವೂ ನಡೆಯುವುದಿತ್ತು.



ಪ್ರಭಾಕರ ಶೆಟ್ಟಿ

ಇದು ಗೊತ್ತಾಗಿದ್ದೇ ತಡ, ಕಾಂತಾ ಪ್ರಭಾಕರ ತನ್ನನ್ನೇ ಮದುವೆ ಆಗಬೇಕೆಂದು ಹಟ ಮಾಡಲಾರಂಭಿಸಿದಳು, ಮತ್ತೆ ಮತ್ತೆ ಆತನನ್ನು ಪೀಡಿಸಲಾರಂಭಿಸಿದಳು. ಪ್ರಭಾಕರನಿಗೆ ರೋಸಿಹೋಯಿತು. ಮರಿಯಾ-ಎಮಿಲಿ ಪ್ರಕರಣವನ್ನು ನೆನಪಿಸಿಕೊಂಡ ಆತ ನೀರಜ್‌ನನ್ನು ಕೊಲೆ ಮಾಡಿದಂತೆ ಕಾಂತಾಳನ್ನೂ ಕೊಲೆ ಮಾಡಲು ನಿರ್ಧರಿಸಿದ.

ಕಳೆದ ಅಕ್ಟೋಬರ್ 29ರಂದು ಕಾಂತಾ ಪ್ರಭಾಕರನ ಮನೆಗೆ ಹೋಗಿ ತನ್ನನ್ನು ಮದುವೆ ಆಗಬೇಕೆಂದು ಒತ್ತಾಯ ಮಾಡಲಾರಂಭಿಸಿದಳು. ಆಕೆ ಹಾಗೆ ಮಾಡುತ್ತಾಳೆಂದು ಅರಿತಿದ್ದ ಪ್ರಭಾಕರ ಈ ಬಾರಿ ತಯಾರಾಗಿದ್ದ. ಆಕೆಯನ್ನು ಯಾವುದೋ ನೆಪದ ಮೇಲೆ ಬಚ್ಚಲು ಮನೆಗೆ ಕರೆದುಕೊಂಡು ಹೋದ. ಅಲ್ಲಿ ಮಾಂಸ ಕತ್ತರಿಸುವ ಚಾಕುವನ್ನು ಇಟ್ಟಿದ್ದ ಪ್ರಭಾಕರ ಅದನ್ನು ಎತ್ತಿಕೊಂಡು ಕಾಂತಾಳ ಕತ್ತನ್ನು ಕತ್ತರಿಸಿ ಹಾಕಿದ. ಆಕೆ ಸತ್ತ ನಂತರ ಆಕೆಯ ರುಂಡವನ್ನು ಮುಂಡದಿಂದ ಬೇರ್ಪಡಿಸಿದ. ಆನಂತರ ಆಕೆಯ ಕೈಕಾಲುಗಳನ್ನೂ ಕತ್ತರಿಸಿ ಹಾಕಿದ.

ಮರಿಯಾ ಮತ್ತು ಎಮಿಲಿ ಮಾಡಿದ್ದಂತೆ ಕಾಂತಾಳ ಶವದ ಬಿಡಿ ಭಾಗಗಳನ್ನು ಬೇರೆ ಬೇರೆ ಕಡೆ ಬಿಸಾಡಲು ನಿರ್ಧರಿಸಿದ. ಕಾಂತಾಳ ರುಂಡವನ್ನು ಒಂದು ಪ್ಲಾಸ್ಟಿಕ್ ಕವರ್‌ನಲ್ಲಿ ಇಟ್ಟುಕೊಂಡು ಒಂದು ಆಟೋ ಏರಿದ ಪ್ರಭಾಕರ ಅದನ್ನು ಚೆಂಬೂರ್‌ನಲ್ಲಿರುವ ಚರಂಡಿಯಲ್ಲಿ ಬಿಸಾಡಿದ. ಮನೆಗೆ ಹಿಂದಿರುಗಿದ ನಂತರ ಕೈಕಾಲುಗಳಿಲ್ಲದ ಆಕೆಯ ಮುಂಡ ಇದ್ದ ಇನ್ನೊಂದು ಪ್ಲಾಸ್ಟಿಕ್ ಚೀಲವನ್ನು ಎತ್ತಿಕೊಂಡು ಮತ್ತೊಂದು ಆಟೋ ಹತ್ತಿದ ಪ್ರಭಾಕರ. ಅದೇ ಚೆಂಬೂರ್‌ನಲ್ಲಿರುವ ಚರಾಯಿ ಎಂಬ ಕೆರೆಯಲ್ಲಿ ಅದನ್ನು ಬಿಸಾಡಿದ.

ಮತ್ತೆ ಮನೆಗೆ ಹಿಂದಿರುಗಿದ ಪ್ರಭಾಕರ ಆಕೆಯ ಕಾಲುಗಳಿದ್ದ ಇನ್ನೊಂದು ಪ್ಲಾಸ್ಟಿಕ್ ಕವರ್ ಎತ್ತಿಕೊಂಡು ಟ್ರಾಂಬೆ ಪ್ರದೇಶಕ್ಕೆ ಹೋಗಿ ಅದನ್ನು ಸಮುದ್ರಕ್ಕೆ ಎಸೆದ...

ಆದರೆ ಪ್ರಭಾಕರನ ದುರಾದೃಷ್ಟಕ್ಕೆ ಆತ ಹಾಗೆ ಎಸೆಯುತ್ತಿದ್ದದ್ದನ್ನು ಅಲ್ಲೇ ಇದ್ದ ಕೆಲವು ಮಕ್ಕಳು ನೋಡಿದರು. ಅವರಿಗೆ ಅನುಮಾನ ಬಂದು ಪೊಲೀಸರಿಗೆ ತಿಳಿಸಿದರು. ಪೊಲೀಸರು ಬಂದು ನೋಡಿದರೆ ಆ ಕವರ್‌ನಲ್ಲಿ ಮಹಿಳೆಯ ಕಾಲುಗಳಿದ್ದವು...


ಅಷ್ಟು ಹೊತ್ತಿಗೆ ಪ್ರಭಾಕರ ಅಲ್ಲಿಂದ ಮಾಯವಾಗಿದ್ದ. ಆನಂತರ ಆತ ತನ್ನ ಮನೆಯಲ್ಲಿದ್ದ ಕಾಂತಾಳ ಕೈಗಳಿದ್ದ ಕವರ್ ಅನ್ನು ಬೇರೆಲ್ಲೋ ಬಿಸಾಡಿದ. ಅವತ್ತು ರಾತ್ರಿ ಐದನೆ ಮತ್ತು ಕೊನೆ ಬಾರಿಗೆ ಮನೆಯಿಂದ ಹೊರಬಿದ್ದ ಪ್ರಭಾಕರ ಕೊಲೆ ಮಾಡಲು ಉಪಯೋಗಿಸಿದ್ದ ಚಾಕು ಮತು ರಕ್ತಸಿಕ್ತವಾಗಿದ್ದ ಕಾಂತಾಳ ಬಟ್ಟೆಗಳನ್ನು ಹೊತ್ತು ಅವುಗಳನ್ನೂ ಇನ್ನೆಲ್ಲೋ ಬಿಸಾಡಿದ.

ಮಾರನೆ ದಿನವಾದರೂ ತನ್ನ ತಾಯಿ ಮನೆಗೆ ಹಿಂದಿರುಗದಿದ್ದಾಗ ಕಾಂತಾಳ ಹನ್ನೊಂದು ವರ್ಷದ ಮಗನಿಗೆ ಯೋಚನೆ ಆಯಿತು. ಅಮ್ಮ ಮನೆಗೆ ಬಂದಿಲ್ಲ ಎಂದು ತನ್ನ ಚಿಕ್ಕಮ್ಮ ಸುಹಾಸಿನಿಗೆ ಹೇಳಿದ. ತನ್ನ ಅಕ್ಕ ನಾಪತ್ತೆ ಆಗಿದ್ದಾಳೆಂದೂ, ಆಕೆಗೆ ಪ್ರಭಾಕರನೊಂದಿಗೆ ಸಂಬಂಧ ಇತ್ತೆಂದೂ, ತನಗೆ ... ಮೇಲೆ ಅನುಮಾನ ಇದೆಯೆಂದೂ ಸುಹಾಸಿನಿ ಪೊಲೀಸರಿಗೆ ದೂರು ನೀಡಿದರು.

ಪೊಲೀಸರು ಕಾಂತಾಳನ್ನು ಹುಡುಕುತ್ತಿದ್ದಾಗ ಮತ್ತೊಂದು ಪ್ರದೇಶದ ಪೊಲೀಸರಿಗೆ ಮಹಿಳೆಯೊಬ್ಬಳ ರುಂಡ ಸಿಕ್ಕಿತು. ಇನ್ನೊಂದು ಪ್ರದೇಶದ ಪೊಲೀಸರಿಗೆ ಕಾಲುಗಳಿದ್ದ ಕವರ್ ಸಿಕ್ಕಿತು. ಇನ್ನೊಂದು ಕಡೆ ಮುಂಡ ಸಿಕ್ಕಿತು. ಅವೆಲ್ಲವೂ ಒಂದೇ ಮಹಿಳೆಯ ದೇಹದ ಭಾಗಗಳೆಂದೂ, ಆ ದೇಹವು ಕಾಂತಾಳದ್ದೆಂದೂ ಪೊಲೀಸರು ಪತ್ತೆ ಹಚ್ಚಿದರು.

ಪ್ರಭಾಕರನನ್ನು ವಿಚಾರಣೆಗೆ ಕರೆದುಕೊಂಡು ಹೋದ ಪೊಲೀಸರು ಆತನಿಗೆ ಸರಿಯಾದ 'ವರ್ಗ' ಕೊಟ್ಟಿದ್ದರಿಂದ ತಾನೇ ಕಾಂತಾಳನ್ನು ಕೊಂದದ್ದೆಂದು ಒಪ್ಪಿಕೊಂಡಿದ್ದಾನೆ. ಆದರೆ ಇಲ್ಲಿಯವರೆಗೂ ಕಾಂತಾಳ ಕೈಗಳು ಪೊಲೀಸರಿಗೆ ಸಿಕ್ಕಿಲ್ಲ...

ಪ್ರಭಾಕರನಿಂದ ಕಾಂತಾ ಬಯಸಿದ್ದು ಒಂದಿಷ್ಟು ಪ್ರೀತಿ. ಒಂದಿಷ್ಟು ಸುಭದ್ರ ಬದುಕು. ಆದರೆ ಅವೇ ಕಾಂತಾಳ ದೇಹವನ್ನು ಕಡಿದ ಎರಡು ... ಪ್ರಭಾಕರ ಕೊನೆಗೂ ಆಕೆಗೆ ಕೊಟ್ಟಿದ್ದು ... ಅಲ್ಲ, ಸುಭದ್ರ ... ಸಾವು. ■





ಕನ್ನಡ ಮತ್ತು ಅದರ ಒಳನುಡಿಗಳ ವೈಶಿಷ್ಟ್ಯ

ಕನ್ನಡ ಭಾಷೆ ಚರಿತ್ರೆಯುದ್ದಕ್ಕೂ ಒಂದಲ್ಲ ಒಂದು ಸಮಸ್ಯೆ ಎದುರಿಸುತ್ತಲೇ ಬಂದಿದೆ. ಅನೇಕ ಸಲ ಬೇರೆ ಭಾಷೆಯ ಪ್ರಭಾವದಿಂದ ಕನ್ನಡ ಅಳಿದೇ ಹೋಯಿತು ಎಂದು ಹೇಳಿದ ಮಾತುಗಳೂ ಸಿಗುತ್ತವೆ. ಅದನ್ನೆಲ್ಲವನ್ನೂ ಎದುರಿಸುತ್ತಲೇ ಕನ್ನಡ ಆ ಎಲ್ಲ ಸಮಸ್ಯೆಗಳನ್ನು ತನ್ನಲ್ಲಿ ಅರಗಿಸಿಕೊಂಡು ಮತ್ತೆ ಹೊಸದಾಗಿ ಸನ್ನದ್ಧವಾಗಿ ನಿಂತಿದೆ. ಕೇಶಿರಾಜನ ಕಾಲಕ್ಕಾಗಲೇ ಕನ್ನಡ ಭಾಷೆಗೆ ಕುತ್ತು ಬಂದಿತ್ತು, ಆದ್ದರಿಂದಲೆ ಕನ್ನಡ ಹೇಗೆ ಬಳಸಬೇಕು ಎನ್ನುವುದನ್ನು ಆತ ಹೇಳಿದ. ಆಂಡಯ್ಯ ಅದಕ್ಕೆ ಪರ್ಯಾಯವಾಗಿ ಕನ್ನಡದ ಶಬ್ದಕೋಶದಲ್ಲೇ ಕಾವ್ಯ ಬರೆಯುವುದರ ಮೂಲಕ ಕನ್ನಡ ಉಳಿಸುವಲ್ಲಿ ಹೋರಾಡಿದ. ಹೀಗೆ ಚರಿತ್ರೆಯುದ್ದಕ್ಕೂ ಒಂದಲ್ಲ ಒಂದು ಸಮಸ್ಯೆ ಎದುರಾದಾಗಲೂ ಕನ್ನಡ ಆ ಸವಾಲನ್ನು ಎದುರಿಸಿ, ಬೇರೆ ಭಾಷೆಯ ಪದಗಳನ್ನು ತನ್ನಲ್ಲಿ ಒಂದಾಗಿಸಿಕೊಂಡು ಮತ್ತೆ ಬೆಳೆದುನಿಂತಿದೆ.


ಇತ್ತೀಚಿಗೆ ಅಂತರ್ಜಾಲದಲ್ಲಿ ನಡೆಸಿದ ಸರ್ವೆ ಪ್ರಕಾರ ಜಗತ್ತಿನಲ್ಲಿ ಇರುವ ಸುಮಾರು 5 ರಿಂದ 6 ಸಾವಿರ ಭಾಷೆಗಳಲ್ಲಿ ಎರಡು ವಾರಗಳಿಗೊಂದು ಭಾಷೆ ಸಾಯುತ್ತಿದೆ. ಆಸ್ಟ್ರೇಲಿಯ, ದಕ್ಷಿಣ ಆಫ್ರಿಕ, ಪೆರು, ಕೊಲಂಬಿಯ, ಭಾರತ ಮುಂತಾದ ದೇಶಗಳಲ್ಲಿನ ಜನಬಳಕೆಯ ಭಾಷೆಗಳು ಹೀಗೆ ಸಾಯುತ್ತಿರುವ ಭಾಷೆಗಳಾಗಿವೆ. ಜಗತ್ತಿನ ಅತ್ಯಂತ ಪುರಾತನ ಭಾಷೆಗಳಾದ ಹತ್ತು ಭಾಷೆಗಳಲ್ಲಿ ಒಂದಾದ ಕನ್ನಡಕ್ಕೆ ಕುತ್ತು ಬಂದಿದೆ ಎಂದು ವಿದ್ವಾಂಸರು ಹೇಳುತ್ತಿದ್ದಾರೆ. ಹಾಗೆ ನಾಶವಾಗುತ್ತಿರುವ ಭಾಷೆಗಳಲ್ಲಿ ಕನ್ನಡ ಅತ್ಯಂತ ವೇಗವಾಗಿ ನಾಶವಾಗುತ್ತಿರುವ ಭಾಷೆ ಆಗಿದೆ ಎನ್ನುವ ಮಾತುಗಳನ್ನು ಕೋಟ್ ಮಾಡಿ ಚಂದ್ರಶೇಖರ ಕಂಬಾರರು ಒಂದೆಡೆ ಲೇಖನ ಬರೆದಿದ್ದರು. ಇಂಥ ಸಂದರ್ಭದಲ್ಲಿ ಸರ್ವೆಗಳು ಮೇಲು ನೋಟಕ್ಕೆ ಭಯ ಹುಟ್ಟಿಸುತ್ತವೆ.

ಭಾಷೆ ಸಾಯುವುದು ಎಂದರೆ ಸಾಯುವ ಭಾಷೆಯಲ್ಲಿನ ಜ್ಞಾನ, ತಿಳಿವಳಿಕೆಯ ಸಾವು ಎಂದೇ ಡೇವಿಡ್ ಹ್ಯಾರಿಸನ್ ಎನ್ನುವ ವಿದ್ವಾಂಸ ಅಭಿಪ್ರಾಯಪಡುತ್ತಾರೆ. ಡೇವಿಡ್ ಹ್ಯಾರಿಸನ್ ಅವರ ಪ್ರಕಾರ ಒಂದು ಭಾಷೆಯ ಸಾವು ಎಂದರೆ ಕಾಲ, ಋತು, ಗಣಿತ, ಪುರಾಣ, ವಿಜ್ಞಾನ, ಸಂಗೀತ, ಕಲೆ, ನಂಬಿಕೆ, ಬದುಕಿನ ಕ್ರಮ ಹೀಗೆ ಅನೇಕ ಶತಮಾನಗಳಿಂದ ಹರಿದುಬಂದ ಜ್ಞಾನದ ಅವಸಾನ. ಹೀಗೆ ಭಾಷೆ ಸಾಯುವುದಕ್ಕೆ ಮುಖ್ಯವಾದ ಎರಡು ಕಾರಣಗಳನ್ನು ಗುರುತಿಸುತ್ತಾರೆ. 1. ಪ್ರಭುತ್ವ ಮತ್ತು ಸಂದರ್ಭದ ಒತ್ತಡಗಳು 2. ಆ ಭಾಷೆಯಲ್ಲಿ ಸಾಹಿತ್ಯ, ಅರ್ಥಕೋಶ, ಪತ್ರಗಳು ಲಭ್ಯವಾಗದೇ ಇರುವುದು. ಯಾವುದೇ ಭಾಷೆಯನ್ನು ಆಧುನಿಕವಾಗಿ ಸಜ್ಜುಗೊಳಿಸದಿದ್ದರೆ, ಸಾಹಿತ್ಯ ಮತ್ತಿತರ ಮಾಧ್ಯಮಗಳಲ್ಲಿ ದಾಖಲಿಸದಿದ್ದರೆ, ಹೊಸ ಹೊಸ ರೀತಿಯಲ್ಲಿ ಬಳಸುವುದನ್ನು ಚಿಂತಿಸದಿದ್ದರೆ, ಶಿಕ್ಷಣದಲ್ಲಿ ಈ ಬಗೆಯ ಬದಲಾವಣೆಗಳನ್ನು ತರದಿದ್ದರೆ ಅಂಥ ಭಾಷೆ ಬಹು ಬೇಗ ಸಾಯುತ್ತದೆ.

ಕನ್ನಡ ಭಾಷೆ ಮೇಲೆ ಡೇವಿಡ್ ಹ್ಯಾರಿಸನ್ ಹೇಳಿದಂತೆ ಕನ್ನಡ ಆಧುನಿಕ ಸಂದರ್ಭಕ್ಕೆ ಸಜ್ಜುಗೊಂಡಿದೆ. ಸಾಹಿತ್ಯ ಮತ್ತಿತರ ಮಾಧ್ಯಮಗಳಲ್ಲಿ ಸಾವಿರಾರು ವರ್ಷಗಳಿಂದ ದಾಖಲಾಗುತ್ತಲೇ ಬರುತ್ತಿದೆ. ಹೊಸ ಹೊಸ ರೀತಿಯಲ್ಲಿ ಬಳಸುವುದನ್ನು ಚಿಂತಿಸುತ್ತಲೇ ಅದಕ್ಕೆ ಸಿದ್ಧಗೊಳ್ಳುತ್ತಿದೆ. ಶಿಕ್ಷಣದಲ್ಲೂ ಈ ಬದಲಾವಣೆಗಳನ್ನು ತರುತ್ತಿದೆ. ಆದ್ದರಿಂದ ಕನ್ನಡಕ್ಕೆ ಆ ಬಗೆಯ ಭಯವಿಲ್ಲ ಎಂದೇ ಹೇಳಬೇಕು.

ಕನ್ನಡ ಭಾಷೆ ತನಗೆ ಎದುರಾದ ಬಿಕ್ಕಟ್ಟುಗಳನ್ನು ಎದುರಿಸಿ ಮುನ್ನಡೆವ ಸಾಮರ್ಥ್ಯ ಹೊಂದಿದೆ ಎಂದಾಗಲೂ ಅದರ ಮುಂದಿರುವ ಇಂದಿನ ಸವಾಲುಗಳು ನಿರಾಕರಿಸುವಂತಿಲ್ಲ, ಅದರಲ್ಲೂ ಕನ್ನಡದ ಒಳನುಡಿಗಳು ಅಥವಾ ಕನ್ನಡದ ಪ್ರಭೇದಗಳು ಮುಂದಿನ ಕೆಲವೇ ದಿನಗಳಲ್ಲಿ ನಮ್ಮಿಂದ ಮಾಯವಾಗಲಿವೆ ಎಂಬಂಥ ಇಂಥ ಸಂಕೀರ್ಣ ಸಂದರ್ಭದಲ್ಲಿ ಕನ್ನಡ ಭಾಷೆಯ ರಚನೆ ಮತ್ತು ಬಳಕೆ ಹಾಗೂ ಅದರ ಒಳನುಡಿಗಳ ಕುರಿತು ಚರ್ಚಿಸುವುದು, ಮತ್ತೊಮ್ಮೆ ಸೂಕ್ಷ್ಮವಾಗಿ ಗ್ರಹಿಸುವುದು ಸೂಕ್ತ ಎನಿಸುತ್ತದೆ. ಆ ಹಿನ್ನೆಲೆಯಲ್ಲಿ ಸಂಕ್ಷಿಪ್ತವಾಗಿ ಇಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ.

ಭಾರತ ದೇಶ ಸಾಂಸ್ಕೃತಿಕವಾಗಿ, ಭಾಷಿಕವಾಗಿ ಬೇರೆ ದೇಶಗಳಂತಲ್ಲ, ಇದು ಬಹುಮುಖಿ ಮತ್ತು ಬಹುಸಂಸ್ಕೃತಿಗಳಿಂದ ರೂಪುಗೊಂಡ ಸಮಾಜವಾಗಿದೆ. ಅಷ್ಟೇ ಅಲ್ಲ ಬಹುಭಾಷಿಕ ಪರಿಸರವೂ ಇಲ್ಲಿದೆ. ಇಲ್ಲಿನ ಸಮಾಜವನ್ನು ಧರ್ಮ, ಜಾತಿ, ಭಾಷೆ, ಸಂಸ್ಕೃತಿ ಮತ್ತು ಪ್ರದೇಶಗಳಿಂದ ವಿಭಾಗಿಸಿ ನೋಡಲು ಸಾಧ್ಯವಿದೆ. 5 ರಿಂದ 6 ಸಾವಿರ ಭಾಷೆಗಳು ಪ್ರಪಂಚದಲ್ಲಿರಬಹುದೆಂದು ಭಾಷಾ ತಜ್ಞರು ಹೇಳುತ್ತಾರೆ, ಅದರಲ್ಲಿ ಒಂದು ಸಾವಿರಕ್ಕೂ ಹೆಚ್ಚು ಭಾಷೆಗಳು ಭಾರತವೊಂದರಲ್ಲೇ ದೊರೆಯುತ್ತವೆ. ಈಗಲೂ ನೂರಕ್ಕೂ ಹೆಚ್ಚಿನ ಭಾಷೆಗಳು ಚಲಾವಣೆಯಲ್ಲಿವೆ. ಕರ್ನಾಟಕದ ಸಂದರ್ಭದಲ್ಲೂ ಇದನ್ನು ನೋಡಬಹುದಾಗಿದೆ. ಇಲ್ಲೂ ಕೂಡ ಹತ್ತಾರು ಧರ್ಮಗಳು, ನೂರಾರು ಜಾತಿ ಉಪಜಾತಿಗಳು, ಹಲವಾರು ಬುಡಕಟ್ಟುಗಳು ತಮ್ಮದೇ ಭಿನ್ನವಾದ ಸಂಸ್ಕೃತಿಯನ್ನು ಹೊಂದಿವೆ. ಹೀಗೆ ಭಿನ್ನ ಭಿನ್ನ ಧರ್ಮ, ಜಾತಿ, ಸಂಸ್ಕೃತಿಗಳಿಂದ ಕೂಡಿದ ಜನರು ತಮ್ಮದೇ ಭಿನ್ನವಾದ ಭಾಷೆಯನ್ನೂ ಬಳಸುತ್ತಿದ್ದಾರೆ. ಹೀಗೆ ಬೇರೆ ಬೇರೆ ಭಾಷೆಗಳನ್ನು ಬಳಸುವ ಸಮುದಾಯಗಳು, ಬುಡಕಟ್ಟುಗಳು ಚದುರಿಹೋಗಿರುವುದರಿಂದ ಕಾಲಾಂತರದಲ್ಲಿ ಒಂದೇ ಜಾತಿ, ಸಂಸ್ಕೃತಿ, ಭಾಷೆಗಳು ಹಲವು ಉಪಜಾತಿಗಳಾಗಿ, ಒಂದೇ ಕನ್ನಡ ಹಲವು ಕನ್ನಡಗಳಾಗಿ ಮಾರ್ಪಟ್ಟಿರುವುದನ್ನು ನೋಡಬಹುದಾಗಿದೆ.



ಕನ್ನಡ ಭಾಷೆಯನ್ನೇ ಕುರಿತು ಮಾತನಾಡುವುದಾದರೆ ಉತ್ತರದ ಬೀದರ್ ಜಿಲ್ಲೆಯಿಂದ ಹಿಡಿದು ದಕ್ಷಿಣ ಕರ್ನಾಟಕದ ಚಾಮರಾಜನಗರ ಜಿಲ್ಲೆಯವರೆಗೆ, ಪೂರ್ವದ ಬಳ್ಳಾರಿ, ರಾಯಚೂರು ಜಿಲ್ಲೆಗಳಿಂದ ಹಿಡಿದು ಪಶ್ಚಿಮದ ಉಡುಪಿ, ಉತ್ತರ ಕನ್ನಡ ಜಿಲ್ಲೆಗಳವರೆಗೆ ವಿಶಾಲ ಕರ್ನಾಟಕದಲ್ಲಿ ಕನ್ನಡ ಭಾಷೆಯ ಬಳಕೆಯೇ ಇದೆ. ಎಲ್ಲರೂ ತಾವು ಮಾತನಾಡುವ ಭಾಷೆ ಕನ್ನಡ ಎಂತಲೇ ಹೇಳುತ್ತಾರೆ. ಆದರೆ ಉತ್ತರ ಕರ್ನಾಟಕದ ಬೀದರ್ ಕನ್ನಡಕ್ಕೂ, ದಕ್ಷಿಣ ಕರ್ನಾಟಕದ ಚಾಮರಾಜನಗರ ಜಿಲ್ಲೆಯ ಕನ್ನಡಕ್ಕೂ, ಪೂರ್ವದ ರಾಯಚೂರು-ಚಿತ್ರದುರ್ಗ ಜಿಲ್ಲೆಯ ಕನ್ನಡಕ್ಕೂ, ಪಶ್ಚಿಮದ ಕರಾವಳಿ ಕನ್ನಡಕ್ಕೂ, ಸ್ಪಷ್ಟವಾದ ವ್ಯತ್ಯಾಸಗಳಿರುವುದನ್ನು ಕಾಣಬಹುದು. ಈ ವ್ಯತ್ಯಾಸಗಳನ್ನೇ ಪ್ರಾದೇಶಿಕ ಪ್ರಭೇದಗಳೆಂದು, ಪ್ರಾದೇಶಿಕ ಉಪಭಾಷೆಗಳೆಂದು ಗುರುತಿಸುತ್ತೇವೆ. ಇಂಥ ಪ್ರಾದೇಶಿಕ ಪ್ರಭೇದಗಳು ಉಂಟಾಗಲು ಮುಖ್ಯವಾಗಿ ಭೌಗೋಳಿಕ ಕಾರಣಗಳನ್ನು ಹೇಳಲಾಗುತ್ತದೆ.

ಭಾರತದಂಥ ಬಹುಮುಖಿ, ಬಹುಸಂಸ್ಕೃತಿ ಸಮಾಜದಲ್ಲಿ ಒಂದೇ ಭಾಷಿಕರ ನಡುವಿನ ಭಿನ್ನರೂಪಗಳಿಗೆ ನೈಸರ್ಗಿಕ ಕಾರಣಗಳಾದ ಬೆಟ್ಟ ಗುಡ್ಡ ನದಿ ಕಾಡುಗಳಷ್ಟೇ ಆಗದೆ ಜಾತಿ, ಧರ್ಮ, ವರ್ಗ, ವರ್ಣಗಳೂ ಕಾರಣವಾಗಿವೆ. ಹಾಗಾಗಿ ಕನ್ನಡ ಭಾಷೆಯನ್ನು ಪ್ರಾದೇಶಿಕ ಪ್ರಭೇದಗಳಷ್ಟೇ ಅಲ್ಲದೆ ಒಂದೇ ಸ್ಥಳದಲ್ಲಿ ವಾಸಿಸುವ ಒಂದೇ ಭಾಷಿಕರ ನಡುವೆಯೂ ಇಂಥ ಪ್ರಭೇದಗಳನ್ನೂ ಗುರುತಿಸಲು ಸಾಧ್ಯವಿದೆ. 'ಭಾರತದ ಭಾಷೆಯೊಳಗಿನ ಪ್ರಭೇದಗಳ ಅಂತರವನ್ನು ಪ್ರಪಂಚದ ಇನ್ನಿತರ ಭೌಗೋಳಿಕ ಭಾಷಾ ಪ್ರಭೇದಗಳಂತಲ್ಲದೆ ಸಾಮಾಜಿಕ ದೃಷ್ಟಿಕೋನದಿಂದ ನೋಡುವುದು ಒಳ್ಳೆಯದು. ಒಂದೇ ಸ್ಥಳದಲ್ಲಿ ಒಂದೇ ಭಾಷೆಯನ್ನು ಮಾತನಾಡಿದರೂ ಸಾಮಾಜಿಕ ವರ್ಗಗಳಲ್ಲಿ ಗುರುತಿಸಬಹುದಾದಷ್ಟು ಭಾಷಾ ಪ್ರಭೇದಗಳಿಗೆ ಸ್ಪಷ್ಟ ಉದಾಹರಣೆ ಭಾರತದಲ್ಲಿ ಕಾಣಬಹುದು' ಎಂದು ತುಂಬಾ ಹಿಂದೆಯೇ ಭಾಷಾ ತಜ್ಞ ಗುಂಪರ್ಜ್ ತಮ್ಮ ಒಂದು ಲೇಖನದಲ್ಲಿ ಹೇಳಿರುವುದು ಸರಿಯಾಗಿಯೇ ಇದೆ.

ಕನ್ನಡ ಭಾಷೆಯನ್ನೂ ಸಾಮಾನ್ಯವಾಗಿ ಉತ್ತರ ಮತ್ತು ದಕ್ಷಿಣ ಕನ್ನಡ ಎಂದು ವಿಭಾಗಿಸಿ ನೋಡುವ ಕ್ರಮ ಇದೆ. ಬಿ.ಎಂ.ಶ್ರೀ, ಟಿ.ಎಸ್.ವೆಂಕಣ್ಣಯ್ಯ ಮುಂತಾದವರು ಹೀಗೆ ಹೇಳಲು ಕವಿರಾಜಮಾರ್ಗಕಾರ, ಎರಡನೆಯ ನಾಗವರ್ಮ, ಭಟ್ಟಾಕಳಂಕ ತಮ್ಮ ಕೃತಿಗಳಲ್ಲಿ ಕನ್ನಡದಲ್ಲಿ ಉತ್ತರ ಮತ್ತು ದಕ್ಷಿಣ ಮಾರ್ಗಗಳಿವೆ ಎಂದು ಹೇಳಿರುವುದೇ ಇದಕ್ಕೆ ಕಾರಣ ಎಂದು ಡಿ.ಎನ್.ಶಂಕರ ಭಟ್ಟರು ತಮ್ಮ ಕೃತಿಯೊಂದರಲ್ಲಿ ಹೇಳಿದ್ದಾರೆ. ಮಂಗಳೂರು ಕನ್ನಡ ಎಂದು ಕೆಲವು ವಿದ್ವಾಂಸರು ಗುರುತಿಸಿದ್ದರೂ ಅದು ಶಿವರಾಮ ಕಾರಂತರ ಕಾದಂಬರಿಗಳ ಹಿನ್ನೆಲೆಯಲ್ಲಿ ಆರಂಭಿಸಿರುವುದರಿಂದ ಆ ಕಾದಂಬರಿಗಳು ಬಹುತೇಕ ಮೈಸೂರು, ಧಾರವಾಡದ ಕನ್ನಡಕ್ಕಿಂತ ಹೆಚ್ಚು ಭಿನ್ನವಾಗಿಲ್ಲ, ಹಾಗಾಗಿ ಎಲ್ಲ ವಿದ್ವಾಂಸರ ತಿಳಿವಳಿಕೆ ಕನ್ನಡವನ್ನು ಉತ್ತರ ದಕ್ಷಿಣ ಭಾಗವಾಗಿ ವಿಭಾಗಿಸಿ ನೋಡುವ ಕ್ರಮಕ್ಕೆ ಸೀಮಿತವಾದಂತಿದೆ. ಪೂರ್ವ ಪಶ್ಚಿಮ ಭಾಗಗಳಾಗಿ ವಿಭಾಗಿಸಿ ನೋಡಿದರೆ ಕರಾವಳಿ ಕನ್ನಡ ಮೈಸೂರು, ಧಾರವಾಡದ ಕನ್ನಡಕ್ಕಿಂತ ಭಿನ್ನವಾಗಿರುವುದನ್ನು ನೋಡಲು ಸಾಧ್ಯವೆಂದು ಶಂಕರಭಟ್ಟರ ಅನಿಸಿಕೆಯಾಗಿದೆ.

ಈಗಾಗಲೇ ಚಾಲ್ತಿಯಲ್ಲಿರುವ ಪ್ರಾದೇಶಿಕ ಭಾಷೆಗಳೆಂದು ಬೆಂಗಳೂರು ಕನ್ನಡ, ಮೈಸೂರು ಕನ್ನಡ, ಮಂಗಳೂರು ಕನ್ನಡ, ಧಾರವಾಡ ಕನ್ನಡ, ಗುಲಬರ್ಗಾ ಕನ್ನಡ ಎಂದು ಗುರುತಿಸಿದರೂ ಬೆಳಗಾವಿ, ರಾಯಚೂರು, ಚಿತ್ರದುರ್ಗ ಹೀಗೆ ಇನ್ನೂ ಅನೇಕ ಪ್ರಭೇದಗಳನ್ನು ಗುರುತಿಸಲು ಸಾಧ್ಯವಿದೆ.

ಕನ್ನಡ ಭಾಷೆಯನ್ನು ಮುಖ್ಯವಾಗಿ ಮೂರು ಮಾದರಿಯಲ್ಲಿ ಅದರ ವೈಶಿಷ್ಟ್ಯವನ್ನು, ಪ್ರಭೇದಗಳನ್ನು ವಿವರಿಸಲು ಸಾಧ್ಯವಿದೆ. 1. ಚಾರಿತ್ರಿಕವಾಗಿ. 2. ಪ್ರಾದೇಶಿಕವಾಗಿ. 3. ಸಾಮಾಜಿಕವಾಗಿ.

ಚಾರಿತ್ರಿಕವಾಗಿ

ಚಾರಿತ್ರಿಕವಾಗಿ ಕನ್ನಡ ಬೆಳೆದು ಬಂದ ಬಗೆಯನ್ನು ಗುರುತಿಸುವಾಗ ಕನ್ನಡದ ಹಲವು ಮಾದರಿಗಳನ್ನು ವಿದ್ವಾಂಸರು ಗುರುತಿಸಿದ್ದಾರೆ. ಪೂರ್ವದ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಮತ್ತು ಆಧುನಿಕ ಕನ್ನಡ ಈ ರೂಪಗಳಲ್ಲಿನ ವ್ಯತ್ಯಾಸಗಳು ಕಾಲಾಂತರದಲ್ಲಿ ರೂಪ, ರಚನೆ ಮತ್ತು ಅರ್ಥದಲ್ಲಿ ಆದ ಬದಲಾವಣೆಗಳನ್ನು ಕುರಿತು ಚರ್ಚಿಸಿದ್ದಾರೆ. ಅಷ್ಟೇ ಅಲ್ಲ, ಕವಿರಾಜಮಾರ್ಗಕಾರನೇ ಕನ್ನಡಂಗಳ್ ಎಂದು ಹೇಳಿದ್ದಾನೆ. ಕವಿರಾಜಮಾರ್ಗಕಾರನ ಕಾಲಕ್ಕಾಗಲೇ ಹಲವು ಕನ್ನಡಗಳಿದ್ದಿರಬಹುದೆಂದು ಚರ್ಚೆಯಾಗಿದೆ. ಹಾಗಾಗಿ ಆ ವಿವರಗಳನ್ನು ಮತ್ತೊಮ್ಮೆ ನಾನಿಲ್ಲಿ ನೀಡಲು ಹೋಗುವುದಿಲ್ಲ.

ಪ್ರಾದೇಶಿಕವಾಗಿ

ಕನ್ನಡದ ಪ್ರಾದೇಶಿಕ ಭಾಷಾ ರೂಪಗಳಲ್ಲಿ ಭಿನ್ನಾಂಶಗಳನ್ನು ಮುಖ್ಯವಾಗಿ ರಚನೆ ಅರ್ಥ ಮತ್ತು ರೂಪಗಳ ಹಿನ್ನೆಲೆಯಲ್ಲಿ ಗುರುತಿಸಬಹುದು.

ರಚನೆಯ ದೃಷ್ಟಿಯಿಂದ: 'ಎ' ಕಾರ ರೂಪಗಳು 'ಇ' ಕಾರ 'ಅ'ಕಾರ ಮತ್ತು 'ಉ'ಕಾರವಾಗಿ ಬಳಕೆಯಾಗುವುದನ್ನು ನೋಡಬಹುದು. ಉದಾಹರಣೆಗೆ ತಲೆ, ಕೊಲೆ, ಕಾಗೆ, ಎಲೆ, ಆನೆ, ಕುದುರೆ ಮುಂತಾದ ರೂಪಗಳಲ್ಲಿರುವ ಎ ಕಾರ ರೂಪ ಉತ್ತರ ಕರ್ನಾಟಕದಲ್ಲಿ ತಲಿ, ಕೊಲಿ, ಕಾಗಿ, ಎಲಿ, ಆನಿ, ಕುದುರಿ ಎಂದಾಗಿ ಬಳಕೆಯಾಗುತ್ತವೆ. ಹಾಗೆಯೇ ಚಾಮರಾಜನಗರ ಪ್ರದೇಶದಲ್ಲಿ ತಲ, ಕೊಲ, ಕಾಗ, ಎಲ, ಆನ, ಕುದರ ಎಂದಾಗಿ ಬಳಕೆಯಾಗುವುದನ್ನು ಕಾಣಬಹುದು. ಹಾಗೆಯೇ ಕರಾವಳಿಯ ಒಳನುಡಿಗಳಲ್ಲಿ ನಡೆಯದಿದ್ದ 'ಎ'ಕಾರ 'ಇ'ಕಾರವಾಗುವ ಮತ್ತು 'ಒ'ಕಾರ 'ಉ'ಕಾರವಾಗುವ ಬದಲಾವಣೆ ಸೋಲಿಗ, ಬಡಗ ಬುಡಕಟ್ಟಿನ ಸಮುದಾಯಗಳಲ್ಲಿ ಮಾತ್ರ ನಡೆದಿವೆ. ಹಾಗಾಗಿ ಅವು ಒಳನಾಡಿನ ಒಳನುಡಿಗಳಿಗೆ ಹತ್ತಿರವಾಗಿವೆ ಎಂ[illegible] ಶಂಕರಭಟ್ಟರು ಹೇಳುತ್ತಾರೆ.

ಅರ್ಥದ ದೃಷ್ಟಿಯಿಂದ: ಒಂದೇ ಪದ[illegible] ಕರ್ನಾಟಕದಾದ್ಯಂತ ಭಿನ್ನ ಅರ್ಥ ರೂಪಗಳು ಇರುವುದ[illegible] ಕಾಣಬಹುದು. ಉದಾಹರಣೆಗೆ ತಿಂಡಿ ರೂಪ. ತಿಂ[illegible] ಎನ್ನುವ ಪದಕ್ಕೆ ದಕ್ಷಿಣ ಕರ್ನಾಟಕದಲ್ಲಿ ಬೆಳಗಿನ ಉಪಾಹ[illegible] ಎನ್ನುವ ಅರ್ಥ ಇದ್ದರೆ ಉತ್ತರ ಕರ್ನಾಟಕದಲ್ಲಿ ತಿಂ[illegible] ಎಂದರೆ ತೀಟೆ, ತುರಿಕೆ ಎನ್ನುವ ಅರ್ಥದಲ್ಲಿ ಬಳಕೆ ಇ[illegible] ರಾಟೆ ಎನ್ನುವ ಪದಕ್ಕೆ ದಕ್ಷಿಣ ಕರ್ನಾಟಕದಲ್ಲಿ ನೇಕಾರಿಕೆಯ[illegible] ಬಳಕೆಯಾಗುವ ಒಂದು ಉಪಕರಣವಾದರೆ ಉತ್ತ[illegible] ಕರ್ನಾಟಕದಲ್ಲಿ ಚಟ ಎನ್ನುವ ಅರ್ಥದಲ್ಲಿ ಬಳಕೆಯಾಗು[illegible]

ಹಾಗೆಯೇ ರೂಪದ ದೃಷ್ಟಿಯಿಂದ: ಕನ್ನ[illegible] ಒಳನುಡಿಗಳಲ್ಲಿ ಭಿನ್ನಾಂಶಗಳನ್ನು ನೋಡಬಹುದ[illegible] ಉದಾಹರಣೆಗೆ: ಒಂದೇ ವಸ್ತುವಿಗೆ ಹಲವು ಪ್ರದೇಶಗಳ[illegible] ಬೇರೆ ಬೇರೆ ರೂಪಗಳಲ್ಲಿ ಬಳಕೆಯಾಗುವುದ[illegible] ಉದಾಹರಣೆಗೆ: ಭತ್ತ ಪದ ಕರ್ನಾಟಕದಾದ್ಯಂತ ಹಲ[illegible] ರೂಪಗಳಲ್ಲಿ ಕಂಡುಬರುತ್ತದೆ. ಉತ್ತರ ಕರ್ನಾಟಕದ ಬೀದ[illegible] ಮತ್ತು ಗುಲಬರ್ಗಾ ಜಿಲ್ಲೆಗಳಲ್ಲಿ ಕೃಷ್ಣಾ ನದಿಯವ[illegible] ಕಳವಿ, ಕಳವೆ, ಕವಳೆ, ಕವಳಿ, ಕಳೆವೆ ಎನ್ನುವ ರೂಪಗ[illegible] ಇದ್ದರೆ, ಮಧ್ಯ ಕರ್ನಾಟಕದಲ್ಲಿ ಕೃಷ್ಣಾ ನದಿಯಿಂದ ಹಿಡಿ[illegible] ಬಳ್ಳಾರಿ ಜಿಲ್ಲೆಯವರೆಗೆ ಅಂದರೆ ವಿಜಾಪುರ, ರಾಯಚೂ[illegible] ಬಾಗಲಕೋಟೆ ಜಿಲ್ಲೆಯಲ್ಲಿ ನೆಲ್ಲು, ನೆಲ್ಲ ರೂಪಗ[illegible] ಬಳಕೆಯಲ್ಲಿದೆ. ಜೊತೆಗೆ ತುಮಕೂರು, ಕೋಲ[illegible] ಬೆಂಗಳೂರಿನ ಕೆಲ ಭಾಗಗಳಲ್ಲಿ ಈ ರೂಪ ನೋಡಬಹು[illegible] ಉಳಿದಂತೆ ದಕ್ಷಿಣ ಒಳನಾಡಿನಲ್ಲಿ ಭತ್ತ, ಬತ್ತ ರೂಪ[illegible] ಬಳಕೆಯಲ್ಲಿದೆ. ಈ ಮೂರು ರೂಪಗಳು ಗೆರೆ ಕೊರೆದ[illegible] ಪ್ರತ್ಯೇಕ ಪ್ರದೇಶಗಳಲ್ಲಿ ಬಳಕೆಯಾಗುವುದನ[illegible] ಗಮನಿಸಬಹುದು. (ಕನ್ನಡ ವಿಶ್ವವಿದ್ಯಾಲಯ ಹೊರತಂದಿರ[illegible] 'ಕೃಷಿಪದ ಕೋಶ' ಪುಸ್ತಕದಲ್ಲಿ ಇದನ್ನು ನೋಡಬಹು[illegible]

ಸಾಮಾಜಿಕವಾಗಿ

ಚಾರಿತ್ರಿಕ ಮತ್ತು ಪ್ರಾದೇಶಿಕ ಒಳನುಡಿಗಳನ್ನು ರಚ[illegible] ರೂಪ ಮತ್ತು ಅರ್ಥಗಳಲ್ಲಿನ ಭಿನ್ನಾಂಶಗಳಿಗೆ ನಿಸ[illegible] ಮತ್ತು ಕಾಲ ಮುಖ್ಯವಾದ ಕಾರಣ ಆದರೆ ಸಾಮಾ[illegible] ಒಳನುಡಿಗಳ ರಚನೆ ಮತ್ತು ಬಳಕೆಗೆ ಸಾಮಾಜಿಕ ಸಂರಚ[illegible] ಧಾರ್ಮಿಕ ಆಚರಣೆ, ಸಾಂಸ್ಕೃತಿಕ ಬದುಕು ಮತ್ತು ರಾಜಕೀ[illegible] ಮತ್ತಿತರ ವಿಷಯಗಳು ಕಾರಣವಾಗುತ್ತವೆ. ಆದ್ದರಿಂದ [illegible] ಚರ್ಚೆ ಭಾರತೀಯ ಸಮಾಜ, ಸಂಸ್ಕೃತಿಯ[illegible] ಅರ್ಥಮಾಡಿಕೊಳ್ಳುವಲ್ಲಿ ಸಹಕಾರಿಯಾಗುತ್ತದೆ.

ಒಂದೇ ಪ್ರದೇಶದಲ್ಲಿ ವಾಸಿಸುವ ಒಂದೇ ಭಾಷೆಯ[illegible] ಬಳಸುವ ಜನರೆಲ್ಲರೂ ಮೇಲುನೋಟಕ್ಕೆ ಒಂದೇ ಕನ್ನಡ[illegible] ಬಳಸುವಂತೆ ಕಂಡರೂ ಅದರಲ್ಲೂ ಅನೇಕ ಒಳನುಡಿಗ[illegible] ಇರುವುದನ್ನು ಕಾಣಬಹುದು. ಜಾತಿ, ಧರ್ಮ, ವ[illegible] ವರ್ಣಗಳ ಸಾಮಾಜಿಕ ಸಂರಚನೆಯ ಹಿನ್ನೆಲೆಯ[illegible] ಬಳಕೆಯಾಗುವುದನ್ನು ಈ ಒಳನುಡಿಗಳ ಮೂ[illegible] ನೋಡಬಹುದು. ಕೆಲವು ಉದಾಹರಣೆಗಳ ಮೂ[illegible] ಇದನ್ನು ಇನ್ನಷ್ಟು ವಿಸ್ತರಿಸಬಹುದು. ಉತ್ತರ ಕರ್ನಾಟ[illegible] ರಾಯಚೂರು ಗುಲಬರ್ಗಾ ಜಿಲ್ಲೆಯಲ್ಲಿನ ಭೂಮಾ[illegible] ಸಮುದಾಯವಾದ ಲಿಂಗಾಯತ ಮತ್ತು ಕೆಳವರ್ಗದ[illegible] ಎಂದು ಹೇಳುವ ದಲಿತರ ಕನ್ನಡದಲ್ಲಿ ಬಳಕೆಯಾಗ[illegible] ಕನ್ನಡದಲ್ಲೇ ಅವರ ಸಾಮಾಜಿಕ, ಆರ್ಥಿಕ, ರಾಜಕೀ[illegible] ಸ್ಥಾನಮಾನಗಳನ್ನು ಗುರುತಿಸಲು ಸಾಧ್ಯವಿದೆ. ಈ ಪ್ರದೇಶ[illegible] ಲಿಂಗಾಯತ ಸಮುದಾಯದವರು ಮನೆಯ ಮು[illegible] ಬಾಗಿಲನ್ನು ಹೊರಬಾಗಿಲು ಎಂದು ಕರೆಯುತ್ತಾರೆ. [illegible] ಪ್ರದೇಶದ ದಲಿತ ಸಮುದಾಯದವರು ದೊಡ್ಡ ಬಾಗ[illegible] ಎಂದು ಕರೆಯುತ್ತಾರೆ. ದಲಿತರ ಮನೆಗ[illegible] ಹೊರಬಾಗಿಲಾಗಲಿ, ದೊಡ್ಡ ಬಾಗಿಲಾಗಲಿ ಇರುವು[illegible]

ಲಿಂಗಾಯತ ಸಮುದಾಯದ ಮನೆಗಳಿಗೆ ಇ[illegible] ಮುಖ್ಯ ಬಾಗಿಲನ್ನೇ ಲಿಂಗಾಯತ ಸಮುದಾಯದ[illegible] ಮನೆಯ ಒಳಗಡೆಯಿಂದ ನೋಡುವುದರಿಂದ ಇ[illegible]

...ಬಾಗಿಲು ಎಂದು ಕರೆದರೆ ಅದರಿಂದ ದೂರವೇ ... ದಲಿತ ಸಮುದಾಯದವರು ದೊಡ್ಡ ಬಾಗಿಲು ...ರೆಯುವುದು ಸಾಮಾಜಿಕ ಆರ್ಥಿಕ ಸ್ಥಾನಮಾನವನ್ನು ...ದೆ.

...ದು ತಾವು ಬದುಕುತ್ತಿರುವ ಕಾರ್ಯ ಚಟುವಟಿಕೆ ...ನುಗುಣವಾಗಿ ಭಾಷೆಯನ್ನು ಬಳಸುತ್ತ ಹೋಗುತ್ತಾರೆ. ...ನಸನಿತ್ಯದ ಬದುಕಿನ ಚಟುವಟಿಕೆಗಳ ಹಿನ್ನೆಲೆಯಲ್ಲಿ ...ರೂಪಗಳು ಹುಟ್ಟಿಕೊಳ್ಳುತ್ತವೆ ಅಥವಾ ಯಾರು ...ಳಸಿದರೂ ತಮ್ಮ ತಿಳಿವಿನ ಭಾಗವಾಗಿ ತಮ್ಮ ...ಕೆಯ ಅಂಗವಾಗಿಯೇ ಹೊಸ ಹೊಸ ರೂಪಗಳನ್ನು ...ತ್ತಾರೆ. ಗುಲಬರ್ಗಾ ರಾಯಚೂರು ಪ್ರದೇಶದಲ್ಲಿ ...ದ ಕೆಲವು ಸಮುದಾಯದವರು ಸಪ್ತರ್ಷಿ ಮಂಡಲ ...ಮೂಹವನ್ನು ಸಪ್ತರ್ಷಿ ಮಂಡಲ ಎಂದೇ ಕರೆದರೆ, ...ಮಾಜದ ಜನರು ಕೂರಿಗೆ ತಾಳು, ಅಜ್ಜಿ ಮಂಚ ..., ದಲಿತ ಸಮುದಾಯದವರಲ್ಲಿ ತೊಗಲು ಮಂಚ ... ಕರೆಯುವ ರೂಢಿ ಇದೆ. ಇಲ್ಲೂ ಕೂಡ ...ವರ ಬದುಕಿನ ಕ್ರಿಯಾಶೀಲ ಚಟುವಟಿಕೆ ಮತ್ತು ...ಜಿಕ ಸ್ಥಾನಮಾನಗಳಿಗೆ ಅನ್ವಯಗೊಳಿಸಿಯೇ ...ಮಾಡಿಕೊಳ್ಳಲು ಸಾಧ್ಯವಿದೆ.

...ತ್ತರ ಕರ್ನಾಟಕ ಪ್ರದೇಶದಲ್ಲಿ ಸಾಮಾಜಿಕ ...ಯಾಗಿ ಒಬ್ಬ ವ್ಯಕ್ತಿಯ ಹೆಸರು ಬಳಕೆಯಾಗುವ ...ನ್ನೇ ನೋಡಿದರೆ ಕುತೂಹಲ ಉಂಟಾಗುತ್ತದೆ. ...ರ ಪಾಟೀಲರ 'ನಾ ಬಸ್ಯಾ ಅಂತ' ಕವನದಲ್ಲಿ ...ದ ಈ ಸಾಲುಗಳನ್ನು ಗಮನಿಸಬಹುದು.

...ಬನಾರ ಹುಡುಗ ಬಸಯ್ಯ ಅಂತ
...ಡರ ಹುಡುಗ ಬಸವನಗೌಡ ಅಂತ
...ಣಜಿಗೇರ ಉಳಿದ ಲಿಂಗಾಯತ್ರ ಹುಡುಗ
... ಅಂತ
... ಬಸ್ಯಾ ಅಂತ ಯಾಕಂದ್ರ ನಾ ಹೊಲ್ಯಾ ಅಂತ"

...ಗಾಗಿ ಭಾಷೆಯೊಂದನ್ನು ಅದರ ಒಳನುಡಿಗಳನ್ನು ...ಭಾಷೆಯಾಗಿ ಅಷ್ಟೇ ಪರಿಗಣಿಸದೇ ಆ ಭಾಷೆಗಳು ... ಒಳನುಡಿಗಳನ್ನು ಬಳಸುವ ಭಾಷಿಕರ ಸಾಮಾಜಿಕ, ...ಕ ಚಹರೆಯಾಗಿ ಬಳಸಬೇಕಾಗಿದೆ. ಆದ್ದರಿಂದ ...ಎನ್ನುವುದು ಕೇವಲ ಮನುಷ್ಯನ ಭಾವನೆಗಳನ್ನು ...ಪಡಿಸಲು ಇರುವ ಬಹುಮುಖ್ಯ ಸಂವಹನ ...ಮವಷ್ಟೇ ಅಲ್ಲ, ಅದು ಒಬ್ಬ ಮನುಷ್ಯನ, ಒಂದು ...ಾಯದ ಚಾರಿತ್ರಿಕ, ಸಾಮಾಜಿಕ, ಸಾಂಸ್ಕೃತಿಕ ...ಯೂ ಹೌದು, ರಾಯಭಾರಿಯೂ ಹೌದು. ಒಂದು ...ನ್ನು ಬಳಸುವಾಗ ಅದು ಏಕಕಾಲಕ್ಕೆ ಆ ಜನರ, ...ಯದ ಚರಿತ್ರೆಯನ್ನು ಮತ್ತು ಸಮಕಾಲೀನತೆಯನ್ನೂ ...ಕ್ಕೆಗೆ ಪ್ರತಿನಿಧಿಸುತ್ತಿರುತ್ತದೆ. ಹಾಗಾಗಿ ಒಂದು ...ಲ್ಲಿ ಒಂದು ಸಮುದಾಯದ ಚಾರಿತ್ರಿಕ, ಸಾಮಾಜಿಕ, ... ಚಹರೆಗಳು ಅಡಕವಾಗಿರುವುದರ ಜೊತೆಗೆ ...ನ ವಸ್ತುಸ್ಥಿತಿಯನ್ನೂ ಮೈಗೂಡಿಸಿಕೊಂಡಿರುತ್ತದೆ. ...ದ ಒಂದು ಭಾಷೆ ಏಕಕಾಲಕ್ಕೆ ಚರಿತ್ರೆಯೂ ಹೌದು ...ನವೂ ಹೌದು.

...ಚ ಭಾಷೆ ಕೂಡ ತನ್ನ ಅಂತರ್ಯದಲ್ಲಿ ಚಾರಿತ್ರಿಕ ...ಮತ್ತು ಆಧುನಿಕ ಬದಲಾವಣೆಗಳನ್ನು ಒಟ್ಟೊಟ್ಟಿಗೆ ...ಡಿಸಿಕೊಂಡಿದೆ. ಉದಾಹರಣೆಗೆ ಕನ್ನಡ ಭಾಷೆಯಲ್ಲಿ ...ಕಾಲದ ರೂಪಗಳು, ಚರಿತ್ರೆಯ ಕಾಲಘಟ್ಟದಲ್ಲಿ ...ಸೇರಿದ ಸಂಸ್ಕೃತ ಪದಕೋಶವೂ ಇದೆ. ಹಾಗೆಯೇ ... ವಿಜ್ಞಾನ, ತಂತ್ರಜ್ಞಾನದಿಂದ ಕನ್ನಡದಲ್ಲಿ ಆದ ...ದನೆಯ ರೂಪಗಳು, ಇಂಗ್ಲಿಷ್ ಬಳಕೆಯೂ ಇದೆ. ...ನ್ನೂ ಏಕಕಾಲಕ್ಕೆ ಬಳಸುತ್ತಿದ್ದೇವೆ. ಹಾಗಾಗಿ ಕನ್ನಡ ...ಅತ್ಯಂತ ಪ್ರಾಚೀನವಾದದ್ದು ಹೌದು ಅತ್ಯಂತ ...ವಾದದ್ದೂ ಹೌದು.

...ದು ಸಮುದಾಯ ಚಾರಿತ್ರಿಕವಾಗಿ, ಸಾಮಾಜಿಕವಾಗಿ, ...ವಾಗಿ ಬಿಟ್ಟುಹೋದ ಅನೇಕ ವಿವರಗಳನ್ನು ಒಂದು ... ಮೂಲಕ ಪುನಾರಚಿಸಲು ಸಾಧ್ಯವಿದೆ. ಈ ...ಲ್ಲಿ ಭಾಷೆ ಅತ್ಯಂತ ಮುಖ್ಯ ಆಕರವಾಗಬಲ್ಲದು. ...ಅಲ್ಲ, ಆ ಭಾಷಿಕ ಸಮುದಾಯದ ಜ್ಞಾನ ...ಯೂ ಅದರಲ್ಲಿ ಅಡಗಿರುತ್ತದೆ. ಹಾಗಾಗಿ ಭಾಷೆಗೂ ..., ಭಾಷೆಯನ್ನು ಬಳಸುವ ಜನರಿಗೂ ಅವರ ...ಕ್ಕೂ ಅವಿನಾಭಾವ ಸಂಬಂಧ ಇರುತ್ತದೆ. ...ಲೇ ಮನುಷ್ಯನ ಆಲೋಚನಾ ಕ್ರಮದಲ್ಲಿ, ಅಭಿವ್ಯಕ್ತಿ...ಲ್ಲಿ ಅವರ ಭಾಷೆ ಅತ್ಯಂತ ಮಹತ್ವದ ...ಸುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡ ಭಾಷೆಯನ್ನು ...ಳನುಡಿಗಳನ್ನು ಮತ್ತೊಮ್ಮೆ ...ಶಪವಾಗಿ ಅಧ್ಯಯನ ...ನ ಅವಶ್ಯಕತೆ ಇದೆ ...ದೆ.



...ಕುಮಾರ ರಂಜೇರೆ,
...ಶ್ವವಿದ್ಯಾಲಯ, ಹಂಪಿ

ಪೇಜಾವರ ಸ್ವಾಮಿಗೊಂದು ಪತ್ರ

ವೈಷ್ಣವ ದೀಕ್ಷೆಯನ್ನು ನಿಮ್ಮ ಬಳಿಯೇ ಇಟ್ಟುಕೊಳ್ಳಿ, ಕನಕದಾಸರನ್ನು ಗೌರವದಿಂದ ಕಾಣಿರಿ

ಮಾನ್ಯ ಪೇಜಾವರ ಮಠಾಧೀಶರೆ

ನಮಸ್ಕಾರಗಳು. ಪ್ರಾಯ ಕಳೆದಂತೆ ಮನುಷ್ಯರೆಲ್ಲ ಪ್ರಬುದ್ಧರಾಗುತ್ತಾ ಹೋಗುತ್ತಾರೆಂದು ಕೇಳಿದ್ದೆ. ಆದರೆ ನೀವು ಮಾತ್ರ ನಿಮ್ಮ ಈ ಇಳಿವಯಸ್ಸಿನಲ್ಲಿ ಬರ್ಕತ್ತಿನ ಒಂದು ಮಾತನ್ನೂ ಆಡದೆ ಏನೇನೋ ಮಾತನಾಡುತ್ತಾ ಈ ನಾಡಿನ ಪ್ರಜ್ಞಾವಂತರ ಎದುರು ನಗೆಪಾಟಲಿಗೆ ಈಡಾಗುತ್ತಿದ್ದೀರಿ. ಪತ್ರಿಕೆಗಳಲ್ಲಿ ನಿಮ್ಮ ಫೋಟೊ ಮತ್ತು ಸುದ್ದಿ ಬಂದು ನೀವು ಸದಾ ಚಾಲ್ತಿಯಲ್ಲಿರಬೇಕೆಂದು ಸಾರ್ವಜನಿಕವಾಗಿ ಹೀಗೆಲ್ಲ ಮಾತನಾಡುತ್ತೀರಿ ಎಂದು ಕೆಲವು ಅಜ್ಞಾನಿಗಳು ನಂಬಿಕೊಂಡಿದ್ದಾರೆ. ಆದರೆ ನೀವು ಹಠದಿಂದ ನಿಮ್ಮ ಮನುವಾದವನ್ನು ಜನಪ್ರಿಯಗೊಳಿಸುವ ಸಲುವಾಗಿ ಬಹಳ ಪ್ರಜ್ಞಾಪೂರ್ವಕವಾಗಿ ಹೀಗೆ ಮಾಡುತ್ತಿದ್ದೀರಿ ಎಂದು ನಮಗೆಲ್ಲ ಗೊತ್ತು ಬಿಡಿ.

ಕನಕದಾಸರು ಅಪ್ಪಟ ಮಾಧ್ವ ಸಿದ್ಧಾಂತಿ ಎಂದೂ, ಹೀಗಾಗಿ ಕುರುಬರಿಗೆಲ್ಲ ತಾನು ವೈಷ್ಣವ ದೀಕ್ಷೆ ಕೊಡಲು ಸಿದ್ಧನಿದ್ದೇನೆಂದೂ ತಾವು ಇತ್ತೀಚೆಗೆ ಹೇಳಿದ್ದೀರಿ. ಅದಕ್ಕಾಗಿ ಸಾಕಷ್ಟು ಪ್ರಚಾರವನ್ನೂ ಪಡೆದಿದ್ದೀರಿ. ಕುರಿಕಾಯುವ ಕಾಯಕ



ಕನಕ ... ಕನಕ ಮಂಟಪ



ಪುಢಾರಿಗಳ ಫ್ಲೆಕ್ಸ್ ಹಿಂದೆ ಕೈದಿಯಂತೆ ಕನಕ ಪ್ರತಿಮೆ

ಮಾಡಿಕೊಂಡು ಬಂದಿರುವ ನಮ್ಮ ಕುರುಬರು ಇತ್ತೀಚೆಗಷ್ಟೇ ಸಾಮಾಜಿಕವಾಗಿ ಮುಖ್ಯವಾಹಿನಿಗೆ ಬರುತ್ತಿದ್ದಾರೆ. ತೀರಾ ಪ್ರಗತಿ ಆ ಸಮುದಾಯದಲ್ಲಿ ಬರುವುದು ಇನ್ನೂ ಬಾಕಿಯಿದ್ದರೂ ಸಹ ಕುರುಬರು ಶಿಕ್ಷಣ ಪಡೆಯುತ್ತಿದ್ದಾರೆ. ಆರ್ಥಿಕವಾಗಿ ಕಿಂಚಿತ್ ಸಬಲರಾಗುತ್ತಿದ್ದಾರೆ. ರಾಜಕೀಯದಲ್ಲೂ ಮುಂದೆ ಬರುತ್ತಿದ್ದಾರೆ. ನೋಡನೋಡುತ್ತಲೇ ಕುರುಬರೊಬ್ಬರು ಮುಖ್ಯಮಂತ್ರಿಯೂ ಆಗಿಬಿಟ್ಟಿದ್ದಾರೆ. ಬಹುಶಃ ಇದೆಲ್ಲ ನಿಮ್ಮ ಕಣ್ಣು ಕುಕ್ಕುತ್ತಿರಬೇಕು ಅಲ್ಲವಾ ಸ್ವಾಮೀಜಿ?

ಕನಕದಾಸರಿಗೆ ಉಡುಪಿ ಕೃಷ್ಣ ದೇವಸ್ಥಾನದಲ್ಲಿ ಆದ ಗತಿಯೇ ಇವರಿಗೆಲ್ಲ ಆಗಬೇಕು ಎಂದು ನೀವು ಅದೇನೊ ಸ್ಕೆಚ್ ಹಾಕಿದ ಹಾಗಿರುವಂತಿದೆ. ಸ್ವಾಮೀಜಿ, ನೀವು ಈ ಕುರುಬರಿಗೆ ವೈಷ್ಣವ ದೀಕ್ಷೆ ಕೊಟ್ಟು ಏನು ಮಹತ್ಕಾರ್ಯ ಮಾಡುತ್ತೀರಿ? ಅರ್ಥವಾಯ್ತು ಬಿಡಿ, ವರ್ಣಾಶ್ರಮ ವ್ಯವಸ್ಥೆಯಲ್ಲಿ ಅಪಾರ ನಂಬಿಕೆ ಇಟ್ಟಿರುವ ತಾವು ಈ ಕುರುಬರಿಗೆ ವೈಷ್ಣವ ದೀಕ್ಷೆ ಕೊಡಿಸಿ ಅವರ ಕುಲಕಸುಬಾದ ಕುರಿ ಕಾಯುವ ಕೆಲಸದ ಬದಲು ಹೆಚ್ಚೆಂದರೆ ಉಡುಪಿಯಲ್ಲಿರುವ ನಿಮ್ಮ ಮಠದ ಗೋಶಾಲೆಯಲ್ಲಿ ಸೆಗಣಿ ಎತ್ತಲಿಕ್ಕೆ, ದನಗಳನ್ನು ಮೇಯಿಸಲಿಕ್ಕೆ, ಅವುಗಳಿಗೆ ಗಲಗಚ್ಚು-ಹಿಂಡಿ ಹಾಕುವ ಕೆಲಸಕ್ಕೆ ಹಚ್ಚಬಲ್ಲಿರಿ, ಅಷ್ಟೆ. ನಮ್ಮ ಉಡುಪಿ ಜಿಲ್ಲೆಯಲ್ಲಿ ಈಗ ಕೆಲಸಕ್ಕೆ ಆಳುಗಳಂತೂ ಸಿಗುತ್ತಿಲ್ಲ, ನಿಮ್ಮ ಐಡಿಯಾ ನಿಮ್ಮ ಮಟ್ಟಿಗೆ ಚೆನ್ನಾಗಿಯೇ ಇದೆ ಬಿಡಿ ಸ್ವಾಮಿ. ಅಷ್ಟಕ್ಕೂ ಈ ಕುರಿಕಾಯುವ ಕುರುಬರಿಗೆ ಶಿಕ್ಷಣ, ರಾಜಕೀಯ ಎಲ್ಲ ಯಾಕೆ ಅಂತ ನಿಮ್ಮಂಥ ಮನುವಾದಿಗಳಿಗೆ ಅನಿಸೋದು ಸಹಜವೆ.


ಸ್ವಾಮೀಜಿ, ನಾನು ಮೊನ್ನೆ ಉಡುಪಿಯ ರಥ ಬೀದಿಗೆ ಬಂದಿದ್ದೆ, ದೀಪಾವಳಿಯ ಹಿಂದಿನ ದಿನ. ಹೆಚ್ಚಾಗಿ ಹಬ್ಬಗಳ ಸಮಯದಲ್ಲಿ ದೇವಸ್ಥಾನಗಳ ಸುತ್ತಮುತ್ತ ಸ್ವಲ್ಪ ಜಾಸ್ತೀನೆ ಶುಚಿಯಾಗಿ ಇಟ್ಟಿರುತ್ತಾರೆ. ಹಳೆ ಕಸವೆಲ್ಲ ಹೊರಹಾಕಿ ಹೊಸ ಕಳೆ ಬಂದಿರುತ್ತೆ, ಆದರೆ ನಿಮ್ಮ ಕೃಷ್ಣ ದೇವಸ್ಥಾನದ ಆವರಣದಲ್ಲಿ ಮಾತ್ರ ಕಸ, ಕೊಳೆ ಎಲ್ಲವೂ ಹಾಗೆಯೆ ಇತ್ತು, ದೂರದ ಊರಿನಿಂದ ಬಂದ ಒಬ್ಬ ಗೆಳೆಯರು 'ಇದೇನ್ರೀ ನಿಮ್ಮ ಉಡುಪಿ ದೇವಸ್ಥಾನ ಸುತ್ತ ಇಷ್ಟೊಂದು ಗಲೀಜು' ಎಂದು ಹೀಯಾಳಿಸಿಯೂ ಬಿಟ್ಟರು. ಇರಲಿ ಬಿಡಿ ಸ್ವಾಮಿ, ಮುಜರಾಯಿ ಇಲಾಖೆಯಿಂದ ಕಳಚಿಕೊಂಡ ಮೇಲೆ ಕೃಷ್ಣ ದೇವಸ್ಥಾನ ಏನಿದ್ದರೂ ನಿಮ್ಮ ಸ್ವತ್ತು, 'ಹೇಗ್ ಬೇಕಾದ್ರೂ ಇಟ್ಟುಕೊಳ್ತೀವಿ, ನಿನಗೇನಯ್ಯಾ' ಎಂದು ನೀವು ಹೇಳಬಹುದು. ನಿಮ್ಮ ಬಳಿ ಇರಲಿ ಅಥವಾ ಸರಕಾರದ ಬಳಿ ಇರಲಿ, ಕೃಷ್ಣ ದೇವಸ್ಥಾನ ನಮ್ಮದು ಎಂದು ಉಡುಪಿ ಜಿಲ್ಲೆಯ ಹೆಚ್ಚಿನ ಜನರಿಗೆ ಮಾನಸಿಕವಾಗಿ ಯಾವತ್ತೂ ಅನಿಸದ ಕಾರಣ ದೇವಸ್ಥಾನದ ಸುತ್ತ ಶುಚಿತ್ವವಿಲ್ಲ ಎಂದು ನಾವು ತಲೆಕೆಡಿಸಿಕೊಳ್ಳೋದಿಲ್ಲ, ಆದರೆ...



ಉಡುಪಿ ಕೃಷ್ಣ ದೇವಸ್ಥಾನ ಈ ಪರಿಯ ಪ್ರಸಿದ್ಧಿ ಕಂಡಿದ್ದು, ಇಲ್ಲಿಗೆ ಜನ ಬರುವಂತಾಗಿ ಇದು ಪ್ರವಾಸಿ ದೇವಸ್ಥಾನವಾಗಿದ್ದು, ಅಷ್ಟ ಮಠಗಳು ಕೊಪ್ಪರಿಗೆ ತುಂಬಾ ಹಣ ಮಾಡಿದ್ದು, ನೀವೆಲ್ಲ ಜಗತ್ಪ್ರಸಿದ್ಧರಾಗಿದ್ದು ಕನಕದಾಸರು ಉಡುಪಿಗೆ ಬಂದು ಕೃಷ್ಣನನ್ನು ಆರಾಧಿಸಿದ ಕಾರಣದಿಂದ ಎಂಬುದು ನಮಗೂ-ನಿಮಗೂ ತಿಳಿದಿರುವ ಸತ್ಯ. ದೇವಸ್ಥಾನ ನಿಮಗೆ ಸೇರಿದರೂ ಕನಕದಾಸರು ನಮಗೆ ಸೇರಿದವರು. ಕನಕದಾಸರು ಈ ನಾಡಿನ ಹಿಂದುಳಿದ ವರ್ಗಗಳ, ತಳಸಮುದಾಯಗಳ, ಈ ನಾಡಿನ ಪ್ರಜ್ಞಾವಂತರ ಮತ್ತು ವಿಚಾರವಂತರ ಘನತೆ ಮತ್ತು ಗೌರವದ ಪ್ರತೀಕ. ಕೃಷ್ಣನಿಗೂ ಕನಕ ಅಚ್ಚುಮೆಚ್ಚಿನವನಾಗಿ-ನಿಂತಲ್ಲಿಯೇ ತಿರುಗಿ ಕನಕದಾಸರಿಗೆ ದರ್ಶನ ಕೊಟ್ಟ ಎಂದು ಕಥೆ ಬೇರೆ ಕಟ್ಟಿ ನೀವೆ ಜನಪ್ರಿಯಗೊಳಿಸಿದ್ದೀರಿ. ಅಂತಹ ಕನಕದಾಸರಿಗೆ ಉಡುಪಿ ದೇವಸ್ಥಾನದ ಆವರಣದಲ್ಲಿ ಒದಗಿರುವ ಪರಿಸ್ಥಿತಿಯಾದರೂ ಎಂತಹುದು ಸ್ವಾಮಿ?

ದೇವಸ್ಥಾನದ ಆವರಣದಲ್ಲಿ ಶಿರೂರು ಮಠದ ಮುಂದೆ ನಮ್ಮ ಕನಕದಾಸರು ಅನಾಥರ ಹಾಗೆ ಬೀದಿಯಲ್ಲಿ ನಿಂತಿದ್ದಾರೆ. ಕನಕದಾಸರಿಗೆ ಒಂದು ಚಿಕ್ಕ ಮಂಟಪ, ಸುತ್ತಲೂ ಭದ್ರ ಕಬ್ಬಿಣದ ಬೇಲಿ. ಒಳಗೆ ಕನಕದಾಸರು ನಿಮ್ಮ ಕೃಷ್ಣ ದೇವಸ್ಥಾನದವರು ಕಟ್ಟಿ ಹಾಕಿದ ಕೈದಿಯ ಹಾಗೆ ನಿಂತಿದ್ದಾರೆ. ಸುತ್ತಲೂ ಕಸದ ರಾಶಿ, ಅಲ್ಲಿ ಗುಡಿಸದೇ ಎಷ್ಟು ದಿನವಾಯ್ತೋ! ಅದರ ಎದುರು, ಅಕ್ಕ ಪಕ್ಕ ಎಲ್ಲವೂ ಯಾವುದೋ ನಾಟಕ, ನೃತ್ಯ ಕಾರ್ಯಕ್ರಮಗಳ ಫ್ಲೆಕ್ಸ್ ಬ್ಯಾನರ್‌ಗಳನ್ನು ನಿಲ್ಲಿಸಿದ್ದಾರೆ. ಇವುಗಳ ಹಿಂದಿರುವ ಕನಕದಾಸರು ಹೊರಗೆ ಕಾಣಿಸುವುದೂ ಇಲ್ಲ, ಕನಕದಾಸರದ್ದು ಉಡುಪಿಯಲ್ಲಿ ಹೀನಾಯ ಸ್ಥಿತಿ. ಕನಕದಾಸರ ಬಗ್ಗೆ ನಿಮಗಾಗಲಿ, ನಿಮ್ಮ ಮಠಕ್ಕೆ ಸಂಬಂಧಿಸಿದ ಇತರರಿಗಾಗಲಿ ಕಿಂಚಿತ್ತೂ ಗೌರವ, ಪ್ರೀತಿ, ಭಕ್ತಿ ಇಲ್ಲ ಎಂಬುದಕ್ಕೆ ಕನಕದಾಸರ ಈ ಸ್ಥಿತಿ ಸಾಕ್ಷಿಯಾಗಿದೆ. ಉಡುಪಿಯಲ್ಲಿ ಅಷ್ಟ ಮಠಗಳಿಗೂ ಸುಂದರವಾದ ಕಟ್ಟಡಗಳಿವೆ, ಅಲಂಕಾರವಿದೆ. ಮಠದಲ್ಲಿ ಚಿನ್ನ, ಬೆಳ್ಳಿಯ ತೇರುಗಳಿವೆ. ಹಣವಿದೆ. ನೀವು ಕೇಳಿದ್ದನ್ನು ಕೊಡುವ ದಾನಿಗಳ, ಭಕ್ತರ ಅಪಾರ ಸಮೂಹವಿದೆ. ಇಷ್ಟೆಲ್ಲ ಇದ್ದರೂ ಕನಕದಾಸರ ಗತಿ ಹೀಗಾಗಿರುವುದು ನಿಮ್ಮ ಮನುವಾದದ ಮನಸ್ಥಿತಿಗೆ ಹಿಡಿದ ಕನ್ನಡಿ ಅಲ್ಲವೇ ಸ್ವಾಮೀಜಿ?

ಹಳೆಯದನ್ನು ಕೆಡವಿ ಹೊಸದಾಗಿ ಕಟ್ಟಿಸಿದ ಕನಕಗೋಪುರದಲ್ಲಿ ದೇವಾದಿದೇವತೆಗಳ ಸಿಮೆಂಟ್ ಶಿಲ್ಪಗಳಿವೆ ವಿನಃ ಕನಕರ ಸುಳಿವೂ ಇಲ್ಲ, ಹೆಸರಿಗೆ ಮಾತ್ರ ಅದು ಕನಕಗೋಪುರ! ನಿಮ್ಮ ಅಷ್ಟ ಮಠದವರು ಕಟ್ಟಿಸಿದ ಸಂಸ್ಥೆಗಳಿಗೆ, ಕಾಲೇಜುಗಳಿಗೆ, ಶಾಲೆಗಳಿಗೆ ಎಲ್ಲವಕ್ಕೂ ನಿಮ್ಮ ಯತಿಗಳ, ಮಠಗಳ ಅಥವಾ ದೇವರ ಹೆಸರುಗಳಲ್ಲಿವೆ ವಿನಃ ಕನಕದಾಸರ ಹೆಸರಿನಲ್ಲಿ ಏನಾದರೂ ಮಾಡಿರುವಿರಾ? ನೀವು ಮಾಡುತ್ತಿರುವುದೆಲ್ಲ ನಾಟಕ ಎಂದು ಈ ನಾಡಿನ ಜನತೆಗೆ ತಿಳಿದಿದೆ. ಕುರುಬರಿಗೆ ನಿಮ್ಮ ದೀಕ್ಷೆ ಬೇಡ ಸ್ವಾಮಿ. ಈ ನಾಡಿನ ಕುರುಬರ ಮತ್ತು ನಮ್ಮೆಲ್ಲರ ಸ್ವಾಭಿಮಾನದ ಸಂಕೇತವಾಗಿರುವ ಕನಕದಾಸರ ಪ್ರತಿಮೆಗೆ ಒದಗಿರುವ ದುರ್ಗತಿಯನ್ನು ಸರಿಪಡಿಸುವ ಕಾಳಜಿ ನಿಮಗಿದೆಯೆ ಎಂದು ಮೊದಲು ಆತ್ಮವಿಮರ್ಶೆ ಮಾಡಿಕೊಳ್ಳಿ.



ಇಂತಿ,

- ಶಶಿಧರ ಹೆಮ್ಮಾಡಿ,
ಕುಂದಾಪುರ

ಲಂಕೇಶ್ ವಾರ್ಷಿಕ ಚಂದಾ ವಿವರ

ನಿಮ್ಮ ಈ ಪ್ರೀತಿಯ ಪತ್ರಿಕೆಯನ್ನು ನಿಮ್ಮ ಮನೆ ಬಾಗಿಲಿಗೇ ತರಿಸಿಕೊಳ್ಳಿ...

ಚಂದಾ ವಿವರಗಳು ಹೀಗಿವೆ:

ಒಂದು ವರ್ಷಕ್ಕೆ	700 ರೂ.
ಎರಡು ವರ್ಷಕ್ಕೆ	1400 ರೂ.
ಮೂರು ವರ್ಷಕ್ಕೆ	2000 ರೂ.

ಡಿಡಿ/ಚೆಕ್‌ಗಳನ್ನು 'ಲಂಕೇಶ್' ಹೆಸರಿನಲ್ಲಿ ನಿಮ್ಮ ವಿಳಾಸದೊಂದಿಗೆ ನಮ್ಮ ಕಚೇರಿಗೆ ಕಳುಹಿಸಿ
ನಂ.9, ಇ.ಎ.ಟಿ. ರಸ್ತೆ, ಬಸವನಗುಡಿ, ಬೆಂಗಳೂರು-560 004.

ಹೆಚ್ಚಿನ ಮಾಹಿತಿಗಾಗಿ: 9880302817, 080 26676427

ಕನ್ನಡ ನನ್ನನ್ನು ಕೈಹಿಡಿದ ಗಳಿಗೆ

ಕನ್ನಡದ ಭಾವಕೋಶದೊಳಗೆ ಜನಿಸಿರುವ ನನಗೆ ಕನ್ನಡವಲ್ಲದೆ ಇನ್ನಾವುದೂ ಕೈ ಹಿಡಿಯಲಾರದು ಅನಿಸುತ್ತದೆ. ನಾನು ಮಾತನಾಡುವುದು ಕುಂದಾಪುರ ಕನ್ನಡ. ನನ್ನ ಗುರುಗಳಾದ ಖ್ಯಾತ ರಂಗಕರ್ಮಿ ರಘುನಂದನ ಅವರು ಒಮ್ಮೆ ನಮ್ಮ ಮನೆಗೆ ಬಂದಿದ್ದಾಗ ನಾನು ನನ್ನಕ್ಕ ನನ್ನಮ್ಮ ಮಾತನಾಡಿದ್ದು ಕೇಳಿ 'ನೀವು ಯಾವ ಭಾಷೆ ಮಾತಾಡಿದ್ದು ತುಳುವೇ?' ಅಂತ ಕೇಳಿದ್ದರು. ಅಂದರೆ ಕನ್ನಡವನ್ನೇ ಮಾತನಾಡುವವರಿಗೂ ಸ್ವಲ್ಪ ದಿಗಿಲು ಹುಟ್ಟಿಸ ಬಹುದಾದ ಕನ್ನಡವನ್ನೇ ಮಾತನಾಡುವ ಪ್ರದೇಶದಿಂದ ಬಂದ ನನಗೆ ನಂಜನಗೂಡಿನ ಮತ್ತೊಂದು ವಿಶಿಷ್ಟವಾದ ಕನ್ನಡವನ್ನು ಮಾತನಾಡುವ ಪ್ರದೇಶದಲ್ಲಿ ಕೆಲಸ ಮಾಡುವ ಯೋಗ ಸಿಕ್ಕಿತು. ನಂಜನಗೂಡಿನ ಭಾಷೆ ದೇವನೂರ ಮಹಾದೇವ ಅವರ ಪ್ರತಿಭೆಯ ಮೂಸೆಯಲ್ಲರಳಿ ಕನ್ನಡ ಸಾಹಿತ್ಯಕ್ಕೇ ಹೊಸ ದಿಕ್ಕನ್ನೂ, ಹೊಸ ಚಲನೆಯನ್ನೂ ನೀಡಿದ್ದು ಎಲ್ಲರಿಗೂ ತಿಳಿದದ್ದೆ.

ಹೇಗೋ ಒಟ್ಟಾರೆ ಕಲಾವಿದನಾಗಬೇಕು ಎಂದುಕೊಂಡಿದ್ದ ನನಗೆ ನಾಟಕ ಮೇಷ್ಟ್ರಾಗುವ ಅವಕಾಶ ಒದಗಿಬಂದು ಹೆಮ್ಮರಗಾಲಕ್ಕೆ ಬಂದಾಗ ಮಕ್ಕಳೊಡನೆ ವ್ಯವಹರಿಸುವುದಕ್ಕೆ ನನಗೆ ಭಾಷೆ ತೊಡಕಾಗಲಿಲ್ಲ. ಕಾರಣ ನೀನಾಸಂ ತಿರುಗಾಟದಲ್ಲಿದ್ದಾಗ ದೇವನೂರರ ಕೃತಿಗಳನ್ನಿಟ್ಟುಕೊಂಡು ಸಿ.ಬಸವಲಿಂಗಯ್ಯನವರು 'ದ್ಯಾವನೂರು' ನಾಟಕ ಆಡಿಸಿದ್ದರು. ಆರು ತಿಂಗಳ ಕಾಲ ಅದನ್ನೇ ಆಡಿ ಆಡಿ ಭಾಷೆಯು ಒಂದಷ್ಟು ಒಳಗಿಳಿದಿತ್ತು, ಹಾಗಾಗಿ ಮಕ್ಕಳೊಡನೆ ಬೆರೆಯುವುದು ನನಗೆ ಬಹುಬೇಗ ಸಾಧ್ಯವಾಯಿತು. ಮಕ್ಕಳೊಡನೆ ಶನಿವಾರಗಳಂದು ಊರು ಸುತ್ತುವುದು ರೂಢಿಯಾಗಿ ಅವರ ಬದುಕಿನ ರೀತಿನೀತಿಗಳು, ಆ ಊರು ತನ್ನನ್ನು ಜಾತೀಯ ನೆಲೆಗಟ್ಟಿನಲ್ಲಿ ಒಡೆದುಕೊಂಡಿದ್ದನ್ನು ನಾನು ಕಣ್ಣಾರೆ ನೋಡಿ ತಿಳಿಯುವಂತಾಗಿ ಕನ್ನಡನಾಡಿನ ಎರಡು ವಿಭಿನ್ನ ಭಾಷೆಯ ಬದುಕಿನ ಕ್ರಮಗಳು ನನ್ನದೇ ಅನ್ನಿಸುವಷ್ಟು ನನ್ನೊಳಗೆ ಇಳಿಯುವಂತಾಗಿತ್ತು.

ನನಗೆ ಕವಿಯಾಗಬೇಕೆಂಬ ಹಂಬಲವಿತ್ತು. ಒಂದಷ್ಟು ಕವನಗಳನ್ನೂ ಬರೆದಿದ್ದೆ. ನನ್ನ ಹೆಚ್ಚು ಕವನಗಳು ಪ್ರಕಟಗೊಂಡಿದ್ದು ಗೌರಿ ಲಂಕೇಶ್ ಹಾಗೂ ವಾರ್ತಾಭಾರತಿಯಲ್ಲಿ. ಆದರೆ ಮಕ್ಕಳೊಡನೆ ಸೇರಿಕೊಂಡು "ಹೆಮ್ಮರ" ಪತ್ರಿಕೆ ಮಾಡುತ್ತಾ ಗದ್ಯ ಒಂದಷ್ಟು ಕೈಗೆ ಹತ್ತಿ ಕಥೆ ಬರೆಯುವುದಕ್ಕೆ ತೊಡಗಿದೆ. ಮಕ್ಕಳು ಕಲಿಸಿದ ನಂಜನಗೂಡು ಕನ್ನಡದ ಆಲೋಚನಾ ಕ್ರಮದೊಳಗೆ 'ದೇವನೂರು' ಎಂಬ ಮಹಾನೆರಳೊಳಗೆ ಇಳಿದು ಕಥೆ ಬರೆಯತೊಡಗಿದ್ದೇನೆ. 2011 ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಬಂದಾಗ ಅದೇ ರಘುನಂದನ ಸರ್ 'ಅಲ್ಲ ಮಾರಾಯ ನೀನು ಕುಂದಾಪುರ ಕನ್ನಡ ಮಾತಾಡುವವನು ನಂಜನಗೂಡಿನ ಭಾಷೆಯೊಳಗೆ ಇಷ್ಟು ಚೆನ್ನಾಗಿ ಬರೆಯುವುದು ಸಾಧ್ಯವಾಯಿತಲ್ಲ!' ಎಂದು ಆಶ್ಚರ್ಯಪಟ್ಟಿದ್ದರು. ಮೊನ್ನೆ ಮೊನ್ನೆ ಹೊಸತು... ಪ್ರಕಟವಾದ ಕಥೆಯನ್ನು ಓದಿ ಇನ್ನೊಬ್ಬರು ಗುರುಗಳಾ... ಪ್ರೊ.ಶಿವರಾಮಯ್ಯನವರು 'ನೀನು ಕುಂದಾಪುರದಲ್ಲಿ ಹು... ಬೆಳೆದವನು, ನಂಜನಗೂಡಿನ ಭಾಷೆಯ ಲಯವ... ದೇವನೂರರ ಹಾಗೆ ಹಿಡಿದಿದ್ದೀಯ' ಅಂದರು. ನನ್ನಂಥವ... ಎಂಥಾ ದೊಡ್ಡ ಬಹುಮಾನವಿದು. ನನಗಿಂದು ಹೀಗ... ಸಾಧ್ಯವಾಗಿದ್ದರೆ ಅದು ನನ್ನ ವಿದ್ಯಾರ್ಥಿಗಳು ನನಗೆ ನೀಡಿ... ಕನ್ನಡದ ಕೊಡುಗೆಯಿಂದ. ನನ್ನೂರ ಕನ್ನಡ ನನ್ನ ಸ್ವತ್ತಾಗಿದ್ದ...



ಇಂದು ನಾನು ಯೋಚನೆ ಮಾಡುವು... ಬರೆಯುವುದು ನಂಜನಗೂಡಿನ ಕನ್ನ... ದಲ್ಲಾಗಿಬಿಟ್ಟಿದೆ; ಕನ್ನಡ ಮಾತೃಭಾಷೆಯವ... ಕನ್ನಡದಲ್ಲಿ ಯೋಚಿಸಿ ಇಂಗ್ಲಿಷ್‌ನಲ್ಲಿ ಮಾತಾಡುವರಲ್ಲ ಹಾಗೆ.

ಇದು ಕನ್ನಡದವನೇ ಆದ ನನಗೆ ಕನ್ನ... ಕೈ ಹಿಡಿದ ಬಗೆ.

- ಸಂತೋಷ ಗುಡ್ಡಿಯಂಗಡಿ
ಮೈಸೂರು

ನನ್ನ ಕೈ ಹಿಡಿದ ಕನ್ನಡ ಬದುಕಿನ ದಾರಿ ತೋರಿಸಿತು

ಕನ್ನಡ ಮಾಧ್ಯಮದಲ್ಲಿ ಓದಿದ್ದರಿಂದ ದಕ್ಕಿದ ಅಷ್ಟಿಷ್ಟು ಕನ್ನಡವನ್ನು ಹೊರತುಪಡಿಸಿದರೆ, ನಾನು ಕನ್ನಡದ ವಿದ್ಯಾರ್ಥಿಯಲ್ಲ, ಪ್ರೌಢಶಾಲೆಯಲ್ಲಿ ಓದಿದ್ದು ಸಂಸ್ಕೃತ ಮತ್ತು ಪದವಿ ಹಂತದಲ್ಲಿ ಓದಿದ್ದು ಹಿಂದಿ, ಆದರೆ ಕಾಲೇಜು ದಿನಗಳ ಸಾಹಿತ್ಯ ಚಟುವಟಿಕೆಗಳು ನನ್ನನ್ನು ಕನ್ನಡ ಬರವಣಿಗೆಯತ್ತ ತೀವ್ರವಾಗಿ ಸೆಳೆಯಿತು. ಮುಂದೆ ನಾನು ಉದ್ಯೋಗ ಕಂಡುಕೊಂಡಿದ್ದು ಭಾಷೆ, ಸಾಹಿತ್ಯಗಳಿಗೆ ಏನೇನೂ ಸಂಬಂಧವಿಲ್ಲದ ರಾಸಾಯನಿಕ ಸ್ಥಾವರದಲ್ಲಿ, ಅಲ್ಲಿದ್ದುದು ಕೇವಲ ಹೊಟ್ಟೆಪಾಡಿಗಾಗಿ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಆಸಕ್ತಿಯೆಲ್ಲ ಸಾಹಿತ್ಯ ರಂಗಭೂಮಿ ಚಟುವಟಿಕೆಗಳತ್ತ. ನಾಡಿನ ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ನನ್ನ ಚಿಲ್ಲರೆ ಲೇಖನಗಳು ಸಾಹಿತ್ಯ ಚಟುವಟಿಕೆಗೆ ಇನ್ನಷ್ಟು ಪ್ರೋತ್ಸಾಹ ನೀಡುತ್ತಾ ನನ್ನನ್ನು ಜೀವಂತವಾಗಿಟ್ಟಿದ್ದವು.

ಹೀಗಿರುವಾಗಲೇ ಅಂದರೆ, ನನ್ನ ಆಗಿನ ಉದ್ಯೋಗದಲ್ಲಿ, 17 ವರ್ಷಗಳನ್ನು ಕಳೆದ ಬಳಿಕ ದುರ್ಘಟನೆಯೊಂದಕ್ಕೆ ಈಡಾಗಿ ಗಾಲಿ ಕುರ್ಚಿಯನ್ನು ಸೇರುವಂತಾಯಿತು. ಪರಿಣಾಮವಾಗಿ, ಇದ್ದೊಂದು ಉದ್ಯೋಗವನ್ನೂ ಕಳೆದುಕೊಂಡೆ. ಹೊಟ್ಟೆಪಾಡಿನ ಕತೆ ಏನು ಎಂಬ ದೊಡ್ಡ ಪ್ರಶ್ನೆ ನಮ್ಮ ಮುಂದೆ ಭೂತಾಕಾರವಾಗಿ ಬಂದು ನಿಂತಿತ್ತು. ಭವಿಷ್ಯದಲ್ಲಿ ನಿರುದ್ಯೋಗಿಯಾಗಿರಬೇಕಾಗುತ್ತದಲ್ಲ ಎಂಬ ಭಾವವಂತೂ ಇನ್ನೂ ನೋವಿಗೆ ಕಾರಣವಾಗಿತ್ತು. ಆಗ ನನ್ನ ಕೈ ಹಿಡಿದದ್ದು ಕನ್ನಡ. ಈ ಹಿಂದಿನಿಂದಲೇ ಬರವಣಿಗೆಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರಿಂದ ಆ ಕ್ಷೇತ್ರದಲ್ಲಿ ವಿಶೇಷ ಪ್ರಯತ್ನ ಅಗತ್ಯವಾಗಲಿಲ್ಲ, ಮಲಗಿದ್ದಲ್ಲಿಂದಲೇ ಪತ್ರಿಕೆಗಳಿಗೆ ಬರೆಯತೊಡಗಿದೆ. ಆ ಮೂಲಕ ಒಂದಿಷ್ಟು ಸಂಪಾದನೆ ಸಾಧ್ಯವಾಯಿತಾದರೂ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದದ ಕೆಲಸವಂತೂ ನನಗೆ ಕೈತುಂಬ ಕೆಲಸಕೊಟ್ಟಿತು. ಧಾರಾಳ ಸಂಪಾದನೆಯನ್ನೂ ತಂದುಕೊಟ್ಟಿತು. ಎಷ್ಟರಮಟ್ಟಿಗೆ, ಎಂದರೆ ಹಿಂದೆ ನಾನೊಂದು ಉದ್ಯೋಗವನ್ನೇ ಕಳೆದುಕೊಂಡಿದ್ದೆ ಎನ್ನುವುದನ್ನು ಮರೆಯುವಂತೆ ಮಾಡಿತು. ಇಂದಿಗೂ ನನ್ನನ್ನು ಬದುಕಿಸಿರುವುದು ಕನ್ನಡ.



- ಶ್ರೀನಿವಾಸ ಕಾರ್ಕಳ

ಕನ್ನಡ ಕೈಕೊಟ್ಟ ಗಳಿಗೆ

ನಾನು ಬಿ.ಎ. ಎರಡನೇ ವರ್ಷದಲ್ಲಿದ್ದಾಗ ದೊಡ್ಡಬಳ್ಳಾಪುರದಲ್ಲಿದ್ದ ಸಂವಾದ ಎಂಬ ಎನ್.ಜಿ.ಓ ಮೇದಾ ಪಾಟ್ಕರ್ ನೇತೃತ್ವದ ನರ್ಮದಾ ಬಚಾವೋ ಆಂದೋಲನಕ್ಕೆ ಬೆಂಬಲ ಸೂಚಿಸಲು ನರ್ಮದಾ ಕಣಿವೆಗೆ ಕರೆದುಕೊಂಡು ಹೋಗುವ ವ್ಯವಸ್ಥೆ ಮಾಡಿತು. ನಮ್ಮ ತಾಲ್ಲೂಕು ಬಿಟ್ಟು ಎಲ್ಲಿಯೂ ಹೋಗದ ನನಗೆ ದೂರದ ರಾಜ್ಯಗಳಿಗೆ ಹೋಗಿಬಂದಿದ್ದು ಇಂದಿಗೂ ಸೋಜಿಗವೇ. ಅದರಲ್ಲೂ ಗುಜರಾತ್, ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶಗಳು ಕೂಡುವ ನರ್ಮದಾ ಕಣಿವೆಯಲ್ಲಿ ಹತ್ತು ದಿನ ಇದ್ದು ಅಲ್ಲಿನ ಆದಿವಾಸಿಗಳ ನೋವಿಗೆ ದನಿಯಾಗಿದ್ದು ನನ್ನ ಜೀವಮಾನದ ಸಾಧನೆ.

ಹೋರಾಟಕ್ಕೆ, ಚಳವಳಿಗೆ ಭಾಷೆ ಅಗತ್ಯವಿಲ್ಲದಿದ್ದರೂ ಅನ್ಯಭಾಷೆಯ ಘಮಲೇ ಇಲ್ಲದ ಕುಗ್ರಾಮವೊಂದರಿಂದ ಬಂದು ಈ ದೊಡ್ಡ ಸಂತೆಯೆದುರು ನಿಂತಾಗ ಯಾರ ಜತೆ ಏನು ಮಾತಾಡಬೇಕೆಂದೇ ಅರ್ಥವಾಗದೆ ಕಣ್ಣುಕಣ್ಣು ಬಿಡಬೇಕಾಗುವ ಸಂದರ್ಭ ಎದುರಾಗುವುದು ಸಹಜವೇ..

ಒಂದಿಪ್ಪತ್ತು ಇಂಗ್ಲಿಷ್ ಪದಗಳು ಗೊತ್ತಿದ್ದ ದಿನಗಳವು. ವ್ಹಾಟ್, ದಟ್, ದಿಸ್, ಕಮ್, ಗೋ ಥರದವು. ನರ್ಮದಾ ಬಚಾವೋ ಆಂದೋಲನಕ್ಕೆ ನನ್ನ ಹಾಗೆ ಜಗತ್ತಿನ ಮೂಲೆಮೂಲೆಯಿಂದ ವಿದ್ಯಾರ್ಥಿ ಯುವಜನರು ಬಂದಿದ್ದರು. ಅವರಲ್ಲಿ ಲಂಡನ್‌ನ ಕಿಮೆಲ್, ಕೇರಳದ ಕರುಣಾ ಮತ್ತು ಪುಣೆಯ ಪೂರ್ವಿ ನನ್ನ ನೆನಪಿನಲ್ಲಿ ಉಳಿದಿರುವವರು.. ನಮ್ಮ ಟೀಮಿನಲ್ಲಿದ್ದ ಡಾಮಿನಿಕ್, ಉಷಾ,, ವಿಜಯ್, ಸಹನಾ ಎಲ್ಲರೂ ಇಂಗ್ಲಿಷಿನಲ್ಲಿ ಪಂಟರ್‌ಗಳು. ನಾನು ಮತ್ತು ತಿಪ್ಟೂರಿನ ಗೆಳೆಯ ಲಕ್ಷ್ಮಿಕಾಂತ ಅಚ್ಚ ಕನ್ನಡದ ಕೂಸುಗಳು. ಕಿಮೆಲ್ ಜತೆಯಂ... ಮಾತಾಡಲು ಇಷ್ಟವಿದ್ದರೂ ಭಾಷೆಯ ಕಾರಣಕ್ಕೆ ಮೂಕನಂತೆ ವರ್ತಿಸು... ಪುಣೆಯ ಪೂರ್ವಿ ಮತ್ತು ಅವಳೊಂದಿಗೆ ಇದ್ದ ಇನ್ನೊಬ್ಬ ಕಪ್ಪು ಸುಂದ... ಇಡೀ ಊರಿನ ತುಂಬಾ ಗಲಗಲಾ ಅಂತ ಓಡಾಡಿಕೊಂಡು ಅಲ್ಲಿನ ... ಜನರಿಗೆ ಅದೂ ಇದೂ ಕೆಲಸ ಮಾಡಿಕೊಡುವಾಗ ನಾನೂ ಜೊತೆಯಿರು... ಆದರೆ ಅವರು ಕೇಳುವ ಪ್ರಶ್ನೆಗಳಿಗೆ ಮಾತು ಬರದ ಮಗುವಿನ ಹಾ... ಪೆಚ್ಚಾಗಿ ತಲೆ ಆಡಿಸುತ್ತಿದ್ದೆ. ಒಂದ್ಸಲ ಪೂರ್ವಿ ಹಾದಿಯಲ್ಲಿ ಕಸ ಗುಡಿಸುತ್ತಿದ್ದಳು... ನನಗೆ ಅವಳಿಗೆ ಸಹಾಯ ಮಾಡಬೇಕೆನ್ನುವ ಆಸೆ. ಅದನ್ನು ಹೇಳುವುದು... ಹೇಗೆ ಎಂದು ಅರ್ಧ ಗಂಟೆ ತಲೆಕೆಡಿಸಿಕೊಂಡೆ.. ಪಾಪ ಅವಳು ಸುಸ್ತಾ... ನನ್ನನ್ನು ಕೇಳಲು ಹಿಂಜರಿಕೆಯಾಗಿ ಗುಡಿಸುತ್ತಲೇ ಇದ್ದಳು. ಅಷ್ಟರಲ್ಲಿ ಅವ... ಗೆಳತಿ ಬಂದು 'Shall I?' ಅಂತ ಅವಳಿಂದ ಪೊರಕೆ ತೆಗೆದುಕೊಂ... ಗುಡಿಸಲು ತೊಡಗಿದಳು. ಮರುದಿನ ಪೂರ್ವಿ ಅಲ್ಲೊಂದು ಕಡೆ ... ದೊಡ್ಡ ದೊಡ್ಡ ಕಲ್ಲುಗಳನ್ನೆತ್ತಿ ಒಂದು ಕಡೆ ಗುಡ್ಡೆ ಹಾಕುತ್ತಿದ್ದಳು. ನಾ... ಅವಳ ಹಿಂದೆ ನಿಂತು 'Shall I' ಅನ್ನಲು ಮರೆತು 'I shall' ಅಂ...



ಅವಳು 'What..' ಅಂದಳು. ನಂಗೆ ಮುಂ... ಏನು ಹೇಳ್ಬೇಕು ಅಂತ ಗೊತ್ತಾಗ್ಲಿಲ್ಲ.. ನ... ತಡವರಿಕೆಯನ್ನು ಕಂಡು ಅವಳು 'Come jo... with me..' ಅಂದಳು. ನಾನು ನಿಂತಲ್ಲೇ ನಿಂತುಕೊಂಡು 'Yes yes' ಅಂದೆ. ನಾನು ನಿಂ... ಇದ್ದದ್ದನ್ನು ಗಮನಿಸಿ ಪಾಪ ಅವಳು ಅವಳ ಇಂಗ್ಲಿಷ್... ಶಪಿಸುತ್ತಿದ್ದಳು...

ಪಿಯುಸಿ ಓದುವಾಗ ಇಂಗ್ಲಿಷ್ ಮೇಷ್ಟ್ರು ಕ್ಲಾ... ಬಂದಾಗ ಅವರೆದುರಿಗೇ ಹೊರಗೆ ಎದ್ದು ಹೋ... ಉಗ್ರ ಕನ್ನಡಾಭಿಮಾನ ತೋರಿಸುತ್ತಿದ್ದ ನನಗೆ ... ಮೇಲಿನ ಘಟನೆ ತುಂಬಾ ಕಲಿಸಿತು.


- ಹುಲಿಕುಂಟೆ ಮೂರ್ತಿ

ಟಿಪ್ಪುವಿನ ನಾಡಿನಲ್ಲೇ ಟಿಪ್ಪುವಿಗೆ ಅವಮಾನ

ಮಂಡ್ಯ ಜಿಲ್ಲೆ ರಂಗಭೂಮಿಗೆ ಹಲವು ಮಿನುಗು ನಕ್ಷತ್ರಗಳನ್ನು ನೀಡಿದೆ. ಈ ಮಣ್ಣಿನ ಅನೇಕ ಕಲಾ ದಿಗ್ಗಜರು ರಂಗಭೂಮಿಗೆ ಹೊಸದಿಕ್ಕನ್ನು ತೋರಿಸಿದ್ದಾರೆ. ಒಂದು ಕಾಲದಲ್ಲಿ ಮಂಡ್ಯದಲ್ಲಿ ನಿರಂತರ ರಂಗಚಟುವಟಿಕೆಗಳು- ಒಂದನೊಂದು ಸ್ಪರ್ಧೆಗೆ ಒಡ್ಡುವಂತೆ ನಾಟಕಗಳು ಕಲಾಸಕ್ತರ ಮನತಣಿಸುತ್ತಿದ್ದವು. ಆದರೆ ಇತ್ತೀಚಿನ ದಿನಗಳಲ್ಲಿ ರಂಗಭೂಮಿಯ ಆ ಗತವೈಭವ ಇಳಿಮುಖವಾಗುತ್ತಿರುವುದನ್ನು ಅಲ್ಲಗಳೆಯುವಂತಿಲ್ಲ.

ಇಂತಹ ಸಂದರ್ಭದಲ್ಲಿ ರಂಗಭೂಮಿಯ ಚಟುವಟಿಕೆಗಳನ್ನು, ಪ್ರಯೋಗಗಳನ್ನು ನಿರಂತರವಾಗಿ ಸಾಗಿಸುವ ಸದುದ್ದೇಶವನ್ನು ಇಟ್ಟುಕೊಂಡು ರಂಗಭೂಮಿಯ ತುಡಿತವುಳ್ಳ ಕೆಲವು ಸಮಾನ ಮನಸ್ಸಿನ ಗೆಳೆಯರು ಒಂದೆಡೆ ಸೇರಿ 2012ರ ಏಪ್ರಿಲ್ 10ರಂದು 'ರಂಗಪಯಣ' ...ಬ ತಂಡವನ್ನು ಮಂಡ್ಯದಲ್ಲಿ ಹುಟ್ಟುಹಾಕಿದೆವು.

ಇಲ್ಲಿಯವರೆಗೂ ರಂಗಪಯಣ ಹಲವಾರು ನಾಟಕ ಪ್ರದರ್ಶನಗಳಿಗೆ, ರಂಗುಬ್ಬಿಗಳಿಗೆ ಕಾರಣವಾಗಿದೆ. ಇತ್ತೀಚೆಗೆ ವಾರ್ಷಿಕೋತ್ಸವವನ್ನು ಆಚರಿಸಿದ ರಂಗಪಯಣ ಒಂದು 'ಸಕ್ಕರೆ ನಾಟಕೋತ್ಸವ' ನಡೆಸಿತ್ತು, ಆ ನಾಟಕೋತ್ಸವದಲ್ಲಿ ಧಾರವಾಡ ಟೂರಿಂಗ್ ಟಾಕೀಸ್‌ರವರ 'ಹುಚ್ಚರಸಂತೆ', ಸಿಹಿಮೊಗೆ ತಂಡಮಂಡ್ಯದ 'ಬುಗುರಿ' ಮತ್ತು ರಂಗಪಯಣ ತಂಡದ ವತಿಯಿಂದ ಡಾ.ಗಿರೀಶ್ ಕಾರ್ನಾಡ್ ರಚನೆಯ 'ಟಿಪ್ಪೂ ಸುಲ್ತಾನ ಕಂಡ ಕನಸು' ನಾಟಕಗಳನ್ನು ಪ್ರದರ್ಶಿಸಲಾಗಿತ್ತು. ಈ ನಾಟಕೋತ್ಸವ ಅದ್ಭುತ ಯಶಸ್ಸು ಕಂಡಿತಲ್ಲದೆ ರಂಗಪಯಣ ತಂಡ ಅರ್ಪಿಸಿದ್ದ 'ಟಿಪ್ಪೂ ಸುಲ್ತಾನ ಕಂಡ ಕನಸು' ಜನರ ಮೆಚ್ಚುಗೆಗೆ ಪಾತ್ರವಾಗಿತ್ತು.



ಇದರ ಬೆನ್ನಲ್ಲೆ ರಂಗಪಯಣದ ಸದಸ್ಯರಾದ ನಾವು ನಮ್ಮ ನಾಟಕವನ್ನು ಹಲವಾರು ಕಡೆ ಪ್ರದರ್ಶನ ನೀಡಲು ಮುಂದಾದೆವು. ಆದ್ದರಿಂದ ಮಂಡ್ಯ ಜಿಲ್ಲೆಯ ಪ್ರಸಿದ್ಧ 'ಗಂಗನಚುಕ್ಕಿ ಜಲಪಾತೋತ್ಸವ'ದ ಭಾಗವಾಗಿ ನಡೆಯುವ ನಾಟಕೋತ್ಸವದಲ್ಲೂ 'ಟಿಪ್ಪೂ ಸುಲ್ತಾನ ಕಂಡ ಕನಸು' ನಾಟಕವನ್ನು ಅಭಿನಯಿಸುವ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿ ಬಿ.ಎನ್.ಕೃಷ್ಣಯ್ಯರವರಿಗೆ ಸಲ್ಲಿಸಿದೆವು. ಈ ಪ್ರಸ್ತಾವನೆಗೆ ಜಿಲ್ಲಾಧಿಕಾರಿ ಹಸಿರು ನಿಶಾನೆ ತೋರಿಸಿದರು. ಆದರೆ ಕೆಲವು ಅಧಿಕಾರಿಗಳು "ಈ ನಾಟಕಕ್ಕೆ ಈ ಉತ್ಸವ ಸೂಕ್ತ ವೇದಿಕೆ ಅಲ್ಲ, ಬೇಕಾದರೆ ನೀವು ಶ್ರೀರಂಗಪಟ್ಟಣ ದಸರಾ ಮಹೋತ್ಸವದಲ್ಲಿ ಇದನ್ನು ಪ್ರದರ್ಶಿಸಿ' ಎಂದು ಸಲಹೆ ಕೊಟ್ಟರು. ರಂಗಪಯಣ ತಂಡ ಈ ತಂತ್ರದ ಹಿಂದೆ ಇರುವ ಉದ್ದೇಶವನ್ನು ಗಮನಿಸಿದೆ ಅದಕ್ಕೆ ಒಪ್ಪಿತು.

ಅನಂತರ ನಡೆದದ್ದು ಬಹಳ ಕುತೂಹಲಕಾರಿಯಾಗಿತ್ತು, ಶ್ರೀರಂಗಪಟ್ಟಣ ದಸರಾ ಕಾರ್ಯಕ್ರಮದಲ್ಲಿ ನಮ್ಮ ನಾಟಕವನ್ನು ಪ್ರದರ್ಶಿಸುವ ಪ್ರಸ್ತಾವನೆಯನ್ನು ಅದೇ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸಲ್ಲಿಸಿದೆವು. ನಾಟಕದ ತಾಲೀಮು ಮತ್ತೆ ಆರಂಭಿಸಿದೆವು. ದಸರಾ ಉತ್ಸವಕ್ಕೆ ಕೇವಲ ಐದು ದಿನಗಳು ಬಾಕಿ ಇರುವಾಗ ನಾಟಕ ಪ್ರದರ್ಶನದ ಸಮಯ ಮತ್ತು ದಿನಾಂಕಗಳನ್ನು ಮುದ್ರಿಸಿದ್ದ ಪತ್ರಿಕೆ ನಮಗೆ ತಲುಪಿತು. ಅದನ್ನು ನೋಡಿ ನಮಗೆಲ್ಲ ಗಾಬರಿ ಯಾಯಿತು. ಏಕೆಂದರೆ ನಮಗೆ ನಿಗದಿ ಮಾಡಿದ್ದ ಸಮಯ ಸಂಜೆ ನಾಲ್ಕು ಗಂಟೆ ಯಾಗಿತ್ತು, ಆದರೆ ಬೇರೆ ತಂಡಗಳ ನಾಟಕ ಗಳಿಗೆ ರಾತ್ರಿ 7 ಗಂಟೆಯನ್ನು ನಿಗದಿ ಮಾಡಲಾಗಿತ್ತು. ಹೊರಾಂಗಣ ವೇದಿಕೆಯ ಮೇಲೆ, ಧ್ವನಿ ಬೆಳಕು ಸಂಯೋಜನೆಯಲ್ಲಿ ನಡೆಯುವ ನಾಟಕ ಹಗಲಿನ ವೇಳೆಯಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ನಾವು ತಿಳಿಸಿದೆವು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀರಂಗ ಪಟ್ಟಣದ ಶಾಸಕರಾದ ಎ.ಬಿ.ರಮೇಶ ಬಂಡಿಸಿದ್ದೇಗೌಡರಿಗೂ ಈ ವಿಚಾರ ತಿಳಿಸಿದೆವು. ಆಗ ಬಂಡಿಸಿದ್ದೇಗೌಡರು ಯುವಜನ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಮಂಜುಳಾ ಹುಲ್ಲಹಳ್ಳಿ ಅವರ ಜೊತೆ ಮಾತನಾಡಲು ನಮಗೆ ಹೇಳಿದರು. ಆದರೆ ಸಾಹಿತ್ಯದ ಬಗ್ಗೆಯಾಗಲಿ, ರಂಗ ಚಟುವಟಿಕೆಯ ಬಗ್ಗೆಯಾಗಲಿ ಕನಿಷ್ಟ ಪ್ರಜ್ಞೆ ಇಲ್ಲದ ಮಂಜುಳಾ ಹುಲ್ಲಹಳ್ಳಿಯವರು ನಮ್ಮ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳನ್ನು ನೀಡದೆ ಜಾರಿಕೊಳ್ಳತೊಡಗಿದರು.

ಆಗ ನಾವು ಪತ್ರಿಕಾಗೋಷ್ಠಿ ಕರೆದು "ಹಗಲಿನ ವೇಳೆಯಲ್ಲಿ ನಾಟಕ ಪ್ರದರ್ಶನ ಮಾಡಲು ಸಾಧ್ಯವಿಲ್ಲ... ನಮ್ಮ ತಂಡದ ಪ್ರದರ್ಶನಕ್ಕೆ ಸಮಯ ಬದಲಾಯಿಸಿ ಕೊಡದಿದ್ದರೆ ನಾವು ನಾಟಕ ಪ್ರದರ್ಶನವನ್ನೇ ರದ್ದು ಮಾಡುತ್ತೇವೆ" ಎಂದು ಹೇಳಿದೆವು.

ವೇದಿಕೆಗಳಲ್ಲಿ ರಂಗಚಟುವಟಿಕೆಗಳನ್ನು ಪ್ರೋತ್ಸಾಹಿಸಿ... ರಂಗಭೂಮಿಯನ್ನು ಉಳಿಸುವ ಮಾತನಾಡುವ ನಾಜೂಕಿ... ಮಂಜುಳಾ ಹುಲ್ಲಹಳ್ಳಿಯವರು ನಾವು ನಮ್ಮ ನಾಟಕವ... ರದ್ದು ಪಡಿಸುವುದನ್ನೇ ಕಾಯುತ್ತಿದ್ದರು. ಗಗನಚುಕ್ಕಿ ಜಲಪಾತೋತ್ಸವ ಮತ್ತು ಶ್ರೀರಂಗಪಟ್ಟಣ ದಸರಾ ಮಹೋತ್ಸವದಲ್ಲಿ 'ಟಿಪ್ಪೂ ಸುಲ್ತಾನ ಕಂಡ ಕನಸು' ನಾ... ಪ್ರದರ್ಶನ ನೀಡಲು ಅಡ್ಡಿಯಾಗಿರುವುದು ಈ ಅಧಿಕಾರಿ... ಕೋಮುವಾದಿತನ.

ನಾಟಕ ನಡೆಯಬೇಕಿದ್ದ ದಿನ ಜಿಲ್ಲೆಯ ಪ್ರಗತಿ... ಚಿಂತಕರು, ಸಾಹಿತಿಗಳು ಮತ್ತು ಎಲ್ಲಾ ಪಾತ್ರಧಾರಿಗ... ಪಾತ್ರದ ಪೋಷಾಕಿನಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ... ನೀಡಿದೆವು. ಆದರೆ ಅದರಿಂದ ಏನೂ ಪ್ರಯೋಜನವಾಗಲಿ... ಟಿಪ್ಪುವಿನ ನಾಡಿನಲ್ಲಿ ಟಿಪ್ಪುವಿಗೆ ಅಪಮಾನ ತಪ್ಪ... ಅಧಿಕಾರಿಗಳ ಕೋಮುವಾದಿ ಮುಖ ಮತ್ತೊಮ್ಮೆ ಅನಾವರಣವಾಗಿತ್ತು.

- ಎಂ.ಸಿ.ಲಂಕೇಶ್
ಕಾರ್ಯದರ್ಶಿಗಳು, ರಂಗಪಯಣ, ಮಂ...



ಕನ್ನಡತಿಯ ಕಣ್ಣಿಂದ ಕಂಡ ದೆಹಲಿ

ಕರ್ನಾಟಕ ರಾಜ್ಯೋತ್ಸವ ವಿಶೇಷ-2013

...ಿದ ಎರಡು ವರ್ಷಗಳಿಂದ ದೆಹಲಿಯ ...ುರಲ್ಲಿ ಒಬ್ಬರಾದ ರೇಣುಕಾ ನಿಡಗುಂದಿಯವರು ... ರಶೀದ್ ಸಂಪಾದಕತ್ವದ 'ಕೆಂಡಸಂಪಿಗೆ' ಬ್ಲಾಗಿನಲ್ಲಿ ...ಯನ್ನು ಕುರಿತು ಬರೆದ ಬಿಡಿಬಿಡಿ ಲೇಖನಗಳನ್ನು ...ಲಿತ ಪ್ರಬಂಧ ಮತ್ತು ಸಣ್ಣಕತೆಯ ತುಂಡುಗಳನ್ನು ... ಹೋಲಿದಂತಿರುವ ಲಹರಿ ರೂಪದಲ್ಲಿರುವ ...ಗಳು ಇವು. ಇವನ್ನೆಲ್ಲ ಈಗ ಮತ್ತೊಮ್ಮೆ ಒಟ್ಟಾಗಿ ...ಗ, ಮೆಲ್ಲಮೆಲ್ಲನೆ ಆಪ್ತವಾಗಿ ಜೀವನದರ್ಶನವೊಂದು ... ಆವರಿಸಿಕೊಳ್ಳುತ್ತಿರುವುದನ್ನು ಅನುಭವಿಸಿದೆ. ...ವನದರ್ಶನವೆಂದರೆ, ವಲಸಿಗರು ಅಪರಿಚಿತ ...ವನ್ನು ಕುತೂಹಲ, ಪ್ರೀತಿ ಮತ್ತು ವಿಶ್ವಾಸಗಳ ...ವೇ ಆತ್ಮೀಯವಾಗಿಸಿಕೊಂಡು ಹೊಸ ಬದುಕನ್ನು ...ಳ್ಳುವುದು. ವಿಶೇಷವೆಂದರೆ, ದೆಹಲಿಯನ್ನು ...ಕೊಬ್ಬರು ನೋಡುತ್ತ ಕಾಣಿಸಿರುವ ಈ ಚಿತ್ರಗಳ ...ಲ್ಲಿ ದೆಹಲಿ ಮಾತ್ರವಲ್ಲ, ಕರ್ನಾಟಕವೂ ಕನ್ನಡವೂ ...ಗರೂ ಬೇರೆಬೇರೆ ಬಗೆಯಲ್ಲಿ ...ತವಾಗಿರುವುದು. ಈ ಪ್ರತಿಬಿಂಬವು ಕರ್ನಾಟಕದ ... ಕನ್ನಡದ ಸಂಬಂಧವನ್ನು ಭಾರತದ ಬೇರೆಬೇರೆ ...ಸಮುದಾಯಗಳ ನಡುವೆ ಏರ್ಪಡಿಸಿಕೊಳ್ಳಲು ...ದ ಪಾಠವೂ ಆಗಿದೆ.

...ದಲಿಗೇ ಈ ಬರೆಹಗಳಲ್ಲಿ ಇಷ್ಟವಾಗುವುದು ...ದು ಅಧಿಕಾರಗಳ ಕೇಂದ್ರವಾಗಿರುವ ರಾಜಧಾನಿ ...ದು ಚಿತ್ರಣಗೊಳ್ಳುವ ವಿಶಿಷ್ಟ ರೀತಿ. ನಮಗೆಲ್ಲ ... ಪಠ್ಯಪುಸ್ತಕಗಳು, ಶತಮಾನಗಳ ಕಾಲದಿಂದ ...ರೆ ರಾಜವಂಶಕ್ಕೆ ಸೇರಿದ ಚಕ್ರವರ್ತಿಗಳು ಆಳಿದ ...ದು ಕಥನವನ್ನು ಕೊಟ್ಟಿವೆ. 20ನೇ ಶತಮಾನದಲ್ಲಿ ...ರಿ ಗೌರ್ನಲ್ ಜನರಲ್ಲುಗಳ ಮತ್ತು ಬೇರೆಬೇರೆ ... ಸೇರಿದ ಪ್ರಧಾನಮಂತ್ರಿಗಳ ಆಳಿಕೆಯ ಚರಿತ್ರೆಯನ್ನು ...ಟ್ಟಿವೆ. ಈಗ ವೃತ್ತಪತ್ರಿಕೆ ಮತ್ತು ಟಿವಿ ...ಗಳಾದರೂ ರಾಜಕೀಯ ...-ಹುರುಡುಗಳಿಂದಲೇ ತುಂಬಿರುವ ರಾಜಕೀಯ ...ನ್ನೇ ಕಾಣಿಸುತ್ತಿವೆ. ಅಧಿಕಾರಸ್ಥರು ಮತ್ತು ಅವರು ... ಬೇರೆಬೇರೆಯಾದರೂ ಎಲ್ಲ ಕಡೆ ರಾಜಕೀಯ ...ೇ ಮುಖ್ಯವಾಗಿದೆ. ಕನ್ನಡ ಕವಿಗಳು ಸಹ ಈ ...ಷ್ಠ ದೆಹಲಿಯನ್ನು ಒಬ್ಬ ಮಾಯಾಂಗನೆಯಾಗಿ, ...ಯ ಪ್ರತಿಮೆಯ ಮೂಲಕ ಕಟ್ಟಿಕೊಡಲು ...ಿವುದುಂಟು. ಕಂಬಾರರ ದೆಹಲಿಯನ್ನು ಕುರಿತ ...ನ್ನು ಇಲ್ಲಿ ನೆನೆಯಬಹುದು. ದೂರದಿಂದಲೇ ...ವಾಗಿ ನಮ್ಮ ಬದುಕನ್ನು ನಿಯಂತ್ರಿಸುವ ಇಂತಹ ...ು ಕೇಂದ್ರಗಳು ನಮ್ಮ ಚರ್ಚೆಗೆ ಮುಖ್ಯವೇ. ... ರಾಜಕೀಯ ಕೇಂದ್ರಗಳಿಗೆ ಇನ್ನೊಂದು ...ುತ್ತದೆ. ಅದು ಈ ಮಹಾನಗರಗಳ ಅಥವಾ ...ಳ ಮಾನವೀಯ ತಲ್ಲಣಗಳ ಮುಖ. ಇದನ್ನು ... 'ಗುಣಮುಖ' ಮತ್ತು ಕಾರ್ನಾಡರ 'ತುಘಲಕ್' ...ಕಾಣಿಸಿವೆ. ಲೇಖಕರಾದವರು ಚರಿತ್ರೆಯನ್ನು ...ಗಳಿಗಿಂತ ಭಿನ್ನವಾಗಿ ಕಾಣಿಸುವುದು ಹೀಗೇ. ...ುಲ್ಲಿ ರೇಣುಕಾ ಅವರ ಬರೆಹಗಳು ಸಹ ...ರ ಜನರ ಬದುಕಿನ ದೈನಿಕಗಳ ವಿವರಗಳ ... ದೆಹಲಿಯನ್ನು ಕಾಣಿಸುತ್ತವೆ; ಅದರಲ್ಲೂ ದೇಶದ ...ಖಿಂದ ಗುಳೆಬಂದು ನೆಲೆಸಿ, ಬದುಕನ್ನು ...ು ಸೆಣಸಾಟ ಮಾಡುತ್ತಿರುವ ಅಸಂಖ್ಯಾತ ...ರ ಮೂಲಕ ದೆಹಲಿಯನ್ನು ಕಾಣಿಸುತ್ತವೆ. ಜೊತೆಗೆ ...ಸಗಳ ತುಂಬ ದೆಹಲಿಯ ಸಾಮಾನ್ಯ ಹೆಂಗಸರ ... ತುಂಬಿಕೊಂಡಿದೆ. ಬೀದಿಯಲ್ಲಿ ರಾಜಮಾ ... ಗೃಹಿಣಿ, ಅಗ್ಗದ ತುಟರಂಗನ್ನು ಬಳಿದುಕೊಂಡು ... ಬರುವ ಜಮಾದಾರಿಣಿ, ಹೊರಸಿನ ಮೇಲೆ ...ಸಾಟಪಡ ಮುದುಕಿ, ಕಲ್ಲುಮುಳ್ಳುಸೈತ್ರಿ ಸಾಗಿಸುವ ...ದಾರಿಣಿ, ಇದೊಂದು ಹೆಂಗಳೆಯರ ಜಗತ್ತು, ...ಮಹಿಳೆಯರ ಬದುಕನ್ನು ನೋಡುವಾಗ ...ಳ ಜಾಗೂರರು ಗಂಡುಗಳಿಲ್ಲ ಹೊರಗೆ ಹೋದ ಬಳಿಕ ಉಳಿದ ಮನೆಯ ಹೆಂಗಸರ ಜಗತ್ತನ್ನು ಬಾಲಕನ ಕಣ್ಣಲ್ಲಿ ಕಾಣಿಸುವ ವಿವರಗಳು ನೆನಪಾಗುತ್ತವೆ. ಬಹುಶಃ ಗೃಹಿಣಿಯ ಕಣ್ಣೊಂದು ಮಾತ್ರ ಮಹಾನಗರವನ್ನು ಹೀಗೆ ಕಾಣಬಲ್ಲದು ಮತ್ತು ಕಟ್ಟಿಕೊಡಬಲ್ಲದು ಅನಿಸುತ್ತದೆ. ಚರಿತ್ರೆಯ ಪುಸ್ತಕಗಳನ್ನು ಓದಿ ಅಲ್ಲಿಂದ ಎರವಲು ತಂದ ಮಾಹಿತಿಗಳಿಂದ ಬರೆದಿರುವ ಇಲ್ಲಿನ ಕೆಲವು ಬರೆಹಗಳು ರಾಜಕೀಯ ಚರಿತ್ರೆಯ ಮೂಲಕ ದೆಹಲಿ ಕಟ್ಟಿಕೊಡುವುದರಿಂದಲೊ ಏನೊ ಇವುಗಳ ಮುಂದೆ ಅವು ಜಡವಾಗಿದೆ ಎಂಬುದು ಗಮನಾರ್ಹ.

ಎರಡನೆಯದಾಗಿ ಇಲ್ಲಿರುವ ಜೀವನ ಪ್ರೀತಿ ಮತ್ತು ಮಾನವ ಸಂಬಂಧಗಳ ಸ್ವರೂಪ. ಯಾವುದೇ ಊರು ಅದರ ಬೃಹತ್ ಕಟ್ಟಡಗಳ ಮೂಲಕ, ಪಾರ್ಕು ಹೋಟೆಲು ಪ್ರವಾಸಿತಾಣಗಳ ಮೂಲಕ ನಮ್ಮದಾಗುವುದಿಲ್ಲ; ಅದು ಅಲ್ಲಿರುವ ಜನರ ಜತೆ ಬೆಳೆಯುವ ನಮ್ಮ ಮಾನವೀಯ ಸಂಬಂಧಗಳ ಮೂಲಕ ನಮ್ಮ ಅಂತರಂಗಕ್ಕೆ ಇಳಿಯುತ್ತದೆ. ಧಾರವಾಡದಿಂದ ವಲಸೆ ಹೋದ ಲೇಖಕಿಯು ಅನಿವಾರ್ಯವಾಗಿ ದೂರದ ಪರಕೀಯವಾದ ದೆಹಲಿಯಲ್ಲಿ ಬದುಕುತ್ತ ಅದನ್ನು ತಮ್ಮೂರನ್ನಾಗಿ ಪರಿವರ್ತಿಸಿಕೊಳ್ಳುವ ಇಲ್ಲಿನ ಪರಿ ಸ್ವಾರಸ್ಯಕರವಾಗಿದೆ. ಇದಕ್ಕಾಗಿ ಲೇಖಕಿ ಸೂಕ್ಷ್ಮವಾಗಿ ಕುತೂಹಲದಿಂದ ಆಸುಪಾಸಿನ ಜನರನ್ನು ಅವರ ವರ್ತನೆ ಮಾತುಕತೆ ಔದಾರ್ಯ ಸಣ್ಣತನ ಗಮನಿಸತೊಡಗುತ್ತಾರೆ. ಮೊದಲಿದ್ದ ಶಂಕೆ ಬೇಸರ ಹಿಂಜರಿಕೆಗಳು ಅವರ ಜತೆ ಮಾತಿಗಿಳಿಯುತ್ತ ಕಷ್ಟಸುಖಗಳನ್ನು ಹಂಚಿಕೊಳ್ಳುತ್ತಿದ್ದಂತೆ ಕರಗತೊಡಗುತ್ತವೆ. ಊರು ತನ್ನೆಲ್ಲ ಕೊಳಕುತನ ಬಿಸಿಲು ಚಳಿ ಹಸಿರು ಒಳ್ಳೆತನಗಳ ಜತೆಗೆ ಅಂತರಂಗಕ್ಕೆ ಇಳಿಯತೊಡಗುತ್ತದೆ. ಇಲ್ಲಿನ ಎಲ್ಲ ಬರೆಹಗಳು ಮನುಷ್ಯರ ಸಂಬಂಧಗಳ ಮೂಲಕ ಮೈತಳೆಯುತ್ತದೆ. ಮನೆಗೆಲಸದ ಸರಸ್ವತಿಯನ್ನು ಕುರಿತು ಒಂದು ನದಿಯ ಹೆಸರಿನಲ್ಲಿ ಇಲ್ಲಿರುವ ಬರೆಹವು ಮನುಷ್ಯ



ಸಂಬಂಧಗಳಿಗೆ ಕೊಟ್ಟಿರುವ ಅತ್ಯಂತ ದೊಡ್ಡ ಗೌರವದ ಪ್ರತೀಕದಂತಿದೆ. ಇಲ್ಲಿ ಪ್ರಾಂತ್ಯ ಭಾಷೆ ಧರ್ಮಗಳ ಗಡಿಯಾಚೆ ಸ್ಥಾಪನೆಯಾಗುವ ಮಾನವ ಸಂಬಂಧಗಳ ಬಗ್ಗೆ ಒಂದು ಬಗೆಯ ವಿಸ್ಮಯವಿದೆ. ದೂರದ ಆಫ್ರಿಕೆಯಿಂದ ಬಂದು ಆಸ್ಪತ್ರೆಯಲ್ಲಿ ಭೇಟಿಯಾಗುವ ಸೇಯಿ ಎಬಿದೆ ಎಂಬ ವ್ಯಕ್ತಿಯ ಕತೆಯೂ ಇಲ್ಲಿ ಸೇರಿದೆ. ಈ ಅರ್ಥದಲ್ಲಿ ಈ ಬರೆಹಗಳು ವ್ಯಕ್ತಿಚಿತ್ರಗಳ ಗುಚ್ಛ. ಜನರನ್ನು ಪ್ರೀತಿಸದೆ ಊರನ್ನು ಪ್ರೀತಿಸುವುದು ಸಾಧ್ಯವಿಲ್ಲ. ಜಯಂತ ಕಾಯ್ಕಿಣಿಯವರ ಕತೆಗಳ ಮೂಲಕ ಮುಂಬೈ ಆಪ್ತವಾಗುವುದು ಹೀಗೇ. ಕಾಸ್ಮೊಪಾಲಿಟನ್ ನಗರವೆಂದರೆ ಸಂಬಂಧಗಳ ಯಾಂತ್ರಿಕತೆ ಮತ್ತು ವಿಘಟನೆ. ಆದರೆ ಇಲ್ಲಿ ಮನುಷ್ಯ ಸಂಬಂಧಗಳ ಮೂಲಕವೇ ಮಹಾನಗರಿ ರೂಪುಗೊಳ್ಳುತ್ತದೆ. ದೆಹಲಿ ಕಲ್ಕತ್ತೆ ಮುಂಬೈನಲ್ಲಿ ಕೆಲವು ಕಾಲ ವಾಸವಾಗಿದ್ದು ಅದರ ಮೇಲೆ ದೊಡ್ಡದೊಡ್ಡ ಕೃತಿಗಳನ್ನು ಬರೆದಿರುವ ವಿದೇಶಿಗರ ಬರೆಹಕ್ಕಿಂತ ಇದು ಭಿನ್ನವಾಗುವುದು ಇಲ್ಲೇ. ವಿಚಿತ್ರವೆಂದರೆ, ಕೃಷ್ಣಾನಂದ ಕಾಮತರು ಬಂಗಾಳದಲ್ಲಿದ್ದು ಬರೆದಿರುವ ಕಥನವು ಅಥವಾ ಬಿಜಿಎಲ್ ಸ್ವಾಮಿಯವರು ಮದರಾಸಿನಲ್ಲಿದ್ದು ಬರೆದಿರುವ ಅನುಭವವೂ ಅಲ್ಲಿನ ಜನರ ಬಗ್ಗೆ ಪೂರ್ವಗ್ರಹಗಳಿಂದ ತುಂಬಿರುವುದು. ಆದರೆ ಇಲ್ಲಿನ ಬರೆಹಗಳು ದೆಹಲಿಗರ ಮೂಲಕ ದೆಹಲಿಯ ಬಗ್ಗೆ ಪ್ರೀತಿ ಹುಟ್ಟಿಸುತ್ತವೆ. ದೇವನೂರರ 'ಕುಸುಮಬಾಲೆ' ಕಾದಂಬರಿಯ ಮಾತನ್ನು ಬಳಸಿಹೇಳುವುದಾದರೆ, ಈ ಕೃತಿಯ ಮೂಲಕ ಹೊಮ್ಮುವ ದರ್ಶನವನ್ನು 'ಸಂಬಂಜ ಅನ್ನೋದು ದೊಡ್ಡದು ಕಣಾ' ಎಂದೂ ಹೇಳಬಹುದು.

ಮೂರನೆಯದಾಗಿ ಇಲ್ಲಿನ ಬರೆಹಗಳು ಮಹಾನಗರಿಯನ್ನು ಮಾನವ ಸಂಬಂಧದ ಮೂಲಕ ಮಾತ್ರ ಕಟ್ಟಿಕೊಡುವುದಿಲ್ಲ, ಅಲ್ಲಿನ ಪ್ರಕೃತಿಯ ಮೂಲಕವೂ ಕಟ್ಟಿಕೊಡುತ್ತವೆ. ದೆಹಲಿಯ ಬಿರುಬಿಸಿಲು, ಕೊರೆವ ಚಳಿ, ಸಿರುವ ಮಳೆಗಾಲ, ಈ ಋತುಮಾನಕ್ಕೆ ತಕ್ಕಂತೆ ತಮ್ಮ ಚಹರೆ ಬದಲಿಸಿಕೊಳ್ಳುವ ಗಿಡಮರಗಳು, ಅವನ್ನು ಆವರಿಸಿಕೊಳ್ಳುವ ಹೂವು ಹಕ್ಕಿಗಳು, ಒಟ್ಟಿನಲ್ಲಿ ದೆಹಲಿಯ ಏಕಾಲಜಿಯೇ ಇಲ್ಲೊಂದು ಪಾತ್ರವಾಗಿ ಬರುತ್ತದೆ. ಲೇಖಕಿಯ ದೃಷ್ಟಿಸೂಕ್ಷ್ಮತೆಯಿಂದ ಈ ಚಿತ್ರಗಳು ಕೇವಲ ರಮ್ಯವಲ್ಲದ ನೆಲೆಯಲ್ಲಿ ಕಾಣಿಸುತ್ತವೆ. ಯಾಕೋ ಏನೊ, ದೆಹಲಿಯನ್ನು ಸೀಳಿಕೊಂಡು ಹರಿಯುವ ಹೊಳೆ ಯಮುನೆಯ ಚಿತ್ರಗಳು ಕಡಿಮೆಯಿವೆ ಇಲ್ಲಿ. ಒಂದೆಡೆ ಆಕೆಯನ್ನು ಮೊಂಡುಹುಡುಗಿಗೆ ಹೋಲಿಸುವ ಸಾಲೊಂದು ಬಂದುಹೋಗುತ್ತದೆ. ಯಮುನೆ ಹೆಚ್ಚು ಬಾರದಿರಲು ಆಕೆಯ ದುರವಸ್ಥೆಯೂ ಕಾರಣವೊ ಲೇಖಕಿಯ ಒಲವಿಲ್ಲದಿರುವಿಕೆ ಕಾರಣವೊ ತಿಳಿಯದು. ಒಟ್ಟಿನಲ್ಲಿ ಇಲ್ಲಿನ ಬರೆಹಗಳು ಪ್ರಕೃತಿಯನ್ನೂ ಮಾನವ ಪ್ರಕೃತಿಯನ್ನು ಒಟ್ಟೊಟ್ಟಿಗೆ ಬೆಸೆದು ನೋಡುತ್ತವೆ. ಅಂತಹ ಕಡೆ ಬರೆಹಗಳು ಕಾವ್ಯದಂತೆ ಕಾಣುತ್ತವೆ.

ಎಷ್ಟೊಂದು ಪಾತ್ರಗಳಿವೆ ಇಲ್ಲಿ! ದೆಹಲಿಯಲ್ಲಿ ಸಿಗುವ ಹಲವಾರು ಬಗೆಯ ಚಹಗಳ ಬಗ್ಗೆ ರೇಣುಕಾ ಬರೆಯುತ್ತಾರೆ. ಅಲ್ಲಿನ ಬೀದಿಗಳಲ್ಲಿ ಸಿಗುವ ತಿನಿಸುಗಳ ಬಗ್ಗೆ ಬರೆಯುತ್ತಾರೆ. ಅಪಾರ್ಟ್‌ಮೆಂಟುಗಳಲ್ಲಿ ಸಾಗುವ ಜನರ ದಾರುಣ ಸಂಕಟಗಳು ಹಾಗೂ ಅದಮ್ಯ ಉತ್ಸಾಹಗಳ ಬದುಕಿನ ಬಗ್ಗೆ ಬರೆಯುತ್ತಾರೆ. ದೆಹಲಿಯ ಟ್ರಾಫಿಕ್ಕಿನ ಬಗ್ಗೆ ಬರೆಯುತ್ತಾರೆ. ತನ್ನ ಅರೆಹುಚ್ಚು ಹೆಂಡತಿ ಮನೆಬಿಟ್ಟು ಹೋಗಿದ್ದಕ್ಕೆ ಹುಡುಕಲಾಗದೆ ಪರಿತಪಿಸುವ ವೃದ್ಧನೊಬ್ಬನ ಸಂಕಟಗಳ ಬಗ್ಗೆ ಬರೆಯುತ್ತಾರೆ. ದೆಹಲಿಯ ಹೂಬಿಡುವ ಮರಗಳ ಮೇಲೆ ಬಹಳ ಬರೆಯುತ್ತಾರೆ.

ತನ್ನ ಹೊಲಕ್ಕೆ ಒಂದು ಟ್ರಾಕ್ಟರ್ ಕೊಳ್ಳಲು ದುಡಿಮೆ ಮಾಡಲು ಬಂದು ಸೋತುಹೋಗುವ ಘಡವಾಲಿನ ರಾವತ್ ಎಂಬ ಯುವಕನ ಬಗ್ಗೆ ಬರೆಯುತ್ತಾರೆ. ರಸ್ತೆಬದಿ ಪಾನ್‌ಬೀಡಾ ಅಂಗಡಿಯಿಂದಲೇ ಜೀವನ ಸಾಗಿಸುವ ನೇಕರಾಮ್ ಗುಲಾಬಿ ದಂಪತಿಗಳ ಬಗ್ಗೆ ಬರೆಯುತ್ತಾರೆ. ಮನೆಗೆಲಸ ಗಾರ್ಗಿ ಸರಸ್ವತಿಯ ಬಗ್ಗೆ ಬರೆಯುತ್ತಾರೆ. ಅವರು ಕಾಣಿಸುವ ಎಲ್ಲ ವ್ಯಕ್ತಿಗಳು ತಮ್ಮ ದುಗುಡ ಗೋಳಾಟ ಉತ್ಸಾಹ ಪ್ರಾಮಾಣಿಕತೆ ಚೈತನ್ಯಗಳಿಂದ ಜೀವಂತವಾಗಿ ಅವತರಿಸುತ್ತಾರೆ.


ಮಹಿಳೆಯೊಬ್ಬರ ಕಣ್ಣಲ್ಲಿ ಕಂಡಿರುವ ಕಾರಣಕ್ಕೆ ದೆಹಲಿಯು ರಾಜಕೀಯ ಅಧಿಕಾರದ ಸೊಕ್ಕಿಲ್ಲದೆ, ಚರಿತ್ರೆಯ ಭಾರವಿಲ್ಲದೆ ತನ್ನೆಲ್ಲ ಅಸಹಾಯಕತೆ ಚೆಲುವು ದಿಟ್ಟತನ ಚೈತನ್ಯಶೀಲತೆ ಇಲ್ಲಿನ ಬರೆಹಗಳಲ್ಲಿ ಪ್ರಕಟವಾಗುತ್ತದೆ. ವಿಶೇಷವೆಂದರೆ ಇಲ್ಲಿ ಮೈತಳೆಯುವುದು ಕೇವಲ ನಗರವೊಂದರ ಚಿತ್ರ ಮಾತ್ರವಲ್ಲ, ಅದು ಇಡೀ ದೇಶದ ಚಿತ್ರವೂ ಹೌದು. ಈ ಬರೆಹಗಳು ದೆಹಲಿಯ ಜತೆ ಧಾರವಾಡದ ಹಬ್ಬ ಜನಸ್ವಭಾವ, ಸಂಸ್ಕೃತಿ, ಹವಾಮಾನಗಳನ್ನು ಮತ್ತೆಮತ್ತೆ ಹೋಲಿಸುತ್ತ ಹೋಗುತ್ತವೆ. ಆಗ ಈ ಬರೆಹಗಳು ದೆಹಲಿಯ ಕತೆ ಹೇಳುತ್ತಲೆ ಪರೋಕ್ಷವಾಗಿ ಕರ್ನಾಟಕದ ಕತೆಯನ್ನೂ ಹೇಳತೊಡಗುತ್ತವೆ. ಇದೇ ತರಹ ದೆಹಲಿಗೆ ದುಡಿಯಲು ಭಾರತದ ಬೇರೆಬೇರೆ ಪ್ರಾಂತ್ಯಗಳಿಂದ ವಲಸೆ ಬಂದು ನೆಲೆಸಿರುವ ಜನರ ಬಗ್ಗೆ ಹೇಳುವಾಗ, ಬರೆಹವು ಆಯಾ ಜನರ ಭಾಷೆ ಸಂಸ್ಕೃತಿ ಮತ್ತು ರಾಜ್ಯಗಳತ್ತ ತಮ್ಮ ಕಣ್ಣನ್ನು ಕಿವಿ ಚಾಚಿಕೊಂಡು, ಆಯಾ ರಾಜ್ಯಗಳ ಕತೆಯೂ ಆಗುತ್ತವೆ. ಇಲ್ಲಿ ಬಿಹಾರ, ಉತ್ತರಾಖಂಡ ಹಾಗೂ ಪಂಜಾಬಗಳ ಮೇಲೆ ಹೃದ್ಯವಾದ ಚಿತ್ರಗಳಿವೆ. ಈ ...

ಈ ಬರೆಹಗಳು ಲೇಖಕಿಯ ಆತ್ಮಕತೆಯೂ ಆಗಿವೆ. ಒಂದೊಮ್ಮೆ ರೇಣುಕಾ ಆತ್ಮಕತೆ ಬರೆದರೆ, ತಮ್ಮ ಬಾಳಿನ ಬಹುಕಾಲ ಕಳೆದ ದೆಹಲಿಯನ್ನೇ ಕುರಿತು ಬರೆಯಬೇಕು ತಾನೇ? ಹೀಗೆ ಈ ಬರೆಹಗಳು ಲಹರಿಯಂತೆ ದೆಹಲಿಯ ಬಗ್ಗೆ ಬಿಡಿಬಿಡಿ ಚಿತ್ರಗಳಾಗಿದ್ದರೂ, ಆಳದಲ್ಲಿ ಅವು ಪರಸ್ಪರ ಕೂಡಿಕೊಂಡು ಬೇರೊಂದು ಕತೆಯನ್ನು ಸಹ ಹೇಳುತ್ತವೆ. ಒಮ್ಮೊಮ್ಮೆ ಕಾದಂಬರಿಗೆ ಕತೆಗೂ ಕಾರಣವಾಗಬಹುದಾದ ಅನುಭವಗಳನ್ನು ಲಹರಿಯಲ್ಲಿ ಚೆಲ್ಲಾಡುತ್ತಿದ್ದಾರೆ ಎಂದೂ ಅನಿಸುತ್ತದೆ.

ಹಾಗೆಂದು ಇಲ್ಲಿನ ಬರೆಹಗಳಿಗೆ ದೆಹಲಿಯ ಇತಿಹಾಸಕ್ಕೆ ವಿಮುಖವಾಗಿದೆ ಎಂದೇನಿಲ್ಲ. ಇಲ್ಲಿಯೂ ಚರಿತ್ರೆಯಿದೆ. ದೆಹಲಿಯ ಚಕ್ರವರ್ತಿಗಳು ಸೂಫಿಗಳು ಬರುತ್ತಾರೆ. ಜಿನ್ನಾ ಮುಂತಾದ ಆಧುನಿಕ ಕಾಲದ ರಾಜಕಾರಣಿಗಳ ಪ್ರಸ್ತಾಪ ಬರುತ್ತದೆ. ದೆಹಲಿಯನ್ನು ಕಟ್ಟಿದ ಖುಷವಂತಸಿಂಗರ ಪೂರ್ವಜರ ಬಗ್ಗೆ ಉಲ್ಲೇಖವಿದೆ. ಆದರೆ ಈ ಚಾರಿತ್ರಿಕ ವ್ಯಕ್ತಿಗಳು ಮನುಷ್ಯರಾಗಿ ಮಾಡಿದ ಒಳಿತುಕೆಡುಕುಗಳ ಮೂಲಕ ಬರುತ್ತಾರೆ. ಚರಿತ್ರೆಯನ್ನು ಇಲ್ಲಿನ ಬರೆಹಗಳು ವರ್ತಮಾನದೊಂದಿಗೆ ಜೋಡಿಸಿ ನೋಡುವುದರಿಂದ ಅದು ಮಾನವೀಕರಣಗೊಳ್ಳುತ್ತದೆ. ಈ ಬರೆಹಗಳಲ್ಲಿ ಅತ್ಯಂತ ಜೀವಂತವಾಗಿರುವುದು ಹಾಗೆ ಕಂಡರೆ ಪಂಜಾಬಿನ ಸಿಖ್ಖರ ಚಿತ್ರಗಳು.


ಇಲ್ಲಿನ ವಿಶೇಷತೆಯೆಂದರೆ, ಬೇರೆಬೇರೆ ವ್ಯಕ್ತಿಗಳನ್ನು ಚಿತ್ರಿಸುವಾಗ, ಲೇಖಕಿ ತಾವು ಓದಿದ ಕೃತಿಗಳ ಪಾತ್ರಗಳನ್ನು ಜತೆ ಸಮೀಕರಿಸುವುದು. ಅಮೃತಾ ಪ್ರೀತಮರ ಅಂಗೂರಿ, ಶಿಲಪ್ಪದಿಕಾರಂನ ಕನ್ನಗಿ-ಕೋವಿಲನ್, ಖುಷವಂತ್ ಸಿಂಗ್, ಬೇಂದ್ರೆ, ಕುವೆಂಪು, ರವೀಂದ್ರನಾಥ ಟಾಗೂರ್ ಮುಂತಾದ ಲೇಖಕರ ಕೃತಿಗಳಿಂದ ಪಾತ್ರ ಮತ್ತು ಘಟನೆಗಳು, ದೆಹಲಿಯ ಜನರ ಕಥನದೊಂದಿಗೆ ಸೇರಿಕೊಳ್ಳುತ್ತ ಹೋಗುತ್ತವೆ. ಕಾಳಿದಾಸನ ಋತುಸಂಹಾರವು ದೆಹಲಿಯ ಬದಲಾಗುವ ಹವಾಮಾನದ ಜತೆ ಒಂದಾಗುತ್ತದೆ. ಚರಿತ್ರೆ, ಪ್ರಕೃತಿ, ವರ್ತಮಾನ, ಸಾಹಿತ್ಯ ಎಲ್ಲವೂ ಸೇರಿ ಇಲ್ಲಿ ಕಥನವಾಗುತ್ತವೆ.

ಈ ಬರೆಹದಲ್ಲಿ ಕೆಲವು ಮಿತಿಗಳಿವೆ. ಲಹರಿತನವೇ ಕಾರಣವಾಗಿ ಸಾಧ್ಯವಾಗಬೇಕಿದ್ದ ಚಿಂತನಶೀಲತೆ ಇಲ್ಲಿ ಕಡಿಮೆಯಾಗುತ್ತದೆ. ಇನ್ನೂ ಆಳಕ್ಕೆ ಹೋಗಬಹುದಾದ ಬರೆಹ ತಟ್ಟನೆ ಕಡಿದುಹೋದಂತೆ ನಿಲ್ಲುತ್ತವೆ. ಎಲ್ಲ ಕಡೆಯೂ ಒಳಿತನ್ನೇ ಕಾಣುವ ಮನಸ್ಸಿನ ಕಾರಣದಿಂದ ದೆಹಲಿಯನ್ನು ನಿಷ್ಠುರವಾಗಿ ನೋಡುವ ವಿಮರ್ಶಿಸುವ ಗುಣ ಕಡಿಮೆಯಾಗಿದೆ ಎಂದೂ ಅನಿಸುತ್ತದೆ. ಆದರೂ ನನ್ನ ಓದಿನ ಮಿತಿಯಲ್ಲಿ ಹೇಳುವುದಾದರೆ, ದೆಹಲಿಯನ್ನು ಕುರಿತು ಯಾವ ಕನ್ನಡಿಗರೂ ಬರೆಯದ ಪುಸ್ತಕವನ್ನು ರೇಣುಕಾ ಬರೆದಿದ್ದಾರೆ ಅನಿಸುತ್ತದೆ. ಕನ್ನಡಿಗರೇ ಆದರೂ ನಮಗೆ ಇಲ್ಲಿ ಸೌಲಭ್ಯ ಕೊಡದಿದ್ದರೆ ಬೇರೆ ನಗರಕ್ಕೆ ಹೋಗುತ್ತೇವೆ ಎಂದು ಬೆದರಿಕೆ ಒಡ್ಡುವ ಐಟಿ ಉದ್ಯಮಿಗಳು, ಪರಿಸರದ ಜನರ ಬದುಕು ಏನಾಗುತ್ತಿದೆ ಎಂಬುದರ ಖಬರೇ ಇಲ್ಲದೇ ತಮ್ಮ ಸ್ವರ್ಗದಲ್ಲಿ ಚ್ಯುತಿಯಿಲ್ಲದೆ ಬದುಕಬಯಸುವ ಐಟಿ ಜನರು ತುಂಬಿಕೊಳ್ಳುತ್ತಿರುವ ಬೆಂಗಳೂರಿನಲ್ಲಿ, ಒಂದು ಊರೆಂದರೆ ಅಲ್ಲಿನ ಸಾಮಾನ್ಯ ಜನ ಮತ್ತು ಅವರ ಬದುಕು ಎಂಬ ದರ್ಶನವನ್ನು ನೀಡುವ ಈ ಕೃತಿ ಮುಖ್ಯವಾಗಿದೆ.



- ರಹಮತ್ ತರೀಕೆರೆ

ಅಂಚಿನಿಂದ.....



ಡಾ.ವಾಸು ಎಚ್.ವಿ.

ಹಳ್ಳಿ ಹೈದರನ್ನು ಪ್ಯಾಟೆಗೆ ತಂದು... ಕೊಂದು... ಮತ್ತು...

ನಮ್ಮ ಒಂದು ಅಧ್ಯಯನದ ಸಲುವಾಗಿ ಪಿರಿಯಾಪಟ್ಟಣ ತಾಲೂಕಿನ ಮೂಲೆಯ ಆ ಆದಿವಾಸಿ ಪ್ರದೇಶಕ್ಕೆ ಹೋದೆವು. ಅದನ್ನು ಪ್ರದೇಶವೆಂದು ಕರೆದುದೇಕೆಂದರೆ, ಅದು ಅತ್ತ ಹಾಡಿಯಲ್ಲ; ಇತ್ತ ಊರೂ ಅಲ್ಲ, ಹಾಡಿ, ಊರು, ಸ್ಲಂ, ಪುನರ್ವಸತಿ ಪ್ರದೇಶದ ಸಮಸ್ಯೆ ಎಲ್ಲವನ್ನೂ ಹೊತ್ತುಕೊಂಡು ವಿಚಿತ್ರವಾಗಿ ರೂಪು ತಳೆದುಕೊಂಡಿರುವ ವಾಸಸ್ಥಳವಾಗಿತ್ತು, ಊರ ಮುಖ್ಯರಸ್ತೆಯಲ್ಲಿ ಟೀ ಅಂಗಡಿ, ಬೀಡಿ ಗುಟ್ಕಾ ಇತ್ಯಾದಿ ಮಾರುವ ಪೆಟ್ಟಿ ಅಂಗಡಿಗಳು, ದಿನಸಿ ಅಂಗಡಿ- ಹೀಗೆ ವಿವಿಧ ಬಗೆಯ 5-6 ಅಂಗಡಿಗಳಿದ್ದವು. ಎಲ್ಲದರಲ್ಲೂ ಸಮಾನವಾಗಿ ಸಿಗುತ್ತಿದ್ದುದು ಕಡಿಮೆ ದರ್ಜೆಯ ಮದ್ಯದ ಬಾಟಲಿಗಳು. ಆದರ ಗಿರಾಕಿಗಳು ಆ ಊರಿನ ಪ್ರತೀ ರಸ್ತೆಯಲ್ಲೂ ಮಧ್ಯಾಹ್ನ ಮೂರು ಗಂಟೆಯ ಹೊತ್ತಿಗೇ ತಮ್ಮ ಇರುವನ್ನು ಪ್ರಶ್ನೆ ಕೇಳದೇ ನಮಗೆ ತಿಳಿಸಿಬಿಟ್ಟಿದ್ದರು.

ಒಬ್ಬ ವ್ಯಕ್ತಿ ನಮ್ಮಿಂದ ಆತನಿಗೇನು ಲಾಭವೆಂದು ಜೋರಾಗಿ ಕೂಗಾಡಲೂ ತ್ರಾಣವಿಲ್ಲದೇ ಅರಳುತ್ತಿದ್ದ. ಮನುಷ್ಯತನದ ಯಾವ ಘನತೆಯೂ ಇಲ್ಲದಂತೆ ಕೂತಿದ್ದುದ್ದು ಕರುಳು ಹಿಂಡುತ್ತಿತ್ತು, ಆತ ಅಲ್ಲಿ ಕೂತಿದ್ದಾನೆಂಬ ಪರಿವೇ ಇಲ್ಲದೇ ಆತನ ಮಗಳು ಮತ್ತು ಹೆಂಡತಿ ನಮ್ಮ ಪ್ರಶ್ನೆಗಳಿಗೆ ಉತ್ತರಿಸಿದರು. ಆದರಿಂದ ಗೊತ್ತಾದುದು ಇಷ್ಟು. ಅಲ್ಲಿಂದ ಕೆಲವೇ ಕಿ.ಮೀ.ಗಳ ದೂರದಲ್ಲಿದ್ದ ಈ ಆದಿವಾಸಿ ಗಿರಿಜನರಿಗೆ ದಶಕಗಳ ಹಿಂದೆ ತಲಾ ಎರಡು ಎಕರೆ ಭೂಮಿ ನೀಡಿ, ಇಲ್ಲಿ ಪುನರ್ವಸತಿ ಮಾಡಲಾಗಿದೆ. ಎಲ್ಲರಿಗೂ ಒಂದು ಪ್ರತ್ಯೇಕ ಕೊಠಡಿಯೂ ಇಲ್ಲದ ಪುಟ್ಟ ಮನೆಗಳನ್ನು ಕಟ್ಟಿಕೊಡಲಾಗಿದೆ. ಅವರಲ್ಲಿ ಇಬ್ಬರು ಬಿಟ್ಟರೆ ಇನ್ಯಾರ ಹತ್ತಿರವೂ ಈಗ ಭೂಮಿ ಇಲ್ಲ, ಒಬ್ಬರ ಹತ್ತಿರ ಸುಮಾರು 10ರಿಂದ 20 ಎಕರೆಗಳಿವೆ. ಅವರು 'ನಮ್ಮ ಚೇರ್‌ಮನ್, ಅವರನ್ನು ನೀವು ನೋಡಲೇಬೇಕು. ಬನ್ನಿ' ಅಂತ, ಅಷ್ಟು ತೂರಾಡದ ಇನ್ನೊಬ್ಬ ವ್ಯಕ್ತಿ ನಮ್ಮನ್ನು ಕರೆದುಕೊಂಡು ಹೋದರು. ಇಡೀ ಊರಿಗೆ ಊರೇ ತೂರಾಡುತ್ತಿದ್ದ ಜಾಗದಲ್ಲಿ ಚೇರ್‌ಮನ್ ಹೇಗಿರಬಹುದೆಂಬ ಕುತೂಹಲ ನಮಗಿತ್ತು, ಚೇರ್‌ಮನ್‌ನ ಮನೆಯ ಮುಂದೆ 6-7 ಕಾರುಗಳು ನಿಂತಿದ್ದವು. ಎರಡು ಮಾತ್ರ ಅವರದ್ದೆಂದೂ, ಉಳಿದವರು ಅವರಿಂದ ವಿಶೇಷ ನಾಟಿ ಚಿಕಿತ್ಸೆ ಪಡೆದುಕೊಳ್ಳಲು ಬಂದಿರುವ ಬೇರೆ ಬೇರೆ ಜಿಲ್ಲೆಗಳವರದ್ದೆಂದು ನಮಗೆ ಹೊರಗೆ ನಿಂತಿದ್ದವರು ಹೇಳಿದರು.

ಆ ಚೇರ್‌ಮನ್‌ರ ಹೆಸರು ಗೋಪಾಲ ಪೂಜಾರಿ. ಅವರು ಆದಿವಾಸಿ ಗಿರಿಜನರ ಒಂದು ಸಂಘದ ರಾಜ್ಯಾಧ್ಯಕ್ಷರೆಂದು ಅವರ ಕಾರಿನ ಮೇಲಿನ ಬರಹ ತೋರಿಸುತ್ತಿತ್ತು, ವಿಶೇಷ ನಾಟ ಚಿಕಿತ್ಸೆಗೆಂದು ಬಂದಿದ್ದವರನ್ನೂ ಮಾತಾಡಿಸಿದೆವು. 'ಕುಡಿತ ಬಿಡಿಸಲು ಇವರಲ್ಲಿ ವಿಶೇಷ ಔಷಧಿ' ಇರುವುದರಿಂದ ಕೆಲವು ಕುಡುಕರನ್ನು ಅವರುಗಳು ಎಳೆದುಕೊಂಡು ಬಂದಿದ್ದರು. ಎಲ್ಲರನ್ನೂ ಮಾತಾಡಿಸಿ ನಾವು ಮತ್ತೆ ಊರು ದಾಟುವಷ್ಟರಲ್ಲಿ ಊರಾದ ಊರಿನ ಇನ್ನೂ ಹಲವರು ತೂರಾಡಲು ತ್ರಾಣವಿಲ್ಲದೇ ಅಲ್ಲಲ್ಲಿ ಒರಗಿಕೊಂಡಿದ್ದರು! ತನ್ನದೇ ಊರಿನಲ್ಲಿ ತನ್ನದೇ ಸೋದರರು ಮನುಷ್ಯತನದ ಘನತೆಯನ್ನೇ ಕಳೆದುಕೊಂಡಂತೆ ಬದುಕಲು ಕುಡಿತವೂ ಒಂದು ಮುಖ್ಯ ಕಾರಣವಾಗಿದೆ; ಅದಕ್ಕೇನೂ ಮಾಡಲು ಸಾಧ್ಯವಾಗದ ಈ ವ್ಯಕ್ತಿ ದೂರದ ಜಿಲ್ಲೆಗಳ ಕುಡುಕರಿಗೆ ಚಿಕಿತ್ಸೆ ನೀಡುತ್ತಿದ್ದಾರೆ.

ಈ ರಾಜ್ಯಾಧ್ಯಕ್ಷರು ಆ ತಾಲೂಕಿನ ಪಕ್ಕದ ತಾಲೂಕು ಎಸ್‌ಟಿ ಮೀಸಲು ಕ್ಷೇತ್ರದಿಂದ ಮೊನ್ನೆ ಚುನಾವಣೆಗೆ ನಿಂತಿದ್ದರು. ಬಹುಶಃ ಕರ್ನಾಟಕದಲ್ಲಿ ಅದ್ಯಾಕೆ ಎಸ್‌ಟಿ ಪಟ್ಟಿಯಲ್ಲಿ ಸೇರಿದೆಯೋ ಗೊತ್ತಿಲ್ಲದ ನಾಯಕ ಇತ್ಯಾದಿ ಜನಾಂಗ ಬಿಟ್ಟರೆ, ಆದಿವಾಸಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಿದ ಏಕೈಕ ವ್ಯಕ್ತಿ ಇವರಾಗಿದ್ದರು. ಹೀನಾಯವಾಗಿ ಸೋತರು ಎಂಬುದನ್ನು ಪ್ರತ್ಯೇಕವಾಗಿ ವಾಚಕರಿಗೆ ತಿಳಿಸುವ ಅಗತ್ಯವಿಲ್ಲ, ಈ ವಿಧಾನಸಭಾ ಕ್ಷೇತ್ರದ ಒಬ್ಬ ಆದಿವಾಸಿ ತರುಣನನ್ನು ಈಗ್ಗೆ ಎರಡು ದಿನದ ಹಿಂದೆ ಮೈಸೂರಿನ ಬಡಾವಣೆಯೊಂದರಲ್ಲಿ ಕೊಲ್ಲಲಾಯಿತು.

ಆದರೆ ಅದನ್ನು ಕೊಲೆ ಎಂದು ಯಾವ ಪತ್ರಿಕೆಯೂ ಬರೆಯಲಿಲ್ಲ, ಹೋಗಲಿ ಅದನ್ನು ಆತ್ಮಹತ್ಯೆ ಎಂತಲಾದರೂ ಬರೆಯಬೇಕಿತ್ತಲ್ಲವೇ? ಏಕೆಂದರೆ ಆತ ಅವತ್ತು ಬೆಳಗ್ಗೆಯಿಂದಲೇ ಚಾಮುಂಡಿ ಬೆಟ್ಟದಿಂದ ಬಿದ್ದು ಸಾಯುತ್ತೇನೆ ಎಂದು ಹಲವು ಬಾರಿ ಹೇಳಿದ್ದ; ತೀವ್ರ ಮಾನಸಿಕ ಖಿನ್ನತೆಗೆ ಒಳಗಾಗಿ ಹಿಂದೊಮ್ಮೆ ಆಸ್ಪತ್ರೆಗೆ ಸೇರಿದ್ದ ಹಾಗಿದ್ದ ಮೇಲೆ ಆತ್ಮಹತ್ಯೆಯ ಪ್ರಯತ್ನವಿರಬಹುದು ಎಂತಲೂ ಬರೆಯಲಿಲ್ಲ, ಬದಲಿಗೆ 'ಉದಯೋನ್ಮುಖ ನಟನೊಬ್ಬನ ದುರಂತ ಸಾವು', ಆತನಿಗೆ ತಲೆ ತಿರುಗು ಬಂದುದರಿಂದ ಸತ್ತಿರಬಹುದು ಎಂಬಂತೆ ಬರೆದು ಮುಗಿಸಿದರು. ಈ ವ್ಯಕ್ತಿಯನ್ನು ಕೋತಿಯಂತೆ ಕುಣಿಸಿ, ಅವನನ್ನು ತಮ್ಮ ರಿಯಾಲಿಟಿ ಷೋಗೆ ದುಡಿಸಿಕೊಂಡ ಚಾನೆಲ್‌ಗಳು 'ರಾಜೇಶ್ ಒಬ್ಬ ಪ್ರತಿಭಾವಂತ ಕಲಾವಿದ' ಎಂದು ಹೇಳುತ್ತಿದ್ದರೆ, ಅದು ಅಪಹಾಸ್ಯದಂತೆಯೂ, ಅವಹೇಳನದಂತೆಯೂ ಕೇಳುತ್ತಿತ್ತು, ಆ ದಿನ ನಾನು ಕೊಂಡು, ಓದಿದ ಆರು ಪತ್ರಿಕೆಗಳವರು ಟಿಆರ್‌ಪಿಗಾಗಿ ಏನೂ ಮಾಡಲು ಹೇಸದ ಚಾನೆಲ್‌ಗಳ ಲಾಜಿಕ್‌ಅನ್ನು ಯಾವ ರೀತಿಯಲ್ಲೂ ನೇರವಾಗಿ ಎದುರಿಸಲು ಸಿದ್ಧರಿರಲಿಲ್ಲ ವೆಂಬುದು ಎದ್ದು ಕಾಣುತ್ತಿತ್ತು. ಅದು ಕೊಲೆ ಎಂಬುದು ಸ್ಪಷ್ಟವಿತ್ತು.


ಆತ, ರಾಜೇಶ್, ಪ್ರತಿಭಾವಂತ ವ್ಯಕ್ತಿ ಎಂಬುದರಲ್ಲಿ ಸಂಶಯವಿಲ್ಲ, ಬಹುಶಃ ಸರಿಯಾದ ರೀತಿಯಲ್ಲಿ ತನ್ನ ಕಾಡಿನಲ್ಲಿ ಅರಳಿ, ಒಂದೊಂದೇ ಹಂತ ದಾಟಿ, ಸ್ಥಳೀಯತೆಯ ಬೇರಿನಿಂದ ರಸ ಹೀರಿಕೊಂಡು, ಆತನಿಗೆ ಸಾಧ್ಯವಿದ್ದ ವಿಧಾನದಲ್ಲಿ ತನ್ನನ್ನು ಅಭಿವ್ಯಕ್ತಿಗೊಳಿಸಿಕೊಳ್ಳುವ ಸಾಧ್ಯತೆಯಿದ್ದಿದ್ದರೆ ಆ ಪ್ರತಿಭೆ ಅದ್ಭುತವಾಗಿ ನಮ್ಮ ಮುಂದೆ ತೆರೆದುಕೊಳ್ಳುತ್ತಿತ್ತು, ಆದರೆ, ಕೋತಿಯನ್ನು ಹಿಡಿದು ತಂದಂತೆ ಕರೆದುಕೊಂಡು ಬಂದು, ಮನೆಯಲ್ಲಿ ಕೂಡಿ ಹಾಕಿ, ಕ್ಯಾಮೆರಾ ಇಟ್ಟು, ಹುಡುಗಿಯನ್ನು ಜೊತೆ ಮಾಡಿ, ಮಾಡಿದ ಕಾರ್ಯಕ್ರಮಕ್ಕೆ 'ಹಳ್ಳಿ ಹುಡುಗ ಪ್ಯಾಟೇಗ್ ಬಂದ' ಅಂತ ಹೆಸರಿಟ್ಟು ಟಿಆರ್‌ಪಿಯ ವಿಕೃತಿಯನ್ನು ತೋರಿದವರು ಘೋಷಿಸಿದರು- 'ಈತ ವಿಜೇತ. ನಾವು ಕಾಡಿನ ಪ್ರತಿಭೆಯನ್ನು ಹೊರ ಜಗತ್ತಿಗೆ ತೋರಿಸಿದ್ದೇವೆ'. ಉಳಿದದ್ದು ನಿಮಗೆ ಗೊತ್ತು, ಆತ ತಾನು ಹೀರೋ ಎಂದುಕೊಂಡಿದ್ದು, 'ಗೆಳೆಯಾ ನಾವು ಕಾಡಿನ ಜನರಲ್ಲೂ ಪ್ರತಿಭೆಯಿದೆ ಎಂದು ತೋರಿಸಬೇಕು' ಎಂದು ತನ್ನ ಗೆಳೆಯರ ಹತ್ತಿರ ಹೇಳಿದ್ದು, ಪಲ್ಸರ್ ಬೈಕ್ ತೆಗೆದುಕೊಂಡು ಸುತ್ತಾಡಿದ್ದು, ಟ್ರಾನ್ಸ್‌ನಲ್ಲಿ ಬದುಕಿದ್ದು, ಇನ್ಯಾರೋ ಕರೆದುಕೊಂಡು ಹೋಗಿ ಸಿನೆಮಾದಲ್ಲಿ ಹೀರೋ ಮಾಡಿದ್ದು, ಸಿನೆಮಾ ಬಿಡುಗಡೆಯಾಗದೇ ಈತ ಮಾನಸಿಕ ಆಸ್ಪತ್ರೆ ಸೇರಿದ್ದು ಎಲ್ಲವೂ.

ಈಗ ಅದೇ ಸಿನೆಮಾ ಮಂದಿ ಶವಸಂಸ್ಕಾರಕ್ಕೆ ದಂಡು ಕಟ್ಟಿಕೊಂಡು ಹೋಗಿ ಬಂದಿದ್ದಾರೆ. ರಾಜೇಶನನ್ನು ರೋಲ್ ಮಾಡೆಲ್ ಎಂಬಂತೆ ಬಿಂಬಿಸಲು ಬೇಕಾದ ತಯಾರಿ ನಡೆಸುತ್ತಿದ್ದಾರೆ. ಪ್ರತಿಮೆ ಸ್ಥಾಪನೆಯವರೆಗೆ ಚರ್ಚೆ ಬಂದಿದೆ. ರಾಜೇಶ್‌ನ ಕಥೆ ಸದ್ಯಕ್ಕೆ ದುರಂತದಲ್ಲಿ ಮುಗಿದಿದೆ. ಆದರೆ ಗೋಪಾಲ ಪೂಜಾರಿಯದ್ದು ಹಾಗಿಲ್ಲ, ನಾಟಿ ಚಿಕಿತ್ಸೆಯನ್ನು ಫ್ಯೂಡಲ್ ಸಮಾಜದಿಂದ ಎರವಲು ತಂದು ಮಾಡರ್ನ್ ಮಾರುಕಟ್ಟೆಯಲ್ಲಿ ಮಾರಬಹುದಾದ ಸರಕಿನಂತೆ ಮಾಡಲು ಸಾಧ್ಯವಿದೆ ಎಂಬುದನ್ನು ಈಗಾಗಲೇ ಹಲವು ಉದ್ದಿಮೆದಾರರು ಸಾಬೀತು ಮಾಡಿದ್ದಾರೆ. ಅದರಲ್ಲಿ ಈಗಾಗಲೇ ಪೂಜಾರಿ ಪರಿಣಿತಿ ಸಾಧಿಸಿದ್ದಾರೆ. ಅದರ ಜೊತೆಗೆ ಸಂಸದೀಯ ರಾಜಕಾರಣ ಸೃಷ್ಟಿ ಮಾಡಿರುವ ಏಜೆಂಟಾಗಿಯೂ ಯಶಸ್ವಿಯಾಗಲು ಬೇಕಾದ ಉಮೇದು ಮತ್ತು ಚಾಲಾಕಿತನ ಆತನಿಗೆ ಸಿದ್ಧಿಸಿದಂತಿದೆ.

ಇಂತಹ ಏಜೆಂಟರನ್ನು ಸೃಷ್ಟಿ ಮಾಡಿರುವುದರ ಹೊರತಾಗಿ ಬೇರಿನ್ನೇನನ್ನೂ ಕಳೆದ 30 ವರ್ಷಗಳ 'ಅಭಿವೃದ್ಧಿ ರಾಜಕಾರಣ'ವು ನಮ್ಮ ಹಳ್ಳಿಗಳಿಗೆ ಮಾಡಿಲ್ಲ, ನಮ್ಮ ಅಧ್ಯಯನದಲ್ಲಿ ಕಂಡುಬಂದ ಪ್ರಮುಖ ಸಂಗತಿಗಳಲ್ಲಿ ಇದೊಂದು. ಗ್ರಾಮ ಪಂಚಾಯತಿಗಳಿಗೆ ಅಧಿಕಾರ ನೀಡುವ ವಿಕೇಂದ್ರೀಕರಣದ ಹೆಸರಿನಲ್ಲಿ, ನರೇಗಾ ಯೋಜನೆಯ ಗುತ್ತಿಗೆಯಲ್ಲದ ಗುತ್ತಿಗೆಯ ಹೆಸರಿನಲ್ಲಿ ವಿವಿಧ ಪುಡಿಗಾಸು ಯೋಜನೆಗಳಿಗೆ ಫಲಾನುಭವಿಗಳನ್ನು ನೋಂದಾಯಿಸುವ ಪುಢಾರಿಗಳಾಗಿ, ದೊಡ್ಡ ಪಕ್ಷಗಳ ಸ್ಥಳೀಯ ಗುತ್ತೇದಾರರಾಗಿ ಇಂತಹ ಏಜೆಂಟರು ತಯಾರಾಗಿದ್ದಾರೆ. ಇವರು ಎಲ್ಲಾ ಜಾತಿ, ವರ್ಗಗಳಲ್ಲೂ ಹುಟ್ಟಿಕೊಂಡಿದ್ದಾರೆ. ಹಳ್ಳಿಯ ಸಾಮಾಜಿಕ ರಚನೆಯಲ್ಲಿ ದಲಿತ ಚಳವಳಿ, ರೈತ ಚಳವಳಿ ಹಾಗೂ ಶಿಕ್ಷಣ ಇತ್ಯಾದಿಗಳ ಕಾರಣದಿಂದ ಬಂದ ಬದಲಾವಣೆಯನ್ನು ಇನ್ನೊಂದು ಹಂತಕ್ಕೆ ತೆಗೆದುಕೊಂಡು ಹೋಗದಂತೆ ನೋಡಿಕೊಳ್ಳುವಲ್ಲಿ ಈ ಏಜೆಂಟರು ಯಶಸ್ವಿಯಾಗಿದ್ದಾರೆ ಅಥವಾ ಈ ವ್ಯವಸ್ಥೆಯು ಇಂತಹವರ ಮೂಲಕ ಹಾಗೆ ಮಾಡಿಸುವಲ್ಲಿ ಯಶಸ್ವಿಯಾಗಿದೆ. ಇಲ್ಲದೇ ಹೋಗಿದ್ದಲ್ಲಿ ಕಳೆದ 30 ವರ್ಷಗಳಲ್ಲಿ ನಮ್ಮ ಗ್ರಾಮೀಣ ಪ್ರದೇಶವು ಎದುರಿಸುತ್ತಿರುವ ಬಿಕ್ಕಟ್ಟು, ದಲಿತರನ್ನೂ, ಹಿಂದುಳಿದವರನ್ನೂ, ರೈತರಾಗಿರುವ ಇತರೆಲ್ಲಾ ಜಾತಿಗಳನ್ನೂ ಒಗ್ಗೂಡಿಸಿ ಇನ್ನೊಂದು ಆಂದೋಲನಕ್ಕೆ ದೂಡುತ್ತಿತ್ತು.

ಈ ವರ್ಷ ಇನ್ನೊಂದು ರಾಜ್ಯೋತ್ಸವವನ್ನು ಕರ್ನಾಟಕವು ಆಚರಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ, ರಾಜೇಶ ಮತ್ತು ಪೂಜಾರಿಗಳು ಕಣ್ಣೆದುರಿಗೆ ಕಾಣುತ್ತಿದ್ದಾರೆ. ಪೂಜಾರಿ ಸ್ಪಷ್ಟವಾಗಿ ಅತೀ ಹಿಂದುಳಿದ ಆದಿವಾಸಿ ಸಮುದಾಯದಲ್ಲೂ ಹುಟ್ಟಿಕೊಳ್ಳುವ ಏಜೆಂಟರ ರೂಪದಲ್ಲಿ ನಿಂತಿದ್ದರೆ, ರಾಜೇಶ ಹಳ್ಳಿ ಹೈದರನ್ನು ಪ್ಯಾಟೆಗೆ ತಂದು ಅವರನ್ನು ಇನ್ನಿಲ್ಲದಂತೆ ಶೋಷಿಸುವ ಆಧುನಿಕ ಅಭಿವೃದ್ಧಿ ಮಂತ್ರದ ಬಲಿಪಶುವಾಗಿ ಮರೆಯಾಗಿದ್ದಾನೆ. ಇವೆರಡರಲ್ಲಿ ಪೂಜಾರಿ ವಾಸ್ತವವಾಗಿದ್ದರೆ, ರಾಜೇಶ ಒಂದು ಅತಿರೇಕದ ಉದಾಹರಣೆ ಎನಿಸಬಹುದು. ಆದರೆ ರಾಜೇಶ ಒಂದು ರೂಪಕವಾಗಿದ್ದಾನೆ.

ನಗರಗಳೆಡೆಗೆ ಹಳ್ಳಿಗಾಡಿನ ಯುವಕರ ವಲಸೆಗೆ ಹಳ್ಳಿಯಿಂದ ಒಂದು ಪುಷ್ (ತಳ್ಳುವ) ಕಾರಣವೂ, ನಗರಗಳ ಕಡೆಯಿಂದ ಒಂದು ಪುಲ್ (ಸೆಳೆದುಕೊಳ್ಳುವ) ಕಾರಣವೂ



ಇವೆ. ಈ ಕಾರಣಗಳು ಸಂಪೂರ್ಣ ಆಕಸ್ಮಿಕಗಳಲ್ಲ. ಈ 40 ವರ್ಷಗಳಲ್ಲಿ ನಮ್ಮ ಕೃಷಿಯಲ್ಲಿ ಮತ್ತು ಒಟ್ಟಾರೆ ಆರ್ಥಿಕತೆಯಲ್ಲಿ ಬಂದಿರುವ ಬದಲಾವಣೆಗಳು ವ್ಯವಸ್ಥಿತವಾಗಿ ಪುಷ್ ಮತ್ತು ಪುಲ್ ಕೆಲಸವನ್ನು ಮಾಡಿವೆ. ಭೂಹಿಡುವಳಿ, ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆಯ ಏರಿಳಿತಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ನಮಗೆ ಅದರ ಅರಿವಾಗುತ್ತದೆ.

ಉದಾಹರಣೆಗೆ ಭೂಹಿಡುವಳಿಯಲ್ಲಿ ಕಳೆದ 40 ವರ್ಷಗಳಲ್ಲಿ ಬಂದಿರುವ ಬದಲಾವಣೆಯನ್ನು ಗಮನಿಸಿ. ಸರ್ಕಾರದ ಅಂಕಿಅಂಶದ ಪ್ರಕಾರವೇ ಒಟ್ಟು ಕರ್ನಾಟಕದಲ್ಲಿ ದೊಡ್ಡ ಹಿಡುವಳಿಗಳ ಸಂಖ್ಯೆ 1970-71ರಲ್ಲಿ 2,19,000ವಿದ್ದದ್ದು 2000-01ರಲ್ಲಿ 70,000ಕ್ಕಿಳಿದಿದೆ. ಅಂದರೆ ಶೇ.70ರಷ್ಟು ಕಡಿಮೆಯಾಗಿದೆ. ದೊಡ್ಡಹಿಡುವಳಿಗಳ ಹಿಡಿತದಲ್ಲಿ 36,01,000 ಹೆಕ್ಟೇರ್ ಜಮೀನಿದ್ದದ್ದು ಈಗ 1,013,000 ಹೆಕ್ಟೇರ್‌ಗಿಳಿದಿದೆ. ಅಂದರೆ ದೊಡ್ಡ ಹಿಡುವಳಿಗಳ ಕೈಯಲ್ಲಿದ್ದ ಭೂಮಿಯ ಪ್ರಮಾಣ ಮುಕ್ಕಾಲುವಾಸಿ ಕಡಿಮೆಯಾಗಿದೆ. ಅದೇ ಸಮಯದಲ್ಲಿ ಅತಿಸಣ್ಣ ರೈತರ ಸಂಖ್ಯೆ 1970ರಲ್ಲಿ 10,81,000 ಇದ್ದದ್ದು 2000-01ರಲ್ಲಿ 32,5200ಕ್ಕೆ ಅಂದರೆ ಮೂರು ಪಟ್ಟು ಏರಿದೆ. ಅದೇ ರೀತಿ ಸಣ್ಣ ರೈತರ ಸಂಖ್ಯೆ 8,40,000 ದಿಂದ 19,09,000ಕ್ಕೂ, ಅರೆಮಧ್ಯಮ ರೈತರ ಸಂಖ್ಯೆ 7,88,000ದಿಂದ 12,59,000ಕ್ಕೂ ಹೆಚ್ಚಳವಾಗಿದೆ. 1970ರಲ್ಲಿ ದೊಡ್ಡ ಮತ್ತು ಮಧ್ಯಮ ಹಿಡುವಳಿಗಳು 73,93,000 ಹೆಕ್ಟೇರ್‌ನಷ್ಟು ಒಡೆತನವನ್ನು ಹೊಂದಿದ್ದರೆ ಸಣ್ಣ, ಅತಿಸಣ್ಣ ಮತ್ತು ಅರೆಮಧ್ಯಮ ರೈತಾಪಿಗಳು ಒಟ್ಟಾರೆಯಾಗಿ 39,75,000 ಹೆಕ್ಟೇರ್ ಒಡೆತನವನ್ನು ಮಾತ್ರ ಹೊಂದಿದ್ದವು. ಆದರೆ 2000- 01ರ ಹೊತ್ತಿಗೆ ಮಧ್ಯಮ ಮತ್ತು ದೊಡ್ಡ ಹಿಡುವಳಿಗಳು ಒಟ್ಟಾರೆಯಾಗಿ 43,30,000 ಹೆಕ್ಟೇರ್ ವಿಸ್ತೀರ್ಣಕ್ಕೆ ಇಳಿದಿದ್ದರೆ ಸಣ್ಣ, ಅತಿಸಣ್ಣ ಮತ್ತು ಅರೆಮಧ್ಯಮ ಹಿಡುವಳಿಗಳು 76,68,000 ಹೆಕ್ಟೇರ್ ಒಡೆತನವನ್ನು ಹೊಂದಿದ್ದವು. ಈ 13 ವರ್ಷಗಳಲ್ಲಿ ಇದರ ಪ್ರಮಾಣ ಮತ್ತಷ್ಟು ತೀವ್ರಗತಿಯಲ್ಲಿ ಏರಿವೆ.

ಇದರರ್ಥವೇನು? ತುಂಡು ಭೂಮಿಯ ಬೇಸಾಯವೇ ಇಂದಿನ ಅತ್ಯಂತ ದೊಡ್ಡ ವಿದ್ಯಮಾನವಾಗಿದೆ. ಬಂಡವಾಳಶಾಹಿ; ಸಮಾಜವಾದಿ ಯಾವ ದೃಷ್ಟಿಕೋನದಿಂದಲೂ ಇದು ಲಾಭದಾಯಕವಲ್ಲ, ಹಾಗಾದರೆ ಇವರೇನು ಮಾಡಬೇಕು. ಇವರು ಕೂಲಿಗಳಾಗಿ ಪರಿವರ್ತಿತವಾಗಬೇಕು. ನಮ್ಮ ಅಧ್ಯಯನದಲ್ಲಿ ಕಂಡುಬಂದಂತೆ, ಕಾಫಿ ಹಾಗೂ ಒಂದೆರಡು ಬೆಳೆಗಳನ್ನು ಬಿಟ್ಟರೆ ಇನ್ಯಾವ ಬೆಳೆಯೂ ವರ್ಷದಲ್ಲಿ 120 ದಿನಗಳಿಗಿಂತ ಹೆಚ್ಚು ಕೂಲಿಯನ್ನು ಸೃಷ್ಟಿಸುವುದಿಲ್ಲ, ಹಾಗಿದ್ದ ಮೇಲೆ, ನಗರಗಳಿಗೆ ಹೊರಡಬೇಕು. 16ರಿಂದ 19ನೇ ಶತಮಾನಗಳವರೆಗೆ ಯೂರೋಪ್‌ನಲ್ಲಿ ನಡೆದ ಕ್ರಾಂತಿಗಳ ಪರಿಣಾಮವಾಗಿ ಕೃಷಿಯ... ಉದ್ದಿಮೆಯಾಗಿಸಲಾಯಿತು. ಕೂಲಿಕಾರರನ್ನು ನಗರಗಳಲ್ಲಿ ಕಾರ್ಮಿಕರನ್ನಾಗಿಸಿ ಹೀನಾಯವಾಗಿ ದುಡಿಸಿಕೊಂಡರು. ನಗರಗಳಿಗೆ ಹೋಗಲು ಒಪ್ಪದವರ ಊರುಗಳಿಗೆ ಬೆಂ... ಹಚ್ಚಿ ಓಡಿಸಲಾಯಿತು. ಇಲ್ಲಿ ಕ್ರಾಂತಿಯೂ ಆಗಲಿಲ್ಲ, ಬೆಂಕಿಯೂ ಹಚ್ಚಲಿಲ್ಲ, ಜನರು ತಾವೇ 'ಸ್ವಯಂ ಪ್ರೇರಿತವಾಗಿ' ಊರು ಬಿಟ್ಟರು.

ಇದಕ್ಕೆ ಕೇವಲ ಭೂಹಿಡುವಳಿ ಸಣ್ಣದಾಗಿದ್ದು ಮಾತ್ರ ಕಾರಣವಲ್ಲ, ಕೇವಲ ಮಾರುಕಟ್ಟೆಗಾಗಿ ಉತ್ಪಾದಿಸುವ ಕೃಷಿ ಪದ್ಧತಿಯಲ್ಲಿ, ಮಾರುಕಟ್ಟೆಯಿಂದಲೇ ತಂದು ಹಾಕುವ ಒಳಸುರಿಗಳು ಉತ್ಪಾದನಾ ವೆಚ್ಚವನ್ನು ತೀವ್ರವಾಗಿ ಏರಿಸಿದೆ, ಕಾರ್ಪೋರೇಟ್ ಶಕ್ತಿಗಳು, ಸ್ಥಳೀಯ ಡೀಲರ್‌ಗಳು ಸೇರಿ ರೈತರನ್ನು ಹಿಂಡಿ ಹಾಕುತ್ತಾರೆ. ಹಳೆಯ ಸಾಮಾಜಿಕ ರಚನೆಗಳ ದೊಡ್ಡವರು ಮತ್ತು ಹೊಸದಾಗಿ ಏಜೆಂಟ್‌ಗಿರಿ ಮಾಡಿಕೊಂಡು 'ಬೆಳೆದ' ಸಣ್ಣವರು ಸೇರಿ ಹೊಸ ವರ್ಗವಾಗಿ ಸೃಷ್ಟಿಯಾಗಿದ್ದಾರೆ. ಇನ್ನು ನೀರಾವರಿಯ ವಿಚಾರಕ್ಕೆ ಬರುವುದಾದರೆ, ಸರ್ಕಾರಿ ಅಂಕಿಅಂಶಗಳ ಪ್ರಕಾರವೇ ಎಲ್ಲಾ ಮೂಲಗಳಿಂದ ಒಟ್ಟು ನೀರಾವರಿಯಾಗಿರುವ ಪ್ರದೇಶ ಶೇ. 24 ಮಾತ್ರ. ತಮಿಳುನಾಡು ಶೇ.48, ಆಂಧ್ರ ಪ್ರದೇಶ ಶೇ. 38. ಶೇ.76 ಭಾಗ ಖುಷ್ಕಿ 'ಮಳೆ ಆಧಾರಿತ' ಭೂಮಿಯಾಗಿದೆ. "ದೇಶದ ಇತರೆ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕ ರಾಜ್ಯವು ಅತೀ ಹೆಚ್ಚಿನ ಬರಪೀಡಿತ ಪ್ರದೇಶವನ್ನು ಶೇ.76 ಹೊಂದಿದೆ. ಇಡೀ ದೇಶದಲ್ಲೇ ರಾಜಸ್ಥಾನವನ್ನು ಬಿಟ್ಟರೆ, ಕರ್ನಾಟಕವು ಖುಷ್ಕಿ ಭೂಮಿಯ ವಿಸ್ತೀರ್ಣದಲ್ಲಿ 2ನೇ ಸ್ಥಾನದಲ್ಲಿದೆ. ಇದೇ ರೀತಿ ರಾಜಸ್ಥಾನದ ನಂತರ, ಕರ್ನಾಟಕವು ಕಡಿಮೆ ಮಟ್ಟದ ಅಂತರ್ಜಲದಲ್ಲೂ ಸಹ 2ನೇ ಸ್ಥಾನದಲ್ಲಿದೆ". (ಕರ್ನಾಟಕ ಕೃಷಿ 2011)

ಹೀಗಾಗಿ ಇಲ್ಲಿಂದ ಪುಷ್‌ಆಗಿ ನಗರಗಳನ್ನು ಸೇರಿಕೊಳ್ಳುತ್ತಿರುವ ಯುವ ಸಮೂಹದ ಓಟವು, ನಮ್ಮ ಗ್ರಾಮಗಳನ್ನು ವೃದ್ಧಾಶ್ರಮಗಳನ್ನಾಗಿಸಿದೆ. ಈ ರಾಜ್ಯದ ಯಾವ ಮೂಲೆಗೆ ಹೋಗಿ ನೋಡಿದರೂ ರೈತಾಪಿಯದ್ದು ಒಂದೇ ರಾಗ 'ಬೇಸಾಯದ ಕೆಲಸಕ್ಕೆ ಕೂಲಿಗಳು ಸಿಗುತ್ತಿಲ್ಲ'! ಈ ರೀತಿ ಓಡಿಹೋದವರಲ್ಲಿ ಅರ್ಧದಷ್ಟು ಯುವಕ ಯುವತಿಯರು ಹೆಚ್ಚಾಗಿ ಬೆಂಗಳೂರನ್ನೇ ಸೇರುತ್ತಿದ್ದಾರೆ. ಸದ್ಯದಲ್ಲೇ ಬೆಂಗಳೂರು ಕೋಟಿ ಜನರ ನಗರವಾಗಲಿದೆ. ಈ ಊರೇ ಕರ್ನಾಟಕದ ಒಟ್ಟು ಆಂತರಿಕ ಉತ್ಪನ್ನ(ಜಿಡಿಪಿ)ದ ಶೇ.60ರಷ್ಟನ್ನು ನೀಡುತ್ತದಂತೆ.

ಈ ದಿನದ (6ನೇ ನವೆಂಬರ್) ಪ್ರಜಾವಾಣಿಯಲ್ಲಿ ಎಫ್‌ಕೆಸಿಸಿಐನ ಅಧ್ಯಕ್ಷ ಮತ್ತು ಬಿ-ಪ್ಯಾಕ್‌ನ ಮೋಹನದಾಸ್ ಪೈ ಅದನ್ನು ಉಲ್ಲೇಖಿಸಿ ಶೇ.50ರಷ್ಟು ಸರ್ಕಾರದ ಸಂಪನ್ಮೂಲವನ್ನು ಬೆಂಗಳೂರಿಗೇ ಮೀಸಲಿಡಬೇಕೆಂದು ಹೇಳಿದ್ದಾರೆ. ಇದನ್ನೇ ಕರ್ನಾಟಕದ ಮತ್ತೊಬ್ಬ ಆರ್ಥಿಕ ತಜ್ಞ (ಇವರೂ ಎಫ್‌ಕೆಸಿಸಿಐನ ಮಾಜಿ ಅಧ್ಯಕ್ಷ) ಮುರಳೀಧರ್ ಅವರೂ ಪ್ರಜಾವಾಣಿ ಕಾಲಂನಲ್ಲಿ ಹೇಳುತ್ತಿದ್ದಾರೆ.

ಬೆಂಗಳೂರೆಂಬ ಮಾಯಾನಗರಿಗೆ ಗುಪ್ಪೆ ಗುಪ್ಪೆಯಾಗಿ ಬಂದು ಸೇರುತ್ತಿರುವ ಹಳ್ಳಿ ಹೈದರು ಕೊಲೆಯಾಗುತ್ತಿದ್ದಾರೆ. ಮುಗಿಲೆತ್ತರದ ಕಟ್ಟಡಗಳ ಮೇಲಿಂದ ಬಿದ್ದು ಯುವಕರು ಕೊಲೆಯಾಗುತ್ತಿದ್ದಾರೆ. ಯುವತಿಯರನ್ನು ಗಾರ್ಮೆಂಟ್ ಕಾರ್ಖಾನೆಗಳಲ್ಲಿ ಹಿಂಡಿ ಸಾಯಿಸಲಾಗುತ್ತಿದೆ. ಈ ಸಾವನ್ನು ಯಾರೂ ಕೊಲೆಯೆಂತಲೂ ಕರೆಯುತ್ತಿಲ್ಲ, ಆತ್ಮಹತ್ಯೆಯೆಂತಲೂ ಹೇಳುತ್ತಿಲ್ಲ, ರಾಜೇಶನ ಸಾವಿಗೆ ಸಿ... ಕವರೇಜ್ ಸಹ ಅದಕ್ಕೆ ಸಿಗುವುದಿಲ್ಲ.

ಇಲ್ಲಿಗೆ ಬಂದಿರುವ ಯಾರೂ ತಮ್ಮ ತುಂಡು ಭೂಮಿಯನ್ನು ಮಾರುತ್ತಿಲ್ಲ, ಆ 5 ಗುಂಟೆ ಜಮೀನು ಅವರಿಗೆ ನೀಡುತ್ತಿರುವ ಭದ್ರತೆಯ ಭಾವವನ್ನು ಬೆಂಗಳೂರು ಸಿಟಿಯ ಯಾವ ಉದ್ಯೋಗವೂ ನೀಡುತ್ತಿಲ್ಲ, 5 ಗುಂಟೆ ಜಮೀನು ಬದುಕು ನೀಡುವುದಿಲ್ಲ, ಆದರೂ ಇ... ದಂಗೆಯೇನೂ ಆಗುವುದಿಲ್ಲ, ಅನ್ನಭಾಗ್ಯ ಅಕ್ಕಿ, ಕ್ಷೀರಭಾಗ್ಯ ಹಾಲನ್ನು ಸಿದ್ದರಾಮಯ್ಯರು ನೀಡುತ್ತಿದ್ದಾರೆ. ಬದುಕುಳಿಯಲು ಬೇಕಾದಷ್ಟು ತಿಂಗಳ ಹಣ ಹೊಂದಿಸಲು ಏಜೆಂಟರು ನೆರವಾಗುತ್ತಾರೆ. ಎಷ್ಟೇ ಕಡಿಮೆ ಜಿಡಿಪಿ ನೀಡಿದರೂ ಓಟು ಮಾತ್ರ ಎಲ್ಲರಿಗೂ ಒಂದೊಂದಿದೆ. ಹಾಗಾಗಿ ಓಟನ್ನು ಖರೀದಿಸುವ ಮತ್ತು ಮುಂದಿನ ಚುನಾವಣೆವರೆಗೂ ಬದುಕಿರಲು ಬೇಕಾದಷ್ಟು ಅಕ್ಕಿಯನ್ನೂ, ಆಲ್ಕೋಹಾಲನ್ನೂ ಖಾತ್ರಿಪಡಿಸಲಾಗುತ್ತದೆ. ಅದಕ್ಕಾಗಿ ದಿಲ್ಲಿಯಿಂದ ಇಲ್ಲಿಯವರೆಗೂ ನೆಟ್‌ವರ್ಕ್ ಇದೆ.

ಈ ರಾಜ್ಯೋತ್ಸವದ ದಿನ ಕನ್ನಡ ನಾಡಿನ ... ಮುಖವನ್ನು ಕುರಿತು ಬರೆಯಲೇಬೇಕೆಂದೇನೂ ಇರಲಿಲ್ಲ, ಆದರೆ ಜಾಗತೀಕರಣ ಕಾಲದ ಮಾಡರ್ನಿಟಿ ರಾಜೇಶನನ್ನು ಕೊಂದದ್ದು ಸರಿಯಾಗಿ ಸುದ್ದಿಯಾಗಲಿಲ್ಲ; ಲಕ್ಷಾಂತರ ರಾಜೇಶರು ಜೀವ ಕಳೆದುಕೊಳ್ಳುತ್ತಿಲ್ಲದಿರಬಹುದು; ಜೀವ ಚೈತನ್ಯವನ್ನಂತೂ ಕಳೆದುಕೊಳ್ಳುತ್ತಿದ್ದಾರೆ. ಇದಕ್ಕೆ ಕಾರಣವಾಗಿರುವ ರಾಜಕೀಯಾರ್ಥಿಕ ಸಂದರ್ಭವೇನು ಎಂಬುದು ಬರೆಯಲೇಬೇಕಾದ ತುರ್ತನ್ನು ಸೃಷ್ಟಿಸಿತು. ■

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಇಂದ್ರ-ವಿಷ್ಣು-ಬ್ರಹ್ಮನ ಅತ್ಯಾಚಾರಗಳು

ಮಂಧ್ಯ ಪೂರ್ವವೆಂದು ಪರಿಗಣಿಸಲ್ಪಟ್ಟ ಪಟೋಮಿಯಾದ ಪ್ರಾಥಮಿಕ ಸಂಸ್ಕೃತಿಗಳಲ್ಲಿ ಒಂದಾದ ಮೇರ್ ಸಂಸ್ಕೃತಿಯೂ ಅತ್ಯಂತ ಪ್ರಾಚೀನವಾದುದು. ಯಾದ ಕೊಲ್ಲಿಗಳಾಸಿಯಾಗಿ ಹರಿಯುತ್ತಿದ್ದ ಯುಫ್ರಟಿಸ್ ತ್ತು ಟೈಗ್ರಿಸ್ ನದಿಗಳದೇ ಇದಕ್ಕೆ ಅಂಗಳ. ಉತ್ಖನನಕ್ಕೆ ಾದ ಅಲ್ಲಿನ ಸಮಾಧಿಗಳದ್ದು ಎಂದರೆ ದೇವರೆಂದೇ ಗಣಿಸುತ್ತಿದ್ದ ರಾಜರದು. ಆ ಸಮಾಧಿಗಳಿಗೆ ಹಲವು ಡೊಳಕ್ಕೂ ಮತ್ತು ಮೇಲಕ್ಕೂ ಮಾಳಿಗೆಯಂತಹ ಗಳಿದ್ದು ಅವುಗಳಿಗೆ ಹಲವು ಕೋಣೆಗಳೇ ಇರುತ್ತಿದ್ದವು. ಸಮಾಧಿ ಮಂದಿರದ ಮೂಲಸ್ಥಾನ ಅಥವಾ ದ್ರಸ್ಥಾನದಲ್ಲಿ ರಾಜನ ಶವವನ್ನು ಇಟ್ಟು, ಅವನಿಗಾಗಿ ಮಾಡಿದಂತಹ ಇತರ ಅನುಸಾರಿಗಳ ಶವಗಳನ್ನು ಕೆ ಹಂತಗಳಲ್ಲಿ ಹೂತಲಾಗಿ, ಸಮಾಧಿಯ ಮೇಲ್ಭಾಗದಲ್ಲಿ ನ ನೆಚ್ಚಿನ ರಾಣಿಯ ಶವಪೆಟ್ಟಿಗೆಯನ್ನಿರಿಸಿ ಗೋರಿಯನ್ನು ರ್ಣಗೊಳಿಸುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಯಾಗಿರದಿದ್ದರೂ ರಾಜನಿಗಾಗಿ ತನ್ನ ಸೇವೆ ಸಲ್ಲಿಸಿದ ವಾ ಹೋರಾಡಿದ ಹೆಣ್ಣಾಗಿದ್ದರೂ ಇರಬಹುದು ಂತೆ ಕಾಣುತ್ತದೆ. ಏಕೆಂದರೆ, ಅಂತಹ ಸಮಾಧಿಯ ಭಾಗದಲ್ಲಿ ದೊರಕುವ ಹೆಣ್ಣಿನ ವಿಗ್ರಹಗಳು ರ್ಪಿಸುವಂತೆ ಕೈಗಳನ್ನು ಜೋಡಿಸಿದ್ದು ಬಹು ತವಾದ ಉಡುಪನ್ನು ತೊಟ್ಟಿದ್ದು, ಆಗಿನ ಮನೆತನದ್ದೆಂದು ಹೇಳಲಾಗುವ ಆಭರಣಗಳನ್ನಾಗಲಿ, ಸುಗಳನ್ನಾಗಲಿ ಆ ಶಿಲ್ಪಗಳಲ್ಲಿ ಕಾಣಬರುವುದಿಲ್ಲ. ಶಃ ಆ ಹೆಣ್ಣುಗಳು ಆ ಅರಸರಿಗಾಗಿ ರಾಡಿದ್ದವರಾಗಿದ್ದರೂ ಇರಬಹುದು. ಅವರ ವಾರ್ಥ ಆ ಬಗೆಯ ಶಿಲ್ಪಗಳನ್ನು ಅಲ್ಲಿ ಡಿಸಿದ್ದಿರಬಹುದು.

ರಾಜನು ಮರಣಿಸಿದರೂ ಅವನು ಅಮರನೆಂದು ಣಿಸಲಾಗುತ್ತಿದ್ದರಿಂದ ಅವನನ್ನು ಅನುಸರಿಸಿದ ಸೇವಕ ತ್ತು ಸೇವಕಿಯರು ವಿಷವನ್ನು ಸೇವಿಸಿ ಆತ್ಮಹತ್ಯೆ ಡಿಕೊಂಡು ಅವನ ಗೋರಿ ಮಂದಿರಗಳಲ್ಲಿ ಅವನ ಗಾಗಿ ಅನುಸರಿಸುತ್ತಿದ್ದರೆಂದು ಎನಿಸುತ್ತದೆ. ಏನೇ ರಿ, ಆ ಗೋರಿಯ ಮೇಲ್ಭಾಗದಲ್ಲಿ ಕಂಡು ತ್ತಲಿದ್ದದ್ದು ಹೆಣ್ಣಿನ ಶವಗಳು.

ಮೃತಾತ್ಮರಾದವರನ್ನು ಗೌರವಪೂರ್ವಕವಾಗಿ ಮಾನ್ಯ ತುವುದಲ್ಲದೇ, ಅವರ ಬಗ್ಗೆ ಅವರದೇ ರೀತಿಯ ತೆ ಮತ್ತು ಅತಿ ಮಾನವತೆಯ ವ್ಯಾಪ್ತಿಯಲ್ಲಿ ಸ್ತುತಿಸುವ ಕಥೆಗಳೂ ವ್ಯಾಪಕವಾಗುತ್ತಿದ್ದವು. ಈಗ ನಾನು ಮೇರ್‌ನ ಆಗಿನ ಸಂಸ್ಕೃತಿಯೇನಾದರೂ ಭಾರತದ ಮೇರು ಅಥವಾ ಮೇರುವಿನ ಪೂಜಾಕ್ರಮದ ವ್ಯಾಪ್ತಿಗೆ ಟ್ಟಿದ್ದೆಯೇನೋ ಎಂಬ ಅಧ್ಯಯನದ ಅಗತ್ಯತೆಯನ್ನು ಶ ಮಾಡುತ್ತಿದ್ದೇನೆ. ಏಕೆಂದರೆ, ಮೇರು ಅಥವಾ ಮೇರು ಎಂದು ನಾವು ಕರೆಯುವ ಶ್ರೀಚಕ್ರದ ಮುಡ್ಡಿನಂತಹ ಪಗೋಡವು ದೇವಿಯ ಶಕ್ತಿಯ ಸಾಕಾರ ತವಾಗಿದ್ದು, ಅದರಲ್ಲಿ ಯುದ್ಧಕಲೆಯ ದೇವತೆಯನ್ನು ಕಾಣುತ್ತೇವೆ.

ಅದೇನೇ ಇರಲಿ, ಸುಮೇರ್, ಮೆಸಪಟೋಮಿಯಾ ಸಿಂಧೂ ನಾಗರಿಕತೆಗಳ ನಡುವೆ ವಾಣಿಜ್ಯ ಸಂಬಂಧವು ಮುದು ನಿರ್ವಿವಾದ. ವಾಣಿಜ್ಯ ಸಂಪರ್ಕವು ಬೆಳೆದಂತೆ ಮಾಜಿಕ ಮತ್ತು ಧಾರ್ಮಿಕ ವಿಚಾರಗಳೂ ರುಯವಾಗುವುದು ಅಥವಾ ಅಳವಡಿಕೆಗೆ ಪಡುವುದು ಆಶ್ಚರ್ಯವೇನೂ ಅಲ್ಲ. ಹಾಗಾಗಿ, ರರು, ಗಂಧರ್ವರು ಮತ್ತು ಯಕ್ಷರು ಇಂತಹ ಂಲಗಳಿಂದ ಬಂದಿರುವ ಸಾಧ್ಯತೆಗಳಿವೆ. ದ(3.38; 10.177)ದ ಹಲವು ಕಡೆಗಳಲ್ಲಿ ರನ್ನು ದೇವರೆಂದೂ, ಸೂರ್ಯನೊಂದಿಗೆ ಸಮೀಕರಿಸಿ ರುವುದನ್ನೂ ಗಮನಿಸುತ್ತೇವೆ. ಆದರೆ, ಸಿಂಧೂ ಕತೆಯಲ್ಲಿನ ಇಂತಹ ಅಸುರರನ್ನು ಆರ್ಯರ ಣವಾದ ಮೇಲೆ ಇಂದ್ರನು ಸೋಲಿಸಿದ ನಂತರ ರ ದೈವೀ ಪಟ್ಟಕ್ಕೆ ತಾನು ಏರಿರುವುದು ಸ್ಪಷ್ಟವಾಗಿ ತ್ತದೆ.

ಅತಿಮಾನುಷರು

ನಮ್ಮ ಸಾಮಾನ್ಯ ಮನುಷ್ಯರಲ್ಲಿರುವ ಬಹುದೊಡ್ಡ ಕ್ಷವೆಂದರೆ, ನಮ್ಮಂತೆಯೇ ಇರುವ ಮನುಷ್ಯರನ್ನು ಂತ ಮಿಗಿಲಾಗಿ ಗೌರವಿಸಲು ಸಾಧ್ಯವಾಗದೇ ಗುವುದು. ಅವನೂ ನನ್ನಂತೆಯೇ ಆದರೆ ನಾನೇಕೆ ಸಬೇಕು? ಅವನು ನನಗೆ ಸಾಧ್ಯವಾಗದಿರುವುದನ್ನು ದರೂ ಸಾಧಿಸಬೇಕು. ನಾನು ಕಾಲುಗಳಿಂದ ಭೂಮಿಯ ನಡೆದರೆ, ಆತ ಮೇಲಕ್ಕೆ ಹಾರಬೇಕು. ನಾನು ಜೈವಿಕ ಕ್ರಮಕ್ಕೆ ಒಳಗಾಗಿ ನಿಧಾನವಾಗಿ ಬೆಳೆಯುವವನಾದರೆ, ಆತ ಇದ್ದಕ್ಕಿದ್ದಂತೆ ಬೆಳೆದು ವಿರಾಟ್ ಸ್ವರೂಪನಾಗಬೇಕು. ನಾನು ಕತ್ತಿ, ಬಾಣ ಇತ್ಯಾದಿಗಳನ್ನು ಬಳಸಿ ಶತ್ರುಗಳೊಡನೆ ಹೋರಾಡಿದರೆ, ಆತನ ಹೂಂಕಾರ ಮಾತ್ರದಿಂದಲೇ ಶತ್ರುಗಳು ಹತರಾಗಬೇಕು. ಹೀಗೆ ಮಾನುಷಾತೀತವಾದ ಶಕ್ತಿ ಪ್ರಕಟಣೆಗಳನ್ನು ತೋರಿದರೆ ಮಾತ್ರ ನಾನು ಆತನನ್ನು ಒಪ್ಪಲು ಸಾಧ್ಯ. ಹೀಗೆ ನನ್ನಂತಹ ಸಾಮಾನ್ಯರನ್ನು ತಮ್ಮ ಮೆಚ್ಚಿನ ನಾಯಕರನ್ನು ವಿರಾಟ್ ಸ್ವರೂಪದಲ್ಲಿ ಪರಿಚಯಿಸಲು ಉದಾರವಾಗಿ ದಂತಕಥೆಗಳನ್ನು ತಲೆಮಾರುಗಳಿಂದ ತಲೆಮಾರುಗಳಿಗೆ ಸಾಗಿಸಿದರು. ಪ್ರತಿಸಲವೂ ಈ ಕಥೆಗಳು ವಿಸ್ತಾರವಾಗುತ್ತಾ ಬಂದವು. ಜೀವಂತಿಕೆಯ ಲಕ್ಷಣವೇ ಬೆಳವಣಿಗೆ. ಇಂದಿಗೂ ಜೀವಂತವಿರುವ ಕಥೆಗಳೂ ಈ ಲಕ್ಷಣಕ್ಕೆ ಹೊರತಲ್ಲ.

ನಾನೂ ಮತ್ತು ನೀವು ಸಾಮಾನ್ಯವಾದ ಹೆಣ್ಣು ಮತ್ತು ಗಂಡಿನ ಮಿಲನದಿಂದ ಹುಟ್ಟುವಂತೆ ಆ ಅತಿಮಾನವರು ಹುಟ್ಟಿ ಬಿಟ್ಟರೆ ಅವರಿಗೇನು ಮಾನ್ಯತೆ? ಹಾಗಾಗಿಯೇ ಯಜ್ಞದಲ್ಲಿ ದೊರಕುವ ಪಾಯಸದಿಂದ ರಾಮ ಅಂಡ್ ಬ್ರದರ್ಸ್, ಶಿವನ ಬೆವರಿನಿಂದ ವೀರಭದ್ರ, ಪಾರ್ವತಿಯ ಮೈಯ ಮಲದಿಂದ ಗಣಪತಿ, (ಸಂಭೋಗದ ಪಾಪದ ಸೋಂಕಿಲ್ಲದೆಯೇ) ಕನ್ಯೆಯಾದ ಮೇರಿಯಲ್ಲಿ ಯೇಸುವು ಹುಟ್ಟುವುದು. ಹೀಗೆ ಅತಿಮಾನುಷವಾಗಿ ಹುಟ್ಟಿದವರನ್ನು



ನಮಗೆ ಗೌರವಿಸಲು ಸಾಧ್ಯವಾಗುವುದಲ್ಲದೇ ಅವರ ಆಚಾರವಿಚಾರವು ನಮ್ಮ ರೀತಿಯಲ್ಲಿರದೇ ವಿಶಿಷ್ಟವಾಗಿದ್ದು ನಮಗೆ ಅನುಸರಿಸಲು ಆಗದೇ ಅವರನ್ನು ಪೂಜಿಸುವುದು. ಅವರಿಗೆ ಅನಂತ ಗುಣಗಳನ್ನು ನೀಡಿ ಅವರನ್ನು ಆರಾಧಿಸುವುದು. ಅವರ ಆಚಾರ ಮತ್ತು ವಿಚಾರಗಳನ್ನು ನಮಗೆ ಅರ್ಥೈಸಲು ಸಾಧ್ಯವಿಲ್ಲ ಎಂದು ಪೌರಾಣಿಕ ಕಥಾನಕಗಳಲ್ಲಿ ಕೊಂಡಾಡುವುದು.

ಅತ್ಯಾಚಾರಿಗಳು

ಯಾವುದೇ ಆಚಾರವನ್ನು ಪ್ರಶ್ನಿಸದೇ, ವಿಚಾರವನ್ನು ಮಾಡದೇ ಒಪ್ಪಿಕೊಂಡು, ಅದನ್ನು ನಮ್ಮ ವೈಯಕ್ತಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಲ್ಲಿ ಯಾವುದೇ ರೀತಿಯಲ್ಲಿ ಅಳವಡಿಸಿಕೊಳ್ಳುವುದು ಖಂಡಿತವಾಗಿಯೂ ಗುಲಾಮಗಿರಿ. ಕೇವಲ ಶ್ರದ್ಧೆ ಮತ್ತು ನಂಬುಗೆಯ ಹೆಸರಿನಲ್ಲಿ ಎಲ್ಲಾ ಕಾಲಘಟ್ಟಗಳಲ್ಲಿ ಜನರನ್ನು ಗುಲಾಮಗಿರಿಯಲ್ಲಿಯೇ ಇರಿಸಿಕೊಂಡು, ಇಡೀ ಸಮಾಜದ ವ್ಯವಸ್ಥೆಯ ಮೇಲೆ ಅಂಕುಶವನ್ನಿಟ್ಟುಕೊಂಡು ಮೌಢ್ಯದ ಮಂಕುಬೂದಿಯೆರಚಿ ಕೊಂಡು ಇರುವ ವರ್ಗಕ್ಕೆ ಎಂದಿಗೂ ವೈಚಾರಿಕ ನಿಲುವು ಸಮ್ಮತವಾಗುವುದಿಲ್ಲ. ನಮ್ಮ ಪುರಾಣಗಳಲ್ಲಿ ಕಾಣುವಂತಹ ಎಷ್ಟೆಷ್ಟೋ ಅತ್ಯಾಚಾರಗಳು ತಾತ್ವಿಕ ಮತ್ತು ಆಧ್ಯಾತ್ಮಿಕ ವ್ಯಾಖ್ಯಾನಗಳಿಗೆ ಒಳಗಾಗಿ, ಶ್ರದ್ಧಾ-ನಂಬುಗೆಗಳ ಸುರಕ್ಷಿತವಾದ ಕಕ್ಷೆಯಲ್ಲಿ ನೆಮ್ಮದಿಯಾಗಿ ಚಾಲ್ತಿಯಲ್ಲಿವೆ.

ನನ್ನ ಗ್ರಹಿಕೆಗೆ ಬಂದಂತಹ ಪುರಾಣಗಳಲ್ಲಿನ ಅತ್ಯಾಚಾರಿಗಳಲ್ಲಿ ಮೊದಲಿಗನೆಂದರೆ 'ಇಂದ್ರ.' ಗೌತಮ ಋಷಿಯ ಅನುಪಮ ಸೌಂದರ್ಯದ ಅಹಲ್ಯಾಳ ಬಗ್ಗೆ ಮೋಹ ಪರವಶನಾದ ದೇವತೆಗಳ ರಾಜನಾದ ಇಂದ್ರ, ವೇಷ ಮರೆಸಿಕೊಂಡು ಬೆಳಗಿನ ಜಾವದಲ್ಲಿ, ಪತಿ ಇಲ್ಲದ ಸಮಯದಲ್ಲಿ ಅವಳೊಂದಿಗೆ ಕೂಡಿದವನು. ನಂತರ ಬಂದ ಗೌತಮ ತನ್ನ ಪತ್ನಿಯೊಂದಿಗೆ ದೇಹವನ್ನು ಹಂಚಿಕೊಂಡ ಇಂದ್ರನಿಗೆ ಮೈಯೆಲ್ಲಾ ಕಣ್ಣಾಗಲಿ (ಯೋನಿಯಾಗಲಿ) ಎಂದು ಶಪಿಸಿದ. ಇನ್ನೂ ಕೆಲವು ಪೌರಾಣಿಕ ಮೂಲಗಳ ಪ್ರಕಾರ ದೇವೇಂದ್ರನ ಶಿಶ್ನ ಹರಣ ಮಾಡಿದ. 'ಅಯ್ಯೋ, ನಾನು ಶಿಶ್ನವಿಲ್ಲದವನಾದೆ.' ಎಂದು ಪ್ರಲಾಪಿಸುತ್ತಾ ಹೋಗುವ ಇಂದ್ರ, ಅದಿಲ್ಲದೇ ಇರಲಾಗದೇ ಯಾವುದೋ ಪ್ರಾಣಿಯ ಶಿಶ್ನವೊಂದನ್ನು ತನ್ನದಕ್ಕೆ ಅಂಟಿಸಿಕೊಂಡನಂತೆ. ಈತನಿನಾಗುವ ಶಿಕ್ಷೆಯಿರಲಿ, ಪದ್ಮಪುರಾಣದ ಪ್ರಕಾರ ಗೌತಮ ಅತ್ಯಾಚಾರಕ್ಕೆ ಒಳಗಾದ ಅಬಲೆ ಅಹಲ್ಯೆಯನ್ನೂ ಕಲ್ಲಾಗುವಂತೆ ಶಪಿಸಿ ತನ್ನ ಗಂಡಸ್ತನವನ್ನು ತೋರಿದ.

ಶಂಖಚೂಡನೆಂಬ ಮಹಾರಸನ ಪತ್ನಿ ತುಳಸಿ. ಶಂಖಚೂಡ ತನ್ನ ಪರಾಕ್ರಮದಿಂದ ದೇವ, ದಾನವ, ಗಂಧರ್ವಾದಿ ಲೋಕಗಳನ್ನು ತನ್ನ ವಶದಲ್ಲಿಟ್ಟುಕೊಂಡು ಆಳುತ್ತಿದ್ದ. ಆತನನ್ನು ಬಗ್ಗು ಬಡಿಯಲು ಶಿವನನ್ನೇ ಯುದ್ಧಕ್ಕೆ ಕಳುಹಿಸಲಾಯಿತು. ಬಹುಕಾಲದ ಯುದ್ಧದ ನಂತರ ದೇವತೆಗಳಿಗೆ ತಿಳಿದುದ್ದೇನೆಂದರೆ, ಶಂಖಚೂಡನ ಪ್ರೇಮದ ಪತ್ನಿಯು ಮಹಾ ಪತಿವ್ರತೆಯಾದ ಕಾರಣದಿಂದ ಆತನನ್ನು ಬಗ್ಗು ಬಡಿಯಲಾಗದು ಎಂದು. ಅದಕ್ಕಾಗಿ ವಿಷ್ಣುವು ಆಕೆಯ ಪಾತಿವ್ರತ್ಯವನ್ನು ಹರಣ ಮಾಡಲು ಶಂಖಚೂಡನಂತೆಯೇ ವೇಷಧಾರಿಯಾಗಿ ತುಳಸಿಯನ್ನು ಕೂಡಿದ. ನಂತರ ಅಲ್ಲಿಗೆ ಅವಳ ಪಾತಿವ್ರತ್ಯದ ಹರಣವಾಗಿ ಶಂಖಚೂಡನ ಸೋಲು ಮತ್ತು ಸಾವು ಸಾಧ್ಯವಾಯಿತು. ಪತ್ನಿಯ ಜೊತೆ ಪರ ಪುರುಷನೊಬ್ಬ ಕೂಡಿದಾಗ ಅವಳಿಗೆ ಅರಿವಿಲ್ಲದಂತೆಯೇ ಅವಳು ಶೀಲವನ್ನು ಕಳೆಕೊಂಡಳು ಎಂಬುದೂ, ಅದರಿಂದ ಆಕೆಯ ಪತಿಯು ಶಕ್ತಿಹೀನನಾಗಿ ಸೋಲುಂಡ ಎಂಬುದೂ ಎಷ್ಟೇ ಹಾಸ್ಯಾಸ್ಪದದ ವಿಷಯವಾದರೂ, ವಿಷ್ಣುವೊಬ್ಬ ಅತ್ಯಾಚಾರಿಯೆಂದು ನಿರೂಪಿಸಿ, ಅದಕ್ಕೆ ದೈವತ್ವದ ಕಥೆ ಕಟ್ಟುವುದು ಎಂತಹ ನಾಚಿಕೆಗೇಡಿನ ವಿಷಯ!

ತಂದೆಯಿಲ್ಲದೇ ಅಥವಾ ಈತನೇ ತಂದೆಯೆಂದು ತಿಳಿಯದೇ ಬರಿಯ ತಾಯಿಯಿಂದಲೇ ಹುಟ್ಟಿದ ಗಣಪತಿಯಂತಹ ಗಣನಾಯಕನಿಂದ ಹಿಡಿದು, ಜಾಬಾಲಿ ಎಂಬ ದಾಸಿಯ ಮಗ ಸತ್ಯಕಾಮನವರೆಗೂ ಹಲವಾರು ಬಾರಿ ದೃಷ್ಟಾಂತಗಳನ್ನು ಕಂಡಿದ್ದೇವೆ. ದೇವರ ಅಭೀಷ್ಟದಂತೆ ಗಬ್ರಿಯೇಲ್ ತಾನೇ ಬಂದು, ಪವಿತ್ರಾತ್ಮವು ಆವರಿಸಿ ದೇವರ ಮಗನು ಮಾನುಷರೂಪದಿಂದ ಜನ್ಮ ತಳೆಯಲು ಮೇರಿ ಎಂಬ ಒಂದು ಹೆಣ್ಣನ್ನು ಅವಲಂಬಿಸಲೇಬೇಕಾಯ್ತು. ಆದರೆ ನಮ್ಮ ಪುರಾಣಗಳಲ್ಲಿ ತಾಯಿಯೇ ಇಲ್ಲದೇ ಹುಟ್ಟಿರುವಂತಹ ಮಕ್ಕಳೂ ಇದ್ದಾರೆ ಎಂಬುದು ನಿಮಗೆ ತಿಳಿದಿರಲಿ.

ಬ್ರಹ್ಮದೇವ ಮಹಾ ಅತ್ಯಾಚಾರಿ

ಬ್ರಹ್ಮದೇವ ಊರ್ವಶಿಯ ಅನುಪಮ ಸೌಂದರ್ಯವನ್ನು ಕಂಡು ಮಡಿಕೆಯೊಂದರಲ್ಲಿ ಸ್ಖಲನ ಮಾಡಿಕೊಂಡ ವೀರ್ಯದಿಂದಾಗಿ ಅಗಸ್ತ್ಯ ಹುಟ್ಟಿದನಂತೆ. ಕನಿಷ್ಠಪಕ್ಷ ಇಲ್ಲಿ ಅಗಸ್ತ್ಯನಿಗೆ ಹೆರದಿದ್ದರೂ ಕಾಣಲಿಕ್ಕಾದರೂ ಒಬ್ಬಳು ತಾಯಿ ಇದ್ದಾಳೆ. ಆದರೆ, ಇಂತಹ ತಾಯಿಯ ಭಾಗ್ಯವೂ ಇಲ್ಲದೇ ಬರಿಯ ಬ್ರಹ್ಮನ ವೀರ್ಯದಿಂದ ಅಗಸ್ತ್ಯನ ನಂತರ ಹುಟ್ಟಿದವಳು ಸರಸ್ವತಿ. ಅವಳನ್ನು ಇಂದಿನ ಪರಿಭಾಷೆಯಲ್ಲಿ ಮಗಳೆನ್ನುವಿರೋ ಅಥವಾ ಬೊಮ್ಮಗಳೆನ್ನುವಿರೋ ನಿಮ್ಮ ನಿಮ್ಮ ಭಾವನಾನು ಗುಣವಾದದ್ದು, ಆದರೆ ಬ್ರಹ್ಮನೆಂಬ ಆತ ಮಾಡಿದ್ದು ಮಾತ್ರ ಪುರುಷಾರ್ಥ! ತನ್ನಿಂದ ಹುಟ್ಟಿದ ಆ ಕನ್ಯೆಯನ್ನು (ಇಂದಿನ ಪರಿಭಾಷೆಯಲ್ಲಿ ಮಗಳನ್ನು) ಕಾಮಪರವಶನಾಗಿ ಬೆನ್ನತ್ತಿದ. ಆಕೆ ಅವನಿಂದ ತಪ್ಪಿಸಿಕೊಳ್ಳಲೆಷ್ಟೇ ಪ್ರಯತ್ನಿಸಿದರೂ ಬಿಡಲಿಲ್ಲ. ಬ್ರಹ್ಮ ವೇದಗಳಿಂದ ಉದ್ಧರಿಸಿ ಆಕೆಗೆ ಹೇಳುತ್ತಾನೆ, "ಮಗುವನ್ನು ಪಡೆಯುವ ಉದ್ದೇಶದಿಂದ ಮಗಳನ್ನಾಗಲಿ, ಸೋದರಿಯನ್ನಾಗಲಿ ಸೇರಿ ಸಂಭೋಗಿಸುವುದು ಪಾಪವಲ್ಲ" ಎಂದು. ಕಡೆಗೆ ಆಕೆ ಸಮ್ಮತಿಸಲೇಬೇಕಾಯ್ತು, ನಂತರ ಅವರು ನೂರುವರುಷಗಳು ಗಂಡ-ಹೆಂಡಿರಾಗಿ ಸಂಸಾರ ಮಾಡಿದ್ದು ಈಗ ಪುರಾಣೇತಿಹಾಸ.

ಬೃಹದಾರಣ್ಯಕೋಪನಿಷತ್ತಿನಲ್ಲಿ (1.4.4) ಬ್ರಹ್ಮನಿಂದ ಹುಟ್ಟಿದ ಶತರೂಪೆ ಯೋಚಿಸುವಳು, "ನನ್ನನ್ನು ತನ್ನಿಂದಲೇ ಹುಟ್ಟಿಸಿ ನನ್ನೊಂದಿಗೇ ಹೇಗೆ ಸೇರುವನು?" ಎಂದು ಆಲೋಚಿಸಿ ಅವಳು ಹಸುವಾದಳು, ಆದರೆ ಅವನು ಹೋರಿಯಾಗಿ ಅವಳನ್ನು ಸೇರಿದನು. ಅದರಿಂದ ಗೋವುಗಳು ಹುಟ್ಟಿದವು. ಅವಳು ಹೆಣ್ಣು ಕುದುರೆಯಾದರೆ, ಅವನು ಗಂಡು ಕುದುರೆಯಾಗಿ ಸೇರಿದ. ಅವಳು ಆಡಾದರೆ, ಅವನು ಹೋತವಾದನು. ಹೀಗೆಯೇ ಇರುವೆಗಳವರೆಗೆ ಯಾವ ಯಾವ ಪ್ರಾಣಿಗಳಲ್ಲಿ ಮಿಥುನವಿದೆಯೋ ಅವೆಲ್ಲವನ್ನೂ ಬ್ರಹ್ಮ ಸೃಷ್ಟಿಸಿದನು. ಕಾಮಕ್ಕೆ ಅಧಿದೇವತೆ ಎಂದು ಮನ್ಮಥನನ್ನು ತಿಳಿದುಕೊಂಡಿದ್ದೆವು. ಮನ್ಮಥನ ಮದನ ಲೀಲೆಗಳು ಬ್ರಹ್ಮನ ಕಾಮಕೇಳಿಯ ಮುಂದೆ ಜುಜುಬಿ. ಮನ್ಮಥನೊಬ್ಬ ಜುಟ್ಟು. ಇದೇ ರೀತಿ ಪುರುಷನೊಬ್ಬನಿಂದ ಸ್ತ್ರೀಯು ಹುಟ್ಟಿ ಬಂದು ಸೃಷ್ಟಿಯಲ್ಲಿ ಸೆಕೆಂಡ್ ಸೆಕ್ಸ್ ಆಗಿ ಸಂಗಾತಿಯಾಗುವ ಕಥೆ ಬ್ರಹ್ಮನಿಂದ ಉದುರಿಬಿದ್ದ ಸರಸ್ವತಿಯೊಬ್ಬಳದೇ ಅಲ್ಲ. ಬೈಬಲ್ಲಿನ ಹಳೆಯ ಒಡಂಬಡಿಕೆಯ ಆದಿಕಾಂಡದಲ್ಲಿ (ಬ್ಯಾಬಿಲೋನಿಯನ್ ಮಿಥಾಲಜಿಯ ಮೂಲ) ದೇವರು ಆದಮನನ್ನು ಸೃಷ್ಟಿಸಿದ್ದು, ಆತನು ನಿದ್ರಿಸುತ್ತಿದ್ದಾಗ ಆತನ ಪಕ್ಕೆಲುಬನ್ನು ತೆಗೆದುಕೊಂಡು ಅದರಿಂದ ಮಹಿಳೆಯನ್ನು ಮಾಡಿದ್ದನ್ನೂ ನೆನಪಿಸಿಕೊಳ್ಳಿ.

ಇರಲಿ, ಬ್ರಹ್ಮನ ಈ ಪ್ರಹಸನವು ತಾಯಿ ಇಲ್ಲದ ತಬ್ಬಲಿಯೊಂದು ತಂದೆಯ ಕಾಮದಾಹಕ್ಕೆ ಬಲಿಯಾದ ಉದಾಹರಣೆಯೇ? ಅಥವಾ ಅಂತದ್ದೊಂದು ಕಾಲಘಟ್ಟದಲ್ಲಿ ತಂದೆ ಮಗಳು ಎಂಬ ಸಂಬಂಧಗಳು ಬೆಳೆಯದೇ ಇದ್ದಂತಹ ಸಂದರ್ಭದಲ್ಲಿ ಘಟಿಸಿರಬಹುದಾದುದ್ದನ್ನು ಮುಂದೊಂದು ದಿನ ತಮ್ಮ ಕಾಲದ ಪರಿಭಾಷೆಯಲ್ಲಿ ಹೀಗೆ ವಿವರಿಸಿದ್ದಾರೆಯೇ? ಮುಂದೆ ನೋಡೋಣ. ಆದರೆ, ಬ್ರಹ್ಮನ ಕಾಮುಕತನದ ಕಾಮಿಡಿಗಳು ಇನ್ನಷ್ಟಿವೆ ಮುಂದೆ ನೋಡಿ.

ಹಸ್ತಮೈಥುನೇಶ್ವರ

ಬ್ರಹ್ಮನು ಶಿವ ಮತ್ತು ಪಾರ್ವತಿಯರ ವಿವಾಹಕ್ಕೆ ಪೌರೋಹಿತ್ಯ ವಹಿಸಿದ್ದು ಆ ಮದುವೆಯಲ್ಲಿ ಪಾರ್ವತಿಯ ತೊಡೆಗಳನ್ನು ಕಂಡು ಉದ್ರಿಕ್ತನಾಗಿ ವೀರ್ಯವನ್ನು ಸನಿಹದ ಕುಂಭದಲ್ಲಿ ಸ್ಖಲನ ಮಾಡಿದ್ದು, ಅದರಿಂದ ಹುಟ್ಟಿದವನು ಅಗಸ್ತನೆಂದು ಮತ್ತೊಂದು ಪುರಾಣ ಕಥೆ. ಅಗ್ನಿಯನ್ನು ಸುತ್ತಿದ ಪಾರ್ವತಿ ಇದೇ ಬ್ರಹ್ಮನ ಬಳಿಗೆ ನಮಸ್ಕರಿಸಲು ಬಂದಾಗ ಬ್ರಹ್ಮ ಮತ್ತೊಮ್ಮೆ ಸ್ಖಲಿಸಿದ ವೀರ್ಯದಿಂದ ಅಸಂಖ್ಯಾತ ಯೋಗಿಗಳು ಹುಟ್ಟಿದರಂತೆ. ಅಲ್ಲಿಯೇ ನಿಲ್ಲಲಾಗದೇ, ಮತ್ತೆ ಮತ್ತೆ ಅಲ್ಲಿಯೇ ಸ್ಖಲಿಸಲಾಗದೇ ಬ್ರಹ್ಮನು ಅಲ್ಲಿಂದ ಹೊರಗೋಡಿ ಬಂದು ಸ್ಮಶಾನವೊಂದರಲ್ಲಿ ಚಿತಾಭಸ್ಮದ ಮೇಲೆ ಮತ್ತೆ ಸ್ಖಲಿಸಲು ಪೂರ್ವಿಚರ್ವನನ್ ಎಂಬ ರಾಕ್ಷಸನು ಹುಟ್ಟಿದನಂತೆ. ಆನಂತರ (ಬಹುಶಃ ಶಿಶ್ನದ ತುದಿಗೆ ಅಂಟಿಕೊಂಡಿದ್ದ) ವೀರ್ಯವನ್ನು ಉದುರಿಸಿದಾಗ ಪಕ್ಷಿಯೊಂದು ಬಂದು ಆ ವೀರ್ಯ ಬಿಂದುವನ್ನು ಸೇವಿಸಿ ಅದು ಬಸುರಾಗಿ ಹೆತ್ತ ಮಗು ಶಕುನಿ. ಇಲ್ಲಿಗೇ ಬ್ರಹ್ಮನ ವೀರ್ಯ ಸ್ಖಲನದ ಕಥೆ ಮುಗಿಯುವುದಿಲ್ಲ. ಮುಂದೆ ನಡೆದು ಕೊಳವೊಂದರಲ್ಲಿ ಸ್ಖಲನ ಮಾಡುತ್ತಾನೆ. ಅಲ್ಲಿ ಆ ವೀರ್ಯವನ್ನು ನುಂಗಿದ ಕಪ್ಪೆಯು ಹೆಣ್ಣು ಮಗುವೊಂದನ್ನು ಹೆರುತ್ತದೆ. ಅವಳೇ ಮಂಡೋದರಿ. ಇಂದ್ರನಿಗೆ ಬ್ರಹ್ಮನ ಕಾಮಾತಿರೇಕದ ವಿಚಾರ ತಿಳಿದು ಅವನಿಗಾಗಿ ತಿಲೋತ್ತಮೆಯನ್ನು ಕಳುಹಿಸಿದನಂತೆ. ಆದರೆ ಈ ಬ್ರಹ್ಮನ ಹುಚ್ಚಾಟವನ್ನು ಕಂಡು ರೇಗಿದ್ದ ಶಿವ (ತನ್ನದೇ ಮದುವೆಯಲ್ಲಿ ತಾನು ಮದುವೆಯಾಗುತ್ತಿರುವ ಮದುಮಗಳನ್ನು ಅರ್ಥಾತ್ ತನ್ನ ಹೆಂಡತಿಯನ್ನು ನೋಡಿಕೊಂಡು ಯಾವನಾದರೂ ಹುಚ್ಚನಾಗಿ ಹಸ್ತಮೈಥುನ ಮಾಡಿಕೊಂಡರೆ ಎಷ್ಟರ ಮಟ್ಟಿಗೆ ರೇಗಬಹುದು) ಬ್ರಹ್ಮನ ತಲೆಯನ್ನು ಕತ್ತರಿಸಿದನಂತೆ. ಉಶ್ಶಪ್ಪಾ.. ತಲೆಯುರುಳಿದ ಮೇಲೆ ಬ್ರಹ್ಮನ ಕೆಲಸ ನಿಂತಿದ್ದಿರಬಹುದು.

ಇಷ್ಟಕ್ಕೇ ವಿಷಯವನ್ನು ನಿಲ್ಲಿಸಿದರೆ ಈ ಲೇಖನ ಪುರಾಣದ ಹಗರಣವಾಗಷ್ಟೇ ಬಿಂಬಿತವಾಗುತ್ತದೆ. ಹೂರಣವೇನಿರಬಹುದು... ಎಂದು ಮುಂದೆ ಮತ್ತಷ್ಟು ಬೆದಕೋಣ.

ಹೆಂಡತಿಯಿಂದ ಸೇವೆ ಮಾಡಿಸಿಕೊಳ್ಳುವವರು ಅಂಗವಿಹೀನರು

ಥೂತ್ತೇರಿ

ಯಾಹು

ಭಾರತ ಕಂಡ ಅಮಂಗಳಕರ ವ್ಯಕ್ತಿಯಾದ ರಾಧಾಕೃಷ್ಣನ್ ಎಂಬ ಅಜ್ಞಾನಿ ಮಂಗಳಯಾನ ಉಡಾವಣೆಗೂ, ಮುನ್ನ ಅದರ ಮಾಡೆಲ್ಲನ್ನು ತಿರುಪತಿ ತಿಮ್ಮಪ್ಪನ ಮುಂದೆ ಇಟ್ಟುಕೊಂಡು ಮಂಥವತಿಯಂತೆ ಕುಳಿತಿದ್ದನಂತಲ್ಲಾ, ಈ ಸಂಗತಿಯನ್ನು ಕೇಳಿದ ಸಾಮಾನ್ಯ ಜನರು "ಬಹುಶಃ ತಿರುಪತಿ ತಿಮ್ಮಪ್ಪ ಕೂಡ ಬಾಹ್ಯಾಕಾಶ ವಿಜ್ಞಾನಿಯಾಗಿದ್ದು, ಆತ ರಾಧಾಕೃಷ್ಣನ್ ತರಹದವರಿಗೆ ಗುರುವಾಗಿದ್ದು, ಆ ಗುರುವಿನ ಆಶೀರ್ವಾದಕ್ಕಾಗಿ ಈತ ಮಾಡೆಲ್ ಮಡಗಿಕೊಂಡು ಪೂಜೆ ಮಾಡಿರಬಹುದು" ಎಂದುಕೊಂಡರಂತಲ್ಲಾ, ಇದೆಲ್ಲಕ್ಕಿಂತ ಮುಖ್ಯವಾಗಿ ನಾನೂರ ಐವತ್ತು ಕೋಟಿ ನುಂಗಿರುವ ಈ ಮಂಗಳಯಾನದಿಂದ ರೈತರು ಕುಬೇರರಾಗಿ ಹೋಗುತ್ತಾರಂತೆ; ಸಹಜವಾಗಿ ರೈತರು ಉದ್ಧಾರವಾದ ಕೂಡಲೇ ಶಾಲೆ, ಕಾಲೇಜು, ಆಸ್ಪತ್ರೆಗಳು ರೆಡಿಯಾಗುತ್ತವಂತೆ; ಅಲ್ಲಿಗೆಲ್ಲಾ ಅವರ ಮಕ್ಕಳೇ ವಿದ್ಯಾರ್ಥಿಗಳು, ಸಿಬ್ಬಂದಿಗಳು ಮತ್ತು ಆಸ್ಪತ್ರೆಯ ರೋಗಿಗಳಾಗುತ್ತಾರಂತೆ; ರೈತರು ಬೆಳೆದ ಬೆಳೆಗೆ ಒಳ್ಳೆ ಬೆಲೆ ಸಿಗುತ್ತದಂತೆ; ಒಳ್ಳೆ ಮಾರ್ಕೆಟ್ ಸೃಷ್ಟಿಯಾಗುತ್ತದಂತೆ; ರೈತರು ಬೆಳೆದ ಬೆಳೆ ತೂರಲು, ಒಣಗಿಸಲು ಮತ್ತು ಸಂಗ್ರಹಿಸುವ ಹವಾಮಾನದ ಸೂಚನೆಯೆಲ್ಲಾ ಮಂಗಳಯಾನದಿಂದಲೇ ರವಾನೆಯಾಗುತ್ತದಂತೆ. ಅವುಗಳನ್ನೆಲ್ಲಾ ರಾಧಾಕೃಷ್ಣನ್ ತಿರುಪತಿ ನಾಮದೊಂದಿಗೆ ಜನರಿಗೆ ತಲುಪಿಸುತ್ತಾನಂತೆ. ಇದೆಲ್ಲಕ್ಕಿಂತ ವಿಸ್ಮಯವೆಂದರೆ ಅಂಗಾತ ಮಲಗಿಕೊಂಡು ಉರಿಗಾಳು ತಿನ್ನುತ್ತಾ ಪೇಪರ್‌ನಲ್ಲೇ ಟಿವಿ ನೋಡಿ, ರೇಪು, ಕೊಲೆ, ಕಳ್ಳತನ ಕಲಿಯಬಹುದಂತಲ್ಲಾ, ಥೂತ್ತೇರಿ!

******

ಶಾದಿಭಾಗ್ಯದ ವಿರುದ್ಧ ಗಾಂಧಿ ಪ್ರತಿಮೆ ಹಿಂಭಾಗದಲ್ಲಿ ಹಾಸಿಗೆ ಹಾಸಿಕೊಂಡು ಮಲಗಿರುವ ಕೆಜೆಪಿ ಧುರೀಣ ಎಡೂರಪ್ಪ ಮತ್ತು ಶೋಭಾ ಕರಂದ್ಲಾಜೆಯವರ ದನಿಗೆ ಕಿವುಡಾಗಿರುವ ಸಿದ್ದರಾಮಯ್ಯ ಒಂದೆಡೆಯಾದರೆ ಪಟ್ಟುಬಿಡದ ಉಡದಂತೆ ಪಟ್ಟನಿಂದ ನೆಲ ಹಿಡಿದಿರುವ ಎಡೂರಪ್ಪನ ತಲೆಯ ಒಳಗೆ ಕೂತಿರುವ ಶೋಭಾ ಕರಂದ್ಲಾಜೆಯವರನ್ನು ಮಾತನಾಡಿಸಬೇಕೆನಿಸಿತ್ತಲ್ಲ, ಕೂಡಲೆ ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: "ನೀ ಎಲ್ಲಿ ಹೋಗುವೆ ನಾ ಅಲ್ಲೆ ಕಾಣುವೆ... ಎಲ್ಲೇ ಇರು ಹೇಗೇ ಇರು ನೆರಳಾಗಿ ಕಾಡುವೆ... ನೆರಳಾಗಿ...."

"ಹಲೋ ಯಾರು?"

"ನಾನು ಮೇಡಂ, ಯಾಹು, ಪತ್ರಕರ್ತ."

"ಇಲ್ಲೇ ಬನ್ನಿ ಮಾತನಾಡುವ."

"ಎಲ್ಲಿಗೆ ಮೇಡಂ?"

"ಆನಂದ್‌ರಾವ್ ಸರ್ಕಲ್ ಬಳಿ ಗಾಂಧಿ ಪ್ರತಿಮೆ ಉಂಟಲ್ಲ ಅಲ್ಲಿ."

"ಅಲ್ಲಿಗೆ ಬಂದಿದ್ದೆ ಮೇಡಂ, ಆ ದೃಶ್ಯ ನೋಡಿ ರಾಮಾಯಣ ನೆನಪಾಯ್ತು, ಕೂಡ್ಲೆ ವಾಪಸು ಬಂದೆ."

"ರಾಮಾಯಣ ಯಂತಕ್ಕೆ ನೆನಪಾದದ್ದು?"

"ಎಡೂರಪ್ಪನವರು ಮಲಗಿದ್ರು. ನೀವು ಅಲ್ಲೇ ಕುಳಿತಿದ್ರಿ ಮೇಡಂ. ನನಗೆ ಕಂಡ ದೃಶ್ಯ ಹೇಳ್ತಿನಿ ಬೇಜಾರಾಗಬೇಡಿ ಮೇಡಂ."

"ಹೇಳಿ ಪರವಾಗಿಲ್ಲ."

"ದಶರಥನ ಬಳಿ ಕೈಕೆಯಿ ಕುಳತಂಗೆ ಕಾಣ್ತು ಮೇಡಂ."


"ಇಲ್ಲ ದಶರಥನಂತೆ ಯಾರೂ ಇಲ್ಲ, ಕೈಕೆಯಿಯನ್ನು ಪ್ರತಿನಿಧಿಸುವವರೂ ಇಲ್ಲ."

"ಸಾರಿ ಮೇಡಂ. ನಮ್ಮ ಪೂರ್ವಗ್ರಹದ ದೃಷ್ಟಿಗಳ ಬಗ್ಗೆ ಕ್ಷಮೆ ಇರಲಿ. ತಮ್ಮ ಪ್ರತಿಭಟನೆ ಎಲ್ಲಿಗೆ ಬಂತು ಮೇಡಂ?"

"ಈ ಸರ್ಕಾರ ಎಲ್ಲಿಯವರೆಗೆ ಶಾದಿ ಭಾಗ್ಯವನ್ನು ಎಲ್ಲಾ ಹಿಂದುಳಿದ ವರ್ಗದ ಹೆಣ್ಣುಮಕ್ಕಳವರೆಗೆ ವಿಸ್ತರಿಸುವುದಿಲ್ಲವೋ ಅಲ್ಲಿಯವರೆಗೆ ನಡೆಯುತ್ತೆ."

"ಈ ಕಾರ್ಯಕ್ರಮನ ನೀವಿದ್ದಾಗ್ಲೆ ಮಾಡಬೇಕಾಗಿತ್ತು ಮೇಡಂ."

"ನಾವು ಭಾಗ್ಯಲಕ್ಷ್ಮಿ ಮಾಡಲಿಲ್ಲವ? ಒಂದೇ ಸರ್ಕಾರ



ಎಲ್ಲವನ್ನೂ ಮಾಡಲಿಕ್ಕೆ ಬರುವುದಿಲ್ಲ."

"ಅಂಗಾದ್ರೆ ಇವುರು ಮುಸ್ಲಿಮರಿಗೆ ಮಾಡ್ತರೆ, ಪುನಃ ನೀವು ಬಂದಾಗ ಹಿಂದುಳಿದವರಿಗೆ ಮಾಡಿ."

"ಹಾಗೆ ವಿಭಾಗ ಮಾಡಿ ಮಾಡುವುದು ಬೇಡ. ಮಾಡಿದರೆ ಎಲ್ಲಾ ಹೆಣ್ಣುಮಕ್ಕಳಿಗೆ ಒಂದೇ ಬಾರಿ ಮಾಡಲಿ. ಇಲ್ಲ ಅಂದರೆ ಕಾರ್ಯಕ್ರಮವನ್ನು ವಾಪಸು ತೆಗೆದುಕೊಳ್ಳಲಿ."

"ಅಂತೂ ಮುಸ್ಲಿಂ ಹೆಣ್ಣುಮಕ್ಕಳಿಗೆ ಐವತ್ತು ಸಾವಿರ ಸಿಗೋದು ಬೇಡ ಅನ್ನಿ."

"ನಾವು ಹಾಗೆ ಹೇಳ್ತಾಯಿಲ್ಲ, ನಿಮ್ಮ ಕಾರ್ಯಕ್ರಮ ಸಮಾನವಾಗಿರಲಿ, ಬಡ ಹೆಣ್ಣುಮಕ್ಕಳೆಲ್ಲಾ ಒಂದೇ ಅಂತಿದ್ದೀವಿ."

"ಇಂಥ ಕಾರ್ಯಕ್ರಮದಿಂದ ಹೆಣ್ಣುಮಕ್ಕಳ ಸ್ವಾಭಿಮಾನ ಹಾಳಾಗುತ್ತೆ, ಮದುವೆನೇ ಮುಖ್ಯ ಅಲ್ಲ ಅಂತ ಒಬ್ಬ ಹೆಣ್ಣುಮಗಳು ವಾದಿಸ್ತಾಯಿದಾಳಲ್ಲ."

"ಆಕೆಗೆ ಮದುವೆಯಾಗಿದೆಯಾ?"

"ಹೌದು."

"ಮತ್ತೆ ಇನ್ನೆಂಥ ಹೇಳಲಿಕ್ಕೆ ಸಾಧ್ಯ ಆಕೆ?"

"ಆಕೆ ಹೇಳದೇನಂದ್ರೆ, ಹೆಣ್ಣುಮಕ್ಕಳ ಬದುಕಿಗೆ ಸಂಬಂಧಪಟ್ಟ ಕಾರ್ಯಕ್ರಮ ಸರ್ಕಾರದ ಕಾರ್ಯಕ್ರಮ ಆಗಬಾರದು ಅಂತ."

"ಮದುವೆ ಒಂದು ಹೊರೆಯಾಗಿ ಬಡವರು ಕಷ್ಟದಲ್ಲಿ ಸಿಕ್ಕುವುದಾದರೆ ಸರ್ಕಾರ ಯೋಜನೆ ರೂಪಿಸಬೇಕಾಗ್ತದೆ. ರಾಮಕೃಷ್ಣ ಹೆಗಡೆ ಸರ್ಕಾರ ತಾಳಿಭಾಗ್ಯ ಯೋಜನೆ ಕೊಟ್ಟಿರಲಿಲ್ಲವಾ?"

"ಆ ತಾಳಿಭಾಗ್ಯ ಸರಿಯಿಲ್ಲ ಮೇಡಂ. ದುಡ್ಡು ಕೊಡದೇ ಸರಿ."

"ಹೌದು, ಮಹಿಳೆಗೆ ಆರ್ಥಿಕ ಸ್ವಾವಲಂಬನೆ ಮುಖ್ಯ, ನಮ್ಮ ನಾಯಕರಾದ ಎಡೂರಪ್ಪನವರ ಎಲ್ಲಾ ಕಾರ್ಯಕ್ರಮದ ಹಿಂದೆ ಕರ್ನಾಟಕದ ಜನತೆ ಸ್ವಾವಲಂಬಿಗಳಾಗಿ ನೆಮ್ಮದಿಯಿಂದ ಬದುಕಬೇಕೆಂಬ ಕಾಳಜಿಯುಂಟು."

"ನಿಜಕ್ಕೂ ಆಶ್ಚರ್ಯ ಮೇಡಂ."

"ಯಂತಕ್ಕೆ ಆಶ್ಚರ್ಯ?"

"ಸ್ವಾಭಿಮಾನ ಮತ್ತು ನೆಮ್ಮದಿಯಿಲ್ಲದ ಮನುಷ್ಯನೊಬ್ಬ ಜನಗಳ ಬದುಕಲ್ಲಿ ಅದನ್ನು ತರೋದಕ್ಕೆ ಹೋರಾಡೋದು ಆಶ್ಚರ್ಯ."

"ಅದರಲ್ಲಿ ಆಶ್ಚರ್ಯಪಡುವಂತದ್ದೇನು? ಅವರೊಬ್ಬ ತ್ಯಾಗಜೀವಿ. ಹೆಣ್ಣುಮಕ್ಕಳ ಆರ್ಥಿಕ ಸ್ವಾವಲಂಬನೆಗಾಗಿ ದುಡಿಯುತ್ತಯಿದ್ದಾರೆ."

"ಹೆಣ್ಣುಮಕ್ಕಳಿಗೆ ಆರ್ಥಿಕ ಸ್ವಾವಲಂಬನೆ ಸಿಕ್ಕರೆ ಅವರೆಲ್ಲಾ ನಿಮ್ಮ ಥರ ಆಗ್ತರೆ. ಇಲ್ಲ ಡೈವರ್ಸು ಜಾಸ್ತಿಯಾಗ್ತವೆ ಅಂತ ನಿಮ್ಮ ಮನುವಾದಿಗಳು ಹೇಳ್ತರಲ್ಲ ಮೇಡಂ?"

"ಮನುವಾದಿಗಳ ವಾದ ಅವರ ದೃಷ್ಟಿಯಲ್ಲಿ ಸರಿ. ಸಾಯುವವರೆಗೆ ಹೆಂಡತಿಯಾದವಳು ತನ್ನ ಸೇವೆ ಮಾಡಿಕೊಂಡು ಇರಬೇಕು ಅಂತ ಅಪೇಕ್ಷೆಪಡುವ ಅಂಗವಿಹೀನರು ಯೋಚಿಸುವುದೇ ಹಾಗೆ."

"ನಿಜ ಮೇಡಂ. 'ನಾನಿನ್ನ ಪಾದದ ಧೂಳಾದರೂ ಚನ್ನ' ಅಂತ ಹಾಡು ಬರೆದು ಹೆಣ್ಣಿನ ಬಾಯಿಂದ್ಲೇ ಹೇಳುಸ್ತಾರೆ. ಅಷ್ಟೇ ಅಲ್ಲ ಮೇಡಂ 'ಏಳು ಜನ್ಮಕ್ಕೂ, ನೂರಾರು ಜನ್ಮಕ್ಕೂ ನೀನೇ ನನ್ನ ಗಂಡನಾಗು' ಅಂತ ಹೇಳುಸ್ತಾರೆ. ಸಿಟ್ಟು ಬಂದ್ರೆ, ಕೆನ್ನೆಗೆ ಹೊಡಿತಾರೆ. ಅದೂ ಸತ್ತೋಗೊ ತರ ಹೊಡಿತರೆ. ಆಕಸ್ಮಾತ್ 'ಸತ್ತರೆ ನೀರಿನ ತೊಟ್ಟಿ ಒಳಗಡೆ ಹಾಕಿ, ಕಾಲುಜಾರಿ ಬಿದ್ಳು, ಬಿದ್ದಾಗ ಕೆನ್ನೆಗೆ ಏಟುಬಿತ್ತು ಅಂತ ಹೇಳಿ, ತುಂಬಾ ಅತ್ತುಕೊಂಡು ಅದ್ಧೂರಿ ತಿಥಿ ಮಾಡ್ತರೆ. ತಿಥಿಯಾದ ಮರುದಿನನೆ ಸಂಗಾತಿ ಹುಡುಕ್ತಾರೆ. ಇಂಥವರು ನಮ್ಮ ನಿಮ್ಮ ನಡುವೆ ಇದಾರೆ ಮೇಡಂ. ಹೌದಲ್ವ?.... ಹಲೋ... ಹಲೋ... ಹಲೋ?


ಥೂತ್ತೇರಿ!!!



ಪಿ.ಲಂಕೇಶರ ಪುಸ್ತಕಗಳು

1. ನೀಲು ಕಾವ್ಯ -ಸಂಗ್ರಹ 1	150.00	ಕಾವ್ಯ ಸಂಕಲನ	ಪಿ. ಲಂಕೇಶ್
2. ನೀಲು ಕಾವ್ಯ -ಸಂಗ್ರಹ 2	150.00	ಕಾವ್ಯ ಸಂಕಲನ	ಪಿ. ಲಂಕೇಶ್
3. ನೀಲು ಕಾವ್ಯ -ಸಂಗ್ರಹ 3	200.00	ಕಾವ್ಯ ಸಂಕಲನ	ಪಿ. ಲಂಕೇಶ್
4. ಚಿತ್ರ ಸಮೂಹ	90.00	ಕಾವ್ಯ ಸಂಕಲನ	ಪಿ. ಲಂಕೇಶ್
5. ಅಕ್ಷರ ಹೊಸ ಕಾವ್ಯ	250.00	ಕಾವ್ಯ ಸಂಗ್ರಹ	ಪಿ. ಲಂಕೇಶ್
6. ಮರೆಯುವಮುನ್ನ-ಸಂಗ್ರಹ1	150.00	ಸಮಕಾಲೀನ ಬರಹ	ಪಿ. ಲಂಕೇಶ್
7. ಮರೆಯುವಮುನ್ನ-ಸಂಗ್ರಹ2	150.00	ಸಮಕಾಲೀನ ಬರಹ	ಪಿ. ಲಂಕೇಶ್
8. ಮರೆಯುವಮುನ್ನ-ಸಂಗ್ರಹ3	150.00	ಸಮಕಾಲೀನ ಬರಹ	ಪಿ. ಲಂಕೇಶ್
9. ಮರೆಯುವಮುನ್ನ-ಸಂಗ್ರಹ4	150.00	ಸಮಕಾಲೀನ ಬರಹ	ಪಿ. ಲಂಕೇಶ್
10. ಪಾಂಚಾಲಿ	150.00	1974ರ ದೀಪಾವಳಿ ಸಂಚಿಕೆ	ಪಿ. ಲಂಕೇಶ್
11. ಮನಕೆ ಕಾರಂಜಿಯ ಸ್ಪರ್ಶ	150.00	ಪಾಶ್ಚಿಮಾತ್ಯ ಬರಹಗಳು	ಪಿ. ಲಂಕೇಶ್
12. ಈ ನರಕ ಈ ಪುಲಕ	125.00	ಸಿನಿಮಾ ಬರಹಗಳು	ಪಿ. ಲಂಕೇಶ್
13. ಆಟ-ಜೂಜು-ಮೋಜು!	150.00	ಕ್ರೀಡಾ ಬರಹಗಳು	ಪಿ. ಲಂಕೇಶ್
14. ಟೀಕೆ-ಟಿಪ್ಪಣಿ 1	200.00	ಸಮಕಾಲೀನ ಬರಹಗಳು	ಪಿ. ಲಂಕೇಶ್
15. ಟೀಕೆ-ಟಿಪ್ಪಣಿ 2	200.00	ಸಮಕಾಲೀನ ಬರಹಗಳು	ಪಿ. ಲಂಕೇಶ್
16. ಟೀಕೆ-ಟಿಪ್ಪಣಿ 3	200.00	ಸಮಕಾಲೀನ ಬರಹಗಳು	ಪಿ. ಲಂಕೇಶ್
17. ಸಾಹಿತಿ-ಸಾಹಿತ್ಯ	300.00	ಸಮಕಾಲೀನ ಬರಹಗಳು	ಪಿ. ಲಂಕೇಶ್
18. ರೂಪಕ ಲೇಖಕರು	70.00	ಪ್ರಸಿದ್ಧ ಲೇಖಕರ ಬದುಕು-ಬರಹ	ಪಿ. ಲಂಕೇಶ್
19. ಕಂಡದ್ದು ಕಂಡಹಾಗೆ	100.00	ಸಮಕಾಲೀನ ಬರಹಗಳು	ಪಿ. ಲಂಕೇಶ್
20. ಪ್ರಸ್ತುತ	80.00	ಸಮಕಾಲೀನ ಬರಹಗಳು	ಪಿ. ಲಂಕೇಶ್
21. ಹುಳಿಮಾವಿನ ಮರ	250.00	ಆತ್ಮಕಥೆ	ಪಿ. ಲಂಕೇಶ್
22. ಮುಸ್ಸಂಜೆಯ ಕಥಾ ಪ್ರಸಂಗ	250.00	ಕಾದಂಬರಿ	ಪಿ. ಲಂಕೇಶ್
23. ಬಿರುಕು	60.00	ಕಾದಂಬರಿ	ಪಿ. ಲಂಕೇಶ್
24. ಅಕ್ಕ	80.00	ಕಾದಂಬರಿ	ಪಿ. ಲಂಕೇಶ್
25. ಮಂಜು ಕವಿದ ಸಂಜೆ	85.00	ಕಥಾ ಸಂಕಲನ	ಪಿ. ಲಂಕೇಶ್
26. ಉಮಾಪತಿ ಸ್ಕಾಲರ್‌ಶಿಪ್ ಯಾತ್ರೆ	70.00	ಕಥಾ ಸಂಕಲನ	ಪಿ. ಲಂಕೇಶ್
27. ಕಲ್ಲು ಕರಗುವ ಸಮಯ	125.00	ಕಥಾ ಸಂಕಲನ	ಪಿ. ಲಂಕೇಶ್
28. ನಾನಲ್ಲ	60.00	ಕಥಾ ಸಂಕಲನ	ಪಿ. ಲಂಕೇಶ್
29. ಕೆರೆಯ ನೀರನು ಕೆರೆಗೆ ಚೆಲ್ಲಿ	50.00	ಕಥಾ ಸಂಕಲನ	ಪಿ. ಲಂಕೇಶ್
30. ಉಲ್ಲಂಘನೆ	80.00	ಕಥಾ ಸಂಕಲನ	ಪಿ. ಲಂಕೇಶ್
31. ಪಾಪದ ಹೂಗಳು	60.00	ಕಾವ್ಯ ಸಂಕಲನ	ಪಿ. ಲಂಕೇಶ್
32. ಬಿರುಕು	40.00	ನಾಟಕ	ಪಿ. ಲಂಕೇಶ್
33. ಸಂಕ್ರಾಂತಿ	45.00	ನಾಟಕ	ಪಿ. ಲಂಕೇಶ್
34. ತೆರೆಗಳು	50.00	ನಾಟಕ	ಪಿ. ಲಂಕೇಶ್
35. ಈಡಿಪಸ್ ಮತ್ತು ಅಂತಿಗೊನೆ	60.00	ನಾಟಕ	ಪಿ. ಲಂಕೇಶ್
36. ಟಿ. ಪ್ರಸನ್ನನ ಗೃಹಸ್ಥಾಶ್ರಮ	50.00	ನಾಟಕ	ಪಿ. ಲಂಕೇಶ್
37. ಗುಣಮುಖ	30.00	ನಾಟಕ	ಪಿ. ಲಂಕೇಶ್
38. ಕ್ರಾಂತಿ ಬಂತು ಕ್ರಾಂತಿ	40.00	ನಾಟಕ	ಪಿ. ಲಂಕೇಶ್

ಪ್ರತಿಗಳಿಗಾಗಿ 9880302817ಗೆ ಕರೆಮಾಡಿ



ಪೇಜಾವರರ ಅದೇ ರಾಗ, ಅದೇ ಭ್ರಾಂತು...

...ಾಗಿನೆಲೆ ಸ್ವಾಮಿಯವರು ಪೇಜಾವರರನ್ನು ...ಹಂಕಾರಿ ಎಂದದ್ದು ಸರಿಯೇ ಇದೆ. ಆದರೆ ...ಹಂಕಾರದ ಜತೆಗೆ ಕುಯುಕ್ತಿ ಮತ್ತು ಶ್ರೇಷ್ಠತೆಯ ... ಸೇರಿದರೆ ಅದೆಷ್ಟು ಪ್ರಳಯಾಂತಕವಾಗುತ್ತದೆ ...ವುದಕ್ಕೆ ಈ ಪೇಜಾವರರೇ ಸಾಕ್ಷಿ.

...ಮಾಮೂಲಿಯಾಗಿ ತನ್ನ ಹೇಳಿಕೆಯನ್ನು ತಿರುಚಲಾಗಿದೆ ... ರಾಜಕಾರಣಿಗಳು ಅರಚಿಕೊಳ್ಳುವಂತೆ ಯಾರೋ ... ಪ್ರಶ್ನೆಗೆ ತಾನು ಕೊಟ್ಟ ಉತ್ತರವನ್ನೇ ಕೆಲವರು ...ರಣ ದೊಡ್ಡ ಮಾಡುತ್ತಿದ್ದಾರೆ ಎಂದು ಪೇಜಾವರರು ...ಗೋಳಿಡುವಂತೆ ತೋರುತ್ತಿದ್ದಾರೆ. ಅವರು ಇಂತಹ ...ವಾಡಿರುವುದು ಇದೇ ಮೊದಲ ಬಾರಿಯೇನಲ್ಲ, ...ಶಪೂರ್ವಕವಾಗಿ ವಿವಾದ ಸೃಷ್ಟಿಸುವುದು, ಆನಂತರ ... ವಿಚಿತ್ರ ಸಮಜಾಯಿಷಿ ನೀಡುವುದು ಅವರ ಸಹಜ ...ಣ.

...ರುಬರ ವೈಷ್ಣವ ದೀಕ್ಷೆ ವಿಚಾರ ಸುಮ್ಮನೇ ...ಗೋಸ್ಕರ ಬಂದಂತಹದ್ದಾಗಿದ್ದರೆ 'ನನ್ನ ಮಾತಿಗೆ ...ಊ ನಾನು ಬದ್ಧ' ಎಂದು ನಂತರ ...ಂದು ತಿರುಗಿದ್ದೇಕೆ? ಅದನ್ನು ಸಮರ್ಥಿಸಲು ... ಮುಂದೆ ಕಥೆ ಪುರಾಣಗಳನ್ನು ಹಣೆಯ ...ದ್ದೇಕೆ? ಒಂದು ಬಲಾಢ್ಯ ಸಮುದಾಯವನ್ನು ...ು ಹಾಕಿಕೊಳ್ಳುತ್ತಿದ್ದೇನೆ ಎಂಬ ಅರಿವಿದ್ದೂ ...ಕುರುಬ ಹಾಗು ಹಾಲುಮತ ಸಂಸ್ಕೃತಿಯನ್ನು ...ು (ಕುರುಬರು ಕನಕನ ವೈಷ್ಣವ ತತ್ವವನ್ನು ...ಡಿಸಿಕೊಳ್ಳದಿದ್ದರೆ ಕನಕಪೀಠ ಹೆಸರನ್ನು ...ಮುವುದು ಸರಿಯಲ್ಲ ಅದನ್ನು ಹಾಲುಮತ ... ಎಂದು ಬದಲಿಸಿಕೊಳ್ಳಿ ಇತ್ಯಾದಿ) ...ದ್ದೇಕೆ? ವಿರೋಧ ತೀವ್ರಗೊಳ್ಳುವವರೆಗೆ ...ವ ಬದಲು ಬರೀ ಒಂದೇ ಮಾತಿನಲ್ಲಿ ...ಭದಲ್ಲೇ ವಿವಾದ ಹುಟ್ಟದಂತೆ ...ಕೊಳ್ಳಬಹುದಿತ್ತಲ್ಲ. ಮೊಂಡು ಹೇಳಿಕೆ ...ಣನೆಗಳ ಮೂಲಕ ವಿಚಾರವನ್ನು ತಾನೇ ...ಮು ಮಾಡಿ ಬಳಿಕ ಅದು ಕುತ್ತಿಗೆಗೆ ಬಂದಾಗ ...ಗಿ ಇದು ವಿಚಾರವಾದಿಗಳ ಕೃತ್ಯ ಎಂದು ...ಲೆಬ್ಬಿಸುವುದು ಎಷ್ಟು ಸರಿ?

...ೇಲ್ನೋಟಕ್ಕೆ ಪಾಪ ಬಡಪಾಯಿ ಪೇಜಾವರರು.. ... ಎಷ್ಟೋ ಜನ ಮರುಕ ಪಟ್ಟಿರಬಹುದಾದರೂ, ... ಸೂಕ್ಷ್ಮಗಳನ್ನು ಗಮನಿಸಬೇಕು. ಉಡುಪಿಯ ...ಟಕ್ಕೆ ಕಣ್ಣು ಹಾಕಿದ್ದ ಸಿಎಂ ಸಿದ್ದರಾಮಯ್ಯನವರ ... ಸಮುದಾಯದ ಪೂಜನೀಯ ಕನಕದಾಸರು ...ವರರ ಮಾಧ್ವ ಸಿದ್ಧಾಂತಪ್ರೇರಿತ ವೈಷ್ಣವ ಎಂಬುದನ್ನು ...ಮಕಾರಿಯಾಗಿ ಸಾರಿ ಕುರುಬ ಹಾಗು ಕೆಳವರ್ಗಗಳಲ್ಲಿ ...ಲ ಹುಟ್ಟಿಸಿದ ಯಶಸ್ಸಿನ ಖುಷಿಯಲ್ಲಿ ಪೇಜಾವರರಿ... ಇದು ವಾಸ್ತವ ಸಂಗತಿ. ಮುಂದೆ ಎಮೋಷನಲ್ ...ಮೇಲ್‌ಗೆ ಇದು ಉಪಯೋಗವಾಗಲೂಬಹುದು, ...ಗೆ ಗೊತ್ತು?

...ವ ಕುರುಬರೂ ಪೇಜಾವರರ ಜತೆಗಿಲ್ಲದಿದ್ದರೂ (...ಷ್ಟ ಈಶ್ವರಪ್ಪ ಕೂಡ) ತಾನೇ ಖುದ್ದಾಗಿ 'ಕುರುಬರು ...ರು, ಆ ಮೂಲಕ ನಮಗೆ ಹತ್ತಿರದವರು' ...ಣೇಪುರ ಕೆಡವಿದಾಗ ಇದು ಅವರಿಗೆ ಹೊಳೆದಿರಲಿಲ್ಲ ...ನ್ನುವ ಪೇಜಾವರರು ಬ್ರಾಹ್ಮಣರೇ ಆದ ಇತರ ...ರನ್ನು ಮೊದಲು ತಮ್ಮ ಹತ್ತಿರ ಬಿಟ್ಟುಕೊಳ್ಳಲಿ. ...ಯಲ್ಲೇ ಇರುವ ತಮ್ಮ ಮಾಧ್ವಸಿದ್ಧಾಂತದ ಅಷ್ಟ ...ೀಶರನ್ನೂ ಒಂದೆಡೆ ಕೂರಿಸಲೂ ಶಕ್ತರಿರದ ...ವರಿಗೆ ಈಗ ವೈಷ್ಣವತೆಯ ನೆಪದಲ್ಲಿ ಕುರುಬರು ... ಇದು ತಮಾಷೆಯಾಗಿದೆಯಲ್ಲವೇ? ಆ ಹೆಸರಲ್ಲಿ ...ಪಡೆದು ಅವರು ದಾಸರಾಗಬೇಕಂತೆ. ಭಲೇ..!!

ವಿವಾದ ಹಸಿಯಾಗಿರುವಾಗಲೇ ಪೇಜಾವರರು ...ದೀಪಾವಳಿ ದಿನದಂದು ಮಂಗಳೂರಿನ ಸಮಾರಂಭ ...ದಲ್ಲಿ ಇಂತಾದ್ದೇ ಇನ್ನೊಂದು ಅಸಂಬದ್ಧ ಹೇಳಿಕೆ ಕೊಟ್ಟಿದ್ದಾರೆ. ಹುಲಿಯನ್ನು ನಮ್ಮ ರಾಷ್ಟ್ರೀಯ ... ಎಂದುಕೊಂಡಿದ್ದಕ್ಕೇ ದೇಶದಲ್ಲಿ ಭಯೋತ್ಪಾದನೆ ...ಮಂತೆ; ಅದರ ಬದಲು ಗೋವನ್ನು ರಾಷ್ಟ್ರೀಯ ...ಮಾಡಿದ್ದರೆ ದೇಶದಲ್ಲಿ ಸುಖ ಶಾಂತಿ ನೆಲೆಸುತ್ತಿತ್ತಂತೆ. ...ಪ್ಪಕ್ಕೆ, ಪೇಜಾವರರಂತಹ ಬಾಗಾಕ್ಷ(ಪ್ರಾಣಿ)ರನ್ನು ...ಯ ಪ್ರಾಣಿ ಎಂದು ಯಾರೂ ಘೋಷಿಸದೋಗ ... ನಮ್ಮೆಲ್ಲರ ಭಾಗ್ಯವೇ ಸರಿ.

- ಪಿ ಪುತ್ತೂರು, ದಕ

ದೀಕ್ಷೆಯ ನೆಪದಲ್ಲಿ ಮೌಢ್ಯದ ಕೂಪಕ್ಕೆ ತಳ್ಳುವುದೇ ಪೇಜಾವರರ ಹುನ್ನಾರ

ಪತ್ರಿಕೆಯ ನವೆಂಬರ್ 13, 2013ರ ಸಂಚಿಕೆಯಲ್ಲಿ ಪ್ರಕಟಗೊಂಡ ಪೇಜಾವರರ ಬಗೆಗಿನ ಕುರುಬರ ಸ್ವಾಮೀಜಿಯ ಸಂದರ್ಶನ ಚೆನ್ನಾಗಿತ್ತು. ಪೇಜಾವರರಿಗೆ ನಿರಂಜನಪುರಿಸ್ವಾಮಿಯವರು ಸರಿಯಾಗಿಯೇ ಜಾಡಿಸಿದ್ದಾರೆ. ದೀಕ್ಷೆಯ ಹೆಸರಿನಲ್ಲಿ ನಮ್ಮನ್ನು ಮೌಢ್ಯದ ಕೂಪಕ್ಕೆ ತಳ್ಳುವುದೇ ಪೇಜಾವರರ ಹುನ್ನಾರ.

ಪೇಜಾವರರು ಪೂಜಿಸುವ ಶ್ರೀ ಕೃಷ್ಣ ಎಂತಹವನು ನೋಡಿ. ಕೃಷ್ಣ ಹೆಣ್ಣು ಮಕ್ಕಳು ಸ್ನಾನ ಮಾಡುತ್ತಿದ್ದಾಗ ಅವರ ಬಟ್ಟೆ ಕದಿಯುತ್ತಿದ್ದ. ಕೃಷ್ಣನ ಇನ್ನೊಂದು ಅವತಾರವಾದ ರಾಮ ಕಣ್ಣುಮುಚ್ಚಿ ಕುಳಿತು ತಪಸ್ಸು ಮಾಡುತ್ತಿದ್ದ ಶೂದ್ರ ಶಂಭುಕನನ್ನು ಕೊಂದು ಹಾಕಿದ್ದ. ಅದಕ್ಕೂ ಮುನ್ನ ಇದೇ ರಾಮ ಅಡಗಿ ಕುಳಿತು ವಾಲಿಯನ್ನೂ ಕೊಂದಿದ್ದ. ಎಕೆ 47 ಬಿಟ್ಟು ಮಿಕ್ಕೆಲ್ಲ ಆಯುಧಗಳನ್ನು ಇಟ್ಟುಕೊಂಡು ನಮ್ಮ ನಾಡಿನಲ್ಲಿ ಮೊದಲು ಅಭಯೋತ್ಪಾದನೆ ಶುರುಮಾಡಿದ್ದವರೇ ಈ ದೇವತೆಯರು.

ಆದ್ದರಿಂದಲೇ ನಾವು ಇವರನ್ನೆಲ್ಲ ತ್ಯಜಿಸಿ ನಮ್ಮ ಮನೆಗಳಲ್ಲಿ ಬುದ್ಧ, ಬಸವ, ಬಾಬಾ ಸಾಹೇಬ್, ಕುದ್ಮುಲ್ ರಂಗರಾಯರು, ಸ್ವಾಮಿ ವಿವೇಕಾನಂದ, ಶಿರ್ಡಿ ಬಾಬಾ, ಮದರ್ ತೇರೇಸಾ, ಯೇಸುಸ್ವಾಮಿಯನ್ನು ಪೂಜಿಸುತ್ತಿದ್ದೇವೆ.

ತಗಡು ವಾಚಸ್ಪತಿ ಗೋವಿಂದ ಆಚಾರ್ಯನ



ಬಾಯಿಯಲ್ಲಿ ಕನಕನ ಕಿಂಡಿಯನ್ನು ನವಗ್ರಹ ಕಿಂಡಿಯೆಂದು ಹೇಳಿಸಿ ಶಾಶ್ವತವಾಗಿ ಅದೇ ಹೆಸರನ್ನು ಕರೆಯುವಂತೆ ಹುನ್ನಾರ ನಡೆಸಿದ್ದರು ಪೇಜಾವರರು. ಗೌರಿ ಹೇಳಿದಂತೆ ಚುನಾವಣೆ ಬರುವಾಗ ಇಂತಹ ಕಿತಾಪತಿಯನ್ನು ಪೇಜಾವರರು ತುಂಬಾ ಸಲ ಮಾಡಿದ್ದಾರೆ. ಇದು ಬಿಜೆಪಿಯನ್ನು ಬೆಂಬಲಿಸುವ ಆರೆಸ್ಸೆಸ್‌ನ ಗುಟ್ಟಾದ ಅಜೆಂಡವಾಗಿದೆ.

ಪೇಜಾವರರಂತಹ ಕಿಡಿಗೇಡಿಗಳ ಬಗ್ಗೆ ಜಾಗ್ರತೆಯಿಂದಿರಬೇಕಾದ್ದು, ಪ್ರತಿಭಟಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

- ಗಣೇಶ್ ಕುಮಾರ್, ಬೋಳೂರು

ದೀಕ್ಷೆ ಎಂಬ ಭ್ರಮೆ

ಪೇಜಾವರರು ಕುರುಬರಿಗೆ ವೈಷ್ಣವ ದೀಕ್ಷೆ ಕೊಡುತ್ತಾರಂತೆ, ಕೊಡಲಿ ಬಿಡಿ. ಆದರೆ ಅದಕ್ಕೆ ಮೊದಲು ಈಗಿನ ಆಧುನಿಕ ಯುಗದಲ್ಲಿ ದೀಕ್ಷೆ ಎಂಬ ವಿಧಿಗೆ ಅರ್ಥ ಉಳಿದಿದೆಯೇ ಎಂಬುದನ್ನು ವಿಶ್ಲೇಷಿಸಿದರೆ ಒಳಿತು.

ವೈಷ್ಣವ ದೀಕ್ಷೆ ಪಡೆಯದಿರುವವನು ವಿಷ್ಣು-ಕೃಷ್ಣನನ್ನು ಭಕ್ತಿಯಿಂದ ಪೂಜಿಸಿದರೆ ಅದು ಆ ದೇವರಿಗೆ ಮುಟ್ಟುವುದಿಲ್ಲವೇ? ದೀಕ್ಷೆ ಪಡೆದವರ ಪೂಜೆಯನ್ನು ಮಾತ್ರ ತಾನು ಸ್ವೀಕರಿಸುವುದು ಎಂದು ದೇವರು ಎಂದಾದರೂ ಯಾರಿಗಾದರೂ ಹೇಳಿದ್ದಾನೆಯೇ?

ಇನ್ನು ದೀಕ್ಷೆಯೆಂದರೆ ಏನು? ಕೆಲವು ವಿಧಿ-ವಿಧಾನಗಳನ್ನು ಪೂರೈಸಿ ಇತರರಿಗಿಂತ ತಾನು ಸುಪೀರಿಯರ್ ಎಂದು ದೀಕ್ಷಾರ್ಥಿಗೆ ಭ್ರಾಂತಿ ಮೂಡಿಸುವ ಮನೋವೈಜ್ಞಾನಿಕ ತಂತ್ರವೇ ದೀಕ್ಷೆ. ಈ ದೀಕ್ಷೆಯಲ್ಲಿ ಎರಡು ವರ್ಗ ಮಾಡಬಹುದು. ಒಂದನೆಯದು ಕೇವಲ ಒಣ ಶಾಸ್ತ್ರಕ್ರಮ ಪೂರೈಸಿ ಕೇವಲ ಮಂತ್ರ-ತಂತ್ರಗಳ ಬಾಯಿಮಾತಿನ ದೀಕ್ಷೆ. ಇನ್ನೊಂದು ದೈಹಿಕ ನೋವು ಉಂಟುಮಾಡಿ ಕೊಡುವ ದೀಕ್ಷೆ. ಬಾಯಿ ಮಾತಿನ ದೀಕ್ಷೆ ಹುಟ್ಟಿಸುವ ಭ್ರಾಂತಿ ಕೆಲ ಸಮಯದ ನಂತರ ಅಳಿದುಹೋಗುತ್ತದೆ. ಆದರೆ ದೈಹಿಕ ನೋವು ಉಂಟುಮಾಡುವ ದೀಕ್ಷೆಯ ಮಾನಸಿಕ ಪರಿಣಾಮ ಸಾಯುವವರೆಗೆ ಉಳಿಯುತ್ತದೆ. ದೈಹಿಕ ನೋವಿನ ದೀಕ್ಷೆಗಳೆಂದರೆ, ಹಿಂದೂಗಳಲ್ಲಿಯ ತಪ್ತ ಮುದ್ರೆ ಅಥವಾ ಕೆಂಪಗೆ ಕಾಯಿಸಿದ ಸೌಟಿನಿಂದ ತೋಳಿಗೆ ಹಾಗೂ ಹೊಟ್ಟೆಗೆ ಚರ್ಮ ಸುಡುವಂತೆ ಹಾಕುವ ಮುದ್ರೆ,

ಮುಸ್ಲಿಂರ ಸುನ್ನತ್ ವಿಧಿ ಹಾಗೂ ಉತ್ತರ ಭಾರತೀಯ ಕಪಾಲಿಕ ಮತ್ತು ಶಾಕ್ತ ತಾಂತ್ರಿಕರು ದೇಹಕ್ಕೆ ಘಾಸಿ ಮಾಡಿಕೊಳ್ಳುವ ದೀಕ್ಷಾ-ವಿಧಿಗಳೂ ಈ ವರ್ಗದಲ್ಲೇ ಬರುತ್ತವೆ. ಇಂತಹ ನೋವುಕಾರಕ ದೀಕ್ಷೆಗಳು ಜನರ ಮನಸ್ಸಿನ ಮೇಲೆ ಆಳವಾದ ಪರಿಣಾಮ ಬೀರಿ ತಾನು ಇತರರಿಗಿಂತ ಧಾರ್ಮಿಕವಾಗಿ ಶ್ರೇಷ್ಠ ಮಾತ್ರವಲ್ಲ, ದೈಹಿಕವಾಗಿಯೂ ಭಿನ್ನ ಎಂಬುದನ್ನು ಅಡಿಗಡಿಗೆ ಜ್ಞಾಪಿಸಿ ಅವರಲ್ಲಿ ಒಂದು ಪ್ರತ್ಯೇಕತಾ ಮನೋಭಾವ ಜನ್ಮವಿಡೀ ಇರುವಂತೆ ಮಾಡುತ್ತದೆ.

ಪೇಜಾವರರು ಕೊಡುವ ದೀಕ್ಷೆ ಮೊದಲನೆಯ ವರ್ಗದ್ದಾದುದರಿಂದ ಅದು ಕೆಲದಿನಗಳ ಮಟ್ಟಿಗೆ ಕುರುಬರ ಮನಸಿನಲ್ಲಿ ಭ್ರಮೆ ಉಂಟು ಮಾಡಿ ನಂತರ ಮಾಯವಾಗುತ್ತದೆ ಅಷ್ಟೇ.

ನಾನು ರೇಖಿ ಎಂಬ ಚಿಕಿತ್ಸಾ ಪದ್ಧತಿಯನ್ನು ಕಲಿಯಲು ಹೋದಾಗ ಮೊದಲ ದಿನ ದೀಕ್ಷೆಯ ಶಾಸ್ತ್ರ ಪೂರೈಸಿದ ನಂತರ ರೇಖಿ 'ಗುರು' 'ನಾನು ಕೊಟ್ಟ ದೀಕ್ಷೆ ಎಷ್ಟು ಪವರ್‌ಫುಲ್ ಎಂದರೆ ಈ ರಾತ್ರಿ ನಿಮಗೆ ಜ್ವರ ಬರಬಹುದು, ದೇಹ ತುಂಬಾ ಹಗುರವೆನಿಸಬಹುದು, ವಿಚಿತ್ರ ಕನಸುಗಳು ಬೀಳಬಹುದು' ಎಂದು ಹೇಳಿದ್ದರು.

ಮರುದಿನ ಕ್ಲಾಸಿಗೆ ಬಂದವರು ಒಬ್ಬೊಬ್ಬರೇ ತಮಗಾದ ಒಂದೊಂದು ವಿಚಿತ್ರ ಅನುಭವಗಳನ್ನು ಹೇಳತೊಡಗಿದರು. ನನಗೆ ಅಂತಹ ಯಾವುದೇ ವಿಶಿಷ್ಟ ಅನುಭವ ಅರ್ಥಾತ್ ಭ್ರಮೆ ಉಂಟಾಗಿಲ್ಲ ಎಂದು ಧೈರ್ಯವಾಗಿ ನಾನು ಸತ್ಯ ಹೇಳಿದಾಗ ಸಿಕ್ಕಿಬಿದ್ದ ಕಳ್ಳನಂತೆ ಗುರುವಿನ ಮುಖ ಕಪ್ಪಗಾಯಿತು. ಕ್ಲಾಸು ಬಿಟ್ಟ ನಂತರ ಎಲ್ಲರೂ ನನಗೆ ಹೇಳಿದ್ದೇನೆಂದರೆ 'ನಮಗೂ ಯಾವುದೇ ವಿಶಿಷ್ಟ ಅನುಭವ ಆಗಿಲ್ಲ. ಆದರೆ ನಿಮ್ಮಂತೆ ಸತ್ಯ ಹೇಳಿದರೆ ಎಲ್ಲರೂ ನಮ್ಮನ್ನು ನೆಗೆಟಿವ್ ವ್ಯಕ್ತಿತ್ವದವರು ಹಾಗೂ ರೇಖಿ-ಚಾನೆಲ್ ಆಗಲು ಅನರ್ಹರು ಎಂದು ಭಾವಿಸಬಹುದು ಎಂಬ ಭಯದಿಂದ ನಾವೆಲ್ಲ ಸುಳ್ಳು ಹೇಳಬೇಕಾಯಿತು' ಎಂದು ಒಪ್ಪಿಕೊಂಡರು.

ದೀಕ್ಷೆಯೆಂಬ ಭ್ರಾಮಕ ಶಬ್ದ ಎಂತಹ ಆಪಾಥ ಭ್ರೂತಿಗಳನ್ನು ಸೃಷ್ಟಿಸುತ್ತದೆ ಎಂಬುದನ್ನು ನಾನು ರೇಖಿ ಯೆಂಬ ಖೋಟಾ ವಿದ್ಯೆಯ ಕ್ಲಾಸಿನಲ್ಲಿ ಪ್ರತ್ಯಕ್ಷ ಕಂಡಿದ್ದೆ.

- ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಸೌಜನ್ಯಳಿಗೆ ನ್ಯಾಯ ಸಿಗಲು ಸಾಧ್ಯವೇ?

ಇತ್ತೀಚೆಗೆ ಎರಡು ವಾರ ಗೌರಿ ಲಂಕೇಶ್ ಪತ್ರಿಕೆಯ ಸಂಚಿಕೆಗಳನ್ನು ಮುದ್ರಿಸದಂತೆ ಹಲವು ಅಧರ್ಮಿಗಳು ಬೆಂಗಳೂರಿನ ಪ್ರಿಂಟಿಂಗ್ ಪ್ರೆಸ್‌ಗೆ ಬೆದರಿಕೆ ಹಾಕಿದ ಘಟನೆ ಸ್ಥಳೀಯ ಪತ್ರಿಕೆಗಳಲ್ಲಿ ಓದಿ ಆಘಾತವಾಯಿತು. ಪ್ರಜಾಪ್ರಭುತ್ವದೊಳಗೊಂದು ಸ್ವತಂತ್ರ ವಸಾಹತು ಸ್ಥಾಪಿಸಿ ಈ ವಸಾಹತಿನ ಸರ್ವಾಧಿಕಾರತ್ವವನ್ನು ಉಳಿಸಿಕೊಳ್ಳಲು ಇನ್ನೊಂದು ಧರ್ಮದ ದೇವರನ್ನು ಬಂಡವಾಳ ಮಾಡಿ ದುರುಪಯೋಗಪಡಿಸಿಕೊಂಡ ಉದಾಹರಣೆಯು ಕರ್ನಾಟಕದ ಕುಡುಮಾಪುರದಲ್ಲಿ ಮಾತ್ರ ಇರುವುದು.



ಕರಾವಳಿಯಲ್ಲಿ ಇತರ ಎಲ್ಲಾ ಮೇಲ್ಜಾತಿಯವರ ಪಾಳೆಗಾರಿಕೆ ನಿಂತಿದ್ದರೂ ಜೈನರ ಪಾಳೆಗಾರಿಕೆ ನಿಂತಿಲ್ಲ. ಹಿಂದೂಗಳು ಮಾತ್ರ ಮಂಜುನಾಥ ಮತ್ತು ಕ್ಷೇತ್ರಪಾಲ ಅಣ್ಣಪ್ಪ ಸ್ವಾಮಿಗೆ ಭಯ ಪಡುವುದು. ಆದರೆ ಜೈನರಿಗೆ ಮಂಜುನಾಥ ಮತ್ತು ಅಣ್ಣಪ್ಪ ಸ್ವಾಮಿ ಬಗ್ಗೆ ಏನೂ ಭಯವಿಲ್ಲ (ನಾನೂ ಒಬ್ಬ ಜೈನ ಧರ್ಮೀಯ).

ನನ್ನದೇ ಸಂಬಂಧದ ಒಬ್ಬ ತುಳು ಜೈನ ವ್ಯಾಪಾರಿ ಹದಿನೈದು ವರ್ಷಗಳ ಹಿಂದೆ ಮಂಗಳೂರಿನ ಒಂದು ಬ್ಯಾಂಕಿನಿಂದ ದೊಡ್ಡ ಸಾಲ ಪಡೆದು ಬ್ಯಾಂಕ್ ಮ್ಯಾನೇಜರ್ ಮುಂದೆ ಪ್ರಾಮಾಣಿಕವಾಗಿ ಸಾಲ ಹಿಂತಿರುಗಿಸುತ್ತೇನೆ ಎಂದು ಮಂಜುನಾಥನ ಮೇಲೆ ಪ್ರಮಾಣ ಮಾಡಿದ್ದ. ಆದರೆ ಆನಂತರ ಮೋಸ ಮಾಡಿ ಮಂಗಳೂರಿನಿಂದ ತಲೆ ತಪ್ಪಿಸಿಕೊಂಡು ಓಡಿ ಬಂದು ಸುಳ್ಯದಲ್ಲಿ ಅಡಗಿ ಕುಳಿತು ಬ್ಯಾಂಕ್ ಮ್ಯಾನೇಜರನ ಜೀವನ ಹಾಳು ಮಾಡಿದ. ಸುಳ್ಳು ಪ್ರಮಾಣ ಮಾಡಿದ್ದಕ್ಕೆ ಮಂಜುನಾಥ ಅಥವಾ ಅಣ್ಣಪ್ಪ ಸ್ವಾಮಿ ಕಳೆದ ಹದಿನೈದು ವರ್ಷಗಳಿಂದ ಆ ಮೋಸಗಾರನಿಗೆ ಯಾವುದೇ ಶಿಕ್ಷೆ ಕೊಟ್ಟಿಲ್ಲ, ಗೊಡ್ಡು ಹಿಂದೂಗಳು ಮಾತ್ರ ಈ ಕ್ಷೇತ್ರದ ಆಣೆ-ಪ್ರಮಾಣಕ್ಕೆ ಹೆದರುವುದು.

ಈ ಹಿಂದೆ ಈ ಕ್ಷೇತ್ರದಲ್ಲಿ ಅನ್ಯಧರ್ಮದ ಬಾಹುಬಲಿ ಮೂರ್ತಿ ಸ್ಥಾಪಿಸಬಾರದೆಂದು 1968 ರಲ್ಲಿಯೇ ಅಷ್ಟಮಂಗಲ ಪ್ರಶ್ನೆಯಲ್ಲಿ ಅಣ್ಣಪ್ಪ ಸ್ವಾಮಿ ದೈವದ ಆದೇಶ ಕಂಡುಬಂದಿದ್ದರೂ, 1973 ರಲ್ಲಿ ಇಲ್ಲಿ 39 ಅಡಿ ಎತ್ತರದ ಬಾಹುಬಲಿಮೂರ್ತಿ ಸ್ಥಾಪಿಸಲಾಗಿತ್ತು. ಅಂದರೆ ನಾಲ್ಕು ದಶಕಗಳ ಹಿಂದೆಯೇ ಮೊಟ್ಟ ಮೊದಲ ಬಾರಿಗೆ ಜೈನ ಧರ್ಮಾಧಿಕಾರಿಗಳು ಅಣ್ಣಪ್ಪ ಸ್ವಾಮಿಗೇ ಚಾಲೆಂಜ್ ಮಾಡಿದ್ದರು. ಇದಕ್ಕೆ ಕಾರಣ ತಮ್ಮ ಧರ್ಮದವರು ಹಿಂದೂ ದೇವರ ಶಕ್ತಿಗಿಂತಲೂ ಮಿಗಿಲಾದವರು ಎಂಬ ಹುಂಬ ಧೈರ್ಯ.

ಜೈನರೆಲ್ಲಾ ತಾವೂ ಧರ್ಮಾಧಿಕಾರಿಯ ಜಾತಿಯವರಾದುದರಿಂದ ತಾವು ಎಷ್ಟೇ ದೊಡ್ಡ ಪಾಪ ಮಾಡಿದರೂ, ಎಂತಹದ್ದೇ ಸುಳ್ಳು ಪ್ರಮಾಣ ಮಾಡಿದರೂ ತಮಗೆ ಮಂಜುನಾಥ ದೇವರಿಂದ ಅಥವಾ ಅಣ್ಣಪ್ಪ ಸ್ವಾಮಿಯಿಂದ ಏನೂ ಭಯವಿಲ್ಲ ಎಂದು ಭಾವಿಸುತ್ತಾರೆ. ಅದರ ಪರಿಣಾಮವೇ ಉಜಿರೆ-ಕುಡುಮಾಪುರದಲ್ಲಿ ಜೈನರ ಅಟ್ಟಹಾಸ.


ಎಲ್ಲಾ ಪಕ್ಷದ ರಾಜಕಾರಣಿಗಳೂ ಇವರ ಅಡಿಯಾಳುಗಳು. ಭಾರತದ ಎಲ್ಲೆಡೆ ದಿನಕ್ಕೆ ಕೇವಲ ನೂರು ಯಾತ್ರಿಗಳು ಬರುವ ಕ್ಷೇತ್ರದಲ್ಲೂ ಪೊಲೀಸ್ ಸ್ಟೇಷನ್ ಇದ್ದೇ ಇರುತ್ತದೆ. ಆದರೆ ಈ ಕ್ಷೇತ್ರಕ್ಕೆ ದಿನಕ್ಕೆ ಐದು ಸಾವಿರ ಯಾತ್ರಿಕರು ಬರುತ್ತಿದ್ದರೂ ಅಲ್ಲಿ ಒಂದು ಪೊಲೀಸ್ ಔಟ್‌ಪೋಸ್ಟ್ ಸಹ ತೆರೆಯದಂತೆ ಸರ್ವಾಧಿಕಾರಿಯ ಆದೇಶವನ್ನು ಪ್ರಜಾಪ್ರಭುತ್ವದ ರಾಜಕಾರಣಿಗಳು ಕಳೆದ 40 ವರ್ಷಗಳಿಂದ ಪಾಲಿಸಿಕೊಂಡು ಬಂದಿದ್ದಾರೆ. ಈ ದೇವಸ್ಥಾನವು ಮುಜರಾಯಿ ಇಲಾಖೆಯಡಿ ಬಾರದಂತೆ 35 ವರ್ಷಗಳ ಹಿಂದೆ ಹೈಕೋರ್ಟಿನಲ್ಲಿ ಸರ್ಕಾರವೇ ಸೋಲುವಂತೆ ನೋಡಿಕೊಂಡಿದ್ದು ಸಹ ಇದೇ ಗುಲಾಮ ರಾಜಕಾರಣಿಗಳು.

ಇಂತವರಿರುವಲ್ಲಿ ಸೌಜನ್ಯಳಿಗೆ, ಪದ್ಮಲತಾಳಿಗೆ ಮತ್ತು ವೇದವಲ್ಲಿಗೆ ನ್ಯಾಯ ಸಿಗಲು ಎಂದಾದರೂ ಸಾಧ್ಯವೇ?

- ಪ್ರಶೀಶ್ ಕೆ ಪಡಿವಾಲ್, ಸುಳ್ಯ



ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.



ಕಳೆದ ವಾರದ ಸಂಚಿಕೆಯಲ್ಲಿ ಕೃಷ್ಣಮೂರ್ತಿ ಅವರನ್ನು ಕರ್ನಾಟಕ ಕುರುಬರ ಪ್ರದೇಶ ಸಂಘದ ಅಧ್ಯಕ್ಷ ಎಂದು ಮುದ್ರಿಸಲಾಗಿತ್ತು. ಆದರೆ ಕೃಷ್ಣಮೂರ್ತಿಯವರು ಆ ಸಂಘದ ಹಲವು ನಿರ್ದೇಶಕರಲ್ಲಿ ಒಬ್ಬರು.

- ಸಂ

Registered No.KA/RNP/BGS/2036/2011-13 Posted at : GPO. Bangalore-01. Friday R B P LANKESH, Kannada Weekly Price Rs. 14/-

ಕನ್ನಡ ಮತ್ತು ಚಿತ್ರರಂಗ

ಚರಿತ್ರೆ, ಕಾದಂಬರಿ




ಸಿನಿಮಾ ಮೂಲಕ ಕನ್ನಡನಾಡಿನ ಘನತೆ ಹೆಚ್ಚಿಸಿ ವೀರರನ್ನು ಪರಿಚಯಿಸುವ ನಿಟ್ಟಿನಲ್ಲಿ ಒಂದು ಕಾಲದಲ್ಲಿ 'ಮಯೂರ', 'ರಣಧೀರ ಕಂಠೀರವ', 'ಅಮರಶಿಲ್ಪಿ ಜಕಣಾಚಾರಿ', 'ವಿಜಯನಗರದ ವೀರಪುತ್ರ', 'ಶ್ರೀ ಕೃಷ್ಣದೇವರಾಯ'ದಂತಹ ಸಿನಿಮಾಗಳು ತಯಾರಾಗಿದ್ದು ಈಗ ಇತಿಹಾಸ. ಈ ಬಗೆಯ ಸಿನಿಮಾಗಳು ಕನ್ನಡಿಗರ ಮನಸುಗಳಲ್ಲಿ ಉಂಟುಮಾಡಿದ ಸಂಚಲನ ಯಾವತ್ತಿಗೂ ಮೆಚ್ಚುವಂಥದ್ದೇ. ಈಚೆಗಂತೂ 'ಸಂಗೊಳ್ಳಿ ರಾಯಣ್ಣ' ಹೊರತುಪಡಿಸಿದರೆ ಇಂತಹ ದೇಸಿತನದ ಚಿತ್ರಗಳೇ ಇಲ್ಲವಾಗಿದ್ದವು.

ಇತ್ತೀಚಿನ ಬಹುತೇಕ ಸಿನಿಮಾಗಳಲ್ಲಿ ಕನ್ನಡತನವೇ ಕಾಣುತ್ತಿಲ್ಲ ಎನ್ನಬಹುದು. ಒಂದೇ, ಬಗೆಯ ಹೊಡಿ ಬಡಿ ಕಥೆಯುಳ್ಳ, ಬೇರೆ ಬೇರೆ ಶೀರ್ಷಿಕೆಯ ಆಕ್ಷನ್ ಸಿನಿಮಾಗಳಲ್ಲಾಗಲೀ, ಅದೇ ಮಳೆ, ಮಂಜು, ಹಸಿರೇ ತುಂಬಿರುವ ಪ್ರೀತಿಯಾಧಾರಿತ ಸಿನಿಮಾಗಳಲ್ಲಾಗಲೀ ಅಥವಾ ಬರೀ ಬಾಡಿ ಲಾಂಗ್ವೇಜ್, ಮ್ಯಾನರಿಸಂ ಇಲ್ಲವೇ ಬಡ ಬಡ ಮಾತುಗಳಿಂದ ಕೂಡಿರುವ ಕಾಮಿಡಿ ಚಿತ್ರಗಳಿಂದಾಗಲೀ ನಾವು ಹೆಚ್ಚಿಗೇನನ್ನೂ ನಿರೀಕ್ಷಿಸಲು ಸಾಧ್ಯವಾಗುತ್ತಿಲ್ಲ.

ಇವತ್ತಿನ ಚಿತ್ರಗಳಲ್ಲಿ ಕನ್ನಡ ಸಂಸ್ಕೃತಿಯ ಕೊರತೆಯೊಂದೇ ದಟ್ಟವಾಗಿ ಎದ್ದು ಕಾಣುವಂಥದು. ಇವತ್ತಿಗೂ ಮಲಯಾಳಂ, ಮರಾಠಿ, ತಮಿಳು ಚಿತ್ರಗಳಲ್ಲಿ ಅಲ್ಲಿಯ ಜನರ ಜೀವನಶೈಲಿ, ಸಂಸ್ಕೃತಿ, ಉಡುಗೆತೊಡುಗೆ, ಆಚಾರವಿಚಾರ ತುಂಬಿರುವುದನ್ನು ನಾವು ಗಮನಿಸಬಹುದು.


ಅಂದಮಾತ್ರಕ್ಕೆ ಕನ್ನಡ ಚಿತ್ರಗಳಲ್ಲಿ ಕನ್ನಡತನವೇ ಇಲ್ಲವೆಂದಲ್ಲ, ಗಿರೀಶ್ ಕಾಸರವಳ್ಳಿ, ಪಿ. ಶೇಷಾದ್ರಿ, ಬಿ.ಸುರೇಶ ತರಹದ ನಿರ್ದೇಶಕರ ಕಲಾತ್ಮಕ ಚಿತ್ರಗಳಲ್ಲಿ ಎಲ್ಲವೂ ಇರುತ್ತದೆ. ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿಗಳೂ ಸಿಗುತ್ತವೆ. ಕರ್ನಾಟಕದ ಹೆಸರು, ಕನ್ನಡ ನೆಲದ ಸಂಸ್ಕೃತಿ ಎಲ್ಲ ಕಡೆಯೂ ಮೆಚ್ಚುಗೆ ಪಡೆಯುತ್ತದೆ. ಆದರೆ, ಸಮಸ್ಯೆ ಇರೋದು ಇಂತಹ ಕಲಾತ್ಮಕ ಚಿತ್ರಗಳು ಸಮರ್ಪಕವಾಗಿ ಜನರಿಗೆ ತಲುಪದೇ ಇರುವುದು. ಜೊತೆಗೆ ಎಷ್ಟೋ ಸಲ ಪ್ರಶಸ್ತಿಗೆಂದೇ ನಿರ್ಮಾಣವಾಗುವ ಕೆಲವು ಚಿತ್ರಗಳ ಮಿತವೇಗವನ್ನು ಪ್ರೇಕ್ಷಕ ಸಹಿಸಿಕೊಳ್ಳುವಲ್ಲಿ ವಿಫಲನಾಗೋದು!



ಶ್ರೀಕೃಷ್ಣ ಆಲನಹಳ್ಳಿ


ಮತ್ತೆ ಹಿಂದಕ್ಕೆ ತಿರುಗಿ ನೋಡಿದರೆ, ಪುಟ್ಟಣ್ಣ ಕಣಗಾಲ್ ತರಹದವರು ಕಾದಂಬರಿಗಳನ್ನು ಆಯ್ಕೆ ಮಾಡಿಕೊಂಡು ಸಿನಿಮಾ ಮಾಡುತ್ತಿದ್ದ ಕಾಲವೊಂದಿತ್ತು, ಆ ಪ್ರಯತ್ನದಲ್ಲಿ ಅನೇಕ ಸಿನಿಮಾಗಳು ಬಂದಿದ್ದುಂಟು, ಗೆದ್ದಿದ್ದುಂಟು. ಕಾದಂಬರಿ ಓದುವ ಹವ್ಯಾಸವಿದ್ದ ಪಾರ್ವತಮ್ಮ ರಾಜ್‌ಕುಮಾರ್ ತಮಗಿಷ್ಟವಾದ ಕಾದಂಬರಿಯನ್ನು ಚಿ.ಉದಯ ಶಂಕರ್ ಅವರಿಗೆ ಕೊಟ್ಟು ಸಿನಿಮಾಗೆ ಬೇಕಾದ ಹಾಗೆ ಸ್ಕ್ರಿಪ್ಟ್ ತಯಾರಿಸುವಂತೆ ಹೇಳುತ್ತಿದ್ದರಂತೆ.

ಆನಂತರ ದೊರೈ-ಭಗವಾನ್ ತರಹದ ನಿರ್ದೇಶಕರು ಸಿನಿಮಾ ಮಾಡುತ್ತಿದ್ದರಂತೆ. ರಾಜಕುಮಾರ್ ಅವರ ಸ್ವಂತ ಬ್ಯಾನರಿನಡಿ ನಿರ್ಮಾಣವಾದ ಬಹುತೇಕ ಸಿನಿಮಾಗಳ ಯಶಸ್ಸಿನ ಹಿಂದೆ ಈ ಸೂತ್ರ ಅಡಗಿರುವುದನ್ನು









ನಾವಿಲ್ಲಿ ಗಮನಿಸಬೇಕು. ಹಾಗೆಯೇ, ಕಥೆಗಾರ ಶ್ರೀಕೃಷ್ಣ ಆಲನಹಳ್ಳಿಯವರ 'ಪರಸಂಗದ ಗೆಂಡೆತಿಮ್ಮ', 'ಭುಜಂಗಯ್ಯನ ದಶಾವತಾರ' ಕಾದಂಬರಿಗಳು ಸಿನಿಮಾಗಳಾಗಿ ಯಶಸ್ವಿಯಾಗಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಇದು ಒಂದು ಕಡೆಯಾದರೆ, ಇತ್ತೀಚಿನ ದಶಕಗಳಲ್ಲಿ ಕಾದಂಬರಿಯಾಧಾರಿತ ಚಿತ್ರವೆಂದರೆ ಅದು ಪ್ರಶಸ್ತಿಗೋಸ್ಕರ ತಯಾರಾದ ಸಿನಿಮಾ ಅನ್ನುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ನಿಜಕ್ಕೂ ಒಳ್ಳೆಯ ಬೆಳವಣಿಗೆಯಲ್ಲ, ಕೆ.ಶಿವರಾಮ ಕಾರಂತರ ಕಾದಂಬರಿ ಆಧರಿಸಿ ತಯಾರಾದ 'ಚಿಗುರಿದ ಕನಸು' ಚಿತ್ರ ಅಷ್ಟಾಗಿ ಕಲೆಕ್ಷನ್ ಗಳಿಸಲಿಲ್ಲ, ಆನಂತರ ನಾಗಾಭರಣರಂಥವರೂ ಕೂಡ ಕಂಗೆಟ್ಟರು. 'ಕಲ್ಲರಳಿ ಹೂವಾಗಿ' ಕೂಡಾ ಗಲ್ಲಾಪೆಟ್ಟಿಗೆ ತುಂಬಲಿಲ್ಲ, ಅದೇ ರೀತಿ 'ಗಂಡುಗಲಿ ಕುಮಾರರಾಮ' ಕೂಡ ನಿರ್ಮಾಪಕ ಪಟ್ಟಾಭಿರಾಮ್ ಅವರಿಗೆ ನಷ್ಟ ತಂದೊಡ್ಡಿತು. 'ಕಾನೂರು ಹೆಗ್ಗಡತಿ', 'ಮತದಾನ'ದಂಥ ಚಿತ್ರಗಳು ಕೀರ್ತಿಗೆ ಮೀಸಲಾದವಷ್ಟೇ ವಿನಃ ಕಮರ್ಷಿಯಲ್ಲಾಗಿ ಥಿಯೇಟರುಗಳಲ್ಲಿ ಹಣ ಗಳಿಸಲಿಲ್ಲ.

ಚಿಂತಿಸಬೇಕಾದ ವಿಷಯವೆಂದರೆ, ಇವತ್ತಿನ ನಿರ್ದೇಶಕರ ಪೈಕಿ ಪುಸ್ತಕ ಓದುವ ಹವ್ಯಾಸವಿರುವವರೇ ಕಡಿಮೆ. ಹೀಗಿರುವಾಗ ಇವರು ಕಾದಂಬರಿ ಓದಿ, ಅದನ್ನು ಸಿನಿಮಾ ಮಾಡುತ್ತಾರೆ ಅಂತ ನಿರೀಕ್ಷೆ ಇಟ್ಟುಕೊಳ್ಳುವುದು ದಡ್ಡತನವಾಗುತ್ತದೆ. ತಾವು ಕಾದಂಬರಿಯಾಧರಿಸಿ ಸಿನಿಮಾ ಮಾಡುವುದಾದರೆ, ಪೂರ್ಣಚಂದ್ರ ತೇಜಸ್ವಿಯವರ 'ಕರ್ವಾಲೋ' ಕಾದಂಬರಿಯನ್ನು ಕೈಗೆತ್ತಿಕೊಳ್ಳುವೆ ಅಂತ ಒಮ್ಮೆ ಯೋಗರಾಜ ಭಟ್ಟರು ಎಲ್ಲೋ ಹೇಳಿಕೊಂಡಿದ್ದರು. ಅಂತಹ ಆಲೋಚನೆಗಳು ಕಾರ್ಯರೂಪಕ್ಕೆ ಬಂದರೆ ಕನ್ನಡ ಚಿತ್ರರಂಗಕ್ಕೂ ಹೊಸ ದಿಕ್ಕು ತೆರೆಯುತ್ತದೆ. ಕಥೆಯೇ ಇಲ್ಲದೆ, ಬರೀ ಮಾತುಕತೆಯಿಂದಲೇ ತುಂಬಿಹೋಗಿರುವ ಇವತ್ತಿನ ಎಷ್ಟೋ ಸಿನಿಮಾಗಳು ಧ್ವನಿ ಪಡೆದುಕೊಳ್ಳುತ್ತವೆ. ಕಥೆಗಳ ಕಣಜದಂತಿರುವ ಕನ್ನಡ ಕಥಾಸಾಹಿತ್ಯದತ್ತ ಸಿನಿಮಾ ಮಂದಿ ಗಮನ ಹರಿಸಿ ಉತ್ತಮ ಕಥೆಗಳನ್ನು ಆಯ್ಕೆ ಮಾಡಿಕೊಂಡು ಸಿನಿಮಾವಾಗಿಸಿದ್ದಲ್ಲಿ ಚಿತ್ರರಂಗಕ್ಕೆ ಮತ್ತೊಂದಿಷ್ಟು ಜೀವಂತಿಕೆ ದೊರಕಿದಂತಾಗುತ್ತದೆ ಅಲ್ಲವೇ?

ಪರಭಾಷಾ ಚಿತ್ರಗಳನ್ನು ರೀಮೇಕ್ ಮಾಡುವ ಮೂಲಕ ಎರವಲು ಸಂಸ್ಕೃತಿಯನ್ನು ಕನ್ನಡಿಗರ ಮೇಲೆ ಹೇರುವುದು ತಪ್ಪುತ್ತದೆ ಅಲ್ಲವೇ?

ಚಿತ್ರ, ಗೀತೆ

ಇನ್ನು, ಕನ್ನಡ ಮಣ್ಣಿನ ಹಿರಿಮೆಗರಿಮೆಗಳನ್ನು ಎತ್ತಿ ಹಿಡಿಯುವ ಹಾಡುಗಳಿಗೇನೂ ಬರವಿಲ್ಲ, ಇವತ್ತಿಗೂ 'ಆಕಸ್ಮಿಕ' ಚಿತ್ರದ ಹಂಸಲೇಖಾ ರಚಿಸಿ, ರಾಜಕುಮಾರ್ ಹಾಡಿರುವ 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಹಾಡು ಎಲ್ಲರಿಗೂ ಪ್ರಿಯವಾಗುತ್ತದೆ. ಅದೇ ರೀತಿ 'ಜೀವನದಿ' ಚಿತ್ರದ 'ಕನ್ನಡ ನಾಡಿನ ಜೀವನದಿ ಈ ಕಾವೇರಿ' ಇರಬಹುದು, 'ಸೋಲಿಲ್ಲದ ಸರದಾರ' ಚಿತ್ರದ 'ಈ ಕನ್ನಡ ಮಣ್ಣನು ಮರಿಬೇಡ ಓ ಅಭಿಮಾನಿ', 'ಬೆಳ್ಳಿ ಕಾಲುಂಗುರ' ಚಿತ್ರದ 'ಕೇಳಿಸದೆ ಕಲ್ಲುಕಲ್ಲಿನಲಿ ಕನ್ನಡ ನುಡಿ', 'ವಿಜಯನಗರದ ವೀರಪುತ್ರ' ಚಿತ್ರದ 'ಅಪಾರ ಕೀರ್ತಿ ಗಳಿಸಿ ಮೆರೆವ ಭವ್ಯ ನಾಡಿದು', 'ಕೃಷ್ಣ ರುಕ್ಮಿಣಿ' ಚಿತ್ರದ 'ಕರ್ನಾಟಕದ ಇತಿಹಾಸದಲಿ', 'ಗಂಧದ ಗುಡಿ' ಚಿತ್ರದ 'ನಾವಾಡುವ ನುಡಿಯೇ ಕನ್ನಡ ನುಡಿ', 'ಸಮರ' ಚಿತ್ರದ 'ಕನ್ನಡದ ಕುವರನು ನಾನೇ', 'ಮಲ್ಲ' ಚಿತ್ರದ 'ಕರುನಾಡೇ' ಗೀತೆ ಸೇರಿದಂತೆ ಅನೇಕ ಗೀತೆಗಳನ್ನು ಹೀಗೆ ಉದಾಹರಿಸಬಹುದು.


ಒಂದು ತಮಾಷೆಯೆಂದರೆ, ಕೆಲವೊಮ್ಮೆ ಕನ್ನಡ ಕುರಿತ ಹಾಡಿಗೂ, ಆ ಚಿತ್ರದ ಕಥೆಗೂ, ಅಲ್ಲಿಯ ಪಾತ್ರಗಳಿಗೂ ಸಂಬಂಧವೇ ಇರುವುದಿಲ್ಲ, ಜನರಲ್ಲಿ ಕ್ರೇಜ್ ಹುಟ್ಟಿಸುವ ಸಲುವಾಗಿ, ನಟರ ಇಮೇಜು ಕಾಪಾಡಿಕೊಳ್ಳುವ ಸಲುವಾಗಿ ಕೆಲವೊಮ್ಮೆ ಒತ್ತಾಯಪೂರ್ವಕವಾಗಿ ತುರುಕಿರುತ್ತಾರೆ. ಅಂತಹ ಪ್ರಯೋಗಗಳೂ ಕ್ಲಿಕ್ ಆಗಿದ್ದುಂಟು!




ಅದೇರೀತಿ ಕರ್ನಾಟಕದ ಸಂಸ್ಕೃತಿಯನ್ನು ಬಿಂಬಿಸುವ ಸಿದ್ಧಗೀತೆಗಳನ್ನು ಸಿನಿಮಾಗಳಿಗೆ ಬಳಸಿಕೊಳ್ಳಲಾಗಿದೆ. ಅವು ಜಾನಪದ ಗೀತೆಗಳಿರಬಹುದು, ಗೇಯ ಪದಗಳಿರಬಹುದು, ಬಿಡಿಕಟ್ಟು ಕಾವ್ಯದ ತುಣುಕುಗಳಿರಬಹುದು, ಸೋಬಾನೆಯಂಥ ಪದಗಳಿರಬಹುದು. ಹಾಗೇನೆ, ಸಂತರ, ದಾಸರ, ಶರಣರ ಸಮೃದ್ಧ ಕೃತಿಗಳಿರಬಹುದು. ಜನಪದಗೀತೆಗಳ ಗರ್ಭದಲ್ಲೇ ಕನ್ನಡನಾಡಿನ ಸಂಸ್ಕೃತಿ, ಆಚರಣೆ, ಪರಂಪರೆ, ಬದುಕಿನ ಬೆರಗುಗಳು ಅಡಗಿರುತ್ತವೆ. ಅಂತಹ ಗೀತೆಗಳು ಚಿತ್ರಗಳಲ್ಲಿ ಬಳಕೆಯಾದಾಗ ಹೊಸ ಹುಟ್ಟು ಪಡೆಯುವ ಮೂಲಕ ಜನರಲ್ಲಿ ಹೊಸ ಸಂಚಲನ ಉಂಟುಮಾಡುತ್ತವೆ. ಉದಾ: 'ಸೇವಂತಿ ಸೇವಂತಿ' ಚಿತ್ರಕ್ಕಾಗಿ ಬಳಸಿಕೊಂಡ ಗೀತೆಗಳಿರಬಹುದು, 'ಜೋಗಿ' ಚಿತ್ರದ ಸಂಗೀತದಲ್ಲಿ ಬಳಸಿಕೊಂಡ ಜಾನಪದ ಶೈಲಿ ಇರಬಹುದು ಅಥವಾ ಸ್ವತಃ ಹಂಸಲೇಖಾ ಅವರೇ ಬರೆದು, ರಾಗ ಸಂಯೋಜಿಸಿದ ಜನಪದ ಶೈಲಿಯ ಸಾವಿರಾರು ಹಾಡುಗಳಿರಬಹುದು.

ಇನ್ನು, 'ಸಂತ ಶಿಶುನಾಳ ಶರೀಫ', 'ಭಕ್ತ ಕನಕದಾಸ'ದಂಥ ಚಿತ್ರಗಳ ಮೂಲಕ ಒಬ್ಬ ದಾರ್ಶನಿಕ ಸಂತನ ಜೀವನ ಕಥೆ ಹೇಳುವ ಮೂಲಕ ಆತನ ಕೃತಿಗಳನ್ನೂ ಸಿನಿಮಾದಲ್ಲಿ ಬಳಸಲು ಅವಕಾಶ ಸಿಗುತ್ತದೆ. ಆ ಮೂಲಕ ತತ್ವಪದಗಳಿಗೆ ಹೊಸ ಮಾಧ್ಯಮ ದೊರಕಿದಂತಾಗುತ್ತದೆ.

ಹಾಗೇನೆ, ನಾಟಕಗಳನ್ನು ಚಲನಚಿತ್ರವಾಗಿ ರೂಪಾಂತರಿಸಿದ ಸಂದರ್ಭದಲ್ಲಿಯೂ ಚಿತ್ರರಂಗಕ್ಕೆ ಹೊಸಬಗೆಯ ಗೀತೆಗಳಿಗೆ ಅವಕಾಶವಿರುತ್ತದೆ. ಗಿರೀಶ್ ಕಾರ್ನಾಡರ 'ನಾಗಮಂಡಲ' ನಾಟಕವನ್ನು ಸಿನಿಮಾ ಮಾಡುವ ಸಂದರ್ಭದಲ್ಲಿ ಮೂಲ ನಾಟಕಕ್ಕಾಗಿ ಗೋಪಾಲ ವಾಜಪೇಯಿಯವರು ಬರೆದಿದ್ದ ಕೆಲವು ಹಾಡುಗಳನ್ನು ಸಿನಿಮಾಗೂ ಬಳಸಿಕೊಳ್ಳಲಾಗಿದ್ದನ್ನು ಇಲ್ಲಿ ನೆನೆಯೋಣ.



ಜೊತೆಗೆ, ಕವಿಗಳ ಸಿದ್ಧ ಸಾಹಿತ್ಯವನ್ನು ಸಿನಿಮಾಗೆ ಬಳಸಿಕೊಂಡ ಉದಾಹರಣೆಗಳುಂಟು. ಬೇಂದ್ರೆಯವರ 'ಇಳಿದು ಬಾ ತಾಯಿ', ಕುವೆಂಪು ಅವರ 'ತೆರೆದಿದೆ ಮನೆ ಓ ಬಾ ಅತಿಥಿ'ಯಿಂದ ಹಿಡಿದು ಮೊನ್ನೆಮೊನ್ನೆಯ 'ಆಕ್ಸಿಡೆಂಟ್' ಚಿತ್ರಕ್ಕಾಗಿ ಬಿ.ಆರ್.ಲಕ್ಷ್ಮಣ ರಾವ್ ರಚಿಸಿರುವ 'ಬಾ ಮಳೆಯೇ ಬಾ'ವರೆಗೆ ಅನೇಕ ಗೀತೆಗಳನ್ನು ಹೀಗೆ ಬಳಸಿಕೊಳ್ಳಲಾಗಿದೆ. ಈ ಗೀತೆಗಳು ಗಂಭೀರ ಕವಿಗಳ ಹಾಗೂ ಚಿತ್ರರಂಗದ ನಡುವಿನ ಸೇತುವೆಯಾಗಿ ನಿಲ್ಲುತ್ತವೆ. 'ಮಾನಸ ಸರೋವರ' ಚಿತ್ರಕ್ಕಾಗಿ ಬಳಸಿಕೊಂಡ ಜಿ.ಎಸ್.ಶಿವರುದ್ರಪ್ಪ ಅವರ 'ಕವಿ-ವೇದಾಂತಿ' ಕವಿತೆ ಇವತ್ತಿಗೂ ಜನಪ್ರಿಯ. ಹಾಗೇನೆ, ಗೋಪಾಲಕೃಷ್ಣ ಅಡಿಗರ 'ಮೋಹನ ಮುರಳಿ' ಕವಿತೆಯನ್ನು 'ಅಮೆರಿಕಾ ಅಮೆರಿಕಾ' ಚಿತ್ರಕ್ಕಾಗಿ ನಾಗತಿಹಳ್ಳಿ ಚಂದ್ರಶೇಖರ್ ಬಳಸಿಕೊಂಡಿದ್ದರು. ಜೊತೆಗೆ, ಸಿದ್ಧಲಿಂಗಯ್ಯ ಅವರ 'ಸುಟ್ಟಾವು ಬೆಳ್ಳಿಕಿರಣ' ಕವಿತೆಯನ್ನು 'ಬಾ ನಲ್ಲೆ ಮಧುಚಂದ್ರಕೆ' ಚಿತ್ರಕ್ಕಾಗಿಯೂ, ಜಿ.ಪಿ.ರಾಜರತ್ನಂ ಅವರ 'ಯೆಂಡ್ಕುಡ್ಕ ರತ್ನ'ವನ್ನು 'ಎ' ಚಿತ್ರಕ್ಕಾಗಿಯೂ, ಕೆ.ಎಸ್.ನ ಅವರ ಗೀತೆಗಳನ್ನು 'ಮೈಸೂರು ಮಲ್ಲಿಗೆ' ಚಿತ್ರಕ್ಕಾಗಿಯೂ ಬಳಸಿಕೊಂಡ ಉದಾಹರಣೆಗಳಿವೆ. ಇಂತಹ ಕವಿಗಳ ಕವಿತೆಗಳಲ್ಲಿನ ಸೃಜ ಮಿದಿತ ಚಲನಚಿತ್ರ... ಹಾಡುಗಳ ರೂಪ ಪಡೆದಾಗ ಚಿತ್ರಸಾಹಿತ್ಯಕ್ಕೆ ಹೊಸ ಹೊಸ ರೆಕ್ಕೆಗಳು ದೊರಕು... ಈ ನಿಟ್ಟಿನಲ್ಲಿ, ದೊಡ್ಡರಂಗೇಗೌಡರು ಎರಡೂ ಕಡೆ ಇರುವ ಕವಿ. ಅ... ಚಿತ್ರಗೀತೆಗಳನ್ನೂ ಬರೆದಿದ್ದಾರೆ. ಹಾಗೇನೆ, ಮೂಲತಃ ಕವಿಗಳು ಕೂಡ. ಉಳಿದ... ಎಂ.ಎನ್.ವ್ಯಾಸರಾವ್, ಎಚ್.ಎಸ್.ವೆಂಕಟೇಶ್ ಮೂರ್ತಿ, ಎನ್.ಎ...



ಲಕ್ಷ್ಮಿನಾರಾಯಣ ಭಟ್ಟ, ಸುಬ್ರಾಯ ಚೊಕ್ಕಾಡಿ, ಸು.ರಂ.ಎಕ್ಕುಂಡಿ ಒಳಗೊಂಡ... ಅನೇಕ ಕವಿಗಳ ಕವಿತೆಗಳು ಸಿನಿಮಾಗಳಲ್ಲಿ ಬಳಕೆಯಾಗಿವೆ. ಜಯ... ಕಾಯ್ಕಿಣಿಯವರಂತೂ ಪ್ರಮುಖ ಚಿತ್ರಸಾಹಿತಿಯಾಗಿ ರೂಪುಗೊಂಡಿದ್ದಾ... ಸದಭಿರುಚಿಯ ಹಾಡುಗಳನ್ನೂ ಬರೆಯುವ ಸಾಮರ್ಥ್ಯವಿರುವ ಯೋಗರಾ... ಭಟ್ಟರು ಸೇರಿದಂತೆ ಇತರ ಚಿತ್ರಸಾಹಿತಿಗಳು ತಮ್ಮ ಸಾಲುಗಳಲ್ಲಿ ಒಂದಿ... ಬಿಗಿತ್ವ ಕಾಯ್ದುಕೊಂಡರೆ ಕನ್ನಡ ಚಿತ್ರಸಾಹಿತ್ಯ ಮತ್ತಷ್ಟು ಉನ್ನತ ಮಟ್ಟಕ್ಕೇರುವುದು... ಯಾವುದೇ ಸಂಶಯವಿಲ್ಲ. ಆ ಸಾಹಿತಿಗಳ ಸದಭಿರುಚಿ ಪ್ರಯೋಗಕ್ಕೆ ನಿರ್ದೇಶ... ಬೆಂಬಲವೂ ಮುಖ್ಯವಾಗುತ್ತದೆ. ಇನ್ನು, ಗಾಯಕ/ಗಾಯಕಿಯರ ವಿಷಯ... ಬಂದರೆ, ಮೊದಲಿನಿಂದಲೂ ಹೆಚ್ಚಾಗಿ ಪರಭಾಷಾ ಗಾಯ... ಗಾಯಕಿಯರೇ ಕನ್ನಡ ಚಿತ್ರಗಳಿಗಾಗಿ ಹಾಡಿಕೊಂಡು ಬಂದಿದ್ದಾ... ಏಕಕಾಲಕ್ಕೆ, ತಮಿಳು, ತೆಲುಗುಗಳಲ್ಲಿ ಹಾಡುತ್ತಿ... ಪಿ.ಬಿ.ಶ್ರೀನಿವಾಸ್ ಕನ್ನಡದ ಮಟ್ಟಿಗೆ ಪ್ರಮುಖ ಗಾಯಕ... ದ್ದವರು. ಅದೇರೀತಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಕೆ.... ಯೇಸುದಾಸ್, ಸೋನು ನಿಗಂ, ಹರಿಹರನ್, ಉದಿ... ನಾರಾಯಣ್, ಶಂಕರ್ ಮಹಾದೇವನ್, ಮ... ಬಾಲಕೃಷ್ಣ ಟಿಪ್ಪು, ಕಾರ್ತಿಕ್, ಎಸ್.ಜಾನಕಿ, ಕೆ.ಎ... ಚಿತ್ರಾ, ವಾಣಿ ಜಯರಾಂ, ಪಿ.ಸುಶೀಲ, ಶ್ರೇಯ... ಘೋಷಾಲ್, ಸುನಿಧಿ ಚೌಹಾಣ್, ಸೋನು ಕಕ್ಕ... ಮಾಲ್ಗುಡಿ ಶುಭಾ ಸೇರಿದಂತೆ ಅನೇಕರು ಕನ್ನಡದವ... ಆಗಿಬಿಟ್ಟಿದ್ದಾರೆ. ಇವರ ನಡುವೆ, ಸಿನಿಮಾ ಮಟ್ಟಿಗೆ ಖ್ಯಾ... ಗಳಿಸಿದ ಕನ್ನಡದ ಮೊದಲ ಗಾಯಕರೆಂದರೆ ನನ್ನ ಪ್ರಕಾ... ಡಾ.ರಾಜ್‌ಕುಮಾರ್! ಚಿತ್ರಗೀತೆಯಿರಲಿ, ಭಕ್ತಿಗೀತೆಯಿರ... ಭಾವಗೀತೆಯಿರಲಿ ಎಲ್ಲ ಬಗೆಯ ಗೀತೆಗಳನ್ನು ಹಾಡುವ ಮೂಲಕ ರಾಜ್‌ಕುಮಾ... ಎಂಬ ಕನ್ನಡಿಗ ಬ್ಯುಸಿ ಗಾಯಕರಾಗಿದ್ದದ್ದು ಈಗ ಇತಿಹಾಸ. ತಮ್ಮ 'ಜೀ... ಚೈತ್ರ' ಚಿತ್ರದ 'ನಾದಮಯ' ಹಾಡಿನ ಗಾಯನಕ್ಕಾಗಿ ರಾಷ್ಟ್ರಪ್ರಶಸ್ತಿ ಗಳಿ... ಖ್ಯಾತಿ ಇವರದು.

ನಂತರ, ಎಲ್.ಎನ್.ಶಾಸ್ತ್ರಿ ರಾಜೇಶ್ ಕೃಷ್ಣನ್, ಹೇಮಂತ್, ಅಜೇಯ... ವಾರಿಯರ್, ಚೇತನ್ ಸಾಸ್ಕ ಎಲ್.ಎನ್.ಶಾಸ್ತ್ರಿ, ಮಂಜುಳಾ ಗುರುರಾ... ಬಿ.ಆರ್. ಛಾಯಾ, ನಂದಿತಾ, ಶಮಿತಾ ಮಲ್ನಾಡ್, ಲಕ್ಷ್ಮಿ ಮನಮೋಹ... ಅನುರಾಧಾ ಭಟ್, ಆಕಾಂಕ್ಷ ಬಾದಾಮಿ, ಚೈತ್ರಾ, ಸುನಿತಾ, ಸುಪ್ರಿಯ... ಎಂ.ಡಿ.ಪಲ್ಲವಿ ತರಹದವರು ಒಂದಿಷ್ಟು ಹಾಡುಗಳನ್ನು ಹಾಡಿದರೂ ಪರಭಾ... ಗಾಯಕ/ಗಾಯಕಿಯರಿಗೆ ಸಿಕ್ಕಷ್ಟು ಮನ್ನಣೆ ಅದೇಕೋ ಸಿಗಲಿಲ್ಲ, ಇವ... ಬಹುತೇಕರು ಬದುಕಿನ ನಿರ್ವಹಣೆಗೋಸ್ಕರ ಕ್ರಮೇಣ ರಿಯಾಲಿಟಿ ಶೋಗಳ... ತೊಡಗಿಸಿಕೊಳ್ಳಬೇಕಾಯಿತು.

ಈ ವಿಷಯವಾಗಿ ಕೆಲವರಿಗೆ ಸಮಯಪ್ರಜ್ಞೆ ಇಲ್ಲದಿರುವುದು ಒಂ... ಆರೋಪವಾದರೆ, ಪರಭಾಷಾ ಗಾಯಕ/ಗಾಯಕಿಯರಿಂದ ಹಾಡಿಸಿದರೆ ತ... ಘನತೆ ಹೆಚ್ಚುತ್ತೆ ಜೊತೆಗೆ ಒಳ್ಳೆ ಆಡಿಯೋ ರೈಟ್ಸ್ ಸಿಗುತ್ತೆ ಅನ್ನೋದು ಕೆ... ನಿರ್ಮಾಪಕರಿಗಿರುವ ಭ್ರಮೆ. ಈ ನಡುವೆ ಹಿಂದಿಯಲ್ಲೂ ಹಾಡುತ್ತಿರುವ ವಿಜ... ಪ್ರಕಾಶ್ ಕನ್ನಡದ ಮಟ್ಟಿಗೆ ಖುಷಿ ತಂದಿದ್ದಾರೆ ಎನ್ನುವ ಸತ್ಯವೂ ಉಂಟು.

ಕಳಪೆ ಶೀರ್ಷಿಕೆ

ಪೊರ್ಕಿ, ಪರೋಡಿ, ದುರಹಂಕಾರಿ, ಮೆಂಟಲ್ ಮಂಜ, ಹುಚ್ಚುಡುಗ... ನಕರ, ದವ್, ಲೂಸ್‌ಗಳು, ಪಾಗಲ್, ಟ್ಯೂಬ್ ಲೈಟ್, ಜಂಗಲ್ ಜ... ಪಂಗನಾಮ, ಉಡೀಸ್, ಹೊಡಿಮಗ, ಸಿಲ್ಕ್, ಸಕತ್ ಹಾಟ್, ಕೊಟ್ಟಲಪ್ರ... ಕೈ ಸೇರಿದಂತೆ ಈ ತರಹದ ಶೀರ್ಷಿಕೆಗಳಿರುವ ಸಿನಿಮಾಗಳು ಸದ್ಯಕ್ಕೆ ಕನ್ನ... ಚಿತ್ರರಂಗದಲ್ಲಿ ಬಂದಿವೆ, ಬರುತ್ತಿವೆ. ಇಲ್ಲಿ ಗಂಭೀರವಾಗಿ ಯೋಚಿಸಬೇಕಾ... ಸಂಗತಿಯೆಂದರೆ, ಅದ್ಭುತ ಪರಂಪರೆ ಇರುವ ಚಿತ್ರರಂಗವೊಂದು ಶೀರ್ಷಿಕೆ... ವಿಷಯದಲ್ಲಿ ಇಷ್ಟು ಹೀನಮಟ್ಟಕ್ಕೆ ಇಳಿಯಬೇಕಾದರೆ ಅಭಿರುಚಿ ಶೂನ್ಯತೆಯ... ಬೇರೇನೂ ಕಾರಣವಲ್ಲ, ಸ್ವಲ್ಪ ಹಿಂದಕ್ಕೆ ತಿರುಗಿ ನೋಡಿದರೆ, ಹಾಲುಜೇ... ಸಾಕ್ಷಾತ್ಕಾರ, ಕಸ್ತೂರಿ ನಿವಾಸ, ಬಂಧನ, ಮುತ್ತಿನ ಹ... ಒಲವಿನ ಉಡುಗೊರೆ, ರಥಸಪ್ತಮಿ, ಹಾಲುಂಡ ತವ... ಶೃಂಗಾರ ಕಾವ್ಯ, ಚೈತ್ರದ ಪ್ರೇಮಾಂಜಲಿ, ಪ್ರೇಮಲೋ... ಬಣ್ಣದ ಗೆಜ್ಜೆ ಅನುರಾಗ ಸಂಗಮ, ಹೃದಯಗೀತೆ ತರ... ಶೀರ್ಷಿಕೆಯಿದ್ದ ಚಿತ್ರಗಳು ಇದೇ ಕನ್ನಡ ಚಿತ್ರರಂಗ... ತಯಾರಾಗಿದ್ದವು ಎಂಬ ಸತ್ಯ ಅರಿವಿಗೆ ಬರುತ್ತದೆ. ಇಂ... ಕಳಪೆ ಶೀರ್ಷಿಕೆಗಳ ಮೂಲಕವೂ ಕನ್ನಡ ಭಾಷೆ, ಸಂ... ತನ್ನ ಘನತೆಯನ್ನು ಕಳೆದುಕೊಳ್ಳುತ್ತದೆ ಅನ್ನೋದನ್ನು ಚಿತ್ರರಂ... ಪ್ರತಿಯೊಬ್ಬರೂ ಸದಾ ನೆನಪಿನಲ್ಲಿಟ್ಟುಕೊಳ್ಳಬೇಕಿ... ಚಿತ್ರರಂಗವೆಂಬುದು ಒಂದು ಸೃಜನಶೀಲ ಮಾಧ್ಯಮ... ಕ್ರಿಯಾಶೀಲ ಜೀವಗಳಿಗೆ ವೇದಿಕೆಯೂ ಎಂಬುದ... ತುರ್ತಾಗಿ ಅರಿತು ಕೊಳ್ಳಬೇಕಿದೆ.

ಚಿತ್ರರಂಗ ನಿರುದ್ಯೋಗಿಗಳನ್ನು ಭರ್ತಿಮಾಡಿಕೊಳ್ಳುವ ಕಾರ್ಖಾನೆಯಾಗದೆ... ಕನ್ನಡ ಭಾಷೆ, ಸಂಸ್ಕೃತಿ ಮತ್ತು ಘನತೆಯನ್ನು ಚಿತ್ರರಂಗ ಉಳಿಸಿಕೊಳ್ಳುವಂತಾ...

– ಹೃದಯಶಿ...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com